ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ ಮುಂಬೈನಲ್ಲಿ ಶುಕ್ರವಾರ ನಡೆದ 'ಒಎಂಜಿ 2' ಸಿನಿಮಾದ ಪ್ರಚಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ನಟಿ ಯಾಮಿ ಗೌತಮ

ಕಮಿಷನ್ ಆರೋಪ: ಮುಂದುವರಿದ ಕೆಸರೆರಚಾಟ

'ಸರ್ಕಾರದಿಂದ ₹25 ಸಾವಿರ ಕೋಟಿ ಬಾಕಿ, ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿಯಲ್ಲಿ ಗುತ್ತಿಗೆದಾರರು'

ಬಾಣಲೆಯಿಂದ ಬೆಂಕಿಗೆ ಬಿದ್ದಂತಾಗಿದೆ: ಕೆಂಪಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಮಗಾರಿಗಳನ್ನು ಪೂರೈಸಿ ಮೂರ್ನಾಲ್ಕು ವರ್ಷಗಳಾದರೂ ತನಿಖೆ, ವರದಿ ಎಂದು ಬಿಲ್ ಪಾವತಿಯನ್ನು ಹೊಸ ಸರ್ಕಾರ ಮುಂದೂಡುತ್ತಿರುವುದರಿಂದ ಗುತ್ತಿಗೆದಾರರು ಬಾಣಲೆಯಿಂದ ಬೆಂಕಿಗೆ ಬಿದ್ದಂತಾಗಿದೆ' ಎಂದು ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಬಾಕಿ ಬಿಲ್ ಮೊತ್ತವನ್ನು ಆ.31ರೊಳಗೆ ಬಿಡುಗಡೆ ಮಾಡಬೇಕು. ಇಲ್ಲದಿದ್ದರೆ ಮುಂದಿನ ಹೋರಾಟ ನಿರ್ಧರಿಸಲಾಗುತ್ತದೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಯವರಿಗೆ ಮತ್ತೊಮ್ಮೆ ಮನವಿ ಸಲ್ಲಿಸಲಾಗುತ್ತದೆ' ಎಂದು ತಿಳಿಸಿದರು.

'ಲೋಕೋಪಯೋಗಿ, ಜಲಸಂಪನ್ಮೂಲ, ಗ್ರಾಮೀಣಾಭಿವೃದ್ಧಿ ಇಲಾಖೆ ಹಾಗೂ ಬಿಬಿಎಂಪಿಯಲ್ಲಿ ನಡೆಸಿರುವ ಕಾಮಗಾರಿಗಳಿಗೆ ಸುಮಾರು ₹25 ಸಾವಿರ ಕೋಟಿ ಬಿಲ್ ಪಾವತಿ ಬಾಕಿ ಉಳಿದಿದೆ. ಬ್ಯಾಂಕ್‌ನಲ್ಲಿ ಸಾಲ ಮಾಡಿ, ಚಿನ್ನ, ನಿವೇಶನಗಳನ್ನು ಅಡವಿಟ್ಟು ಹಣವನ್ನು ಗುತ್ತಿಗೆದಾರರು ತಂದಿದ್ದಾರೆ. ಹಣ ಬಿಡುಗಡೆಯಾಗುವುದು ಎರಡು ಮೂರು ತಿಂಗಳು ತಡವಾದರೂ ಬಡ್ಡಿ ಹೆಚ್ಚಾಗುತ್ತಲೇ ಹೋಗುತ್ತದೆ. ಸರ್ಕಾರ ಕೂಡಲೇ ಹಣ ಬಿಡುಗಡೆ ಮಾಡಬೇಕು. ಇಲ್ಲದಿದ್ದರೆ ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಳ್ಳಬೇಕಾದ ಸ್ಥಿತಿಗೆ ತಲುಪಲಿದ್ದಾರೆ' ಎಂದರು.

'ನೀರಾವರಿ (ಜಲಸಂಪನ್ಮೂಲ) ಇಲಾಖೆಯಲ್ಲಿ ಸುಮಾರು ₹16 ಸಾವಿರ ಕೋಟಿ ಬಾಕಿ ಉಳಿದಿದೆ. ಲಭ್ಯ ಅನುದಾನಕ್ಕಿಂತ ಹೆಚ್ಚಿನ ಮೊತ್ತಕ್ಕೆ ಕಾರ್ಯಾದೇಶ ನೀಡಲಾಗಿದೆ ಎನ್ನುತ್ತಾರೆ. ಇಲಾಖೆಗಳಲ್ಲಿ ಅನುದಾನ ಲಭ್ಯವಿದ್ದರಷ್ಟೇ ಕಾಮಗಾರಿಗಳಿಗೆ ಟೆಂಡರ್ ಕರೆಯಬೇಕು ಎಂದು ನಾವು ಹಿಂದಿನಿಂದಲೂ ಹೇಳುತ್ತಿದ್ದೇವೆ. ಸರ್ಕಾರ ನಿರಂತರ, ಅದನ್ನು ನಡೆಸುವವರು ಬದಲಾಗುತ್ತಾರೆ. ಹಿಂದಿನ ಸರ್ಕಾರದ ಮೇಲೆ ದೂರಿ, ಸಬೂಬು ಹೇಳುವುದು ಸರಿಯಲ್ಲ. ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಲ್ಲಿಕಾರ್ಜುನ ಗುಂಗೆ ಅವರ ಭ್ರಷ್ಟಾಚಾರದ ತನಿಖೆಯೂ ಆಗಬೇಕು' ಎಂದರು.

ಯಾರೂ ಪ್ರಾಮಾಣಿಕರಲ್ಲ: 'ಕಾಮಗಾರಿಗಳು ಸುಗಮವಾಗಿ ನಡೆದು, ಬಿಲ್ ಪಾವತಿಗೆ ಒಂದು ವ್ಯವಸ್ಥೆ ಕಲ್ಪಿಸಲು ಮನವಿ ಮಾಡಿಕೊಳ್ಳಲಾಗಿದೆ. ಇದರಿಂದ ಭ್ರಷ್ಟಾಚಾರ, ಕಮಿಷನ್ ಕಡಿಮೆಯಾಗುತ್ತದೆ. ಯಾರೂ ಪ್ರಾಮಾಣಿಕರಲ್ಲ, ಸತ್ಯ ಹರಿಶ್ಚಂದ್ರರಲ್ಲ. ಶೇ 7ರಷ್ಟಿರುವ ಕಮಿಷನ್‌ನಲ್ಲಿ ಸ್ವಲ್ಪ ಕಡಿಮೆಯಾಗಬಹುದು ಎಂಬ ಆಶಾಭಾವನೆ ಇದೆ' ಎಂದರು.

ಪಟ್ಟಿ ಕೊಡಿ: 'ಕಾಮಗಾರಿ ಮಾಡಿಲ್ಲ, ಬಿಲ್ ಮಾಡಿದ್ದಾರೆ. ಡಬಲ್ ಬಿಲ್ ಮಾಡಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಇಂತಹ ಕಾಮಗಾರಿ ಮಾಡಿರುವವರು ಯಾರು? ನಿರ್ವಹಣೆ ಮಾಡಿದ ಅಧಿಕಾರಿಗಳು ಯಾರು ಯಾರು? ಎಂಬ ಪಟ್ಟಿಯನ್ನು ನೀಡಲಿ' ಎಂದು ಕೆಂಪಣ್ಣ ಆಗ್ರಹಿಸಿದರು.

'ಕಮಿಷನ್ ಬಗ್ಗೆ ಸಾಕ್ಷ್ಯ ಇದ್ದರೆ ಕೊಡಲಿ'

'15 % ಕಮಿಷನ್ ಅನ್ನೂ ಯಾರೋ ಒಬ್ಬ ಗುತ್ತಿಗೆದಾರ ಮಾನಸಿಕ ಒತ್ತಡದಿಂದ ಹೇಳಿದ್ದಾರೆ. ಅವರು ನಮ್ಮ ಸಂಘದ ಸದಸ್ಯ ಅಲ್ಲ. ಅವರು ಹೇಳಿಕೆ ವಾಪಸ್ ಪಡೆಯಲಿದ್ದಾರೆ. ಕಮಿಷನ್ ಪಡೆಯುತ್ತಿರುವ ಬಗ್ಗೆ ಯಾರಾದರೂ ಸಾಕ್ಷ್ಯ ನೀಡಿದರೆ ನಾನೂ ಹೋರಾಟ ಮಾಡುತ್ತೇನೆ' ಎಂದು ಕೆಂಪಣ್ಣ ಹೇಳಿದರು.

'ಬಿಬಿಎಂಪಿ ಕಾರ್ಯನಿರತ ಗುತ್ತಿಗೆದಾರರ ಸಂಘಕ್ಕೂ ನಮ್ಮ ಸಂಘಕ್ಕೂ ಸಂಬಂಧ ಇಲ್ಲ. ಅವರು ರಾಜಕೀಯ ಉದ್ದೇಶ ಇರಿಸಿಕೊಂಡು ಬಿಜೆಪಿ ನಾಯಕರನ್ನು ಭೇಟಿ ಮಾಡಿ ಮನವಿ ಸಲ್ಲಿಸುತ್ತಿದ್ದಾರೆ' ಎಂದು ಕೆಂಪಣ್ಣ ಆರೋಪಿಸಿದರು.

'ಈ ಸರ್ಕಾರ ಬಂದ ಮೇಲೆ ಹಣ ಬಿಡುಗಡೆ ಮಾಡಿಲ್ಲ. ಒಂದು ಹೊಸ ಕಾರ್ಯಾದೇಶವನ್ನೂ ನೀಡಿಲ್ಲ. ಕಮಿಷನ್ ಪಡೆಯುತ್ತಿರುವುದು ಹೇಗೆ' ಎಂದು ಪ್ರಶ್ನಿಸಿದರು.

'40 % ಕಮಿಷನ್ ಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ, ಹೈಕೋರ್ಟ್ ನ ನಿವೃತ್ತ ನ್ಯಾಯಮೂರ್ತಿಯವರ ನೇತೃತ್ವದ ಸಮಿತಿ ರಚಿಸುತ್ತದೆ. ಅದಕ್ಕೆ ಎಲ್ಲ ದಾಖಲೆಗಳನ್ನು ನೀಡಲಾಗುವುದು. ಸುಮಾರು 20 ಪುಸ್ತಕಗಳ ದಾಖಲೆ ಇದೆ' ಎಂದು ಕೆಂಪಣ್ಣ ಮಾಹಿತಿ ನೀಡಿದರು.

ಎಸ್ಐಟಿಗೆ ವಿರೋಧ

'ಬಿಬಿಎಂಪಿಯಲ್ಲಿ 2019ರಿಂದ ನಡೆದಿರುವ ಕಾಮಗಾರಿಗಳ ತನಿಖೆಗೆ ಸರ್ಕಾರ ಎಸ್ ಐಟಿ ರಚಿಸಿರುವುದನ್ನು ಕೆಂಪಣ್ಣ ವಿರೋಧಿಸಿದರು. 'ಕಾಮಗಾರಿಗೆ ಒಂದು ವರ್ಷ ನಿರ್ವಹಣೆ ಅವಧಿ ಇರುತ್ತದೆ. ನಾಲ್ಕು ವರ್ಷಗಳ ಹಿಂದಿನ ಕಾಮಗಾರಿಯನ್ನು ಈಗ ಹೇಗೆ ತನಿಖೆ ಮಾಡಲಾಗುತ್ತದೆ. ಇದು ಸರಿಯಲ್ಲ. ಭ್ರಷ್ಟಾಚಾರ ನಡೆಯುತ್ತಿದೆ. ಇದರಿಂದ ಗುಣಮಟ್ಟದ ಕೆಲಸ ಆಗುತ್ತಿಲ್ಲ. ಅದರ ಬಗ್ಗೆ ತನಿಖೆ ನಡೆಸಿ ಎಂದು ನಾನು ಹೇಳಿದ್ದೆ' ಎಂದರು.

ಕಳಪೆ ಕಾಮಗಾರಿ; ತಪ್ಪಿತಸ್ಥರ ವಿರುದ್ಧ ಕ್ರಮ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಬಿಜೆಪಿ ಸರ್ಕಾರದ ಅಧಿಕಾರವಧಿಯಲ್ಲಿ ನಡೆದ ಕಾಮಗಾರಿಗಳ ಕುರಿತು ತನಿಖೆ ನಡೆಸುತ್ತೇವೆ. ಕಳಪೆ ಕಾಮಗಾರಿಯಿದ್ದಲ್ಲಿ, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುತ್ತೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

'ಆಗಸ್ಟ್ 31ರೊಳಗೆ ಗುತ್ತಿಗೆದಾರರ ಬಾಕಿ ಬಿಲ್ ಪಾವತಿಸಬೇಕು' ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣ ಒತ್ತಾಯಿಸಿರುವುದಕ್ಕೆ ಇಲ್ಲಿ ಶುಕ್ರವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಯಾರ ಅಧಿಕಾರವಧಿಯಲ್ಲಿ ನಡೆದ ಕಾಮಗಾರಿಗಳ ಬಿಲ್ ಬಾಕಿಯಿದೆ? ಹಿಂದಿನ ಸರ್ಕಾರದವರು ಯಾಕೆ ಪಾವತಿಸಲಿಲ್ಲ? 2-3 ವರ್ಷಗಳ ಬಿಲ್ ಕೊಡದೇ ಯಾಕೆ ಹೋದರು' ಎಂದು ಪ್ರಶ್ನಿಸಿದರು.

'ಅಧಿಕಾರಕ್ಕೆ ಬಂದು ಇನ್ನೂ 3 ತಿಂಗಳಾಗಿಲ್ಲ. ಶೇ 40 ಕಮಿಷನ್ ದಂಧೆ ಬಗ್ಗೆ ನಾವೇ ಆರೋಪಿಸಿದ್ದೆವು. ಈಗ ಕಾಮಗಾರಿ ಗುಣಮಟ್ಟದ ಬಗ್ಗೆ ತನಿಖೆ ನಡೆಸಬೇಕೆ ಅಥವಾ ಬೇಡವೇ? ಮೂರು ವರ್ಷ ಬಿಲ್ ಕೊಡದಿದ್ದಾಗ ಸುಮ್ಮನಿದ್ದ ಗುತ್ತಿಗೆದಾರರು, ಬಿಜೆಪಿಯವರು ಈಗ ಹೋರಾಟ ನಡೆಸಿದ್ದಾರೆ. ಅವರಿಗೆ ನೈತಿಕತೆ ಇದೆಯೇ' ಎಂದರು. ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, 'ನಾವು ಕಮಿಷನ್ ಹಿಂದೆ ಬಿದ್ದಿಲ್ಲ, ಕಮಿಷನ್ ಹಗರಣದ ಹಿಂದಿರುವ ಭ್ರಷ್ಟರ ಬೆನ್ನು ಬಿದ್ದಿದ್ದೇವೆ. ನಮ್ಮ ಮೇಲಿನ ಆರೋಪಗಳನ್ನು ಸವಾಲಾಗಿ ಸ್ವೀಕರಿಸಿ, ಅಗ್ನಿಪರೀಕ್ಷೆಯಲ್ಲಿ ಗೆದ್ದು ಬರುತ್ತೇವೆ' ಎಂದಿದ್ದಾರೆ.

'ಸಂತೋಷ ಪ್ರಕರಣ: ಸಿಐಡಿಗೆ ವಹಿಸಿ'

'ನನ್ನ ಮಗನ ಆತ್ಮಹತ್ಯೆ ಪ್ರಕರಣವನ್ನು ಸಿಐಡಿಗೆ ವಹಿಸಿ, ಸೂಕ್ತ ರೀತಿ ತನಿಖೆ ನಡೆಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕೋರಿದ್ದೇವೆ' ಎಂದು ಗುತ್ತಿಗೆದಾರ ಸಂತೋಷ ಪಾಟೀಲ ಅವರ ತಾಯಿ ಪಾರ್ವತಿ ಹೇಳಿದರು.

'ಆಗಿನ ಸಚಿವ ಈಶ್ವರಪ್ಪ ಅವರಿಗೆ ಕಮಿಷನ್ ಕೊಟ್ಟಿರುವುದಾಗಿ ನನ್ನ ಮಗ ಸಂತೋಷ ಹೇಳಿದ್ದ. ಆದರೆ, ಈ ಪ್ರಕರಣದಲ್ಲಿ ಅವರಿಗೆ ಕ್ಲೀನ್‌ಚಿಟ್ ಸಿಕ್ಕಿದೆ. ನನ್ನ ಮಗನಿಗೆ ನ್ಯಾಯ ಸಿಕ್ಕಿಲ್ಲ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

'ಕಾಮಗಾರಿ ಕೈಗೊಂಡ ಹಣವನ್ನೂ ಕೊಡಲಿಲ್ಲ. ಈಶ್ವರಪ್ಪ ಒಂದು ಸಹಿ ಮಾಡಿದ್ದರೆ ನಮಗೆ ಈ ಪರಿಸ್ಥಿತಿ ಬರುತ್ತಿರಲಿಲ್ಲ' ಎಂದು ದೂರಿದರು. 'ಮಗನ ಆತ್ಮಹತ್ಯೆ ಬಳಿಕ, ಬಿಜೆಪಿ ಸರ್ಕಾರದ ಒಬ್ಬರೂ ನಮ್ಮ ಮನೆಗೆ ಬಂದಿಲ್ಲ. ಪ್ರಕರಣದ ಮರು ತನಿಖೆ ನಡೆಸುವುದಾಗಿ ಮುಖ್ಯಮಂತ್ರಿ ತಿಳಿಸಿದ್ದಾರೆ. ಕಾದು ನೋಡಬೇಕು' ಎಂದರು.

ಚಲುವರಾಯಸ್ವಾಮಿ ರಾಜೀನಾಮೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಷ್ಟಾಚಾರ ಆರೋಪ ಎದುರಿಸುತ್ತಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರಿಂದ ರಾಜೀನಾಮೆ ಪಡೆದು, ಆರೋಪ ಕುರಿತ ತನಿಖೆಯನ್ನು ಲೋಕಾಯುಕ್ತಕ್ಕೆ ಒಪ್ಪಿಸಬೇಕು ಎಂದು ಬಿಜೆಪಿ ಒತ್ತಾಯಿಸಿದೆ.

ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಶಾಸಕರಾದ ಡಾ.ಸಿ.ಎನ್.ಅಶ್ವತ್ಥನಾರಾಯಣ, ಕೆ.ಗೋಪಾಲಯ್ಯ ಮತ್ತು ಎಸ್.ಆರ್.ವಿಶ್ವನಾಥ್ ಮಾತನಾಡಿ, 'ಇದು ಪೇ ಸಿಎಂ, ಪೇ ಡಿಸಿಎಂ, ಪೇ ಚಲುವರಾಯಸ್ವಾಮಿ ಸರ್ಕಾರವಾಗಿದೆ' ಎಂದು ಲೇವಡಿ ಮಾಡಿದರು.

ಅಶ್ವತ್ಥನಾರಾಯಣ ಮಾತನಾಡಿ, 'ನಮ್ಮ ಎರಡು ಬೇಡಿಕೆಗಳಲ್ಲಿ ರಾಜೀ ಪ್ರಶ್ನೆಯೇ ಇಲ್ಲ. ಇದಕ್ಕಾಗಿ ಬಿಜೆಪಿ ಹೋರಾಟ ಮಾಡಲಿದೆ' ಎಂದರು.

'ಡಿ.ಕೆ.ಶಿವಕುಮಾರ್ ಬಿಬಿಎಂಪಿ ಗುತ್ತಿಗೆದಾರರ ಬಿಲ್ ಪಾವತಿ ತಡೆ ಹಿಡಿದು ಕಮಿಷನ್‌ಗಾಗಿ ಪೀಡಿಸುತ್ತಿದ್ದಾರೆ ಎಂದು ಗುತ್ತಿಗೆದಾರರೇ ಹೇಳಿದ್ದಾರೆ. ಕೆಲಸ ಆರಂಭವಾಗದೇ ಇದ್ದರೆ ಅದನ್ನು ಆರಂಭಿಸಲು ಶೇ 10 ರಷ್ಟು ಕಮಿಷನ್ ಕೇಳುತ್ತಿದ್ದಾರೆ. ₹6,000 ಕೋಟಿ ಕಾಮಗಾರಿಗೆ ಕಮಿಷನ್ ಎತ್ತಲು ನಿಂತಿದ್ದಾರೆ ಎಂಬ ಆರೋಪವೂ ಕೇಳಿ ಬಂದಿದೆ' ಎಂದರು.

'ಬೆಂಗಳೂರಿನಲ್ಲಿ ಎಲ್ಲ ಅಭಿವೃದ್ಧಿ ಕೆಲಸಗಳೂ ನಿಂತು ಹೋಗಿವೆ. ಯಾವುದೇ ಪ್ಲಾನ್‌ಗೂ ಒಪ್ಪಿಗೆ ನೀಡುತ್ತಿಲ್ಲ. ಇದು ಬೆಂಗಳೂರು ವಿರೋಧಿ ಸರ್ಕಾರ' ಎಂದು ದೂರಿದರು.

'ಕಾಂಗ್ರೆಸ್ ಆಡಳಿತ ವೈಖರಿಗೆ ಗುತ್ತಿಗೆದಾರರು ಸುಸ್ತಾಗಿದ್ದಾರೆ. ಗುತ್ತಿಗೆದಾರರ ಪ್ರಕರಣದ ತನಿಖೆಯನ್ನು ಲೋಕಾಯುಕ್ತಕ್ಕೆ ಒಪ್ಪಿಸಬೇಕು ಎಂದು ಒತ್ತಾಯಿಸಲು ಸೋಮವಾರ ರಾಜ್ಯಪಾಲರನ್ನು ಭೇಟಿ ಮಾಡುತ್ತೇವೆ' ಎಂದು ಅಶ್ವತ್ಥನಾರಾಯಣ ಹೇಳಿದರು.

'ನಮ್ಮ ಸರ್ಕಾರ ಇದ್ದಾಗ ಕಾಂಗ್ರೆಸ್‌ನವರು ನಿರಾಧಾರ ಆರೋಪ ಮಾಡಿದ್ದರು. ಈಗ ಬೆಂಗಳೂರು ಅಭಿವೃದ್ಧಿ ಸಚಿವ ಮತ್ತು ಉಪ ಮುಖ್ಯಮಂತ್ರಿ ಮೇಲೆಯೇ ಗುತ್ತಿಗೆದಾರರು ಶೇ 10 ರಿಂದ ಶೇ 15 ರಷ್ಟು ಕಮಿಷನ್ ಆರೋಪ ಮಾಡಿದ್ದಾರೆ. ಈಗ ಏನು ಉತ್ತರ ನೀಡುತ್ತಾರೆ. ಶಿವಕುಮಾರ್ ಅವರ ಟ್ರ್ಯಾಕ್ ರೆಕಾರ್ಡ್ ಎಲ್ಲವನ್ನೂ ಹೇಳುತ್ತದೆ. ಇವರು ಬೇರೆಯವರ ಬಗ್ಗೆ ಮತ್ತು ಗುತ್ತಿಗೆದಾರರ ಬಗ್ಗೆ ಮಾತನಾಡುತ್ತಾರೆ' ಎಂದು ಹೇಳಿದರು.

ಕೆಂಪಣ್ಣಗೆ ಕಿಕ್‌ಬ್ಯಾಕ್: ಗೋಪಾಲಯ್ಯ

'ನಮ್ಮ ಸರ್ಕಾರ ವಿರುದ್ಧ ಆರೋಪ ಮಾಡಿದ್ದ ಗುತ್ತಿಗೆದಾರ ಕೆಂಪಣ್ಣ ಈಗ ಕಾಂಗ್ರೆಸ್‌ನಿಂದ ಕಿಕ್‌ಬ್ಯಾಕ್ ಪಡೆದು ಸುಮ್ಮನಿದ್ದಾರೆ. ಇದರಿಂದ ಗುತ್ತಿಗೆದಾರರ ಕುಟುಂಬಗಳು ನೇಣು ಹಾಕಿ ಕೊಳ್ಳುವ ಸ್ಥಿತಿ ಬಂದಿದೆ' ಎಂದು ಬಿಜೆಪಿ ಶಾಸಕ ಕೆ.ಗೋಪಾಲಯ್ಯ ಹರಿಹಾಯ್ದರು.

ಡಿ.ಕೆ.ಶಿವಕುಮಾರ್ ಕಮಿಷನ್ ಕೇಳಿಲ್ಲ, ಗುತ್ತಿಗೆದಾರರು ಸುಳ್ಳು ಹೇಳುತ್ತಿದ್ದಾರೆ ಎಂಬ ಕೆಂಪಣ್ಣ ಹೇಳಿಕೆಗೆ ಗೋಪಾಲಯ್ಯ ಪ್ರತಿಕ್ರಿಯಿಸಿದರು. ರಾಜ್ಯಪಾಲರು ಮಧ್ಯಪ್ರವೇಶಿಸಿ ತಕ್ಷಣವೇ ಬಿಲ್ ಪಾವತಿಗೆ ವ್ಯವಸ್ಥೆ ಮಾಡಬೇಕು ಎಂದೂ ಅವರು ಮನವಿ ಮಾಡಿದರು.

'ಡಿ.ಕೆ.ಶಿವಕುಮಾರ್ ಅವರು ಅಜ್ಜಯ್ಯ ಅವರನ್ನು ನಂಬಿದ್ದಾರೆ. ಹಾಗಿದ್ದರೆ ಅಲ್ಲಿಗೆ ಹೋಗಿ ಯಾರಿಂದಲೂ ಕಮಿಷನ್ ಕೇಳಿಲ್ಲ ಎಂಬುದನ್ನು ಆಣೆ ಮಾಡಿ ಹೇಳಲಿ. ಗುತ್ತಿಗೆದಾರರು ಬೀದಿ ಬೀದಿ ಸುತ್ತಿದ್ದಾರೆ. ಗುತ್ತಿಗೆದಾರರು ಕೆಲಸ ನಿಲ್ಲಿಸಿದರೆ ಲಕ್ಷಗಟ್ಟಲೆ ಜನ ನಿರುದ್ಯೋಗಿಗಳಾಗುತ್ತಾರೆ. ಇದು ಸರ್ಕಾರಕ್ಕೆ ನಾಚಿಕೆ ತರುವ ಸಂಗತಿಯಲ್ಲವೇ' ಎಂದು ಪ್ರಶ್ನಿಸಿದರು.

'ಉಪ ಮುಖ್ಯಮಂತ್ರಿಯವರ ಸಲಹೆಗಾರ ಕೆ.ಟಿ.ನಾಗರಾಜ್ ಹಿನ್ನೆಲೆ ಏನು? ಅದನ್ನೂ ಕೆದಕಬೇಕಲ್ಲವೇ? 26 ಷರತ್ತುಗಳನ್ನು ಹಾಕಿ ಗುತ್ತಿಗೆದಾರರಿಗೆ ಕಿರುಕುಳ ನೀಡುವುದನ್ನು ನೋಡಿದರೆ, ರಾಜ್ಯವನ್ನು ಲೂಟಿ ಮಾಡಲು ನೇಮಕ ಮಾಡಿದಂತಿದೆ' ಎಂದು ಗೋಪಾಲಯ್ಯ ಆರೋಪಿಸಿದರು.

'ಎಟಿಎಂ ಸರ್ಕಾರದ ಮುಲಾಜಿನಲ್ಲಿ ರಾಹುಲ್'



ಬೆಂಗಳೂರು: 'ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕರ್ನಾಟಕದ 'ಎಟಿಎಂ ಸರ್ಕಾರ'ದ ಮುಲಾಜಿನಲ್ಲಿದ್ದಾರೆ. ಹೀಗಾಗಿ ಅವರು ಗುತ್ತಿಗೆದಾರರಿಗೆ ಬಿಲ್ ಕೊಡಿಸಲು ಮಧ್ಯ ಪ್ರವೇಶ ಮಾಡುವುದಿಲ್ಲ' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ವ್ಯಂಗ್ಯವಾಡಿದ್ದಾರೆ.

ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ರಾಜ್ಯ ಸರ್ಕಾರದ ಭ್ರಷ್ಟಾಚಾರಗಳ ವಿರುದ್ಧ ಕಾನೂನಾತ್ಮಕ ಹೋರಾಟ ಮಾಡುತ್ತೇವೆ' ಎಂದು ಹೇಳಿದರು.

'ತಮ್ಮ ಮೇಲೆ ಆರೋಪ ಬರುತ್ತಿದ್ದಂತೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಿಷಯಾಂತರ ಮಾಡುತ್ತಿದ್ದಾರೆ. ನಮ್ಮ ಅವಧಿಯಲ್ಲಿ ಕಾಮಗಾರಿಗಳಿಗೆ ಬಿಡುಗಡೆ ಆಗಿದ್ದ ₹650 ಕೋಟಿ ಯಾವ ಕಾರಣಕ್ಕೆ ಇಟ್ಟುಕೊಂಡು ಕೂತಿದ್ದಾರೆ? ತನಿಖೆ ಮಾಡುತ್ತೇವೆ ಎಂದು ಇಟ್ಟುಕೊಂಡು ಕೂತಿರುವುದನ್ನು ನೋಡಿದರೆ ಅನುಮಾನಗಳಿಗೆ ಕಾರಣವಾಗಿದೆ' ಎಂದು ಬೊಮ್ಮಾಯಿ ಹೇಳಿದರು. 'ಗುತ್ತಿಗೆದಾರರೇ ಆಣೆ- ಪ್ರಮಾಣ ಮಾಡಲಿ ಎಂದು ಶಿವಕುಮಾರ್ ಹೇಳುತ್ತಿದ್ದಾರೆ. ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಅವರು ನಿನ್ನೆ ಶಾಂಗ್ರಿಲಾ ಹೋಟೆಲ್‌ನ ಸಭೆಯ ಬಗ್ಗೆ ಪ್ರಸ್ತಾಪಿಸಿ ಕಮಿಷನ್ ನಡೆಯುತ್ತಿದೆ ಎಂದು ಹೇಳಿದ್ದರು. ಬಳಿಕ ತಮ್ಮ ವರಸೆ ಬದಲಿಸಿ, ಸಚಿವರಿಗೆ ಕ್ಲೀನ್ ಚಿಟ್ ನೀಡಿದರು. ಅವರ ಮೇಲೆ ಯಾರ ಒತ್ತಡ ಇದೆಯೋ ಗೊತ್ತಿಲ್ಲ. ಯಾರೂ ಕಮಿಷನ್ ಕೇಳಿಲ್ಲ ಎನ್ನುತ್ತಿದ್ದಾರೆ' ಎಂದರು.

ಅನೈರ್ಮಲ್ಯ: ಪ್ರಕರಣ ದಾಖಲಿಸುವ ಎಚ್ಚರಿಕೆ

ಕವಾಡಿಗರಹಟ್ಟಿ ಜನರ ಅಹವಾಲು ಆಲಿಸಿದ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಕಾಲರಾ ಕಾಣಿಸಿಕೊಂಡಿರುವ ಕವಾಡಿಗರಹಟ್ಟಿ ಸೇರಿ ನಗರದ ಇತರೆಡೆ ಸ್ವಚ್ಛತೆ ಕಾಪಾಡದೇ ಇರುವುದಕ್ಕೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವುದಾಗಿ ಎಚ್ಚರಿಸಿದರು.

ಕಲುಷಿತ ನೀರು ಕುಡಿದು ಜನರು ಅಸ್ವಸ್ಥಗೊಂಡಿದ್ದ ಕವಾಡಿಗರಹಟ್ಟಿಗೆ ಶುಕ್ರವಾರ ಭೇಟಿ ನೀಡಿ ಪರಿಶೀಲಿಸಿದ ಅವರು, ಜನರ ಅಹವಾಲು ಆಲಿಸಿದರು. ನಗರದ ಪ್ರಮುಖ ಬೀದಿ, ಬಡಾವಣೆಯಲ್ಲಿ ಕಸದ ರಾಶಿ ಬಿದ್ದಿರುವುದನ್ನು ಕಂಡು ಪೌರಾಯುಕ್ತ ಶ್ರೀನಿವಾಸ್ ಅವರನ್ನು ತರಾಟೆಗೆ ತೆಗೆದುಕೊಂಡರು.

'ಚಿತ್ರದುರ್ಗ ನಗರದಲ್ಲಿ ತ್ಯಾಜ್ಯ ನಿರ್ವಹಣೆ ಹಾಗೂ ಸ್ವಚ್ಛತೆ ದಯನೀಯ ಸ್ಥಿತಿಯಲ್ಲಿದೆ. ಇಂತಹ ಸ್ಥಿತಿಯಲ್ಲಿ ಸಾಂಕ್ರಾಮಿಕ ರೋಗಗಳು ಸುಲಭವಾಗಿ ಹರಡಬಹುದು. ರಸ್ತೆ ಮೇಲೆ ಎಲ್ಲೆಂದರಲ್ಲಿ ಕಸ, ಪ್ಲಾಸ್ಟಿಕ್, ಆಹಾರ ತ್ಯಾಜ್ಯ ಕಾಣುತ್ತಿದೆ. ಖಾಲಿ ನಿವೇಶನಗಳು ತ್ಯಾಜ್ಯ ಸುರಿಯುವ ಸ್ಥಳಗಳಾಗಿ ಬದಲಾಗಿವೆ. ನಗರಕ್ಕೆ ಲೋಕಾಯುಕ್ತ ಅಧಿಕಾರಿಗಳು ನಿಯಮಿತವಾಗಿ ಭೇಟಿ ನೀಡಬೇಕು. ಲೋಪದೋಷ ಕಂಡುಬಂದರೆ ತಪ್ಪಿತಸ್ಥರ ವಿರುದ್ಧ ಪ್ರಕರಣ ದಾಖಲಿಸಿ' ಎಂದು ಅವರು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಕವಾಡಿಗರಹಟ್ಟಿ ಸಮೀಪದ ಅರಸನಕೆರೆ ಹಾಗೂ ಮಲ್ಲಾಪುರ ಕೆರೆಗೆ ಒಳಚರಂಡಿ ನೀರು ಸೇರುತ್ತಿರುವುದನ್ನು ನ್ಯಾಯಮೂರ್ತಿ ಗಂಭೀರವಾಗಿ ಪರಿಗಣಿಸಿದರು. ಜಲಮೂಲಗಳನ್ನು ಕಲುಷಿತಗೊಳಿಸಿದ ಅಧಿಕಾರಿಗಳ ವಿರುದ್ಧ ಪ್ರತ್ಯೇಕ ಪ್ರಕರಣ ದಾಖಲಿಸಲು ಪ್ರಕ್ರಿಯೆ ಆರಂಭಿಸುವಂತೆ ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಎನ್. ವಾಸುದೇವರಾಮ ಅವರಿಗೆ ನಿರ್ದೇಶಿಸಿದರು.

ಕವಾಡಿಗರಹಟ್ಟಿಯ ಕಲುಷಿತ ನೀರಿನ ಪ್ರಕರಣವನ್ನು ಸ್ವಯಂ ಪ್ರೇರಿತವಾಗಿ ವಿಚಾರಣೆಗೆ ಕೈಗೆತ್ತಿಕೊಂಡಿದ್ದ ಪಾಟೀಲ ಅವರು ಜಿಲ್ಲಾಧಿಕಾರಿ ದಿವ್ಯ ಪ್ರಭು ಸೇರಿ ಏಳು ಮಂದಿಗೆ ನೋಟಿಸ್ ಜಾರಿ ಮಾಡಿದ್ದರು.

ಚಿತ್ರದುರ್ಗದ ಕವಾಡಿಗರಹಟ್ಟಿಗೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರು ಶುಕ್ರವಾರ ಭೇಟಿ ನೀಡಿ ಪರಿಶಿಷ್ಟ ಜಾತಿ (ಎಸ್‌ಸಿ) ಕಾಲೊನಿ ನಿವಾಸಿಗಳ ಅಹವಾಲು ಆಲಿಸಿದರು

'ನೀರಿನ ಗುಣಮಟ್ಟ ಪರೀಕ್ಷೆಗೆ ತಂಡ'

ಕಲಬುರಗಿ: 'ರಾಜ್ಯದ ವಿವಿಧೆಡೆ ಕಲುಷಿತ ನೀರಿನಿಂದ ಜನರು ಸಾವಿಗೀಡಾದ, ಅಸ್ವಸ್ಥರಾದ ಪ್ರಕರಣಗಳು ನಡೆದ ಹಿನ್ನೆಲೆಯಲ್ಲಿ ನೀರಿನ ಗುಣಮಟ್ಟ ಪರೀಕ್ಷೆಗೆ ಪರಿಶೋಧನಾ ತಂಡವನ್ನು ರಚಿಸಲಾಗುವುದು' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಸಚಿವ ಪ್ರಿಯಾಂಕ್ ಖರ್ಗೆ ಪ್ರಕಟಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಇತ್ತೀಚೆಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಕಲುಷಿತ ನೀರು ಸೇವನೆಯಿಂದ ಸಾವಿಗೀಡಾದ ಪ್ರಕರಣ ಜರುಗಿದೆ. ರಾಜ್ಯದಾದ್ಯಂತ ಇಲಾಖೆಯಿಂದ ಶುದ್ಧ ಕುಡಿಯುವ ನೀರಿನ ಘಟಕ ಸೇರಿದಂತೆ ಇತರೆ ಕುಡಿಯುವ ನೀರಿನ ಮೂಲಗಳ ಗುಣಮಟ್ಟ ಪರಿಶೋಧನೆ ನಡೆಯಲಿದೆ. ಈ ತಂಡವು ಅಧ್ಯಯನ ನಡೆಸಿ ಒಂದು ತಿಂಗಳ ಒಳಗಾಗಿ ವರದಿ ನೀಡಲಿದೆ' ಎಂದು ತಿಳಿಸಿದರು.

'ಜಲಜೀವನ್ ಮಿಷನ್ ಯೋಜನೆಯಡಿ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಗಳು ಕಳಪೆಯಾಗಿರುವ ಬಗ್ಗೆ ದೂರುಗಳು ಬಂದಿದ್ದು, ಈ ಬಗ್ಗೆ ಮೂರನೇ ವ್ಯಕ್ತಿಯಿಂದ ಪರಿಶೀಲನೆ ನಡೆಸಲಾಗುವುದು. ನಾಲ್ಕು ತಿಂಗಳ ಒಳಗಾಗಿ ವರದಿಯನ್ನು ನೀಡುವಂತೆ ಸೂಚಿಸಲಾಗಿದೆ' ಎಂದರು.

'ರಾಜಭವನವೇನು ಬಿಜೆಪಿ ಕಚೇರಿಯೇ'

ಬೆಂಗಳೂರು: ಕೃಷಿ ಸಚಿವ ಚಲುವರಾಯ ಸ್ವಾಮಿ ವಿರುದ್ಧ ಬರೆದ ಪತ್ರ ಮೇಲ್ನೋಟಕ್ಕೆ ನಕಲಿ ಎನ್ನುವುದು ಗೊತ್ತಾಗುತ್ತದೆ. ರಾಜ್ಯಪಾಲರು ಇದನ್ನು ಗಮನಿಸದೆ ತನಿಖೆ ನಡೆಸುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ. ಕಾಂಗ್ರೆಸ್ ವಿರೋಧ ಪಕ್ಷದಲ್ಲಿದ್ದಾಗ ದಾಖಲೆ ಸಹಿತ ಪತ್ರ ಬರೆದರೂ ಒಮ್ಮೆಯೂ ಇಂತಹ ಸೂಚನೆ ನೀಡಿರಲಿಲ್ಲ ಎಂದು ಕೆಪಿಸಿಸಿ ವಕ್ತಾರ ಲಕ್ಷ್ಮಣ್ ದೂರಿದರು.

ಕೆಪಿಸಿಸಿ ಸಂವಹನ ವಿಭಾಗದ ಉಪಾಧ್ಯಕ್ಷ ರಮೇಶ್ ಬಾಬು ಜತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯಪಾಲರ ಕಚೇರಿ ಬಿಜೆಪಿ ಕಚೇರಿಯಾಗಿ ಕೆಲಸ ಮಾಡುತ್ತಿದೆ. ಬಿಜೆಪಿ ನಾಯಕರು ಇಂತಹ ಸುಳ್ಳು ಆರೋಪಗಳ ಅಭಿಯಾನ ಮಾಡುತ್ತಿದ್ದಾರೆ. ಅವರಿಗೆ ನಾಚಿಕೆಯಾಗಬೇಕು. ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಕಾಂಗ್ರೆಸ್ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಇಂತಹ ವಿಫಲ ಪ್ರಯತ್ನ ಮಾಡುತ್ತಿದ್ದಾರೆ ಎಂದು ದೂರಿದರು.

ಆರ್.ಅಶೋಕ, ಅಶ್ವತ್ಥನಾರಾಯಣ ಅವರು ತಮ್ಮ ಕುಟುಂಬ ಹಾಗೂ ಬೇನಾಮಿ ಹೆಸರುಗಳಲ್ಲಿ ಬಿಬಿಎಂಪಿ, ಬಿಡಿಎನಲ್ಲಿ ಗುತ್ತಿಗೆ ತೆಗೆದುಕೊಂಡಿದ್ದಾರೆ ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	112.90	5,229	6,537
ಹಾರಂಗಿ	2,859	2,858.76	2,492	1,600
ಕಬಿನಿ	2284.00	2,281.79	4,593	5,875
ಹೇಮಾವತಿ	2,922	2,916.20	2,352	2,300
ಲಿಂಗನಮಕ್ಕಿ	1,819	1,790.70	8,158	6,359.70
ಸೂಪಾ (ಮೀ)	564	546.72	3,700	6,558
ಮಾಣಿ	595	581.28	499	670
ತುಂಗಭದ್ರಾ	1,633	1,628.68	11,255	10,701
ಮಲಪ್ರಭಾ	2079.50	2,066.70	1,317	194
ಘಟಪ್ರಭಾ	2175	2,165.08	5,285	1,969
ಭದ್ರಾ	186	166.11	2,712	745
ಆಲಮಟ್ಟಿ (ಮೀ)	519.60	519.58	16,768	14,731
ನಾರಾಯಣಪುರ (ಮೀ)	492.25	492.15	15,000	6,000

*ನೆಲಮಟ್ಟದಿಂದ

18 ಗೋವು ರಕ್ಷಣೆ: ಒಬ್ಬ ವಶಕ್ಕೆ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ/ಬೀದರ್: ಬಸವಕಲ್ಯಾಣ ತಾಲ್ಲೂಕಿನ ಬೆಟಬಾಲ್ಕುಂದಾ ಹತ್ತಿರ ಶುಕ್ರವಾರ ಅನುಮಾನಾಸ್ಪದ ರೀತಿಯಲ್ಲಿ ವಾಹನಗಳಲ್ಲಿ ಸಾಗಿಸುತ್ತಿದ್ದ 18 ಗೋವುಗಳನ್ನು ಬಿಜೆಪಿ ಶಾಸಕ ಶರಣು ಸಲಗರ ಅವರು ತಡೆದು ಪಶು ಸಂಗೋಪನಾ ಇಲಾಖೆಯ ಅಧಿಕಾರಿಗಳಿಗೆ ಒಪ್ಪಿಸಿದ್ದಾರೆ.

'ದನ, ಕರು, ಕೋಣ ಸೇರಿದಂತೆ ಒಟ್ಟು 18 ಗೋವುಗಳು ಹಾಗೂ ಒಬ್ಬ ಆರೋಪಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ನಾಲ್ವರು ಸ್ಥಳದಿಂದ ಓಡಿ ಹೋಗಿದ್ದಾರೆ. ಎರಡು ವಾಹನಗಳಲ್ಲಿ ಮಹಾರಾಷ್ಟ್ರದಿಂದ ಹೈದರಾಬಾದ್‌ಗೆ ಗೋವುಗಳನ್ನು ಸಾಗಿಸಲಾಗುತ್ತಿತ್ತು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚನ್ನಬಸವಣ್ಣ ಎಸ್.ಎಲ್. 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಗೋವುಗಳನ್ನು ಸಾಗಿಸುತ್ತಿರುವ ವಿಷಯ ತಿಳಿದ ಶಾಸಕರು ವಾಹನಗಳನ್ನು ತಡೆದು ಗೋವುಗಳನ್ನು ಕೆಳಗೆ ಇಳಿಸಿದರು. ಈ ಸಂಬಂಧ ಪೊಲೀಸ್ ಇಲಾಖೆ ಹಾಗೂ ಪಶು ಸಂಗೋಪನಾ ಇಲಾಖೆಯವರಿಗೆ ಮಾಹಿತಿ ನೀಡಿದರು. ನಂತರ ಪಶು ಸಂಗೋಪನಾ ಇಲಾಖೆ ಸಹಾಯಕ ನಿರ್ದೇಶಕ ಡಾ.ರವೀಂದ್ರ ನಾರಾಯಣಪುರ, ಸಿಪಿಐ ಅಲಿಸಾಬ್ ಸ್ಥಳಕ್ಕೆ ಬಂದು ಗೋವು ಹಾಗೂ ಒಬ್ಬ ಆರೋಪಿಯನ್ನು ವಶಕ್ಕೆ ಪಡೆದರು.

ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಶಾಸಕ ಸಲಗರ, 'ಗೋವುಗಳನ್ನು ಹತ್ಯೆ ಮಾಡುವುದಕ್ಕಾಗಿಯೇ ತೆಗೆದುಕೊಂಡು ಹೋಗಲಾಗುತ್ತಿತ್ತು. ಕಾಂಗ್ರೆಸ್ ಸರ್ಕಾರದಲ್ಲಿ ಇದೆಲ್ಲ ಸಾಮಾನ್ಯ. ಯಾರಾದರೂ ಗೋವುಗಳನ್ನು ಹಾಗೂ ಆರೋಪಿಗಳನ್ನು ಬಿಡಲು ಒತ್ತಡ ಹೇರಿದರೂ ಅಧಿಕಾರಿಗಳು ಬಿಡಬಾರದು' ಎಂದರು.

'ಸೌಜನ್ಯಾ ಅಸಹಜ ಸಾವು: ಕಾನೂನು ಹೋರಾಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧರ್ಮಸ್ಥಳದಲ್ಲಿ ನಡೆದ ಸೌಜನ್ಯಾ ಕೊಲೆ ಪ್ರಕರಣದ ಹಿಂದಿನ 10 ವರ್ಷಗಳಲ್ಲಿ ನೂರಾರು ಅಸಹಜ ಸಾವಿನ ಪ್ರಕರಣಗಳು ವರದಿಯಾಗಿವೆ. ಈ ಎಲ್ಲ ಪ್ರಕರಣಗಳ ಸಮಗ್ರ ತನಿಖೆಗೆ ಕಾನೂನಾತ್ಮಕ ಹೋರಾಟ ಮಾಡಲಾಗುವುದು' ಎಂದು ಪ್ರಗತಿಪರ ಸಂಘಟನೆಗಳ ಪ್ರಮುಖರು ತಿಳಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಷ್ಟ್ರೀಯ ದ್ರಾವಿಡ ಸಂಘದ ಅಧ್ಯಕ್ಷ ಅಗ್ನಿ ಶ್ರೀಧರ್, 'ಸೌಜನ್ಯಾ ಪ್ರಕರಣ ಧರ್ಮಸ್ಥಳದ ಗ್ರಾಮಕ್ಕೆ ಮಾತ್ರ ಸೀಮಿತವಾಗಿಲ್ಲ. ಸೌಜನ್ಯಾ ರಾಜ್ಯದ ಎಲ್ಲ ಮನೆಗಳ ಮಗಳಾಗಿದ್ದಾಳೆ. ಈ ಪ್ರಕರಣದ ತಾರ್ಕಿಕ ಅಂತ್ಯಕ್ಕೆ ಕಾನೂನಾತ್ಮಕ ಹೋರಾಟ ನಮ್ಮ ಮುಂದಿರುವ ಆಯ್ಕೆ. ಈ ಪ್ರಕರಣದ ಬಳಿಕ ಅಲ್ಲಿ ಅಸಹಜ ಮರಣ ವರದಿಯಾಗಿಲ್ಲ. ಆದ್ದರಿಂದ, ಇದೊಂದೇ ಪ್ರಕರಣದ ಮರು ತನಿಖೆಯ ಬದಲು, ಅಲ್ಲಿ ಹಿಂದಿನ 10 ವರ್ಷಗಳ ಕಾಲ ನಡೆದ ಎಲ್ಲ ಅಸಹಜ ಮರಣ ಪ್ರಕರಣಗಳ ತನಿಖೆ ನಡೆಯಬೇಕು. ಆಗ ನಿಜವಾದ ಅಪರಾಧಿ ಯಾರೆಂಬುದು ತಿಳಿಯುತ್ತದೆ. ಹೈಕೋರ್ಟ್‌ನಲ್ಲಿ ಮುಂದಿನ 15 ದಿನಗಳ ಒಳಗೆ ಈ ಬಗ್ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗುವುದು' ಎಂದು ಹೇಳಿದರು.

ಬಂಜಗೆರೆ ಜಯಪ್ರಕಾಶ್, 'ಸ್ಥಳೀಯರಿಗೆ ಸೌಜನ್ಯಾ ಪ್ರಕರಣದ ಸತ್ಯಾಸತ್ಯತೆ ತಿಳಿದಿದೆ. ಪ್ರಕರಣದ ತನಿಖೆ ಸರಿಯಾಗಿ ನಡೆದಿಲ್ಲ. ಸೂಕ್ತ ತನಿಖೆಗೆ ಸಮರ್ಥ ತಂಡವನ್ನು ಸರ್ಕಾರ ರಚಿಸಬೇಕು. ಅಪರಾಧಿಗಳು ಬಲಿಷ್ಠರು, ಪ್ರಭಾವಿಗಳು ಆಗಿದ್ದಾರೆ. ತನಿಖೆ ಸರಿಯಾದ ದಿಕ್ಕಿನಲ್ಲಿ ನಡೆದಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪತ್ರಕರ್ತ ಇಂದೂಧರ ಹೊನ್ನಾಪುರ, 'ಸೌಜನ್ಯಾ ಪ್ರಕರಣವು ಸರ್ಕಾರ ಹಾಗೂ ನ್ಯಾಯಾಂಗದ ಬದ್ಧತೆಯನ್ನು ಪ್ರಶ್ನೆ ಮಾಡುತ್ತಿದೆ. 11 ವರ್ಷಗಳ ಬಳಿಕವೂ ನ್ಯಾಯ ಮರೀಚಿಕೆಯಾಗಿದೆ. ಧರ್ಮಸ್ಥಳದಲ್ಲಿ ನಡೆದ ಕೊಲೆಗಳ ವಿರುದ್ಧ ಪ್ರಗತಿಪರ ಸಂಘಟನೆಗಳು ಹೋರಾಟ ನಡೆಸಲಿವೆ' ಎಂದು ಹೇಳಿದರು.

ಹಿಜಾಬ್: ಸಮವಸ್ತ್ರ ಕಡ್ಡಾಯ

ಚಿಕ್ಕಮಗಳೂರು: ಹಿಜಾಬ್ ಧರಿಸಿ ವಿದ್ಯಾರ್ಥಿನಿಯರು ತರಗತಿಗೆ ಹಾಜರಾಗಿದ್ದರಿಂದ ಸಮವಸ್ತ್ರ ಕಡ್ಡಾಯಗೊಳಿಸಿ ಇಲ್ಲಿನ ಐಡಿಎಸ್‌ಜಿ ಕಾಲೇಜು ಸುತ್ತೋಲೆ ಹೊರಡಿಸಿದೆ.

ಬಿಎ, ಬಿಎಸ್‌ಸಿ, ಬಿಕಾಂ, ಬಿಬಿಎ, ಬಿಸಿಎ ಮತ್ತು ಪಿಜಿ ವಿದ್ಯಾರ್ಥಿಗಳು ವಾರದ ಆರು ದಿನವೂ ಕಡ್ಡಾಯವಾಗಿ ಸಮವಸ್ತ್ರ ಧರಿಸಿ ಬರಬೇಕು ಮತ್ತು ಕಾಲೇಜಿನ ಗುರುತಿನ ಚೀಟಿಯನ್ನು ತೋರಿಸಿ ತರಗತಿಗೆ ಹಾಜರಾಗಬೇಕು ಎಂದು ಸುತ್ತೋಲೆಯಲ್ಲಿ ಪ್ರಾಂಶುಪಾಲರು ತಿಳಿಸಿದ್ದಾರೆ. ಹಿಜಾಬ್ ಧರಿಸಿ ವಿದ್ಯಾರ್ಥಿನಿಯರು ಕಾಲೇಜಿಗೆ ಹಾಜರಾಗಿದ್ದ ವಿಡಿಯೊ ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ಗುರುವಾರ ಹರಿದಾಡಿತ್ತು.

ಮಂದಿರದಲ್ಲಿ ಸಂತೋಷ್ 'ಮೌನಿ'

ಪ್ರಜಾವಾಣಿ ವಾರ್ತೆ

ಉಡುಪಿ: ಧರ್ಮಸ್ಥಳದ ಸೌಜನ್ಯಾ ಕೊಲೆ ಪ್ರಕರಣದಲ್ಲಿ ನಿರ್ದೋಷಿಯಾಗಿರುವ ಸಂತೋಷ್ ರಾವ್ ಅವರು ಕಾರ್ಕಳದ ಕುಂಟಾಡಿ ಬೈಲಡ್ಕದ ಬಾಲಾಜಿ ಮಂದಿರದಲ್ಲಿ 'ಮೌನಿ'ಯಾಗಿ ಸೇವಾ ಕಾರ್ಯದಲ್ಲಿ ನಿರತರಾಗಿದ್ದಾರೆ.

'ಯಾರೊಂದಿಗೂ ಮಾತನಾಡಲು ಬಯಸದ ಸಂತೋಷ್ ರಾವ್ ಮಂದಿರದಲ್ಲಿ ದೇವರ ಪೂಜಾ ಸಾಮಗ್ರಿಗಳನ್ನು ಸ್ವಚ್ಛಗೊಳಿಸುವುದು, ದೇಗುಲದ ವಠಾರ ಶುಚಿಗೊಳಿಸುವುದಲ್ಲಿ ತಲ್ಲೀನರಾಗಿರುತ್ತಾರೆ. ಬಿಡುವಿನ ವೇಳೆಯಲ್ಲಿ ಜಪ ಮಾಡುತ್ತಾರೆ. ಈ ಸೇವಾ ಕಾರ್ಯಗಳಿಗೆ ಪ್ರತಿಯಾಗಿ ಹಣ ಪಡೆಯುತ್ತಿಲ್ಲ' ಎಂದು ಮಂದಿರದ ಗುರುಸ್ವಾಮಿ ಮಾಹಿತಿ ನೀಡಿದರು.

'ಬಾಲಾಜಿ ಮಂದಿರಕ್ಕೂ ಸಂತೋಷ ರಾವ್ ಕುಟುಂಬಕ್ಕೂ ಭಾವನಾತ್ಮಕ ನಂಟಿದೆ. ಸಂತೋಷ್ ರಾವ್ ಹಾಗೂ ತಂದೆ ನಿವೃತ್ತ ಶಿಕ್ಷಕ ಸುಧಾಕರ ರಾವ್ ಆಗಾಗ ಮಂದಿರಕ್ಕೆ ಬರುತ್ತಿದ್ದರು. ಧರ್ಮಸ್ಥಳದಲ್ಲಿ ಸೌಜನ್ಯಾ ಕೊಲೆಯಾಗುವ ಎರಡು ದಿನ ಮೊದಲು ಮಂದಿರ ಬಿಟ್ಟು ಹೋಗಿದ್ದರು. ನಂತರ ಕೊಲೆ ಪ್ರಕರಣದಲ್ಲಿ ಬಂಧಿತರಾಗಿ ಜಾಮೀನು ಪಡೆದ ಬಳಿಕ ಮಂದಿರಕ್ಕೆ ಬಂದು ಉಳಿದಿದ್ದರು. ನ್ಯಾಯಾಲಯಕ್ಕೆ ಹಾಜರಾಗಲು ಸಂತೋಷ್ ರಾವ್ ಅವರನ್ನು ಸಹೋದರರು ಮಂದಿರದಿಂದಲೇ ಕರೆದೊಯ್ಯುತ್ತಿದ್ದರು' ಎಂದು ಹೇಳಿದರು.

ಸಂತೋಷ ರಾವ್ ಅನ್ನ ಸೇವಿಸುವುದಿಲ್ಲ. ದಿನಕ್ಕೆ ಎರಡು ಹೊತ್ತು ಬೇಕಾದ ಆಹಾರವನ್ನು ಸ್ವತಃ ಸಿದ್ಧಪಡಿಸಿಕೊಂಡು ಸೇವಿಸುತ್ತಾರೆ. ಚಹಾ, ಕಾಫಿ ಸೇವನೆ ಮಾಡುವುದಿಲ್ಲ ಎಂದು ಗುರುಸ್ವಾಮಿ ತಿಳಿಸಿದರು.

'ಅವಕಾಶ ಇದ್ದರೆ ಮರು ತನಿಖೆ'

ಮಂಗಳೂರು: ಉಜಿರೆಯಲ್ಲಿ ಅತ್ಯಾಚಾರಕ್ಕೆ ಒಳಗಾಗಿ ಕೊಲೆಯಾದ ಸೌಜನ್ಯಾ ಪ್ರಕರಣದ ಮರು ತನಿಖೆ ಮಾಡಬೇಕೇ ಬೇಡವೇ ಎಂಬುದು ಸರ್ಕಾರದ ಮಟ್ಟದಲ್ಲಿ ನಿರ್ಧಾರ ಆಗಲಿದೆ. ಅವಕಾಶ ಇದೆ ಎಂದಾದರೆ ಮರು ತನಿಖೆ ಆಗಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

'ಸೌಜನ್ಯಾ ಕೊಲೆ ಪ್ರಕರಣದ ಮರು ತನಿಖೆ ಆಗಬೇಕೆಂಬ ಒತ್ತಾಯ ಕೇಳಿಬಂದಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ವರದಿ ತರಿಸಿಕೊಳ್ಳುತ್ತಿದೆ. ಪ್ರಕರಣದ ವಿಸ್ತೃತ ವರದಿಗಾಗಿ ಗೃಹ ಇಲಾಖೆ ಕಾಯುತ್ತಿದೆ' ಎಂದು ಶುಕ್ರವಾರ ಇಲ್ಲಿ ಪ್ರತಿಕ್ರಿಯಿಸಿದರು.

'ಮರುತನಿಖೆ ಬೇಕು ಅಥವಾ ಬೇಡ ಎಂದು ವೈಯಕ್ತಿಕವಾಗಿ ಹೇಳಲು ಆಗುವುದಿಲ್ಲ. ಗೃಹ ಸಚಿವರ ಜೊತೆ ಈ ಕುರಿತು ಚರ್ಚೆ ಮಾಡುವೆ' ಎಂದರು.

ಎಂಟು ವರ್ಷಗಳಿಂದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲೇ ನಡೆಯುತ್ತಿದ್ದ ತರಗತಿ

ಸರ್ಕಾರಿ ಶಾಲೆಗೆ 1 ಎಕರೆ ಜಮೀನು ದಾನ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಕಲಬುರಗಿ: ತಾಲ್ಲೂಕಿನ ಫಿರೋಜಾಬಾದ್ ಸರ್ಕಾರಿ ಕನ್ನಡ ಮತ್ತು ಉರ್ದು ಮಾಧ್ಯಮ ಪ್ರೌಢಶಾಲೆಗೆ ಗ್ರಾಮದ ಅಬ್ದುಲ್ ಲತೀಫ್ ಶೇಖ್ ಮೆಹಬೂಬ್ ಜಾಗೀರದಾರ್ ಅವರು ಲಕ್ಷಾಂತರ ರೂಪಾಯಿ ಬೆಲೆಬಾಳುವ ಒಂದು ಎಕರೆ ಜಮೀನು ನೀಡಿದ್ದಾರೆ.

'ಪ್ರಜಾವಾಣಿ'ಯ ಆಗಸ್ಟ್ 3ರ ಸಂಚಿಕೆಯಲ್ಲಿ 'ಆರೋಗ್ಯ ಕೇಂದ್ರವೇ ಇವರ ಶಾಲೆ!' ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟವಾಗಿತ್ತು. ಸ್ವಂತ ಕಟ್ಟಡ ಇಲ್ಲದೆ ಕಳೆದ ಎಂಟು ವರ್ಷಗಳಿಂದ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡದ ಇಕ್ಕಟ್ಟಾದ ಕೋಣೆಗಳಲ್ಲಿ ಶಾಲಾ ತರಗತಿಗಳು ನಡೆಯುತ್ತಿವೆ.

ಈ ವರದಿ ಬಳಿಕ ಜಿಲ್ಲಾ ಪಂಚಾಯಿತಿ ಸಿಇಒ ಭಂವರ್ ಸಿಂಗ್ ಮೀನಾ ಅವರು ಡಿಡಿಪಿಐಗೆ ಕರೆಮಾಡಿ, 'ಫಿರೋಜಾಬಾದ್ ಗ್ರಾಮದಲ್ಲಿ ಶಾಲಾ ಮಕ್ಕಳ ಪೋಷಕರ, ಗ್ರಾಮದ ಮುಖಂಡರ ಸಭೆ ನಡೆಸಬೇಕು. ಗ್ರಾಮದಲ್ಲಿ ಸರ್ಕಾರಿ ಜಾಗ ಇರುವ ಮಾಹಿತಿ ಕಲೆ ಹಾಕಬೇಕು. ಯಾರಾದರೂ ದಾನಿಗಳು ಮುಂದೆ ಬಂದರೆ ಅವರಿಂದ ಜಾಗ ಪಡೆಯುವ ಕುರಿತು ಚರ್ಚಿಸಿ ಒಪ್ಪಿಗೆ ಪಡೆಯಬೇಕು' ಎಂದು ಸೂಚಿಸಿದ್ದರು.

ಆ ಬಳಿಕ ಕಲಬುರಗಿ ದಕ್ಷಿಣ ವಲಯದ ಬಿಇಒ ಶಂಕ್ರಮ್ಮ ಢವಳಗಿ ಅವರು ಗ್ರಾಮದಲ್ಲಿ ಸಭೆ ನಡೆಸಿದ್ದರು.

ಪ್ರಜಾವಾಣಿಯಲ್ಲಿ ಪ್ರಕಟಗೊಂಡ ವಿಶೇಷ ವರದಿ

ಜಮೀನು ದಾನ ಮಾಡಲು ಮುಂದೆ ಬಂದ ಅಬ್ದುಲ್ ಲತೀಫ್ ಅವರನ್ನು ಭೇಟಿಯಾಗಿ ಕುಟುಂಬದ ಎಲ್ಲಾ ಸದಸ್ಯರ ಸಹಮತ ಪಡೆದು ದಾನದ ಒಪ್ಪಿಗೆ ಪತ್ರ ಬರೆದುಕೊಡುವಂತೆ ಕೋರಿದರು.

ಅಬ್ದುಲ್ ಲತೀಫ್ ಅವರು ಕುಟುಂಬಸ್ಥರ ಸಹಮತದೊಂದಿಗೆ ಕಲಬುರಗಿ–ವಿಜಯಪುರ ರಸ್ತೆ ಸಮೀಪದ ಒಂದು ಎಕರೆ ಜಮೀನನ್ನು ನೀಡುವ ದಾನ ಪತ್ರವನ್ನು ಬರೆದು ಶಾಲೆಯ ಮುಖ್ಯ ಶಿಕ್ಷಕರಿಗೆ ಕೊಟ್ಟಿದ್ದಾರೆ.

'ಪ್ರಜಾವಾಣಿ' ಜತೆಗೆ ಮಾತನಾಡಿದ ಅಬ್ದುಲ್ ಲತೀಫ್, 'ಈ ಹಿಂದೆಯೂ ಶಾಲೆಗೆ ಜಾಗ ಕೊಡಲು ಮುಂದಾಗಿದ್ದೆ. ಕೆಲವರು ಆಕ್ಷೇಪ ಎತ್ತಿದ್ದರು. ಆ.9ರಂದು ಬಿಇಒ ಕರೆದಿದ್ದ ಸಭೆಯಲ್ಲಿ ಯಾರಾದರೂ ಜಾಗ ಕೊಟ್ಟರೆ, ಕಟ್ಟಡ ನಿರ್ಮಾಣಕ್ಕೆ ₹ 1 ಲಕ್ಷ ಕೊಡುವುದಾಗಿ ಹೇಳಿದ್ದೆ. ಯಾರೂ ಮುಂದೆ ಬರಲಿಲ್ಲ. ಕೊನೆಗೆ ಒಂದು ಎಕರೆ ಭೂಮಿಯನ್ನು ನಾನೇ ದಾನವಾಗಿ ಬರೆದುಕೊಟ್ಟಿದ್ದೇನೆ' ಎಂದು ತಿಳಿಸಿದರು.

'ಜಮೀನು ದಾನ ಕೊಡಲು ಮಕ್ಕಳು ಆಕ್ಷೇಪ ಎತ್ತಿಲ್ಲ. ಹಿರಿಯರ ಆಸ್ತಿಯನ್ನು ಕಾಪಾಡಿಕೊಂಡು ಬಂದು ಶಾಲಾ ಕಟ್ಟಡದಂತಹ ಪುಣ್ಯದ ಕೆಲಸಕ್ಕೆ ನೀಡಿದ ಸಂತೋಷವಿದೆ. ನಮ್ಮ ಅಣ್ಣ ಸಹ ಜಾಗ ಖರೀದಿ ಮಾಡಿ ಉರ್ದು ಶಾಲೆಗೆ ದಾನವಾಗಿ ಕೊಟ್ಟಿದ್ದರು' ಎಂದರು.

ಶಾಲೆ ನಿರ್ಮಾಣ ದೇವಸ್ಥಾನ ಕಟ್ಟಿಸಿದಂತೆ. ಕಲಿಕೆಗಾಗಿ ಭೂಮಿ ಕೊಡುವುದು ಮಾನವ ಧರ್ಮ. ಬುದ್ಧಿ ಜೀವಿಗಳಿಗೆ ಇದರ ಮಹತ್ವದ ಗೊತ್ತಾಗುತ್ತದೆ

ಅಬ್ದುಲ್ ಲತೀಫ್ ಶೇಖ್ ಮೆಹಬೂಬ್ ಜಾಗೀರದಾರ್
ಶಾಲೆಗೆ ಭೂಮಿ ನೀಡಿದ ದಾನಿ

ಶನಿವಾರ, ಆಗಸ್ಟ್ 12, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 223 | ಪುಟ 28
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ ಮೊದಲ 'ಆ ದಿನ' - ಇರಲಿ ಸಾಂತ್ವನ..!

ಪ್ರಜಾವಾಣಿ @75 ರಸಪಥಗಳ 'ಅಂಕಣ ಕರ್ನಾಟಕ'

ಬಿಟ್ ಕಾಯಿನ್: ವಿಚಾರಣೆ 22ಕ್ಕೆ 5

ಅನಧಿಕೃತ ಶಾಲೆ: ಕ್ರಮಕ್ಕೆ ತಡೆ 5

ಸೆನ್ಸೆಕ್ಸ್	ಶುದ್ಧ ಬೆಳ್ಳಿ (kg)	₹/$
65,323	₹72,100 (ಬೆಂಗಳೂರು)	82,85

ಐಪಿಸಿ, ಸಿಆರ್‌ಪಿಸಿ ಮತ್ತು ಸಾಕ್ಷ್ಯ ಕಾಯ್ದೆಗಳ ಬದಲಿಗೆ ನೂತನ ಮಸೂದೆಗಳ ಮಂಡನೆ

ಅಪರಾಧ ಕಾನೂನಿಗೆ ಹೊಸರೂಪ

ನವದೆಹಲಿ (ಪಿಟಿಐ): ಬ್ರಿಟಿಷರ ಕಾಲದಲ್ಲಿ ಜಾರಿಗೆ ತಂದಿದ್ದ ಅಪರಾಧ ಕಾನೂನುಗಳಿಗೆ ಬದಲಾಗಿ ನೂತನ ಕಾನೂನುಗಳನ್ನು ಜಾರಿಗೆ ತರುವ ಮೂರು ಮಸೂದೆಗಳನ್ನು ಕೇಂದ್ರ ಸರ್ಕಾರವು ಶುಕ್ರವಾರ ಲೋಕಸಭೆಯಲ್ಲಿ ಮಂಡಿಸಿದೆ. ಅತ್ಯಾಚಾರ, ಸಾಮೂಹಿಕ ಅತ್ಯಾಚಾರ, ಗುಂಪು ಹಲ್ಲೆ-ಹತ್ಯೆಗಳಂತಹ ಕೃತ್ಯಗಳಿಗೆ ಶಿಕ್ಷೆಯ ಪ್ರಮಾಣವನ್ನು ಹೆಚ್ಚಿಸಲಾಗಿದೆ. ಈ ಕೃತ್ಯಗಳಿಗೆ ಮರಣದಂಡನೆ ವಿಧಿಸಲೂ ಅವಕಾಶ ಕಲ್ಪಿಸಲಾಗಿದೆ ಎಂದು ಸರ್ಕಾರ ಹೇಳಿದೆ.

ಇಂಡಿಯನ್ ಪೀನಲ್ ಕೋಡ್ (ಭಾರತೀಯ ದಂಡ ಸಂಹಿತೆ) ಬದಲಿಗೆ ಭಾರತೀಯ ನ್ಯಾಯ ಸಂಹಿತೆ ಮಸೂದೆ-2023, ಕ್ರಿಮಿನಲ್ ಪ್ರೊಸೀಜರ್ ಕೋಡ್ (ಅಪರಾಧ ಪ್ರಕ್ರಿಯಾ ಸಂಹಿತೆ) ಬದಲಿಗೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮಸೂದೆ-2023 ಮತ್ತು ಇಂಡಿಯನ್ ಎವಿಡನ್ಸ್ ಆ್ಯಕ್ಟ್ (ಭಾರತೀಯ ಸಾಕ್ಷ್ಯ ಕಾಯ್ದೆ) ಬದಲಿಗೆ ಭಾರತೀಯ ಸಾಕ್ಷ್ಯ ಮಸೂದೆ 2023 ಅನ್ನು ಕೇಂದ್ರ ಗೃಹ ಸಚಿವಾಲಯವು ಮಂಡಿಸಿದೆ. ಈಗ ಜಾರಿಯಲ್ಲಿರುವ ಮೂರೂ ಕಾಯ್ದೆಗಳಲ್ಲಿ 300ಕ್ಕೂ ಹೆಚ್ಚು ಬದಲಾವಣೆಗಳನ್ನು ನೂತನ ಮಸೂದೆಗಳಲ್ಲಿ ತರಲಾಗಿದೆ.

ಮಸೂದೆಗಳನ್ನು ಮಂಡಿಸಿದ ಗೃಹ ಸಚಿವ ಅಮಿತ್ ಶಾ, 'ಬ್ರಿಟಿಷರ ಆಡಳಿತವನ್ನು ಗಟ್ಟಿಗೊಳಿಸಲು ಆ ಕಾನೂನುಗಳನ್ನು ರಚಿಸಲಾಗಿತ್ತು. ಆ ಕಾನೂನುಗಳನ್ನು ಈಗ ತೆಗೆದು ಹಾಕಲಾಗುತ್ತಿದೆ.ನೂತನ ಮಸೂದೆಗಳು ಜಾರಿಗೆ ಬಂದರೆ ಭಾರತದ ಅಪರಾಧ ನ್ಯಾಯ ವ್ಯವಸ್ಥೆಯಲ್ಲಿ ವ್ಯಾಪಕ ಬದಲಾವಣೆಯಾಗಲಿದೆ. ಈಗಿನ ಅಗತ್ಯಗಳಿಗೆ ಅನುಗುಣವಾಗಿ ಈ ಕಾನೂನುಗಳಿಗೆ ಬದಲಾವಣೆ ತರಲಾಗಿದೆ. ಎಲ್ಲರಿಗೂ ತ್ವರಿತವಾಗಿ ನ್ಯಾಯ ಒದಗಿಸಲು ಅನುವು ಮಾಡಿಕೊಡಲಾಗಿದೆ' ಎಂದು ಹೇಳಿದ್ದಾರೆ.

ಈ ಮಸೂದೆಗಳನ್ನು ಸಂಸದೀಯ ಸಮಿತಿಯ ಪರಿಶೀಲನೆಗೆ ನೀಡಬೇಕು ಎಂದು ಅಮಿತ್ ಶಾ ಕೋರಿದರು. ಅದರಂತೆ ಮೂರೂ ಮಸೂದೆಗಳನ್ನು ಗೃಹ ವ್ಯವಹಾರಗಳ ಸಂಸದೀಯ ಸಮಿತಿಗಳ ಪರಿಶೀಲನೆಗೆ ನೀಡಲಾಯಿತು.

ಸಮುದಾಯ ಸೇವೆ ಶಿಕ್ಷೆ: ಮಾನಹಾನಿ, ಕುಡಿದ ಮತ್ತಿನಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ದುರ್ನಡತೆ ತೋರುವುದು ಸೇರಿದಂತೆ ಇಂಥ ಅನೇಕ ಸಣ್ಣ ಸಣ್ಣ ಅಪರಾಧಗಳಿಗೆ ಸಮುದಾಯ ಸೇವೆ ಎನ್ನುವ ಹೊಸ ರೀತಿಯ ಶಿಕ್ಷೆ ನೀಡಲಾಗುವುದು ಎಂದು ಕೇಂದ್ರ ಸರ್ಕಾರ ಹೇಳಿದೆ. ಆತ್ಮಹತ್ಯೆ ಯತ್ನ ಪ್ರಕರಣದಲ್ಲೂ ಸಮುದಾಯ ಸೇವೆ ಶಿಕ್ಷೆಯನ್ನು ಸೇರಿಸಲಾಗಿದೆ.

ಈ ಮೊದಲು ಸಣ್ಣ ಸಣ್ಣ ಅಪರಾಧಗಳಿಗೆ ಗಿಡ ನೆಡುವುದು, ಧಾರ್ಮಿಕ ಸ್ಥಳಗಳಲ್ಲಿ, ಅನಾಥಾಶ್ರಮಗಳಲ್ಲಿ ಸೇವೆ ಸಲ್ಲಿಸುವುದು, ಟ್ರಾಫಿಕ್ ಸಿಗ್ನಲ್ಸ್ ನಿರ್ವಹಿಸುವುದು ಸೇರಿದಂತೆ ಕೆಲವು ಸಣ್ಣ ಪ್ರಮಾಣದ ಶಿಕ್ಷೆಗಳನ್ನು ನ್ಯಾಯಾಲಯ ನೀಡುತ್ತಿದ್ದವು. ಈ ಎಲ್ಲಾ ಶಿಕ್ಷೆಗಳಿಗೆ ಒಂದು ಹೆಸರು ಇರಲಿಲ್ಲ. ಆದರೆ, ಈಗ ಈ ಶಿಕ್ಷೆಗಳಿಗೆ 'ಸಮುದಾಯ ಸೇವೆ' ಎನ್ನುವ ಹೆಸರು ನೀಡಲಾಗಿದೆ.

ಮಾನಹಾನಿ ಪ್ರಕರಣಕ್ಕೆ ಸಂಬಂಧಿಸಿ ಐಪಿಸಿಯಲ್ಲಿ ಎರಡು ವರ್ಷಗಳ ಶಿಕ್ಷೆ ಅಥವಾ ದಂಡ ಅಥವಾ ಎರಡೂ ವಿಧಿಸುವ ಅವಕಾಶವಿದೆ. ಆದರೆ ಹೊಸ ಮಸೂದೆಯಲ್ಲಿ, ಮಾನಹಾನಿ ಪ್ರಕರಣಕ್ಕೆ ಐಪಿಸಿಯಲ್ಲಿ ಹೇಳಿರುವ ಶಿಕ್ಷೆಯ ಪ್ರಮಾಣದ ಜೊತೆಯಲ್ಲಿ ಸಮುದಾಯ ಸೇವೆಯನ್ನು ಸೇರಿಸಲಾಗಿದೆ. 'ಈವರೆಗೆ ಸಮುದಾಯ ಸೇವೆಯ ಶಿಕ್ಷೆ ನೀಡುವ ಪದ್ಧತಿ ಇತ್ತು. ಈಗ ಅದನ್ನು ಮಸೂದೆಯಲ್ಲಿಯೇ ಸೇರಿಸಲಾಗಿದೆ' ಎಂದು ಅಮಿತ್ ಶಾ ಹೇಳಿದ್ದಾರೆ.

ಶಾ ಹೇಳಿದ ಪ್ರಮುಖ ಬದಲಾವಣೆಗಳು

- ಸಾಮೂಹಿಕ ಅತ್ಯಾಚಾರಕ್ಕೆ ಗರಿಷ್ಠ 20 ವರ್ಷಗಳ ಶಿಕ್ಷೆ. 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಯುವತಿಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆದರೆ, ಜೀವಿತಾವಧಿ ಶಿಕ್ಷೆ ಅಥವಾ ಮರಣದಂಡನೆ. ಪದೇ ಪದೇ ಅತ್ಯಾಚಾರ ಅಪರಾಧ ಎಸಗುವ ಆರೋಪಿಗೆ ಜೀವಿತಾವಧಿ ಶಿಕ್ಷೆ ಅಥವಾ ಮರಣದಂಡನೆ
- ಝೀರೊ ಎಫ್‌ಐಆರ್ ದಾಖಲಿಸಿದ 15 ದಿನಗಳ ಒಳಗೆ ಸಂಬಂಧಿತ ಠಾಣೆಗೆ ದೂರನ್ನು ತಲುಪಿಸಬೇಕು. ಲೈಂಗಿಕ ದೌರ್ಜನ್ಯದ ಪ್ರಕರಣಗಳಲ್ಲಿ, ಸಂತ್ರಸ್ತೆಯ ಹೇಳಿಕೆಯ ವಿಡಿಯೊ ದಾಖಲೀಕರಣವು ಕಡ್ಡಾಯ
- ಗುರುತು ಮರೆಮಾಚಿ ಮಹಿಳೆಯನ್ನು ಮದುವೆ ಆಗುವುದು ಅಪರಾಧ
- ಗುಂಪು ಹಲ್ಲೆ ಅಪರಾಧಕ್ಕೆ ಏಳು ವರ್ಷಗಳ ಶಿಕ್ಷೆ ಅಥವಾ ಜೀವಿತಾವಧಿ ಶಿಕ್ಷೆ ಅಥವಾ ಮರಣದಂಡನೆ
- ಆರೋಪಪಟ್ಟಿಯನ್ನು 90 ದಿನಗಳ ಒಳಗೆ ಸಲ್ಲಿಸಬೇಕು. ನ್ಯಾಯಾಲಯವು ಇನ್ನೂ 90 ದಿನಗಳವರಗೆ ಕಾಲಾವಕಾಶ ನೀಡಬಹುದು. ಪ್ರಕರಣದ ತನಿಖೆಯನ್ನು 180 ದಿನಗಳ ಒಳಗೆ ಮುಗಿಸಿ, ವಿಚಾರಣೆಗೆ ಕಳುಹಿಸಬೇಕು
- ಸರ್ಕಾರಿ ನೌಕರರ ವಿರುದ್ಧ ಪ್ರಕರಣ ದಾಖಲು ಮಾಡಬೇಕು ಎಂದಾದರೆ, ಇವರಿಗೆ ಸಂಬಂಧಿಸಿದ ಇಲಾಖೆಯು 120 ದಿನಗಳ ಒಳಗೆ ಅನುಮತಿ ನೀಡಬೇಕು ಇಲ್ಲವೇ ಅನುಮತಿಯನ್ನು ನಿರಾಕರಿಸಬಹುದು. 120 ದಿನಗಳ ಒಳಗೆ ಇಲಾಖೆಯಿಂದ ಪ್ರತಿಕ್ರಿಯೆ ಬರಲಿಲ್ಲ ಎಂದಾದರೆ, ಇಲಾಖೆಯು ಅನುಮತಿ ನೀಡಿದೆ ಎಂದೇ ಅರ್ಥ
- ಅಪರಾಧಿಯ ಆಸ್ತಿಯಿಂದಲೇ ಪರಿಹಾರ ನೀಡುವ ಅವಕಾಶ
- ಭಯೋತ್ಪಾನೆ ಅಂದರೇನು ಎನ್ನುವುದನ್ನು ಇದೇ ಮೊದಲ ಬಾರಿಗೆ ವ್ಯಾಖ್ಯಾನಿಸಲಾಗಿದೆ
- ಆರೋಪಿ ತಲೆಮರೆಸಿಕೊಂಡಿದ್ದರೂ ಆತನ ವಿರುದ್ಧ ನ್ಯಾಯಾಲಯದಲ್ಲಿ ವಿಚಾರಣೆ ನಡೆಸುವ ಅವಕಾಶ
- ವಿಡಿಯೊ ದಾಖಲೀಕರಣ ಮಾಡಿಕೊಂಡ ಮೇಲೆ ವಾಹನಗಳನ್ನು ಪ್ರಕರಣ ಮುಗಿಯುವವರೆಗೂ ಇರಿಸಿಕೊಳ್ಳುವ ಅಗತ್ಯ ಇಲ್ಲ
- ಮೂರು ವರ್ಷಗಳ ಒಳಗೆ ಪ್ರಕರಣಗಳು ಇತ್ಯರ್ಥವಾಗಬೇಕು

ಗೃಹ ಸಚಿವ ಅಮಿತ್ ಶಾ ಅವರು ಅಧಿವೇಶನದಲ್ಲಿ ಮಾತನಾಡಿದರು–ಪಿಟಿಐ ಚಿತ್ರ

ಬ್ರಿಟಿಷರ ಕಾನೂನುಗಳ ಉದ್ದೇಶ ದಂಡನೆಯಾಗಿತ್ತು. ನಮ್ಮ ಕಾನೂನುಗಳು ನ್ಯಾಯ ಒದಗಿಸುವುದಕ್ಕೆ ಆದ್ಯತೆ ನೀಡಲಿವೆ
ಅಮಿತ್ ಶಾ, ಕೇಂದ್ರ ಗೃಹ ಸಚಿವ

ದೇಶದ ನ್ಯಾಯಾಲಯಗಳ ಕಲಾಪಗಳು ಇಂಗ್ಲಿಷ್ ಭಾಷೆಯಲ್ಲಿ ನಡೆಯುತ್ತವೆ. ಸುಪ್ರೀಂ ಕೋರ್ಟ್‌ನ ಭಾಷೆ ಇಂಗ್ಲಿಷ್ ಆಗಿರಬೇಕು ಎಂದು ಸಂವಿಧಾನ ಹೇಳಿದೆ. ಹೀಗಿರುವಾಗ ಕಾಯ್ದೆಗಳ ಹೆಸರನ್ನು ಹಿಂದಿಯಲ್ಲಿ ಇಡುವುದು ಅರ್ಥಹೀನ
ವಿಕಾಸ್ ಸಿಂಗ್, ಶಂಕರನಾರಾಯಣನ್, ವಕೀಲರು

ನಿರ್ವಸಾಹತೀಕರಣದ ಹೆಸರಿನಲ್ಲಿ ಮರುವಸಾಹತೀಕರಣ ಮಾಡಲಾಗುತ್ತಿದೆ. ಈ ಮಸೂದೆ ಮೂಲಕ ಹಿಂದೆ ಹೇರಿಕೆ ಮಾಡಲಾಗುತ್ತಿದೆ
ಎಂ.ಕೆ. ಸ್ಟಾಲಿನ್, ತಮಿಳುನಾಡು ಮುಖ್ಯಮಂತ್ರಿ

'ದೇಶದ್ರೋಹ'ದ ಹೆಸರು ಬದಲು

ನೂತನ ಮಸೂದೆಯಲ್ಲಿ 'ದೇಶದ್ರೋಹ' ಕಾನೂನನ್ನು ತೆಗೆದುಹಾಕಲಾಗಿದೆ ಎಂದು ಅಮಿತ್ ಶಾ ಹೇಳಿದ್ದಾರೆ. ಆದರೆ, ಈ ಕಾನೂನಿನ ಸೆಕ್ಷನ್ ಸಂಖ್ಯೆ ಮತ್ತು ಹೆಸರನ್ನು ಬದಲಾಯಿಸಲಾಗಿದೆ. ಈ ಸೆಕ್ಷನ್ ಅಡಿ ಗುರುತಿಸಲಾದ ಕೃತ್ಯಗಳಿಗೆ ನೀಡಲಾಗುತ್ತಿದ್ದ ಶಿಕ್ಷೆಯನ್ನು ಹೆಚ್ಚಿಸಲಾಗಿದೆ. ಸರ್ಕಾರದ ವಿರುದ್ಧದ ಟೀಕೆ ಮತ್ತು ಆಗ್ರಹಗಳನ್ನೂ ಈ ಸೆಕ್ಷನ್‌ನ ವ್ಯಾಪ್ತಿಗೆ ತರಲು ಭಾರತೀಯ ನ್ಯಾಯ ಸಂಹಿತೆ ಅವಕಾಶ ಮಾಡಿಕೊಡುತ್ತದೆ.

9

'ದ್ವೇಷಭಾಷಣ ಒಪ್ಪಲಾಗದು'

ಪ್ರಕರಣಗಳ ಪರಿಶೀಲನೆಗೆ ಸಮಿತಿ ರಚಿಸಲು ಕೇಂದ್ರಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸೌಹಾರ್ದ ಕಾಯ್ದುಕೊಳ್ಳುವುದು ಎಲ್ಲ ಸಮುದಾಯಗಳ ಹೊಣೆಗಾರಿಕೆಯಾಗಿದೆ. ದ್ವೇಷ ಭಾಷಣವನ್ನು ಯಾರೂ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ದ್ವೇಷ ಭಾಷಣ ಪ್ರಕರಣಗಳ ತನಿಖೆಯ ಕಣ್ಗಾವಲಿಗೆ ಸಮಿತಿ ರಚಿಸಬೇಕು ಎಂದು ಸುಪ್ರೀಂ ಕೋರ್ಟ್, ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ಎಸ್.ವಿ.ಎನ್. ಭಟ್ಟಿ ಅವರ ನ್ಯಾಯಪೀಠವು, ಈ ನಿಟ್ಟಿನಲ್ಲಿ ಅಗತ್ಯ ಸೂಚನೆಗಳನ್ನು ಪಡೆದು, ಸಮಿತಿಯನ್ನು ರಚಿಸುವ ಕುರಿತು ಆಗಸ್ಟ್ 18ರ ಒಳಗೆ ಮಾಹಿತಿಯನ್ನು ನೀಡುವಂತೆ ಕೇಂದ್ರವನ್ನು ಪ್ರತಿನಿಧಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ. ನಟರಾಜ್ ಅವರಿಗೆ ಸೂಚನೆ ನೀಡಿದೆ.

ಠಾಣಾಧಿಕಾರಿಗಳಿಂದ ದೂರುಗಳನ್ನು ಪಡೆದುಕೊಳ್ಳುವುದಕ್ಕಾಗಿ ಸಮಿತಿಯೊಂದನ್ನು ರಚಿಸುವಂತೆ ಡಿಜಿಪಿಯನ್ನು ಕೇಳಬಹುದು. ದ್ವೇಷ ಭಾಷಣದಲ್ಲಿ ಇದ್ದ ಅಂಶಗಳೇನು, ಭಾಷಣದ ಧ್ವನಿ-ಮುದ್ರಿಕೆಯು ಅಸಲಿಯೇ ಎಂಬುದನ್ನು ಪರಿಶೀಲಿಸಿದ ಬಳಿಕ ಸೂಕ್ತ ನಿರ್ದೇಶನಗಳನ್ನು ಅಧಿಕಾರಿಗಳಿಗೆ ನೀಡಬಹುದು ಎಂದು ಕೋರ್ಟ್ ಹೇಳಿದೆ.

ವಿವಿಧ ಹಂತಗಳಲ್ಲಿ ಕಾನೂನಿನ ಗ್ರಹಿಕೆಯ ಸಮಸ್ಯೆ ಇದೆ. ಈ ಕುರಿತು ಜಾಗೃತಿಯ ಅಗತ್ಯವೂ ಇದೆ. ಈ ಸಮಸ್ಯೆಯನ್ನು ಪರಿಹರಿಸಿಕೊಳ್ಳಲೇಬೇಕಿದೆ ಮತ್ತು ದ್ವೇಷ ಭಾಷಣವು ಯಾರಿಗೂ ಒಪ್ಪಿತ ಅಲ್ಲವೇ ಅಲ್ಲ ಎಂದು ಪೀಠ ವಿವರಿಸಿದೆ.

ಕೆಲವು ಸ್ಥಳಗಳಲ್ಲಿ ಯಾವುದೋ ಕಾರಣಕ್ಕಾಗಿ ಕಾನೂನು ಪಾಲನೆ ಆಗುತ್ತಿಲ್ಲ ಎಂದು ಕೆ.ಎಂ. ನಟರಾಜ್ ಅವರು ಪೀಠಕ್ಕೆ ಹೇಳಿದರು.

'ಸೂಕ್ತವಾದ ವ್ಯವಸ್ಥೆಯನ್ನು ಯಾಕೆ ಮಾಡಿಕೊಂಡಿಲ್ಲ' ಎಂದು ನಟರಾಜ್ ಅವರನ್ನು ಪೀಠವು ಪ್ರಶ್ನಿಸಿದೆ. ಎಲ್ಲದಕ್ಕೂ ನ್ಯಾಯಾಲಯಕ್ಕೆ ಬರುವುದು ಪರಿಹಾರ ಅಲ್ಲ. ದ್ವೇಷ ಭಾಷಣವನ್ನು ನಿರ್ವಹಿಸುವುದಕ್ಕೆ ವ್ಯವಸ್ಥೆಯೊಂದು ಬೇಕೇಬೇಕು ಎಂದು ಪೀಠವು ಹೇಳಿದೆ.

ಸರ್ಕಾರವು ದ್ವೇಷ ಭಾಷಣವನ್ನು ಬೆಂಬಲಿಸುವುದಿಲ್ಲ ಎಂದು ನಟರಾಜ್ ಅವರು ಹೇಳಿದರು.

ಹರಿಯಾಣದ ನೂಹ್‌ನಲ್ಲಿ ಕೋಮು ಸಂಘರ್ಷ ನಡೆಯುವುದಕ್ಕೆ ಮೊದಲು ಹಿಂಸೆಗೆ ಕುಮ್ಮಕ್ಕು ನೀಡುವ ರೀತಿಯಲ್ಲಿ ಭಾಷಣ ಮಾಡಲಾಗಿತ್ತು ಎಂದು ಅರ್ಜಿದಾರರಾದ ಪತ್ರಕರ್ತೆ ಶಾಹೀನ್ ಅಬ್ದುಲ್ಲಾ ಅವರ ವಕೀಲ ಕಪಿಲ್ ಸಿಬಲ್ ಹೇಳಿದರು.

9ನೇ ಪುಟ ನೋಡಿ

ಮುಖ್ಯಾಂಶಗಳು

- ಕಾನೂನು ಪಾಲನೆಯ ಸಮಸ್ಯೆ ಪರಿಹಾರಕ್ಕೆ ವ್ಯವಸ್ಥೆ ಬೇಕು
- ತನಿಖೆಯ ಪ್ರಗತಿಯನ್ನು ಸಮಿತಿಯು ಕಾಲಕಾಲಕ್ಕೆ ಪರಿಶೀಲಿಸಬೇಕು
- ತನಿಖೆಯಲ್ಲಿ ಯಾವುದೇ ಲೋಪ ಇದ್ದರೆ ಸರಿಪಡಿಸಬೇಕು

ಬಿಬಿಎಂಪಿಯಲ್ಲಿ ಬೆಂಕಿ: ಹಲವರಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಕೇಂದ್ರ ಕಚೇರಿಯಲ್ಲಿನ ಗುಣಮಟ್ಟ ನಿಯಂತ್ರಣ ಪ್ರಯೋಗಾಲಯದಲ್ಲಿ ಶುಕ್ರವಾರ ಸಂಜೆ ಬೆಂಕಿ ಅನಾಹುತ ಸಂಭವಿಸಿದ್ದು, ಇಬ್ಬರು ಮಹಿಳೆಯರು ಸೇರಿದಂತೆ ಒಂಬತ್ತು ಮಂದಿ ತೀವ್ರ ಗಾಯಗೊಂಡಿದ್ದಾರೆ.

ಮುಖ, ಕೈ, ಕಾಲುಗಳಿಗೆ ಸುಟ್ಟ ಗಾಯಗಳಾಗಿದ್ದು, ಎಂಟು ಮಂದಿಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಸುಮಾರು ಶೇ 40ರಷ್ಟು ಗಾಯಗಳಾಗಿವೆ ಎಂದು ವೈದ್ಯರು ತಿಳಿಸಿದ್ದಾರೆ. ಮುಖ್ಯ ಎಂಜಿನಿಯರ್ ಶಿವಕುಮಾರ್ ಅವರನ್ನು ನೇರವಾಗಿ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರ ಸ್ಥಿತಿ ಗಂಭೀರವಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಿಕ್ಟೋರಿಯಾ ಆಸ್ಪತ್ರೆಗೆ ಭೇಟಿ ನೀಡಿ, ಗಾಯಗೊಂಡವರ ಆರೋಗ್ಯ ವಿಚಾರಿಸಿದರು. ಎರಡು ಪ್ರತ್ಯೇಕ ತನಿಖೆ ನಡೆಸಲು ಸೂಚಿಸಿದರು.

ಪ್ರಯೋಗಾಲಯದಲ್ಲಿ ಪರೀಕ್ಷೆ ನಡೆಸುವಾಗ ಬೆಂಕಿ ಕಾಣಿಸಿಕೊಂಡಿದೆ. ಕ್ಷಣದಲ್ಲಿ ಅದು ಬೃಹತ್ ಪ್ರಮಾಣದಲ್ಲಿ ಹರಡಿಕೊಂಡಿದ್ದರಿಂದ ಸಿಬ್ಬಂದಿಗೆ ಹೊರಬರಲು ಸಾಧ್ಯವಾಗಿಲ್ಲ. ಸುಮಾರು ಅರ್ಧ ತಾಸು ಅಲ್ಲೇ ಒಳಗೆ ಇದ್ದರು. ದಟ್ಟವಾದ ಹೊಗೆ ಅವರಿಸಿದೆ. ಸಿಬ್ಬಂದಿಯ ದೇಹದೊಳಗೆ ಹೊಗೆಯೂ ತುಂಬಿಕೊಂಡಿತ್ತು ಎಂದು ತಿಳಿದುಬಂದಿದೆ.

ಪ್ರಯೋಗಾಲಯ ಎರಡು ಅಂತಸ್ತಿನಲ್ಲಿದ್ದು, ಸಿಬ್ಬಂದಿ ಕಚೇರಿಯೂ ಅಲ್ಲಿತ್ತು. ಕೆಳಗೆ ಹಾಗೂ ಮೇಲ್ಭಾಗದಲ್ಲಿ ಪ್ರಯೋಗದ ಯಂತ್ರೋಪಕರಣಗಳಿವೆ. ಕೆಳಭಾಗದಲ್ಲಿ ಬೆಂಕಿ ಕಾಣಿಸಿಕೊಂಡು ಮೇಲ್ಭಾಗಕ್ಕೂ ಹಬ್ಬಿದ್ದರಿಂದ ಅಲ್ಲಿದ್ದ ಸಿಬ್ಬಂದಿ ಹೊರಬರಲಾಗಿಲ್ಲ. 11 ಮಂದಿ ಈ ಪ್ರಯೋಗಾಲಯದಲ್ಲಿದ್ದರು. ಅದರಲ್ಲಿ ಇಬ್ಬರು ಬೆಂಕಿಯಿಂದ ಪಾರಾಗಿದ್ದಾರೆ.

ಇನ್ನಷ್ಟು ಸುದ್ದಿಗಳು 3C

23 ನ್ಯಾಯಮೂರ್ತಿಗಳ ವರ್ಗ: ಶಿಫಾರಸು

ನವದೆಹಲಿ (ಪಿಟಿಐ): 'ಮೋದಿ ಉಪನಾಮ'ಕ್ಕೆ ಸಂಬಂಧಿಸಿದಂತೆ 2019ರ ಕ್ರಿಮಿನಲ್ ಮಾನಹಾನಿ ಪ್ರಕರಣದಲ್ಲಿ ತಮಗೆ ಶಿಕ್ಷೆ ವಿಧಿಸಿದ್ದನ್ನು ತಡೆಯಲು ಕೋರಿ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದ್ದ ಗುಜರಾತ್ ಹೈಕೋರ್ಟ್‌ನ ನ್ಯಾಯಮೂರ್ತಿ ಹೇಮಂತ್ ಎಂ. ಪ್ರಚ್ಛಕ್ ಸೇರಿದಂತೆ ದೇಶದ ವಿವಿಧ ಹೈಕೋರ್ಟ್‌ಗಳ 23 ನ್ಯಾಯಮೂರ್ತಿಗಳ ವರ್ಗಾವಣೆಗೆ ಸುಪ್ರೀಂ ಕೋರ್ಟ್‌ನ ಕೊಲಿಜಿಯಂ ಶಿಫಾರಸು ಮಾಡಿದೆ.

ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ನರೇಂದ್ರ ಜಿ. ಅವರನ್ನು ಆಂಧ್ರಪ್ರದೇಶ ಹೈಕೋರ್ಟ್‌ಗೆ ವರ್ಗಾಯಿಸಲು ಶಿಫಾರಸು ಮಾಡಲಾಗಿದೆ. ತೆಲಂಗಾಣ ಹೈಕೋರ್ಟ್‌ನ ನ್ಯಾಯಮೂರ್ತಿ ಸಿ. ಸುಮಲತಾ ಅವರನ್ನು ಗುಜರಾತ್ ಹೈಕೋರ್ಟ್‌ಗೆ ವರ್ಗಾವಣೆಗೆ ಶಿಫಾರಸು ಮಾಡಲಾಗಿತ್ತು.

ಬಳಿಕ ಅವರ ಕೋರಿಕೆಯಂತೆ ಅವರನ್ನು ಕರ್ನಾಟಕದ ಹೈಕೋರ್ಟ್‌ಗೆ ವರ್ಗಾಯಿಸಲು ಶಿಫಾರಸು ನೀಡಲಾಗಿದೆ ಎಂದು ಕೊಲಿಜಿಯಂ ತಿಳಿಸಿದೆ.

'ಬ್ರಿಜ್ ಭೂಷಣ್ ವಿರುದ್ಧ ಸಾಕ್ಷ್ಯಗಳಿವೆ'

ನವದೆಹಲಿ (ಪಿಟಿಐ): ಭಾರತೀಯ ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿರುವ ಆಪಾದನೆಯ ಪ್ರಕರಣದಲ್ಲಿ ಭಾರತ ಕುಸ್ತಿ ಫೆಡರೇಷನ್ ನಿರ್ಗಮಿತ ಮುಖ್ಯಸ್ಥ ಮತ್ತು ಬಿಜೆಪಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ಸಾಕಷ್ಟು ಸಾಕ್ಷ್ಯಗಳಿವೆ ಎಂದು ದೆಹಲಿ ಪೊಲೀಸರು ಶುಕ್ರವಾರ ಮೆಟ್ರೊ ಪಾಲಿಟನ್ ಕೋರ್ಟ್‌ಗೆ ತಿಳಿಸಿದ್ದಾರೆ.

9

ಒಳ ಪುಟಗಳು

ಲಾಭದ ಆಸೆಗೆ ಟೊಮೆಟೊ ನಾಟಿ ಹೆಚ್ಚಳ 8

'ಇಂಡಿಯಾ' ಪ್ರಶ್ನಿಸಿ ಅರ್ಜಿ: ವಿಚಾರಣೆಗೆ 'ಸುಪ್ರೀಂ' ನಕಾರ 9

ಚಿನಕುರಳಿ

ಪ್ರಕಾಶ್ ಶೆಟ್ಟಿ

ಸಾಮಾಜಿಕ ಹರಿಕಾರ, ಕರ್ನಾಟಕ ಕಂಡ ಅಪರೂಪದ ರಾಜಕಾರಣಿ,
ನುಡಿದಂತೆ ಅಭಿವೃದ್ಧಿಯ ಪಥದಲ್ಲಿ ಮುನ್ನಡೆಯುತ್ತಿರುವ
ಹತ್ತು ಹಲವು ಜನಪರ ಭಾಗ್ಯದ ಯೋಜನೆಗಳ ರೂವಾರಿ,
ಮಾನ್ಯ ಜನಪ್ರಿಯ ಮುಖ್ಯಮಂತ್ರಿಗಳಾದ
ಸನ್ಮಾನ್ಯ ಶ್ರೀ ಸಿದ್ದರಾಮಯ್ಯ ರವರಿಗೆ
76 ನೇ ವರ್ಷದ
ಜನುಮದಿನದ ಶುಭಾಶಯಗಳು
ಎನ್.ಎನ್. ಶ್ರೀನಿವಾಸಯ್ಯ
ಎಂ. ಜಯಗೋಪಾಲಗೌಡ
ಎನ್.ಕೆ. ಮಹೇಶ್‌ಕುಮಾರ್
ಎಂ. ಹನುಮಂತೇಗೌಡ
ಟಿ.ಜಿ. ಚಂದ್ರು
ಕೆ. ಅಶೋಕನ್
ದಾನೇಗೌಡ
ಪಿ.ವಿ. ಮಂಜುನಾಥ ಬಾಬು
ಕೆ.ಎಂ. ಚೇತನ್
ವಿ. ಹರಿ
ಆರ್.ಎಂ. ಶ್ರೀನಿವಾಸ್
ಆನಂದ್ ಕುಮಾರ್
ಎ.ಸಿ. ಹರಿಪ್ರಸಾದ್
ಎನ್. ಆದಿರಾಮು
ಹೆಚ್.ಎ. ಶಿವಕುಮಾರ್
ಕೆ. ಗೌರೀಶ್
ಕೆ.ಆರ್.ನಟರಾಜ್
ವೆಂಕಟಸ್ವಾಮಿ
ಕೆ.ಆರ್.ರಾಜು
ಮುರಳಿ ಹನುಮಂತೇಗೌಡ
ಬಿ.ಕೆ. ನಾರಾಯಣಸ್ವಾಮಿ
ಬಿ.ಎಂ. ನಾಗೇಶ್
ಜೆ. ಮುನೇಗೌಡ
ಹೆಚ್.ಪಿ. ನಾರಾಯಣಸ್ವಾಮಿ
ಬಿ.ಎಸ್.ಮಂಜುನಾಥ್(ಎಸ್.ಕೆ.ಬಿ)
ಗೋಪಾಲ್ ರೆಡ್ಡಿ
ಎಂ. ಪ್ರಸಾದ್ ರೆಡ್ಡಿ
ವಿ.ಸತ್ಯನಾರಾಯಣ
ಎನ್.ಎಸ್. ದಿಲೀಪ್ ಕುಮಾರ್
ಸುರೇಶ್‌ಗೌಡ (CBW)
ಕೆ.ದಿಲೀಪ್ ಕುಮಾರ್
ಶಾಂತ ಕುಮಾರ್
ಪುಟ್ಟರಾಜು
ಎಸ್.ಜಿ.ಮಂಜುನಾಥ್(ದುಬೈ)
ಎಸ್.ಎನ್.ನಾರಾಯಣಸ್ವಾಮಿ
ಶುಭಕೋರುವವರು : ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರು ಕಾರ್ಯಕರ್ತರು ಹಾಗೂ ಮತದಾರರು

Reliance
Growth is Life
SMART BAZAAR
SMART SUPERSTORE
ಫುಲ್ ಪೈಸಾ ವಸೂಲ್ ಸೇಲ್
12th - 16th Aug
Powered by Jio TRUE 5G
ಶಾಪಿಂಗ್ ನಲ್ಲಿ ಫುಲ್ ಪೈಸಾ ವಸೂಲ್ ಬೇಕಾ?
ಸ್ಮಾರ್ಟ್ ಬಜಾರ್‌ಗೆ ಬನ್ನಿರಿ
ಬೆಂಗಳೂರು : ಶೆಲ್ ಪೆಟ್ರೋಲ್ ಪಂಪ್ ಪಕ್ಕದಲ್ಲಿ, ಇಸ್ಕಾನ್ ದೇವಸ್ಥಾನದ ಹತ್ತಿರ, ರಾಜಾಜಿನಗರ • ಬೆಂಗಳೂರು ಸೆಂಟ್ರಲ್ ಮಾಲ್ ಎದುರು, ರಾಗಿಗುಡ್ಡ, ಜಯನಗರ 9 ನೇ ಬ್ಲಾಕ್ • ನೆಕ್ಸಸ್ ಮಾಲ್ ಪಕ್ಕದಲ್ಲಿ, ಸಲಾರ್ಪುರಿಯಾ ಟವರ್, ಹೊಸೂರು ಮುಖ್ಯ ರಸ್ತೆ, ಕೋರಮಂಗಲ • ರಾಯಲ್ ಮೀನಾಕ್ಷಿ ಮಾಲ್, ಬನ್ನೇರುಘಟ್ಟ ರಸ್ತೆ • ಜಿಟಿ ವರ್ಲ್ಡ್ ಮಾಲ್, ಮಾಗಡಿ ಮುಖ್ಯ ರಸ್ತೆ, ಪ್ರಸನ್ನ ಥಿಯೇಟರ್ ಪಕ್ಕ • ಸಂಗೀತ ಅಪಾರ್ಟ್ ಮೆಂಟ್ ಹತ್ತಿರ, ಹಳೆಯ ಗೀತಾಂಜಲಿ ಥಿಯೇಟರ್, ಮಲ್ಲೇಶ್ವರಂ • ಬ್ರಿಗೇಡ್ ಮಿಲೇನಿಯಮ್ ಹತ್ತಿರ, RBI ಲೇಔಟ್, 7 ನೇ ಹಂತ, J.P. ನಗರ • ಸೋಲ್ ಸ್ಪೇಸ್ ಸ್ಪಿರಿಟ್, ಬೆಳ್ಳಂದೂರ. • ವಿಜಯಾ ಬ್ಯಾಂಕ್ ಕಾಲೋನಿ, ಔಟರ್ ರಿಂಗ್ ರೋಡ್, ಬಾಣಸವಾಡಿ. • ಮಾರುತಿ ಆರ್ಕೇಡ್, ಭದ್ರಪ್ಪಾ ಲೇಔಟ್, ಔಟರ್ ರಿಂಗ್ ರೋಡ್ ಹೆಬ್ಬಾಳ. • ರಿಲಯನ್ಸ್ ಡಿಜಿಟಲ್ ಪಕ್ಕದಲ್ಲಿ, ಹೆಣ್ಣೂರು-ಬಾಗಲೂರು ಮುಖ್ಯ ರಸ್ತೆ, ಕೊತ್ತನೂರು • ಕೆಳ ಮಹಡಿ, ಫೀನಿಕ್ಸ್ ಮಾರ್ಕೆಟ್ ಸಿಟಿ, ಮಹದೇವಪುರ ಮುಖ್ಯ ರಸ್ತೆ • ಟ್ರೆಂಡ್ಸ್ ಪಕ್ಕ, ಕತ್ರಿಗುಪ್ಪೆ ರಸ್ತೆ, ಬನಶಂಕರಿ 3 ನೇ ಹಂತ • ರಾಯಭಾರ ಕಚೇರಿ ಪ್ಯಾರಾಗಾನ್, ಐಟಿಪಿಎಲ್ ಮುಖ್ಯ ರಸ್ತೆ, ಎದುರು. ಕುಂದಲಹಳ್ಳಿ ಗೇಟ್ ಬಸ್ ನಿಲ್ದಾಣ • ಬೆಂಗಳೂರು : ಅಕ್ಷಯ ನಗರ : ಡಿಎಲ್ ಎಫ್ ನ್ಯೂ ಟೌನ್ ಹತ್ತಿರ, ಬೆಗೂರ್ - ಹುಳಿಮಾವು ರಸ್ತೆ • ಚಂದಾಪುರ : ಗುಲ್ಲಿ ರೆಡ್ಡಿ ಲೇಔಟ್, ಚಂದಾಪುರ ಹಳ್ಳಿ, ಅತ್ತಿಬೆಲೆ ಹೋಬಳಿ, ಆನೇಕಲ್ ಮುಖ್ಯ ರಸ್ತೆ • ಕೃಷ್ಣ ಟವರ್ ಉತ್ತರಹಳ್ಳಿ : ಚಿಕ್ಕಸಂದ್ರ, ಕಾಂತಿ ಸ್ವೀಟ್ಸ್ ಎದುರಿಗೆ, ಉತ್ತರಹಳ್ಳಿ ಮುಖ್ಯ ರಸ್ತೆ • ಮೋನಾರ್ಚ್ ಸೆರೆನಿಟಿ : ಥಣಿಸಂದ್ರ ಮುಖ್ಯ ರಸ್ತೆ. ಥಣಿಸಂದ್ರ. • ಶಾಂತಿ ನಗರ ಟಿ ಟಿ ಎಮ್ ಸಿ : ವಿಲ್ಸನ್ ಗಾರ್ಡನ್ ಹತ್ತಿರ, ಶಾಂತಿ ನಗರ • ಮಾಳಗಾಲ ರೋಡ್ : ಮಾಳಗಾಲ ಮುಖ್ಯ ರಸ್ತೆ, ನಾಗರಭಾವಿ 2 ನೇ ಹಂತ, ಗಂಗಮ್ಮ ಗಾರ್ಡನ್ಸ್. • ವಿದ್ಯಾರಣ್ಯಪುರ : ಮಾರ್ಸ್ ಎನ್‌ಕ್ಲೇವ, ದೊಡ್ಡಮ್ಮಸಂದ್ರ ಮುಖ್ಯ ರಸ್ತೆ. ವಿದ್ಯಾರಣ್ಯಪುರ • ವಿಜ್ಞಾನನಗರ್ : ಶೆಲ್ ಪೆಟ್ರೋಲ್ ಬಂಕ್ ಹತ್ತಿರ, ವಿಭೂತಿಪುರ ಹಳ್ಳಿ, ವಿಜ್ಞಾನನಗರ್ • ವಿಜಯನಗರ ಟಿ ಟಿ ಎಮ್ ಸಿ : ಮಾರುತಿ ಮಂದಿರ ಹತ್ತಿರ • ಕೆ ಆರ್ ಪುರಂ : ಬೆತ್ತಲ್ ನಗರ, ಬಸವನಪುರ್ ಮುಖ್ಯ ರಸ್ತೆ, ಕೆ ಆರ್ ಪುರಂ • ಭಾರತೀಯ ಮಾಲ್ ಆಫ್ ಬೆಂಗಳೂರು : ಭಾರತೀಯ ಸಿಟಿ, ಆರ್ ಕೆ ಹೆಗ್ಡೆ ನಗರ, ಥಣಿಸಂದ್ರ ಮುಖ್ಯ ರಸ್ತೆ. • ಎಲೆಕ್ಟ್ರಾನಿಕ್ ಸಿಟಿ : ಶ್ರೀಧರ್ ರೆಡ್ಡಿ ಪ್ರಾಪರ್ಟಿ, ರುಚಿ ಸಾಗರ ಹೋಟೆಲ್ ಹತ್ತಿರ ಹಂತ 2 • ಹರಳೂರು ರೋಡ್ : ಪಿಎನ್‌ಆರ್ ಫೇಲಿಸಿಟಿ, ಡಿಎಸ್‌ಆರ್ ಅಲ್ಟಿಮ ಅಪಾರ್ಟ್ಮೆಂಟ್ ಹತ್ತಿರ. • ಎನ್‌ಆರ್‌ಐ ಲೇಔಟ್ : ಮುಖ್ಯ ರಸ್ತೆ, ಎಚ್‌ಡಿಎಫ್‌ಸಿ ಬ್ಯಾಂಕ್ ಹತ್ತಿರ, ಕಲ್ಕೆರೆ ಗ್ರಾಮ. • ಡಿವಿನಿಟಿ ಮಾಲ್ : ಮೈಸೂರು ರಸ್ತೆ, ನಾಯಂಡಹಳ್ಳಿ ಮೆಟ್ರೋ ನಿಲ್ದಾಣದ ಹತ್ತಿ. • ಕನಕಪುರ : ಕೊಡ್‌ಹಿನಳ್ಳಿ ರೋಡ್, ಎಚ್‌ಡಿಎಫ್‌ಸಿ ಮತ್ತು ಎಕ್ಸಿಸ್ ಬ್ಯಾಂಕ್‌ನ ನಡುವೆ. • ತುಮಕೂರು : ಎಮ್‌ಜಿ ಸ್ಟೇಡಿಯಮ್‌ನ ಪಕ್ಕದಲ್ಲಿ, ಕುವೆಂಪು ನಗರ.
SMART BAZAAR NOW ON JioMart
ಟಾಟಾ ಗೋಲ್ಡ್ ಲೀಫ್ ಚಹಾ 500 g
ಉಳಿಸಿರಿ ₹65
ಎಮ್‌ಆರ್‌ಪಿ ₹315 ರಿಂದ
ಸ್ಮಾರ್ಟ್ ಬೆಲೆ ₹250 ರಿಂದ
ಕ್ಯಾಡ್ಬರಿ ಓರಿಯೊ ಮೂಲ ಬಿಸ್ಕತ್ತುಗಳು 481.25 g / ಸನ್‌ಫೀಸ್ಟ್ ಡಾರ್ಕ್ ಫ್ಯಾಂಟಸಿ ಚೋಕೊ ಫಿಲ್ಸ್ ಕುಕೀಸ್ 600 g
BUY ANY 1 GET ANY 1 FREE
ಎಮ್‌ಆರ್‌ಪಿ ₹159 ರಿಂದ
ಮಾಜಾ 1.5 ℓ
BUY 2 GET 1 FREE
ಎಮ್‌ಆರ್‌ಪಿ ₹90 ರಿಂದ / ಯೂನಿಟ್
ಕೋಲ್ಗೇಟ್ ಅಪ್ ರೆಡ್ ಪೇಸ್ಟ್ ಜೆಲ್ ಟೂತ್ ಪೇಸ್ಟ್ 300 g
BUY 1 GET 1 FREE
ಎಮ್‌ಆರ್‌ಪಿ ₹200 ರಿಂದ / ಯೂನಿಟ್
ಲಕ್ಸ್ ಜಾಸ್ಮಿನ್ & ವಿಟಮಿನ್ ಇ / ರೋಸ್ & ವಿಟಮಿನ್ ಇ ಸೋಪ್ 150 g x 3 ಯುನಿಟ್ಸ್ (ಮಲ್ಟಿ ಪ್ಯಾಕ್)
BUY 1 GET 1 FREE
ಎಮ್‌ಆರ್‌ಪಿ ₹198 ರಿಂದ / ಯೂನಿಟ್
ಟೈಡ್ 5 kg / ಸರ್ಫ್ ಎಕ್ಸೆಲ್ 5 kg / ಮ್ಯಾಟಿಕ್ 6 kg / ಲಿಕ್ವಿಡ್ 2 ℓ / ಏರಿಯಲ್ ಮ್ಯಾಟಿಕ್ 4+2 kg / ಲಿಕ್ವಿಡ್ 2 ℓ (TL/FL) (ಆಯ್ದ ಪ್ರಕಾರಗಳು)
33% ಕಡಿತ
ಎಮ್‌ಆರ್‌ಪಿ ₹430 ರಿಂದ
ಸ್ಮಾರ್ಟ್ ಬೆಲೆ ₹288 ರಿಂದ
ಚಾಕೋಲೇಟ್ ಹೋಮ್ ಪ್ಯಾಕ್ಸ್ (ಚಾಕೋಲೇಟ್ ಪರ್ಕ್ / ಫೈವ್ ಸ್ಟಾರ್ / ಡೈರಿ ಮಿಲ್ಕ್ / ಸ್ನಿಕರ್ಸ್ / ಕಿಟ್ ಕ್ಯಾಟ್ / ಮಂಚ್) 123 g ರಿಂದ (ಆಯ್ದ ಪ್ರಕಾರಗಳು)
BUY ANY 2 GET ANY 1 FREE
ಎಮ್‌ಆರ್‌ಪಿ ₹99 ರಿಂದ / ಯೂನಿಟ್
ಚಿಂಗ್ಸ್ ಸೀಕ್ರೆಟ್ / ಸನ್ ಫೀಸ್ಟ್ ಯಿಪ್ಪೀ ಮ್ಯಾಜಿಕ್ ಮಸಾಲಾ / ಟಾಪ್ ರಮೆನ್ ಮಸಾಲಾ ನೂಡಲ್ಸ್ 240 g ರಿಂದ (ಆಯ್ದ ಪ್ರಕಾರಗಳು)
BUY ANY 2 GET ANY 1 FREE
ಎಮ್‌ಆರ್‌ಪಿ ₹78 ರಿಂದ / ಯೂನಿಟ್
ಕೋಕ ಕೋಲಾ / ಸ್ಪ್ರೈಟ್ / ಥಮ್ಸ್ ಅಪ್ 750 ml ರಿಂದ (ಆಯ್ದ ಪ್ರಕಾರಗಳು)
BUY ANY 3 GET ANY 1 FREE
ಎಮ್‌ಆರ್‌ಪಿ ₹40 ರಿಂದ / ಯೂನಿಟ್
ಡವ್ / ಹೆಡ್ ಆ್ಯಂಡ್ ಶೋಲ್ಡರ್ಸ್ / ಟ್ರೆಸೆಮ್ಮೆ / ಕ್ಲಿನಿಕ್ ಪ್ಲಸ್ / ಲೋರಿಯಾಲ್ / ಸನ್ ಸಿಲ್ಕ್ ಶಾಂಪೂ 580 ml ರಿಂದ (ಆಯ್ದ ಪ್ರಕಾರಗಳು)
50% ಕಡಿತ
ಎಮ್‌ಆರ್‌ಪಿ ₹555 ರಿಂದ
ಸ್ಮಾರ್ಟ್ ಬೆಲೆ ₹278 ರಿಂದ
ವಿಸ್ಪರ್ ಅಲ್ಟ್ರಾ XL 44s / ಸ್ಟೇಫ್ರೀ ಅಲ್ಟ್ರಾ ಡ್ರೈ ಮ್ಯಾಕ್ಸ್ 42s (ಆಯ್ದ ಪ್ರಕಾರಗಳು)
50% ಕಡಿತ
ಎಮ್‌ಆರ್‌ಪಿ ₹500 ರಿಂದ
ಸ್ಮಾರ್ಟ್ ಬೆಲೆ ₹250 ರಿಂದ
ವಿಮ್ ಲೆಮನ್ ಡಿಶ್ವಾಶ್ ಲಿಕ್ವಿಡ್ 2 ℓ
ಉಳಿಸಿರಿ ₹176
ಎಮ್‌ಆರ್‌ಪಿ ₹445
ಸ್ಮಾರ್ಟ್ ಬೆಲೆ ₹269
ಸೂರ್ಯಕಾಂತಿ ರಿಫೈನ್ಡ್ ಎಣ್ಣೆ 5 ℓ + ದಾವತ್ ರೋಜಾನಾ ಗೋಲ್ಡ್ ಬಾಸ್ಮತಿ ರೈಸ್ 5 kg
ಸ್ಮಾರ್ಟ್ ಬೆಲೆ ₹999
ಎಮ್ ಆರ್‌ಪಿ ₹1425
ಉಳಿಸಿರಿ ₹426
ಗುಡ್ ಲೈಫ್ ಬಾದಾಮ್ / ಕ್ಯಾಶೂ (W320) 500 g
ಸ್ಮಾರ್ಟ್ ಬೆಲೆ ₹339/ ₹369
ಎಮ್ ಆರ್‌ಪಿ ₹549 / ₹499
ಉಳಿಸಿರಿ ₹210 / ₹130
ಆಶೀರ್ವಾದ ಸುಪೀರಿಯರ್ ಎಂಪಿ ಅಟ್ಟಾ 10 kg
ಸ್ಮಾರ್ಟ್ ಬೆಲೆ ₹461
ಎಮ್‌ಆರ್‌ಪಿ ₹576
ಉಳಿಸಿರಿ ₹115
ಗುಡ್ ಲೈಫ್ ಡೈಲಿ ರೈಸ್ 30 kg
ಸ್ಮಾರ್ಟ್ ಬೆಲೆ ₹1349 (₹44.96/kg)
ಎಮ್‌ಆರ್‌ಪಿ ₹1650
ಉಳಿಸಿರಿ ₹301
ಪಾಲಿಶ್ ಮಾಡದ ದ್ವಿದಳ ಧಾನ್ಯ ಗಳ ಶ್ರೇಣಿ (ಟಾಟಾ / ಗುಡ್ ಲೈಫ್)
BUY ANY 2 GET ANY 1 FREE
ಎಮ್‌ಆರ್‌ಪಿ ₹60 ರಿಂದ / ಯೂನಿಟ್
ಕಿಂಗ್ಸ್ ಫಿಜಿಕಲಿ ರಿಫೈನ್ಡ್ ರೈಸ್ ಬ್ರಾನ್ ಆಯಿಲ್ 900 g / ಸನ್ ಪ್ಯೂರ್ ಸೂರ್ಯಕಾಂತಿ ಎಣ್ಣೆ 1 ℓ
ಸ್ಮಾರ್ಟ್ ಬೆಲೆ ₹99/ ₹114
ಎಮ್‌ಆರ್‌ಪಿ ₹140 / ₹148
ಉಳಿಸಿರಿ ₹41 / ₹34
ರಸ್ಕ್, ಚೀಸ್, ಪನೀರ್, ಫ್ರೋಜನ್ ವೆಜ್ & ಸ್ನ್ಯಾಕ್ಸ್, ಲಸ್ಸಿ, ಐಸ್ ಕ್ರೀಮ್, ಹಾಲಿನ ಪಾನೀಯಗಳು, ಕೇಕ್ - ಬ್ಯಾಟರ್ 47 g ರಿಂದ (ಆಯ್ದ ಪ್ರಕಾರಗಳು)
ಕನಿಷ್ಠ 25% ಕಡಿತ
ಎಮ್‌ಆರ್‌ಪಿ ₹15 ರಿಂದ
ನಂದಿನಿ ಶುದ್ಧ ತುಪ್ಪ 1 ℓ
ಸ್ಮಾರ್ಟ್ ಬೆಲೆ ₹560
ಎಮ್‌ಆರ್‌ಪಿ ₹610
ಉಳಿಸಿರಿ ₹50
ಜಿಯೋಭಾರತ್ 4G ಫೋನ್
JioCinema JioSaavn JioPay HD Voice Call
ಸ್ಮಾರ್ಟ್ ಬೆಲೆ ₹999
ಎಮ್‌ಆರ್‌ಪಿ ₹1999
ಪುರುಷರ ಉಡುಗೆ, ಮಹಿಳೆಯರ ಉಡುಗೆ, ಮಕ್ಕಳ ಉಡುಗೆ
ಪ್ರಾರಂಭ ₹149
ವರೆಗೆ 60% ಕಡಿತ
Surya Flame
3 ಬರ್ನರ್ ಗ್ಲಾಸ್ ಟಾಪ್ ಗ್ಯಾಸ್ ಸ್ಟವ್
ಸ್ಮಾರ್ಟ್ ಬೆಲೆ ₹1999
ಎಮ್‌ಆರ್‌ಪಿ ₹7560 ರಿಂದ
TRIDENT WELSPUN
ಹತ್ತಿ ದಿಂಬಿನ ಹೊದಿಕೆಯೊಂದಿಗೆ ಡಬಲ್ ಬೆಡ್‌ಶೀಟ್
ಸ್ಮಾರ್ಟ್ ಬೆಲೆ ₹799
ಎಮ್‌ಆರ್‌ಪಿ ₹1999 ರಿಂದ
ARISTOCRAT
3 ಹಾರ್ಡ್ ಟ್ರಾಲಿ ಸೆಟ್ (55 cm / 66 cm / 76 cm)
ಸ್ಮಾರ್ಟ್ ಬೆಲೆ ₹5999
ಎಮ್‌ಆರ್‌ಪಿ ₹22000
ಗ್ರೇಟ್ ಟೈಡಿ ಕ್ಲೀನಿಂಗ್ ಮಾಪ್ ಜೊತೆಗೆ 1 ಎಕ್ಸ್ಟ್ರಾ ರೀಫಿಲ್ ಉಚಿತ
ಗೋಲಿ ಸೂಪರ್ ಸ್ಪಿನ್ ಬಕೆಟ್ ಕ್ಲೀನಿಂಗ್ ಮಾಪ್ ಜೊತೆಗೆ 1 ಎಕ್ಸ್ಟ್ರಾ ರೀಫಿಲ್ ಉಚಿತ
ಸ್ಮಾರ್ಟ್ ಬೆಲೆ ₹499
ಎಮ್‌ಆರ್‌ಪಿ ₹1299
10% INSTANT DISCOUNT# SBI card
#Min. Trxn.: ₹2,500; Max. Discount: ₹500 per credit card.
Validity: 12 Aug - 16 Aug 2023. T&C Apply.
Jio Win Gold Coins
Grab a chance to WIN 1 gm Gold Coin
Shop for ₹499 & above and book a Jio SIM
Book a JioPlus SIM at ₹99
Buy a JioBharat Phone at just ₹999
T&C apply.
ನಿಮ್ಮ ಹತ್ತಿರದ ಅಂಗಡಿಗೆ ಭೇಟಿ ನೀಡಿ
fresh Signature
ನಿಮ್ಮ ಹತ್ತಿರದ ಸ್ಟೋರ್ ನ್ನು ಪತ್ತೆಹಚ್ಚಲು ಸ್ಕ್ಯಾನ್ ಮಾಡಿ
ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಬ್ಯಾಂಕಿಂಗ್ ಕಾರ್ಡ್ / ವಾಲೆಟ್ ಕೊಡುಗೆಗಳು ಸ್ಮಾರ್ಟ್ ಬಜಾರ್, ಸ್ಮಾರ್ಟ್ ಸೂಪರ್‌ಸ್ಟೋರ್, ಸ್ಮಾರ್ಟ್ ಪಾಯಿಂಟ್ ಮತ್ತು ರಿಲಯನ್ಸ್ ಫ್ರೆಶ್ ಸಿಗ್ನೇಚರ್‌ನಲ್ಲಿ ಮಾತ್ರ ಮಾನ್ಯವಾಗಿರುತ್ತವೆ. ಸ್ಟಾಕ್‌ಗಳು ಇರುವವರೆಗೂ ಆಫರ್‌ಗಳು ಮಾನ್ಯವಾಗಿರುತ್ತವೆ. ಎಲ್ಲಾ ಕೊಡುಗೆಗಳು ಸೂಚನೆಯಿಲ್ಲದೆ ಬದಲಾವಣೆಗೆ ಒಳಪಟ್ಟಿರುತ್ತವೆ. ತೋರಿಸಲಾದ ಉತ್ಪನ್ನಗಳ ಚಿತ್ರಗಳು / ಛಾಯಾಚಿತ್ರಗಳು ಪ್ರಾತಿನಿಧ್ಯ ಉದ್ದೇಶಕ್ಕಾಗಿ ಮಾತ್ರ. ಹೋಮ್‌ವೇರ್ ಮತ್ತು ಅಪ್ಪೆರೆಲ್ ಆಫರ್‌ಗಳು ಆಯ್ದ ಸ್ಮಾರ್ಟ್ ಬಜಾರ್ ಮತ್ತು ಸ್ಮಾರ್ಟ್ ಸೂಪರ್ ಸ್ಟೋರ್‌ಗಳಲ್ಲಿ ಮಾತ್ರ ಊರ್ಜಿತವಿದೆ. ಎಲ್ಲಾ ಉತ್ಪನ್ನಗಳ ಎಂಆರ್ ಪಿ ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ರಿಯಾಯಿತಿ ಶೇಕಡಾವಾರು ಆಫರ್ ಬೆಲೆಯ ಹತ್ತಿರದ ಶೇಕಡಾವಾರು ಮೊತ್ತಕ್ಕೆ ಪೂರ್ಣಗೊಳ್ಳುತ್ತದೆ. ಎಲ್ಲಾ ಆಫರ್‌ಗಳು 16 ಆಗಸ್ಟ್ 2023. ರವರೆಗೆ ಮಾನ್ಯವಾಗಿರುತ್ತವೆ. ಎಲ್ಲಾ ವಿವಾದಗಳು ಮುಂಬೈನಲ್ಲಿರುವ ನ್ಯಾಯಾಲಯಗಳ ವಿಶೇಷ ನ್ಯಾಯವ್ಯಾಪ್ತಿಗೆ ಒಳಪಟ್ಟಿರುತ್ತವೆ.

ಉಪನಗರ ರೈಲು: ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಅವರಿಂದ ಕಾಮಗಾರಿ ಪ್ರಗತಿ ವೀಕ್ಷಣೆ

26 ತಿಂಗಳಲ್ಲಿ ಕಾರಿಡಾರ್–2 ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹತ್ವಾಕಾಂಕ್ಷಿ ಬೆಂಗಳೂರು ಉಪನಗರ ರೈಲ್ವೆ ಯೋಜನೆಯಲ್ಲಿ ಚಿಕ್ಕಬಾಣಾವರ ಮತ್ತು ಬೆನ್ನಿಗಾನಹಳ್ಳಿ ನಡುವಿನ ಕಾರಿಡಾರ್-2 ಕಾಮಗಾರಿ ವೇಗವಾಗಿ ನಡೆಯುತ್ತಿದೆ. ಈಗಾಗಲೇ ಶೇ 15ರಷ್ಟು ಕಾಮಗಾರಿ ಮುಗಿದಿದ್ದು, 26 ತಿಂಗಳಲ್ಲಿ ಪೂರ್ಣಗೊಂಡು ರೈಲು ಸಂಚರಿಸಲಿದೆ' ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ವಿಶ್ವಾಸ ವ್ಯಕ್ತಪಡಿಸಿದರು.

ಲಿಂಗರಾಜಪುರ, ಶಾಂಪುರ, ಹೆಬ್ಬಾಳ ಮತ್ತು ಯಶವಂತಪುರಗಳಲ್ಲಿ ಶುಕ್ರವಾರ ಕಾರಿಡಾರ್-2ಗೆ ಸಂಬಂಧಿಸಿದ ಕಾಮಗಾರಿಗಳನ್ನು ಶುಕ್ರವಾರ ವೀಕ್ಷಿಸಿದ ಬಳಿಕ ಅವರು ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಎಲ್ಲ ನಾಲ್ಕು ಕಾರಿಡಾರ್‌ಗಳನ್ನು 2026ಕ್ಕೆ ಪೂರ್ಣಗೊಳಿಸುವುದಾಗಿ ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಯಮಿತದ (ಕೆ–ರೈಡ್) ಅಧಿಕಾರಿಗಳು ತಿಳಿಸಿದ್ದಾರೆ. 2028ರ ಒಳಗೆ ಮುಗಿಯುವುದು ಖಚಿತ. ಉಪನಗರ ರೈಲು ಯೋಜನೆ ಪೂರ್ಣಗೊಂಡರೆ ವಾಹನದಟ್ಟಣೆ ಬಹಳಷ್ಟು ಕಡಿಮೆಯಾಗಲಿದೆ ಎಂದು ತಿಳಿಸಿದರು.

ಕಾರಿಡಾರ್ -2 ಯೋಜನೆಗೆ 157 ಎಕರೆ ಜಮೀನನ್ನು ನೈರುತ್ಯ ರೈಲ್ವೆ ಹಸ್ತಾಂತರಿಸಿದೆ. ಇದಲ್ಲದೇ 5.11 ಎಕರೆ ಖಾಸಗಿ ಜಮೀನು ಸ್ವಾಧೀನಪಡಿಸಿಕೊಳ್ಳಲಾಗಿದೆ. 7.73 ಎಕರೆ ಸರ್ಕಾರಿ ಭೂಮಿಯಲ್ಲಿ 2.72 ಎಕರೆ ಹಸ್ತಾಂತರವಾಗಿದೆ ಎಂದು ವಿವರಿಸಿದರು.

ಮುಂದಿನ 10 ತಿಂಗಳಲ್ಲಿ ನೆಲಮಟ್ಟದ ಕಾಮಗಾರಿಗಳು ಪೂರ್ಣವಾಗಲಿವೆ. ಶಾಂಪುರದಲ್ಲಿ ಪ್ರಗತಿಯಲ್ಲಿರುವ ರೈಲ್ವೆ ಕೆಳಸೇತುವೆ ಕಾಮಗಾರಿ 10 ತಿಂಗಳಲ್ಲಿ ಮುಗಿಯಲಿದೆ. ಈ ಮಾರ್ಗದಲ್ಲಿ 12 ನಿಲ್ದಾಣಗಳು ನಿರ್ಮಾಣಗೊಳ್ಳಲಿವೆ. 2025ರ ಅಕ್ಟೋಬರ್ ವೇಳೆಗೆ ಮೊದಲ 10 ರೈಲು ಸಂಚಾರ ಆರಂಭಗೊಳ್ಳಲಿದೆ ಎಂದು ತಿಳಿಸಿದರು.

ಕೆಂಗೇರಿ- ವೈಟ್‌ಫೀಲ್ಡ್ ನಡುವಿನ ಕಾರಿಡಾರ್–4ರ ಕಾಮಗಾರಿಗಳು ಎರಡನೇ ಆದ್ಯತೆಯಾಗಿ ಶುರು ಆಗಲಿವೆ. ಸಿವಿಲ್ ಕಾಮಗಾರಿಗಳಿಗೆ ಟೆಂಡರ್ ಮುಗಿದಿದ್ದು, ಸದ್ಯದಲ್ಲೇ ಕಾಮಗಾರಿಗಳನ್ನು ಬಿಡ್‌ದಾರರಿಗೆ ವಹಿಸಲಾಗುವುದು. ಕೆಎಸ್‌ಆರ್ ಬೆಂಗಳೂರು–ದೇವನಹಳ್ಳಿ ಸಂಪರ್ಕಿಸುವ ಕಾರಿಡಾರ್–1 ಬಳಿಕ ಆರಂಭಗೊಳ್ಳಲಿದೆ. ಕೊನೆಯ ಹಂತವಾಗಿ ಹೀಳಲಿಗೆ– ರಾಜಾನುಕುಂಟೆ ಕಾರಿಡಾರ್–3 ಆರಂಭವಾಗಲಿದೆ ಎಂದರು.

₹1,000 ಕೋಟಿ ಮೀಸಲು: ಉಪನಗರ ರೈಲು ಯೋಜನೆಯ ಅಂದಾಜು ವೆಚ್ಚ ₹ 15,767 ಕೋಟಿ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಸ್ತುತ ಹಣಕಾಸು ವರ್ಷದಲ್ಲಿ ₹ 1,000 ಕೋಟಿ ಒದಗಿಸಿದ್ದಾರೆ. ಜರ್ಮನಿಯ ಕೆಎಫ್‌ಡಬ್ಲ್ಯು, ಯೂರೋಪಿಯನ್ ಇನ್ವೆಸ್ಟ್‌ಮೆಂಟ್ ಬ್ಯಾಂಕ್ ಮತ್ತು ಲಕ್ಸಂಬರ್ಗ್‌ನಿಂದ ₹ 7,438 ಕೋಟಿ ಸಾಲ ಪಡೆಯಲಾಗುವುದು ಎಂದು ತಿಳಿಸಿದರು.

ವಿವಿಧೆಡೆ ಭೇಟಿ: ಸರ್ವಜ್ಞನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಲಿಂಗರಾಜಪುರದಲ್ಲಿ ತಡೆಗೋಡೆ ಕಾಮಗಾರಿಯನ್ನು ವೀಕ್ಷಿಸಿದರು. ಬಳಿಕ ಶಾಂಪುರದಲ್ಲಿ ನಿರ್ಮಿಸುತ್ತಿರುವ ರೈಲ್ವೆ ಮೇಲ್ಸೇತುವೆ ಪರಿವೀಕ್ಷಣೆ ನಡೆಸಿದರು. ಅಲ್ಲಿ ಸ್ಥಳೀಯ ಶಾಸಕರಾಗಿರುವ ಇಂಧನ ಸಚಿವ ಕೆ.ಜೆ. ಜಾರ್ಜ್ ಜೊತೆಗಿದ್ದರು. ಹೆಬ್ಬಾಳದಲ್ಲಿ ನಿರ್ಮಾಣವಾಗಲಿರುವ ನಿಲ್ದಾಣದ ಉದ್ದೇಶಿತ ಸ್ಥಳದ ಮಾಹಿತಿ ಪಡೆದ ಬಳಿಕ ಯಶವಂತಪುರದ ಬ್ಯಾಚಿಂಗ್ ಪ್ಲಾಂಟ್ ಮತ್ತು ಲ್ಯಾಬೊರೇಟರಿಗಳಿಗೆ ಭೇಟಿ ನೀಡಿದಾಗ ಸ್ಥಳೀಯ ಶಾಸಕ ಮುನಿರತ್ನ ಸಾಥ್ ನೀಡಿದರು.

ಯಶವಂತಪುರ ಪ್ಲಾಂಟ್‌ನಲ್ಲಿ ಅವರು ಕಾಂಕ್ರೀಟ್ ಉತ್ಪಾದನೆಗೆ ಚಾಲನೆ ನೀಡಿದರು.

ಬೆಂಗಳೂರು ಉಪನಗರ ರೈಲು ಯೋಜನೆಯ ಕಾರಿಡಾರ್– 2 ನಿರ್ಮಾಣ ಕಾಮಗಾರಿ ವಿವರಗಳನ್ನು ಸಚಿವ ಎಂ.ಬಿ. ಪಾಟೀಲ ಅವರಿಗೆ ಕೆ–ರೈಡ್ ಸಂಸ್ಥೆಯ ಸಿಬ್ಬಂದಿ ವಿವರಿಸಿದರು. ಮೂಲಸೌಕರ್ಯ ಅಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ , ಇಂಧನ ಸಚಿವ ಕೆ.ಜೆ. ಜಾರ್ಜ್ ಇದ್ದರು. –ಪ್ರಜಾವಾಣಿ ಚಿತ್ರ

'ಸುತ್ತಲಿನ ನಗರಗಳಿಗೆ ವಿಸ್ತರಣೆ ಗುರಿ'

ಉಪನಗರ ರೈಲು ಸಂಪರ್ಕವನ್ನು ಚಿಕ್ಕಬಳ್ಳಾಪುರ, ಮೈಸೂರು, ಮಾಗಡಿ, ತುಮಕೂರು, ಗೌರಿಬಿದನೂರು, ಕೋಲಾರ ಮತ್ತು ಹೊಸೂರುಗಳಿಗೆ ವಿಸ್ತರಿಸುವ ಉದ್ದೇಶವಿದೆ. ಇದರ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಲು ಸೂಚಿಸಲಾಗಿದೆ. ಯೋಜನೆ ಈಗ 148 ಕಿ.ಮೀ. ಆಗಿದೆ. ವಿಸ್ತರಣೆಗೊಂಡರೆ 452 ಕಿ.ಮೀಗೆ ಹಿಗ್ಗಲಿದೆ ಎಂದು ಸಚಿವರು ತಿಳಿಸಿದರು.

'ಉಪಗುತ್ತಿಗೆಗೆ ಅವಕಾಶವಿಲ್ಲ'

'ಕಾರಿಡಾರ್–2 ಕಾಮಗಾರಿಯನ್ನು ಎಲ್ ಆ್ಯಂಡ್ ಟಿ ಸಂಸ್ಥೆ ಗುತ್ತಿಗೆ ಪಡೆದಿದೆ. ಈ ಸಂಸ್ಥೆಯವರು ಉಪಗುತ್ತಿಗೆ ನೀಡುತ್ತಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಉಪ ಗುತ್ತಿಗೆ ನೀಡದೇ ಉತ್ತಮ ರೀತಿಯಲ್ಲಿ ಕಾಮಗಾರಿ ನಡೆಸಬೇಕು. ಸಣ್ಣ ಅಡೆತಡೆಗಳನ್ನೇ ನೆಪವಾಗಿಸಿ ತಡಮಾಡಬಾರದು' ಎಂದು ಶಾಸಕ ಮುನಿರತ್ನ ಸಲಹೆ ನೀಡಿದರು.

ಈ ಬಗ್ಗೆ ಸಚಿವ ಎಂ.ಬಿ.ಪಾಟೀಲ ಬಳಿಕ ಸುದ್ದಿಗಾರರೊಂದಿಗೆ ಪ್ರತಿಕ್ರಿಯಿಸಿ, 'ಕಾಮಗಾರಿಗಳನ್ನು ಎಲ್ ಆ್ಯಂಡ್ ಟಿ ಕಂಪನಿ ಉಪ ಗುತ್ತಿಗೆ ನೀಡುತ್ತಿರುವುದು ನನ್ನ ಗಮನಕ್ಕೆ ಬಂದಿಲ್ಲ. ಉಪಗುತ್ತಿಗೆ ನೀಡಲು ಅವಕಾಶವಿಲ್ಲ' ಎಂದರು.

ಪ್ರಜಾವಾಣಿ@75
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

'ನಾವೂ ಗುತ್ತಿಗೆದಾರರೇ, ನಮಗೂ ಬೆಂಬಲ ಕೊಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾವೇನೂ ಬೇರೆಯಲ್ಲ. ನಾವೂ ಗುತ್ತಿಗೆದಾರರೇ. ಬಿಬಿಎಂಪಿಯಲ್ಲಿ ಕೆಲಸ ಮಾಡಿದ್ದೇವೆ. ಕೆಲಸ ಮಾಡಿರುವ ಬಿಲ್ ಮೊತ್ತವನ್ನು ನಾವು ಕೇಳುತ್ತಿದ್ದೇವೆ. ಬೇರೆಲ್ಲವನ್ನು ಬದಿಗಿಟ್ಟು ನಮಗೆ ಹಣ ಕೊಡಿಸಲು ಕೆಂಪಣ್ಣ ಅವರು ಪ್ರಯತ್ನ ಮಾಡಲಿ, ನಮ್ಮೊಂದಿಗೆ ನಿಲ್ಲಲಿ' ಎಂದು ಬಿಬಿಎಂಪಿ ಕಾರ್ಯನಿರತ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆ.ಟಿ. ಮಂಜುನಾಥ್ ಹೇಳಿದರು.

'ಬಿಬಿಎಂಪಿ ಕಾರ್ಯನಿರತ ಗುತ್ತಿಗೆದಾರರ ಸಂಘಕ್ಕೂ ನಮ್ಮ ಸಂಘಕ್ಕೂ ಸಂಬಂಧ ಇಲ್ಲ' ಎಂಬ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಅವರ ಹೇಳಿಕೆಗೆ ಅವರು ಪ್ರತಿಕ್ರಿಯಿಸಿದರು.

'ನಾನು ಬೆಂಗಳೂರು ಗುತ್ತಿಗೆದಾರರಿಂದ ಆಯ್ಕೆಯಾಗಿ, ರಾಜ್ಯ ಗುತ್ತಿಗೆದಾರರ ಸಂಘದಲ್ಲಿ ಕಾರ್ಯಕಾರಿ ಸದಸ್ಯನಾಗಿಯೇ ಇದ್ದೇನೆ. ನಾನು ಹೇಗೆ ಬೇರೆಯವನಾಗುತ್ತೇನೆ. ಕೆಂಪಣ್ಣ ಅವರ ಸುತ್ತಮುತ್ತಲಿರುವ ಕೆಲವರು ಏನೋ ಹೇಳಿಕೊಡುತ್ತಾರೆ, ಅವರು ಮಾತನಾಡುತ್ತಿದ್ದಾರೆ. ನಮ್ಮಲ್ಲಿ ಒಡಕು ತಂದಿಡುವ ಪ್ರಯತ್ನ ಮಾಡುತ್ತಿದ್ದಾರೆ ಅಷ್ಟೇ' ಎಂದು ಮಂಜುನಾಥ್ ಹೇಳಿದರು.

'ನಾವು ಯಾವುದೇ ರಾಜಕೀಯ ಉದ್ದೇಶ ಹೊಂದಿಲ್ಲ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸಚಿವರಾದ ದಿನೇಶ್ ಗುಂಡೂರಾವ್, ಕೃಷ್ಣ ಬೈರೇಗೌಡ ಅವರಿಗೆಲ್ಲ ಮನವಿ ನೀಡಿದ್ದೇವೆ. ಅದೇರೀತಿ ಬಿಜೆಪಿ ನಾಯಕರಿಗೂ ಮನವಿ ಮಾಡಿದ್ದೇವೆ. ಪಕ್ಷಾತೀತವಾಗಿ 28 ಶಾಸಕರಿಗೆ, ಸಚಿವರಿಗೆ ಮನವಿ ನೀಡುತ್ತೇವೆ ಎಂದು ನಾವು ಈಗಾಗಲೇ ಹೇಳಿದ್ದು, ಅದರಂತೆ ನಾವು ಎಲ್ಲರಿಗೂ ಮನವಿ ಮಾಡುತ್ತಿದ್ದೇವೆ. ನಮಗೆ ಹಣ ಬಿಡುಗಡೆ ಆಗಬೇಕು ಅಷ್ಟೇ' ಎಂದರು.

'ಶೇ 40ರಷ್ಟು ಕಮಿಷನ್ ಎಂದು ಕೆಂಪಣ್ಣ ಅವರು ಆರೋಪಿಸಿದಾಗ ನಾವು ಅವರ ಬೆನ್ನಿಗೆ ನಿಂತಿದ್ದೆವು. ಇದೀಗ ಹಣ ಬಿಡುಗಡೆ ವಿಷಯದಲ್ಲಿ ಅವರು ನಮ್ಮೊಂದಿಗಿರಬೇಕು' ಎಂದು ಆಗ್ರಹಿಸಿದರು.

'ಶೇ 15ರಷ್ಟು ಕಮಿಷನ್ ಆರೋಪ ಮಾಡಿದ್ದ ಗುತ್ತಿಗೆದಾರ ಹೇಮಂತ್, ಮಾನಸಿಕ ಒತ್ತಡದಿಂದ ಆ ರೀತಿ ಹೇಳಿಕೆ ನೀಡಿದ್ದಾರೆ. ಅದನ್ನು ಸಂಜೆಯೊಳಗೆ ವಾಪಸ್ ಪಡೆಯುತ್ತಾರೆ' ಎಂದು ಕೆಂಪಣ್ಣ ಹೇಳಿದ್ದರು. ಆದರೆ, ಅವರು ಹೇಳಿಕೆ ವಾಪಸ್ ಪಡೆದಿಲ್ಲ. ಅವರು ಸಂಪರ್ಕಕ್ಕೂ ಸಿಗಲಿಲ್ಲ.

'ನಮ್ಮ ಮೆಟ್ರೊ'ದಿಂದ ಪೇಪರ್ ಟಿಕೆಟ್ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಲ್‌ಬಾಗ್‌ನಲ್ಲಿ ನಡೆಯುತ್ತಿರುವ ಫಲಪುಷ್ಪ ಪ್ರದರ್ಶನ ವೀಕ್ಷಣೆಗೆ ತೆರಳುವ ಪ್ರಯಾಣಿಕರ ಅನುಕೂಲಕ್ಕೆ 'ನಮ್ಮ ಮೆಟ್ರೊ' ಸ್ವಾತಂತ್ರ್ಯ ದಿನಾಚರಣೆಯಂದು ಪೇಪರ್ ಟಿಕೆಟ್ ವ್ಯವಸ್ಥೆ ಮಾಡುತ್ತಿದೆ.

ಆಗಸ್ಟ್ 15ರಂದು ಲಾಲ್‌ಬಾಗ್‌ನಿಂದ ಪ್ರಯಾಣಿಸಲು 'ರಿಟರ್ನ್ ಜರ್ನಿ ಪೇಪರ್ ಟಿಕೆಟ್' ಪರಿಚಯಿಸಲಿದೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ಅಂದು ಬೆಳಿಗ್ಗೆ 10ರಿಂದ ರಾತ್ರಿ 8ರ ತನಕ ಲಾಲ್‌ಬಾಗ್ ಮೆಟ್ರೊ ನಿಲ್ದಾಣದಿಂದ ಯಾವುದೇ ಮೆಟ್ರೊ ನಿಲ್ದಾಣಕ್ಕೆ ಪ್ರಯಾಣಿಸಲು ಟಿಕೆಟ್ ದರ ₹ 30 ಇರಲಿದೆ. ಪೇಪರ್ ಟಿಕೆಟ್ ಒಂದು ಪ್ರಯಾಣಕ್ಕೆ ಮಾತ್ರ ಮಾನ್ಯವಾಗಿರುತ್ತದೆ. ಅಂದು ಬೆಳಿಗ್ಗೆ 8ರಿಂದ ಸಂಜೆ 6ರ ತನಕ ಎಲ್ಲ ಮೆಟ್ರೊ ನಿಲ್ದಾಣಗಳಲ್ಲಿ ಪೇಪರ್ ಟಿಕೆಟ್ ಖರೀದಿಸಬಹುದಾಗಿದೆ. ಲಾಲ್‌ಬಾಗ್ ಮೆಟ್ರೊ ನಿಲ್ದಾಣದಲ್ಲಿ 8 ಗಂಟೆವರೆಗೆ ಲಭ್ಯವಿರುತ್ತವೆ. ಪ್ರಯಾಣಿಕರು ಲಾಲ್‌ಬಾಗ್ ನಿಲ್ದಾಣದ ಎಫ್‌ಸಿ ಗೇಟ್ ಪ್ರವೇಶಿಸಲು, ಯಾವುದೇ ನಿಲ್ದಾಣದಿಂದ ನಿರ್ಗಮಿಸಲು ಪೇಪರ್ ಟಿಕೆಟ್ ಹಾಜರುಪಡಿಸಬೇಕು ಎಂದು ಅಧಿಕಾರಿಗಳು ಹೇಳಿದ್ದಾರೆ.

ಸಂಗೊಳ್ಳಿ ರಾಯಣ್ಣ ಪ್ರತಿಮೆ ತೆರವು

ಸ್ಥಳೀಯರ ವಿರೋಧ: ಬಿಬಿಎಂಪಿ ಅಧಿಕಾರಿಗಳ ನಿಲುವು ಖಂಡಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಎನ್.ಆರ್.ಐ ಬಡಾವಣೆ ಮುಖ್ಯರಸ್ತೆಯ ಇಂದಿರಾ ಕ್ಯಾಂಟೀನ್ ಸಮೀಪ ನಿರ್ಮಿಸಲಾಗಿದ್ದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆಯನ್ನು ಸ್ಥಳೀಯರ ವಿರೋಧದ ನಡುವೆ ಶುಕ್ರವಾರ ಬಿಬಿಎಂಪಿ ಅಧಿಕಾರಿಗಳು ತೆರವುಗೊಳಿಸಿದರು.

ಶ್ರೀಕನಕ ಜನಜಾಗೃತಿ ಕುರುಬರ ಸಂಘ ಹಾಗೂ ಸ್ಥಳೀಯರ ಸಹಕಾರದಿಂದ ಸುಮಾರು 9 ಅಡಿ ಎತ್ತರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆ ನಿರ್ಮಿಸಲಾಗಿತ್ತು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜಯಂತಿ ದಿನದಂದು ಪ್ರತಿಮೆ ಅನಾವರಣಗೊಳಿಸಲು ಸಿದ್ಧತೆ ನಡೆಸಲಾಗಿತ್ತು.

ಆದರೆ, ಬಿಬಿಎಂಪಿ ಜಾಗದಲ್ಲಿ ಯಾವುದೇ ಅನುಮತಿ ಪಡೆದಿಲ್ಲ ಎಂದು ಹೇಳಿ ಪೊಲೀಸ್ ಬಂದೋಬಸ್ತ್‌ನಲ್ಲಿ ಶುಕ್ರವಾರ ಮಧ್ಯಾಹ್ನ ಪ್ರತಿಮೆ ತೆರವುಗೊಳಿಸಲಾಯಿತು.

ಇದನ್ನು ಖಂಡಿಸಿ ಸ್ಥಳೀಯರು, ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಪ್ರತಿಭಟನೆ ನಡೆಸಿದರು.

ಇದೇ ಜಾಗದಲ್ಲಿ ಪ್ರತಿಮೆ ಪ್ರತಿಷ್ಠಾಪಿಸಬೇಕೆಂದು ಪಟ್ಟುಹಿಡಿದರು.

'ಕಾಂತಿವೀರ ಸಂಗೊಳ್ಳಿ ರಾಯಣ್ಣ ಒಂದು ಸಮಾಜಕ್ಕೆ ಸೀಮತರಾದವರಲ್ಲ. ಅವರೊಬ್ಬ ಸ್ವಾತಂತ್ರ್ಯ ಹೋರಾಟಗಾರ. ಅಂಥವರ ಪ್ರತಿಮೆ ನಿರ್ಮಿಸಿದ್ದೇವೆ. ಅಧಿಕಾರಿಗಳ ನಡೆ ಖಂಡನೀಯ' ಎಂದು ಶ್ರೀಕನಕ ಜನಜಾಗೃತಿ ಕುರುಬರ ಸಂಘದ ಅಧ್ಯಕ್ಷ ಕೃಷ್ಣಪ್ಪ ಆಕ್ಷೇಪ ವ್ಯಕ್ತಪಡಿಸಿದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆ ತೆರವುಗೊಳಿಸಲಾಯಿತು

ಜನಗಣತಿ ಪುನರ್ ಪರಿಶೀಲನೆಗೆ ನಿರ್ಮಲಾನಂದನಾಥ ಶ್ರೀ ಆಗ್ರಹ

ಪ್ರಜಾವಾಣಿ ವಾರ್ತೆ

ತುಮಕೂರು: 'ಈ ಹಿಂದೆ ಸರಿಯಾದ ರೀತಿ ಜನಗಣತಿ ಆಗಿಲ್ಲ. ಪುನರ್ ಪರಿಶೀಲಿಸಿ ಜನಗಣತಿ ಬಿಡುಗಡೆ ಮಾಡಬೇಕು ಎಂಬ ಕೂಗು ಹಲವು ದಿನಗಳಿಂದ ಇದೆ. ಜನಪ್ರತಿನಿಧಿಗಳು ಇದರ ಜವಾಬ್ದಾರಿ ತೆಗೆದುಕೊಳ್ಳಬೇಕು' ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಸಲಹೆ ನೀಡಿದರು.

ನಗರದಲ್ಲಿ ಶುಕ್ರವಾರ ಕೆಂಪೇಗೌಡ ಜಯಂತ್ಯುತ್ಸವ ಆಚರಣೆ ಸಮಿತಿಯಿಂದ ಹಮ್ಮಿಕೊಂಡಿದ್ದ ಕೆಂಪೇಗೌಡ ಜಯಂತಿ, ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

'ಸಮುದಾಯದ ಅಭಿವೃದ್ಧಿಗೆ ಸಂಘಟನೆ ಅವಶ್ಯ. ಚಿಕ್ಕ ವಯಸ್ಸಿನಲ್ಲಿ ಎತ್ತರಕ್ಕೆ ಬೆಳೆಯುವ ಹಂಬಲ ಇರಬೇಕು. ಯುವಕರಿಗೆ ಹೆಚ್ಚಿನ ಶಿಕ್ಷಣ ಸಿಗುವಂತೆ ನೋಡಿಕೊಳ್ಳಬೇಕು. ಎಲ್ಲ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು' ಎಂದು ಅವರು ಕಿವಿಮಾತು ಹೇಳಿದರು.

ಬೆಂಗಳೂರು ವಿ.ವಿ ಒಂದೇ ತಿಂಗಳಲ್ಲಿ ಪೂರಕ ಪರೀಕ್ಷೆ

ಬೆಂಗಳೂರು: ಅನುತ್ತೀರ್ಣರಾದ ವಿದ್ಯಾರ್ಥಿಗಳಿಗಾಗಿ ಒಂದೇ ತಿಂಗಳ ಅಂತರದಲ್ಲಿ ಮತ್ತೊಂದು ಪೂರಕ ಪರೀಕ್ಷೆ ನಡೆಸಲು ಬೆಂಗಳೂರು ವಿಶ್ವ-ವಿದ್ಯಾಲಯ ನಿರ್ಧರಿಸಿದೆ. ಇದರಿಂದ, ವಿದ್ಯಾರ್ಥಿಗಳು ಪರೀಕ್ಷೆಗಾಗಿ ಒಂದು ವರ್ಷ ಕಾಯುವ ಅಗತ್ಯ ಇರುವುದಿಲ್ಲ.

ಇತ್ತೀಚೆಗೆ ನಡೆದ ಸಿಂಡಿಕೇಟ್ ಸಭೆಯಲ್ಲಿ ಪೂರಕ ಪರೀಕ್ಷೆ ನಡೆಸಲು ತೀರ್ಮಾನ ಕೈಗೊಳ್ಳಲಾಗಿದೆ. ಇದರಿಂದ, 5 ಮತ್ತು 6ನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡಿ ಅನುತ್ತೀರ್ಣರಾದವರಿಗೆ ಅನುಕೂಲವಾಗಲಿದೆ.

ಸಾಮಾನ್ಯವಾಗಿ ಒಂದು ಸೆಮಿಸ್ಟರ್‌ನಲ್ಲಿ ಅನುತ್ತೀರ್ಣರಾದರೆ, ಆ ಪರೀಕ್ಷೆ ಬರೆಯಲು ಮತ್ತೊಂದು ವರ್ಷದವರೆಗೆ ಕಾಯಬೇಕಿತ್ತು. ಇನ್ನು 5, 6ನೇ ಸೆಮಿಸ್ಟರ್‌ನಲ್ಲಿ ಅನುತ್ತೀರ್ಣರಾದವರು ಮುಂದಿನ ಒಂದು ವರ್ಷ ಕಾದು ಪರೀಕ್ಷೆ ಬರೆಯಬೇಕಿತ್ತು. ಈ ಪರೀಕ್ಷೆಯ ಯೋಜನೆಯನ್ನು 2023-24ನೇ ಶೈಕ್ಷಣಿಕ ವರ್ಷದಿಂದಲೇ ಜಾರಿಗೆ ತರಲು ಬೆಂಗಳೂರು ವಿಶ್ವವಿದ್ಯಾಲಯವು ಮುಂದಾಗಿದೆ.

EUREKA FORBES Aquaguard

ಎಚ್ಚರಿಕೆ!

ಅನಧಿಕೃತ ಫಿಲ್ಟರ್‌ಗಳನ್ನು ಮತ್ತು ಎಎಮ್‌ಸಿಯನ್ನು ಮಾರಾಟ ಮಾಡಲು ಸುರೇಖಾ ಫೋರ್ಬ್ಸ್ ಇವರು ಯುರೇಖಾ ಫೋರ್ಬ್ಸ್ ಎಂದು ಬಿಂಬಿಸಿಕೊಳ್ಳುತ್ತಿದ್ದಾರೆ.

ನಕಲಿ ವಾಟರ್ ಪ್ಯೂರಿಫಯರ್ ಫಿಲ್ಟರ್‌ಗಳು ನೀರನ್ನು ಶುದ್ಧೀಕರಿಸಲು ವಿಫಲವಾಗುತ್ತವೆ ಮತ್ತು ನಿಮ್ಮ ಕುಟುಂಬದ ಆರೋಗ್ಯಕ್ಕೆ ಅಪಾಯಕಾರಿಯಾಗಿವೆ.

ಅಸಲಿ ಅಕ್ವಾಗಾರ್ಡ್ ಎಎಮ್‌ಸಿ ಖರೀದಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿರಿ.

ಕಳೆದ 2 ದಿನಗಳು

ಬೆಂಗಳೂರಿನ ಬಹು ನಿರೀಕ್ಷಿತ ಆಭರಣ ಪ್ರದರ್ಶನ

ಭಾರತದಾದ್ಯಂತ ಉತ್ತಮ ಆಭರಣಗಳ ನಂಬಲಾಗದ ಪ್ರದರ್ಶನಕ್ಕೆ ಸಾಕ್ಷಿಯಾಗಿರಿ

ASIA Jewels Showcase of Fine Jewellery

11-12-13 Aug

Fri - Sat - Sun 10.30 am to 8.00 pm

THE RITZ-CARLTON BANGALORE RESIDENCY ROAD

ENTRY & VALET PARKING FREE

ಬೆಲೆಯಿಲ್ಲದ ಮತ್ತು ಅತ್ಯಂತ ಸುಂದರವಾದ ಆಭರಣಗಳು ಭಾರತದ ಟಾಪ್ 30 ಜ್ಯುವೆಲರ್‌ಗಳಿಂದ

ಸ್ಥಳದ ದಿಕ್ಕುಗಳಿಗಾಗಿ ಸ್ಕ್ಯಾನ್ ಮಾಡಿ

ಉತ್ತಮ ಚಿನ್ನದ ಆಭರಣ | ವಜ್ರ ಆಭರಣ ಪ್ಲಾಟಿನಂ ಆಭರಣ| ಸಾಂಪ್ರದಾಯಿಕ ಆಭರಣಗಳು ಮದುವೆಯ ಆಭರಣಗಳು| ಅಮೂಲ್ಯವಾದ ಕಲ್ಲಿನ ಆಭರಣ ಕುಂದನ್ ಮತ್ತು ಪೋಲ್ಕಿ ಜ್ಯುವೆಲರಿ

MBBS + FREE PG

WITH STIPEND IN 8 YEARS

Get a Chance to become a certified doctor in the USA CANADA UK

ON SPOT ADMISSION SEMINAR

BANGALORE 13 AUG 2023 11 AM

THE RIALTO HOTEL, 20-21, SESHADRI RD, GANDHI NAGAR, BENGALURU

7406764411 | 8448486490

Student Helpline:1800-843-9595 | www.laumed.org

ಆರೋಪಿತ ವ್ಯಕ್ತಿಯ ಹಾಜರಾತಿಗಾಗಿ ಅಗತ್ಯವಾದ ಘೋಷಣೆ

ಸಿಆರ್. ಪಿ.ಸಿ. ಅಡಿಯಲ್ಲಿನ ಸೆಕ್ಷನ್ 82 ನೋಡಿರಿ

ಅದಾಗ್ಯೂ, ನನ್ನ ಎದುರು ದಾಖಲಾಗಿರುವ ದೂರಿನನ್ವಯ ಆರೋಪಿ **ಆದಿಲ್ ಪಾಷಾ, ಮೆ. ಕರಿಷ್ಮಾ ಮಾಲೀಕ, ದಿ ಡಿಸೈನರ್ ನಂ.22, ಶಾಪ್ ನಂ.1, ಎಎಂ ರೋಡ್, ಶಿವಾಜಿನಗರ, ಬೆಂಗಳೂರು, ಕರ್ನಾಟಕ 560051** ಎಂಬ ವ್ಯಕ್ತಿಯು ಅಪರಾಧವೆಸಗಿದ್ದು (ಅಥವಾ ಅಪರಾಧ ಎಸಗಿದ್ದಾನೆ ಎನ್ನಲಾಗುವ) ಸದರಿ ಆಸಾಮಿಯ ವಿರುದ್ಧ **ದೆಹಲಿ ಆನಂದ್ ವಿಹಾರ್ ಪೊಲೀಸ್ ಠಾಣೆಯಲ್ಲಿ ಎನ್‌ಐ ಆಕ್ಟ್‌ನ ಸೆಕ್ಷನ್ 138 ಅಡಿಯಲ್ಲಿ ಮಿಸಲೇನಿಯಸ್ ಕ್ರಿಮಿನಲ್ 95/2020 ದಾಖಲಾಗಿರುತ್ತದೆ** ಮತ್ತು ಸದರಿ ವ್ಯಕ್ತಿಗೆ ರವಾನಿಸಲಾಗಿದ್ದ ಬಂಧನದ ವಾರಂಟ್ ಪತ್ರವು ಸದರಿ **ಆದಿಲ್ ಪಾಷಾ** ಎಂಬ ಆರೋಪಿತ ವ್ಯಕ್ತಿ ಸಿಕ್ಕಿರುವುದಿಲ್ಲ ಎಂಬ ಷರಾದೊಂದಿಗೆ ಮರಳಿ ಬಂದಿರುತ್ತದೆ ಮತ್ತು ಇದನ್ನೆಲ್ಲ ಗಮನಿಸಿದ ಬಳಿಕ ಸದರಿ ಆರೋಪಿತ **ಆದಿಲ್ ಪಾಷಾ** ಎಂಬ ಆಸಾಮಿ ತಲೆಮರೆಸಿಕೊಂಡಿದ್ದಾನೆ (ಅಥವಾ ಸದರಿ ವಾರಂಟ್ ಸ್ವೀಕರಿಸುವಿಕೆಯನ್ನು ತಡೆಗಟ್ಟುವ ಉದ್ದೇಶದಿಂದ ತನ್ನನ್ನು ತಾನು ಅಡಗಿಸಿಕೊಂಡಿದ್ದಾನೆ) ಎಂಬುದು ನನಗೆ ಮನವರಿಕೆಯಾಗಿರುತ್ತದೆ. ಆದ್ದರಿಂದ ಈ ಘೋಷಣೆಯ ಮೂಲಕ ತಿಳಿಸುವುದು ಏನೆಂದರೆ, **ದೆಹಲಿಯ ಆನಂದ್ ವಿಹಾರ್ ಪೊಲೀಸ್ ಠಾಣೆಯಲ್ಲಿ ಎನ್‌ಐ ಆಕ್ಟ್‌ನ ಸೆಕ್ಷನ್ 138ರ ಅಡಿಯಲ್ಲಿ ದಾಖಲಾಗಿರುವ ಮಿಸಲೇನಿಯಸ್ ಕ್ರಿಮಿನಲ್ 95/2020 ಪ್ರಕರಣಕ್ಕೆ ಸಂಬಂಧಿತ ಆರೋಪಿತ ಆದಿಲ್ ಪಾಷಾ ಎಂಬ ವ್ಯಕ್ತಿಯು,** ಈ ಪ್ರಕರಣಕ್ಕೆ ಉತ್ತರ ನೀಡಲಿಕ್ಕಾಗಿ 02.11.2023 ರೊಳಗೆ ಸದರಿ ನ್ಯಾಯಾಲಯದ ಎದುರು ಹಾಜರಾಗುವುದು ಅತ್ಯವಶ್ಯಕ.

ಆದೇಶದ ಮೇರೆಗೆ
ಇಸ್ರಾ ಝೈದಿ
ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಮಹಿಳಾ–02,
ಶಹದಾರಾ ಜಿಲ್ಲೆ, ಕೊಠಡಿ ಸಂ. 60,
ಕರ್ಕರದೂಮ, ನ್ಯಾಯಾಲಯಗಳು, ದೆಹಲಿ

DP/8358/SHD/2023 (Court Matter).

THE BIG DISCOUNT SALE

SINCE 1960 hakoba®

FABRICS • SUITS • CUT PIECES • SAREES • KURTIS

PREMA CHANDRA KALYANA MAHAL

264, T. Mariyappa Road, 2nd Block, Jayanagar, Near Ashoka Pillar, Bangalore - 560 011

CLEARANCE SALE UPTO 50% OFF

www.hakoba.in

FRESH ARRIVALS NOW ON DISPLAY

All Cards Accepted · 10 am to 9 pm · 9820048660 · CAR PARKING AVAILABLE

ಪ್ರಜಾವಾಣಿ

ಉದ್ಯೋಗವಾಣಿ

ಉದ್ಯೋಗಾವಕಾಶದ ಜಾಹೀರಾತಿಗಾಗಿ ಸಂಪರ್ಕಿಸಿ:

ಮೊ: 96069 12220

Reliance Growth is Life

Skybags Levi's spykar SKECHERS HN PLAYERS PARK AVENUE Raymond Pepe Jeans LONDON FILA VIP Lee Cooper PUMA KILLER VISHUDH KAMILIANT JOHN PLAYERS avaasa Lee adidas

FASHION FACTORY Presents

NATIONAL BRANDS WEEK

TILL 16TH AUGUST

ANYTHING & EVERYTHING

FLAT 50% OFF

ON APPAREALS, FOOTWEAR & LUGGAGE

SPECIAL DEALS

FLAT 60% OFF

ON BIG BRANDS

Levi's Pepe Jeans GIORDANO Lee Wrangler PARK AVENUE

Scan for store location

STORES IN BENGALURU: BANNERGHATTA ROAD | BANSHANKARI ELECTRONIC CITY | HOSUR ROAD | HSR LAYOUT | KANAKPURA ROAD MALLESHWARAM | ROCKLINE MALL | RR NAGAR | SARJAPURA ROAD WHITE FIELD

STORE MANAGER : 8104917753 / 6360024743

@rel_fashionfactory @FashionF_IND @rel.fashionfactory

FASHION FACTORY BRANDS FOR LESS



1. ಬಿಬಿಎಂಪಿ ಕೇಂದ್ರ ಕಚೇರಿಯ ಆವರಣದಲ್ಲಿ ಬೆಂಕಿ ಅನಾಹುತ ಸಂಭವಿಸಿದ ಗುಣಮಟ್ಟ ನಿಯಂತ್ರಣ ಪ್ರಯೋಗಾಲಯದ ನೋಟ –ಪ್ರಜಾವಾಣಿ ಚಿತ್ರ 2.ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಶುಕ್ರವಾರ ರಾತ್ರಿ ವಿಕ್ಟೋರಿಯಾ ಆಸ್ಪತ್ರೆಗೆ ಭೇಟಿ ನೀಡಿ ಗಾಯಗೊಂಡವರ ಆರೋಗ್ಯ ವಿಚಾರಿಸಿದರು

ಬಿಬಿಎಂಪಿ ಕೇಂದ್ರ ಕಚೇರಿಯ ಗುಣಮಟ್ಟ ನಿಯಂತ್ರಣ ಪ್ರಯೋಗಾಲಯದಲ್ಲಿ ಅಗ್ನಿ ಅವಘಡ

ಎರಡು ಪ್ರತ್ಯೇಕ ತನಿಖೆಗೆ ಸಿ.ಎಂ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿರುವ ಗುಣಮಟ್ಟ ನಿಯಂತ್ರಣ ಪ್ರಯೋಗಾಲಯದಲ್ಲಿ ಬೆಂಕಿ ಅನಾಹುತದಿಂದ ಗಾಯಗೊಂಡಿರುವ ಎಲ್ಲರಿಗೂ ಟ್ರಾಮಾ ಸೆಂಟರ್‌ನಲ್ಲಿ ಚಿಕಿತ್ಸೆ ನೀಡಲು ಸೂಚಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮುಖ್ಯಮಂತ್ರಿ ಅವರು ಬೆಳಗಾವಿಯಿಂದ ಶುಕ್ರವಾರ ರಾತ್ರಿ ವಾಪಸ್ ಬಂದ ಕೂಡಲೇ ವಿಕ್ಟೋರಿಯಾ ಆಸ್ಪತ್ರೆಗೆ ಭೇಟಿ ನೀಡಿದರು. ಘಟನೆ ಬಗ್ಗೆ ಪ್ರತ್ಯೇಕ ತನಿಖೆ ನಡೆಸುವಂತೆ ನಗರ ಪೊಲೀಸ್ ಆಯುಕ್ತರು ಮತ್ತು ಬಿಬಿಎಂಪಿ ಆಯುಕ್ತರಿಗೆ ಸೂಚಿಸಿದರು.

48 ಗಂಟೆ ನಿಗಾ ವಹಿಸಬೇಕು ಎಂದು ವೈದ್ಯರು ಹೇಳಿದ್ದಾರೆ. ಗಾಯಾಳುಗಳಿಗೆ ಅತ್ಯುತ್ತಮ ಚಿಕಿತ್ಸೆ ನೀಡಬೇಕು ಸೂಚಿಸಲಾಗಿದೆ ಎಂದು ಮುಖ್ಯಮಂತ್ರಿ ತಿಳಿಸಿದರು.

'ಪ್ರಯೋಗಾಲಯದ ಕೆಳಭಾಗದಲ್ಲಿ ರಾಸಾಯನಿಕದಿಂದ ಬೆಂಕಿ ಕಾಣಿಸಿಕೊಂಡಿದೆ. ಅಲ್ಲಿದ್ದ ಆಟರೇಟರ್‌ಗಳಾದ ಆನಂದ್ ಮತ್ತು ಸುರೇಶ್ ಅವರು ಕೂಗಿಕೊಂಡು ಹೊರಗೆ ಓಡಿಬಂದಿದ್ದಾರೆ. ಕಟ್ಟಡದ ಮೇಲಿನ ಮಹಡಿಯಲ್ಲಿ ಇದ್ದವರು ಹೊರ ಬರುವ ಮುನ್ನ ಬೆಂಕಿಯ ತೀವ್ರತೆ ಹೆಚ್ಚಿದೆ. ಹೊಗೆ ಹೆಚ್ಚಾಗಿದೆ. ಉಸಿರಾಟದ ತೊಂದರೆಯಾಗಿದೆ.

ಬಿಬಿಎಂಪಿ ಗುಣಮಟ್ಟ ನಿಯಂತ್ರಣ ಪ್ರಯೋಗಾಲಯದಲ್ಲಿ ಶುಕ್ರವಾರ ಸಂಜೆ ಕಾಣಿಸಿಕೊಂಡ ಬೆಂಕಿ

ಅವರು ಬೆಂಕಿಯಲ್ಲೇ ಹೊರಗೆ ಬಂದಿದ್ದಾರೆ. ಈ ಸಂದರ್ಭದಲ್ಲಿ ಗಾಯಗಳಾಗಿವೆ' ಎಂದು ಮಾಹಿತಿ ನೀಡಿದರು.

'ಶೇ 30ಕ್ಕಿಂತ ಕಡಿಮೆ ಗಾಯಗಾಳಿದ್ದರೆ ಪ್ರಾಣಕ್ಕೆ ಅಪಾಯ ಇಲ್ಲ ಎಂಬುದು ವೈದ್ಯರ ಮಾತು. ಹಲವು ಪ್ರಮಾಣದಲ್ಲಿ ಗಾಯಗಳಾಗಿವೆ. ಯಾರಿಗೂ ಪ್ರಾಣಾಪಾಯದ ಭೀತಿ ಇಲ್ಲ. ಅವರೆಲ್ಲ ಬೇಗ ಗುಣಮುಖರಾಗಲಿ. ಒಂಬತ್ತೂ ಜನಕ್ಕೂ ವಿಶೇಷ ಕಾಳಜಿಯ ಚಿಕಿತ್ಸೆ ನೀಡಲು ಸೂಚಿಸಿದ್ದೇನೆ' ಎಂದರು.

'ಸರ್ಕಾರ ಎಲ್ಲ ರೀತಿಯ ವಿಶೇಷ ಹಾಗೂ ಅತ್ಯುತ್ತಮ ಚಿಕಿತ್ಸೆಗಳನ್ನು ನೀಡಲು ಅಧಿಕಾರಿಗಳಿಗೆ ನೀಡಲು ಬದ್ಧವಾಗಿದೆ. ಅಲ್ಲದೆ, ತನಿಖೆಗಳು ಪ್ರತ್ಯೇಕವಾಗಿ ನಡೆಯಲಿವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಪ್ರಯೋಗಾಲಯದಲ್ಲಿ ಬೆಂಜಿನ್ ರಾಸಾಯನಿಕ ಪ್ರಯೋಗದ ಸಂದರ್ಭದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಓವನ್ ಕೂಡ ಸ್ಫೋಟಗೊಂಡಿದ್ದರಿಂದ ಬೆಂಕಿ ವೇಗವಾಗಿ ಎಲ್ಲ ಕಡೆಯೂ ಹರಡಿದೆ' ಎಂದು ಸಿಬ್ಬಂದಿಯೊಬ್ಬರು ಮಾಹಿತಿ ನೀಡಿದರು.

ಬಿಬಿಎಂಪಿಯ ಸಿಬ್ಬಂದಿ ಗಾಯಗೊಂಡವರನ್ನು ಸಂತೈಸಿದರು. ನೀರು ನೀಡಿ, ಗಾಳಿ ಬೀಸಿದರು. ಪ್ರಥಮ ಚಿಕಿತ್ಸೆಯನ್ನು ಅಲ್ಲಿದ್ದ ವೈದ್ಯ ಸಿಬ್ಬಂದಿಯೇ ನೀಡಿದರು. ನಂತರ ಅಂಬುಲೆನ್ಸ್‌ಗಳಲ್ಲಿ ಗಾಯಾಳುಗಳನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಮಾರ್ಥಾಸ್ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿದ ನಂತರ, ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲಾಯಿತು.

ನಾಲ್ಕು ಅಗ್ನಿಶಾಮಕ ವಾಹನಗಳನ್ನು ಬೆಂಕಿ ನಂದಿಸುವ ಕಾರ್ಯಕ್ಕೆ ಬಳಸಲಾಯಿತು. ಸುಮಾರು 45 ನಿಮಿಷ ಕಾರ್ಯಾಚರಣೆ ನಡೆಸಿ ಬೆಂಕಿಯನ್ನು ನಂದಿಸಲಾಯಿತು. ಅಗ್ನಿಶಾಮಕ ವಾಹನ ತಡವಾಗಿ ಬಂದಿತು ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

ಸಚಿವರ ಭೇಟಿ: ಬಿಬಿಎಂಪಿ ಕೇಂದ್ರ ಕಚೇರಿ ಆವರಣಕ್ಕೆ ಭೇಟಿ ನೀಡಿದ್ದ ಸಚಿವರಾದ ಕೆ.ಜೆ. ಜಾರ್ಜ್ ಹಾಗೂ ಬೈರತಿ ಸುರೇಶ್, 'ಸಿಬ್ಬಂದಿಗೆ ಸುಟ್ಟಗಾಯಗಳಾಗಿದ್ದು, ಅವರಿಗೆ ಎಲ್ಲ ರೀತಿಯ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ವೈದ್ಯರ ತಂಡ ತೀವ್ರ ನಿಗಾವಹಿಸಿದೆ. ಗಾಯಗೊಂಡವರು ಬೇಗ ಚೇತರಿಸಿಕೊಳ್ಳುವುದು ಮುಖ್ಯ' ಎಂದರು.

ಆಂತರಿಕ ತಾಂತ್ರಿಕ ವಿಚಾರಣೆಗೆ ಆದೇಶ

ಬಿಬಿಎಂಪಿ ಗುಣಮಟ್ಟ ನಿಯಂತ್ರಣ ಪ್ರಯೋಗಾಲಯದಲ್ಲಿ ಶುಕ್ರವಾರ ಸಂಭವಿಸಿದ ಬೆಂಕಿ ಅವಘಡದ ಕಾರಣ ಅರಿಯಲು ಆಂತರಿಕ ತಾಂತ್ರಿಕ ವಿಚಾರಣೆಗೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಆದೇಶಿಸಿದ್ದಾರೆ.

ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಅವರಿಗೆ ವಿಚಾರಣೆ ನಡೆಸಲು ಸೂಚಿಸಲಾಗಿದೆ. ತಾಂತ್ರಿಕ ವಿಚಾರಣೆ ವರದಿಯನ್ನು ಆ. 31ರೊಳಗೆ ಸಲ್ಲಿಸಲು ತಿಳಿಸಿದ್ದಾರೆ.

ಮುಂದಿನ ದಿನಗಳಲ್ಲಿ ಇಂತಹ ಅನಾಹುತ ಸಂಭವಿಸದಿರಲು ಕಟ್ಟಡದಲ್ಲಿ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳನ್ನು ವಿವರಿಸಬೇಕು. ಈ ಸಂಬಂಧ ತಜ್ಞರ ಜೊತೆ ಸಮಾಲೋಚನೆ ನಡೆಸಿ ವರದಿ ನೀಡಬೇಕು ಎಂದು ಸೂಚಿಸಿದ್ದಾರೆ.

'ಎಲ್ಲ ಆಯಾಮಗಳಿಂದಲೂ ತನಿಖೆ': 'ಬೆಂಕಿಗೆ ಕಾರಣ ತಿಳಿದುಬಂದಿಲ್ಲ. ಎಲ್ಲ ರೀತಿಯ ತನಿಖೆಗಳೂ ನಡೆಯುತ್ತಿವೆ. ಅದಾದ ನಂತರ ಕಾರಣ ಅರಿವಾಗುತ್ತದೆ' ಎಂದು ತಿಳಿಸಿದರು.

'ಶುಕ್ರವಾರ ಸಂಜೆ 4ರ ವೇಳೆಯಲ್ಲಿ ಅವಘಡ ಸಂಭವಿಸಿದೆ. ಬೆಂಕಿಯ ತೀವ್ರತೆ ಹೆಚ್ಚಿತ್ತು. ಗಾಯಗೊಂಡಿದ್ದ ಸಿಬ್ಬಂದಿಗೆ ಬಿಬಿಎಂಪಿ ಆವರಣದಲ್ಲೇ ಪ್ರಥಮ ಚಿಕಿತ್ಸೆ ನೀಡಿ, ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ವಿವರಿಸಿದರು.

ಗಾಯಗೊಂಡವರು

ಶಿವಕುಮಾರ್(ಮುಖ್ಯ ಎಂಜಿನಿಯರ್). ಕಿರಣ್, ಸಂತೋಷ್ ಕುಮಾರ್, ವಿಜಯಮಾಲ, (ಕಾರ್ಯಪಾಲಕ ಎಂಜಿನಿಯರ್), ಶ್ರೀಧರ್(ಸಹಾಯಕ ಕಾರ್ಯಪಾಲಕ ಎಂಜಿನಿಯರ್), ಸಿರಾಜ್ (ಪ್ರಥಮ ದರ್ಜೆ ಸಹಾಯಕ), ಜ್ಯೋತಿ(ಆಪರೇಟರ್), ಶ್ರೀನಿವಾಸ್ (ಪ್ರಾಜೆಕ್ಟ್ ಮ್ಯಾನೇಜ್ಮೆಂಟ್ ಕನ್ಸಲ್ಟೆಂಟ್), ಮನೋಜ್(ಗಣಕ ಯಂತ್ರ ನಿರ್ವಾಹಕ)

ಸುದ್ದಿ 2 ನಿಮಿಷ

ಮೈಸೂರು: ಹೋಟೆಲ್, ಲಾಡ್ಜ್ ಭರ್ತಿ

ಮೈಸೂರು: ನಗರದಲ್ಲಿರುವ ಹೋಟೆಲ್‌ಗಳು ಮತ್ತು ಲಾಡ್ಜ್‌ಗಳಲ್ಲಿರುವ ಕೊಠಡಿಗಳೆಲ್ಲವೂ ಭರ್ತಿಯಾಗಿವೆ.

ಸಾಲು ರಜೆ ಹಾಗೂ ರಾಜ್ಯಮಟ್ಟದ ವಕೀಲರ ಸಮ್ಮೇಳನ ಕಾರಣದಿಂದ ಹೋಟೆಲ್‌ಗಳು, ಸರ್ಕಾರಿ ಅತಿಥಿ ಗೃಹಗಳು, ಕೆಲವು ಕಲ್ಯಾಣ ಮಂಟಪಗಳು ಹಾಗೂ ಕ್ಲಬ್‌ಗಳಲ್ಲಿ ಎಲ್ಲ ಕೊಠಡಿಗಳನ್ನೂ ಕಾಯ್ದಿರಿಸಲಾಗಿದೆ ಎಂದು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ತಿಳಿಸಿದ್ದಾರೆ.

'ಆ.12ರಂದು ತಿಂಗಳ 2ನೇ ಶನಿವಾರದ ಅಂಗವಾಗಿ ರಜೆ ಇದೆ. ಭಾನುವಾರವೂ ರಜೆ. ಆ.15ರಂದು ಸ್ವಾತಂತ್ರ್ಯ ದಿನಾಚರಣೆ ನಿಮಿತ್ತ ರಜೆ ಇದೆ. ಹೀಗಾಗಿ, ರಾಜ್ಯ ಹಾಗೂ ಹೊರರಾಜ್ಯದ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಮೈಸೂರಿಗೆ ಬರುತ್ತಿದ್ದಾರೆ. ನಗರ, ಹೊರವಲಯ ಹಾಗೂ ಸುತ್ತಮುತ್ತಲಿನ ಹೋಟೆಲ್‌ಗಳಲ್ಲಿ 10,500ಕ್ಕೂ ಹೆಚ್ಚು ರೂಂಗಳಿದ್ದು, ಎಲ್ಲವೂ ಭರ್ತಿಯಾಗಿವೆ' ಎಂದು ಮಾಹಿತಿ ನೀಡಿದ್ದಾರೆ.

ಹಲವು ದಿನಗಳು ರಜೆ ಇರುವುದರಿಂದ, ವಾರಾಂತ್ಯದಲ್ಲಿ ಮೈಸೂರು ಅರಮನೆ, ಚಾಮರಾಜೇಂದ್ರ ಮೃಗಾಲಯ, ಚಾಮುಂಡಿಬೆಟ್ಟ ಹಾಗೂ ಮಂಡ್ಯ ಜಿಲ್ಲೆಯ ಕೆಆರ್‌ಎಸ್ ಬೃಂದಾವನ, ರಂಗನತಿಟ್ಟು ಪಕ್ಷಿಧಾಮಕ್ಕೆ ಸಂದರ್ಶಕರ ಸಂಖ್ಯೆ ಹೆಚ್ಚುವ ನಿರೀಕ್ಷೆ ಇದೆ.

'ತ್ಯಾಜ್ಯದಿಂದ ಪರಿಸರ ಮುಕ್ತಗೊಳಿಸಿ'

ಬೆಂಗಳೂರು: ಕ್ರೈಸ್ಟ್ ವಿಶ್ವವಿದ್ಯಾಲಯವು ಬಿಬಿಸಿ ಮೀಡಿಯಾ ಆ್ಯಕ್ಷನ್ ಸಹಯೋಗದಲ್ಲಿ ಆಯೋಜಿಸಿದ್ದ 'ಕಾಫಿ ವಿಥ್ ರಿಸೈಕ್ಲರ್ಸ್' ಕಾರ್ಯಕ್ರಮದ ಸಮಾರೋಪ ಈಚೆಗೆ ನಡೆಯಿತು.

ನಟ ಭೂಮಿಶೆಟ್ಟಿ ಮಾತನಾಡಿ, 'ಈ ಕಾರ್ಯಕ್ರಮವು ಅತ್ಯಂತ ಹೆಚ್ಚು ಉಪಯುಕ್ತವಾಗಿದ್ದು, ನಮ್ಮ ಪರಿಸರವನ್ನು ತ್ಯಾಜ್ಯದಿಂದ ಮುಕ್ತಗೊಳಿಸಬೇಕಿದೆ' ಎಂದು ಕರೆ ನೀಡಿದರು.

'ತ್ಯಾಜ್ಯ ನಿರ್ವಹಿಸುವಾಗ ಸುರಕ್ಷತೆ ಕಾಪಾಡಿಕೊಳ್ಳುವುದು ಅಗತ್ಯ. ಅಲ್ಲದೇ ಸ್ವಚ್ಛತಾ ಸಿಬ್ಬಂದಿಯನ್ನು ಗೌರವದಿಂದ ನಡೆಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಜೆ.ಪಿ.ನಗರದ ಒಣ ತ್ಯಾಜ್ಯ ಸಂಗ್ರಹ ಕೇಂದ್ರದ ಮನ್ಸೂರ್ ಗೌಸ್, 'ತ್ಯಾಜ್ಯದಿಂದ ನಗರದ ಸೌಂದರ್ಯಕ್ಕೆ ಧಕ್ಕೆಯಾಗುತ್ತಿದೆ. ತ್ಯಾಜ್ಯದ ಮರು ಬಳಕೆ ಸಮರ್ಪಕವಾಗಿ ನಡೆಯಬೇಕು. ಯುವಜನರು ತ್ಯಾಜ್ಯ ವಿಲೇವಾರಿ ಮಾಡುವತ್ತ ಹೆಚ್ಚಿನ ಗಮನ ಹರಿಸಬೇಕು' ಎಂದು ಕರೆ ನೀಡಿದರು.

'ಪುನೀತ' ಗಣೇಶ

ಗೌರಿ–ಗಣೇಶ ಹಬ್ಬ ಸಮೀಪಿಸುತ್ತಿದ್ದು, ಕನಕಪುರ ರಸ್ತೆಯ ಬಯ್ಯನಪಾಳ್ಯದ ವಾಜರಹಳ್ಳಿಯಲ್ಲಿ ಕಲಾವಿದ ದೇವರಾಜ್ ಅವರು ರೂಪಿಸಿರುವ, ಗಣೇಶನ ಜೊತೆಗಿರುವ ನಟ ದಿವಂಗತ ಪುನೀತ್ ರಾಜಕುಮಾರ ಅವರ ಮೂರ್ತಿ ಗಮನ ಸೆಳೆಯಿತು
–ಪ್ರಜಾವಾಣಿ ಚಿತ್ರ/ರಂಜು ಪಿ.

ಚಾಲನೆ ಪರಿಶೀಲಿಸದೇ ಲೈಸೆನ್ಸ್ ನೀಡಿದ್ದ ಆರೋಪ ಎದುರಿಸುತ್ತಿರುವ ಕೃಷ್ಣಾನಂದ

ಬಡ್ತಿ ಸಿಕ್ಕರೂ ಆರ್‌ಟಿಒ ಹುದ್ದೆಗೆ ಹೋಗದ ಅಧಿಕಾರಿ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಸಿಕ್ಕಿದ ಬಡ್ತಿಯನ್ನು ನಿರಾಕರಿಸದೇ, ವರ್ಗಾವಣೆ ಮಾಡಿದ ಸ್ಥಳಕ್ಕೂ ಹೋಗದ ಎಆರ್‌ಟಿಒ ಜೆ.ಪಿ. ಕೃಷ್ಣಾನಂದ ಅವರು ಜ್ಞಾನಭಾರತಿ ಆರ್‌ಟಿಒ ಕಚೇರಿಯಲ್ಲೇ ಉಳಿದಿರುವುದು ಚರ್ಚೆಗೆ ಗ್ರಾಸವಾಗಿದೆ.

ಕೃಷ್ಣಾನಂದ ಅವರು ಹಿಂದೆ ಎಲೆಕ್ಟ್ರಾನಿಕ್‌ಸಿಟಿ ಆರ್‌ಟಿಒ ಕಚೇರಿಯಲ್ಲಿ ಎಆರ್‌ಟಿಒ ಆಗಿದ್ದಾಗ ನಿತ್ಯ 500–1000 ಚಾಲನಾ ಅನುಜ್ಞಾ ಪತ್ರಗಳನ್ನು (ಡಿಎಲ್) ನೀಡಿದ್ದ ಆರೋಪದಲ್ಲಿ ಕಳೆದ ಜನವರಿಯಲ್ಲಿ ಅಮಾನತ್ತಾಗಿದ್ದರು. ಬಳಿಕ ವಿಚಾರಣೆಯನ್ನು ಬಾಕಿ ಇಟ್ಟು ಒಂದೇ ತಿಂಗಳಲ್ಲಿ ಅಮಾನತು ತೆರವು ಮಾಡಿ ಜ್ಞಾನಭಾರತಿ ಆರ್‌ಟಿಒ ಕಚೇರಿಯಲ್ಲಿ ಖಾಲಿ ಇರುವ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಯಾಗಿ ನಿಯುಕ್ತಿಗೊಳಿಸಲಾಗಿತ್ತು.

> **ಅಧಿಕಾರಿಗಳು ಸಾರ್ವಜನಿಕರ ಹಿತಾಸಕ್ತಿಗಾಗಿ ಕೆಲಸ ಮಾಡಬೇಕು. ಈ ಪ್ರಕರಣದ ಬಗ್ಗೆ ತಿಳಿದುಕೊಂಡು ಕ್ರಮ ವಹಿಸಲಾಗುವುದು**
> **ರಾಮಲಿಂಗಾರೆಡ್ಡಿ,** ಸಾರಿಗೆ ಸಚಿವ

ಅವರಿಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಯಾಗಿ(ಆರ್‌ಟಿಒ) ಬಡ್ತಿ ನೀಡಿ ಶಾಂತಿನಗರ ಪ್ರಾದೇಶಿಕ ಸಾರಿಗೆ ಕಚೇರಿಗೆ ಜೂನ್ 27ರಂದು ವರ್ಗಾವಣೆ ಮಾಡಲಾಗಿತ್ತು. ಈವರೆವಿಗೂ ಅವರು ವರ್ಗಾವಣೆಯಾದ ಕಚೇರಿಗೆ ವರದಿ ಮಾಡಿಕೊಂಡಿಲ್ಲ. ಜ್ಞಾನಭಾರತಿಯಲ್ಲೇ ಎಆರ್‌ಟಿಒ ಆಗಿ ಮುಂದುವರಿದಿದ್ದಾರೆ.

'ಡಿಎಲ್ ನೀಡಬೇಕಿದ್ದರೆ ಚಾಲನೆ ಮಾಡಿಸಿ ಪರೀಕ್ಷಿಸಬೇಕು. ಅದರಲ್ಲಿ ಉತ್ತೀರ್ಣರಾದರೆ ಮಾತ್ರ ಡಿಎಲ್ ಪಡೆಯಲು ಅರ್ಜಿದಾರರು ಅರ್ಹರಾಗುತ್ತಾರೆ. ಅಂಥ ಯಾವ ಪರೀಕ್ಷೆಗಳನ್ನೂ ಮಾಡದೇ ಡಿಎಲ್ ನೀಡಿದ್ದ ಆರೋಪದಲ್ಲಿ ಕೃಷ್ಣಾನಂದ ಅಮಾನತಾಗಿದ್ದರು. ಈಗ ವರ್ಗಾವಣೆ ಮಾಡಿದರೂ ಶಾಂತಿನಗರಕ್ಕೆ ಹೋಗಿಲ್ಲ. ಯಾಕೆಂದರೆ ಅದು ಆಟೊ ರಿಕ್ಷಾ ವಿಭಾಗ. ಅದನ್ನು ಬಿಟ್ಟು ಡಿಎಲ್ ನೀಡುವ ಅವಕಾಶ ಇರುವ ಜಾಗ ಎಲ್ಲಿದೆ ಎಂದು ಹುಡುಕುತ್ತಿದ್ದಾರೆ. ಇದು ಮತ್ತೊಂದು ಹಗರಣಕ್ಕೆ ಕಾರಣವಾಗಲಿದೆ' ಎಂದು ಇಲಾಖೆಯ ಅಧಿಕಾರಿಯೊಬ್ಬರು ಹೇಳಿದರು.

'ಬಡ್ತಿ ನೀಡಿ ವರ್ಗಾವಣೆ ಮಾಡಿದಾಗ ಅಲ್ಲಿಗೆ ಹೋಗಿ ವರದಿ ಮಾಡಿಕೊಂಡಾಗ ಬಡ್ತಿ ಅನ್ವಯವಾಗುತ್ತದೆ. ಬಡ್ತಿ ನಿರಾಕರಿಸಿ ಮುಂದುವರಿಯುವ ಅವಕಾಶವೂ ಇದೆ. ಕೃಷ್ಣಾನಂದ ಅವರು ಬಡ್ತಿ ನಿರಾಕರಿಸಿಲ್ಲ. ಇಲ್ಲಿ ವರದಿ ಮಾಡಿಕೊಂಡಿಲ್ಲ. ಮುಂದೆ ಮಾಡಿಕೊಳ್ಳಬಹುದು' ಎಂದು ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

ಜಿಲ್ಲಾ ಸಹಕಾರ ಬ್ಯಾಂಕ್ ಅಧ್ಯಕ್ಷರ ನೇಮಕ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ (ಬಿಡಿಸಿಸಿ ಬ್ಯಾಂಕ್) ಅಧ್ಯಕ್ಷರಾಗಿ ಮಂಜು ವೈ.ಎಚ್. ಆಯ್ಕೆಯಾಗಿದ್ದಾರೆ.

ಡಿ. ಹನುಮಂತಯ್ಯ ಅವರ ರಾಜೀನಾಮೆಯಿಂದ ಅಧ್ಯಕ್ಷ ಸ್ಥಾನ ತೆರವಾಗಿತ್ತು. ಈ ಸ್ಥಾನಕ್ಕೆ ಬ್ಯಾಂಕಿನ ನಿರ್ದೇಶಕರು ಒಮ್ಮತದಿಂದ ಮಂಜು ಅವರನ್ನು ಆಯ್ಕೆ ಮಾಡಿದ್ದಾರೆ.

ಮಂಜು ವೈ.ಎಚ್. ಅವರನ್ನು ಸಹಕಾರಿಗಳು ಅಭಿನಂದಿಸಿದರು

ವರ್ಗಾವಣೆಗೆ ಕೌನ್ಸೆಲಿಂಗ್: ಪಿಯು ಕಾಲೇಜುಗಳ ಉಪನ್ಯಾಸಕರ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 40ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ ಪಿಯು ಕಾಲೇಜುಗಳ ಉಪನ್ಯಾಸಕರ ಹುದ್ದೆಗಳನ್ನೂ ವರ್ಗಾವಣೆ ಕೌನ್ಸೆಲಿಂಗ್‌ಗೆ ಪರಿಗಣಿಸಬೇಕು. ಅಲ್ಲಿಯವರೆಗೆ ಕೌನ್ಸೆಲಿಂಗ್ ಪ್ರಕ್ರಿಯೆ ಸ್ಥಗಿತಗೊಳಿಸಬೇಕು ಎಂದು ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಒತ್ತಾಯಿಸಿದೆ.

2023ನೇ ಸಾಲಿನ ಸರ್ಕಾರಿ ಪಿಯು ಕಾಲೇಜುಗಳ ಉಪನ್ಯಾಸಕರ ವರ್ಗಾವಣೆಯಲ್ಲಿ ವಿಷಯವಾರು 40 ವಿದ್ಯಾರ್ಥಿಗಳ ಸಂಖ್ಯೆಯನ್ನು ನಿಗದಿಗೊಳಿಸಲಾಗಿದೆ. ಅದಕ್ಕಿಂತ ಕಡಿಮೆ ಇದ್ದರೆ ಆ ವಿಷಯದ ಉಪನ್ಯಾಸಕರಿಗೆ ಆ ಕಾಲೇಜಿಗೆ ವರ್ಗಾವಣೆ ಸಿಗುವುದಿಲ್ಲ. ಇದರಿಂದ ರಾಜ್ಯದಲ್ಲಿನ 1,232 ಸರ್ಕಾರಿ ಪಿಯು ಕಾಲೇಜುಗಳಲ್ಲಿ ಶೇ 30ಕ್ಕಿಂತ ಹೆಚ್ಚು ಬಾಗಿಲು ಮುಚ್ಚಬೇಕಾಗುತ್ತದೆ ಎಂದು ಸಂಘದ ಅಧ್ಯಕ್ಷ ಎ.ಎಚ್.ನಿಂಗೇಗೌಡ, ಪ್ರಧಾನ ಕಾರ್ಯದರ್ಶಿ ಶಿವರಾಜ್ ಮಾಲಿಪಾಟೀಲ ಮತ್ತಿತರ ಪದಾಧಿಕಾರಿಗಳು, ವಿಧಾನ ಪರಿಷತ್ ಸದಸ್ಯ ಎಸ್.ಎಲ್. ಭೋಜೇಗೌಡ ಅವರು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರನ್ನು ಶುಕ್ರವಾರ ಭೇಟಿಯಾಗಿ ಮನವಿ ಮಾಡಿದರು.

ಮಕ್ಕಳು ಕಡಿಮೆ ಇರುವ ವಿಷಯಗಳ ಹುದ್ದೆಗಳನ್ನು ಕೌನ್ಸೆಲಿಂಗ್‌ನಲ್ಲಿ ತೋರಿಸದಂತೆ ಇಲಾಖೆ ನಿರ್ದೇಶಕರು ಎಲ್ಲ ಜಿಲ್ಲೆಗಳ ಉಪ ನಿರ್ದೇಶಕರಿಗೆ ನಿರ್ದೇಶನ ನೀಡಿದ್ದಾರೆ. ಮನವಿ ಮಾಡಿದ ನಂತರ ಒಂದು ದಿನ ಕೌನ್ಸೆಲಿಂಗ್ ಪ್ರಕ್ರಿಯೆ ಸ್ಥಗಿತಗೊಳಿಸಲಾಗಿದೆ. ಹೀಗೆ ನಿಯಮ ರೂಪಿಸಿದರೆ ಗ್ರಾಮೀಣ ಭಾಗದ ಕಾಲೇಜುಗಳು ಉಳಿಯುವುದಿಲ್ಲ. ವಿದ್ಯಾರ್ಥಿಗಳ ಸಂಖ್ಯೆಗೆ ಮಹತ್ವ ನೀಡದೇ ಸ್ಥಳ ನಿಯೋಜನೆ ಮಾಡಬೇಕು. ಎರಡು ವರ್ಷಗಳಿಗೊಮ್ಮೆ ವರ್ಗಾವಣೆ ಪ್ರಕ್ರಿಯೆ ಕೈಗೊಳ್ಳಬೇಕು ಎಂದು ಕೋರಿದರು.

ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ್, ಮಾಜಿ ಸದಸ್ಯರಾದ ಕೆ.ಟಿ. ಶ್ರೀಕಂಠೇಗೌಡ, ಪುಟ್ಟಣ್ಣ ಅವರು ಪದವಿಪೂರ್ವ ಶಿಕ್ಷಣ ಇಲಾಖೆಗೆ ಪತ್ರ ಬರೆದಿದ್ದಾರೆ.

ಬೆಂಗಳೂರು ದಕ್ಷಿಣ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಸಂಘದ ಅಧ್ಯಕ್ಷ ಡಿ. ಹನುಮಂತಯ್ಯ, ನಿರ್ದೇಶಕ ಎಸ್.ಕೆ. ನಟರಾಜ್, ಉಪಾಧ್ಯಕ್ಷ ಎಂ. ಪ್ರಕಾಶ್, ಬಿ.ಎಂ. ಮಾರಣ್ಣ, ಕಾರ್ಯದರ್ಶಿ ಆರ್. ಉಮೇಶ್, ಗೋಪಾಲ್ ಇದ್ದರು

ವ್ಯವಸಾಯೋತ್ಪನ್ನ ಮಾರಾಟ ಸಂಘಕ್ಕೆ ₹ 24.96 ಲಕ್ಷ ಲಾಭ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: ಬೆಂಗಳೂರು ದಕ್ಷಿಣ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘವು ₹ 24,96,720 ನಿವ್ವಳ ಲಾಭ ಪಡೆದಿದೆ ಎಂದು ಸಂಘದ ಅಧ್ಯಕ್ಷ ಡಿ. ಹನುಮಂತಯ್ಯ ತಿಳಿಸಿದರು.

ಸಂಘದ 41ನೇ ವರ್ಷದ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಂಘದ ವ್ಯಾಪ್ತಿಯಲ್ಲಿ 99 ನ್ಯಾಯಬೆಲೆ ಅಂಗಡಿ, ರೈತರ ಸಹಕಾರ ಸಂಘಗಳ ಬರಲಿದ್ದು ಅನ್ನಭಾಗ್ಯ ಪಡಿತರ ವಿತರಣೆ, ನ್ಯಾಯಬೆಲೆ ಅಂಗಡಿಗಳ ಮೂಲಕ ಮುಕ್ತ ವ್ಯಾಪಾರ ವಹಿವಾಟು, 25 ಸಿಬ್ಬಂದಿ, 25 ಹಮಾಲಿ ವರ್ಗದ ಕಾರ್ಮಿಕರಿದ್ದಾರೆ. ಪಡಿತರ ರಸಗೊಬ್ಬರ ವಿತರಣೆ, ಲಾರಿಗಳಿಂದ ₹ 38.34 ಲಕ್ಷ ಆದಾಯ ಬಂದಿದೆ ಎಂದರು.

ಮಾಜಿ ಮೇಯರ್ ಎಸ್. ಕೆ.ನಟರಾಜ, ಬ್ಯಾಂಕ್ ಉಪಾಧ್ಯಕ್ಷ ಎಂ.ಪ್ರಕಾಶ, ನಿರ್ದೇಶಕರಾದ ಟಿ.ಸಿ. ನಂಜೇಗೌಡ, ಕೆ. ಚಂದ್ರಕಲಾ, ಟಿ.ಎ. ಚಂದ್ರಶೇಖರ್, ಆರ್. ಎಲ್ಲಪ್ಪ, ಎಂ. ವೆಂಕಟೇಶ್, ಎಸ್.ಆರ್. ರತ್ನಮ್ಮ, ಡಿ.ಎಂ. ಸರೋಜಮ್ಮ, ಸಿ.ಬಿ. ರಾಮಕೃಷ್ಣಯ್ಯ ಇತರರು ಇದ್ದರು.

ಕಾವೇರಿಯಲ್ಲಿ ಸ್ಪಂದನಾ ಅಸ್ಥಿ ವಿಸರ್ಜನೆ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ: ನಟ ವಿಜಯ್ ರಾಘವೇಂದ್ರ ಅವರ ಪತ್ನಿ ಸ್ಪಂದನಾ ಅವರ ಅಸ್ಥಿ ವಿಸರ್ಜನೆ ಕಾರ್ಯ ಶುಕ್ರವಾರ ಪಟ್ಟಣದ ಕಾವೇರಿ ನದಿ ತೀರದ ಸೋಪಾನ ಕಟ್ಟೆಯ ಬಳಿ ನಡೆಯಿತು.

ಸ್ಪಂದನಾ ಅವರ ಪುತ್ರ ಶೌರ್ಯ ಅಸ್ಥಿ ವಿಸರ್ಜಿಸಿದರು. ಅದಕ್ಕೂ ಮುನ್ನ ಬೆಂಗಳೂರಿನಿಂದ ತಂದ ಅಸ್ಥಿ ಕುಡಿಕೆಯನ್ನು ನದಿ ದಡದ ಗೌತಮ ಮಂಟಪದಲ್ಲಿಟ್ಟು ಪೂಜಿಸಲಾಯಿತು. ಪಂಚಗವ್ಯದಿಂದ ಶುದ್ಧೀಕರಿಸಲಾಯಿತು.

ಶೌರ್ಯ ಅವರು ಕೇಶ ಮುಂಡನ ಮಾಡಿಸಿ ಸಂಕಲ್ಪ, ಅಸ್ಥಿ ನಾರಾಯಣ ಪೂಜೆ, ಲಾಜಾ ಅರ್ಪಣೆ, ದಹಿಷ್ಣು ಪಂಚಕ ನಕ್ಷತ್ರ ಹೋಮ ಮಾಡಿದರು. ಪಿಂಡ ಪ್ರದಾನ ಪ್ರಕ್ರಿಯೆಯ ಬಳಿಕ ಅಸ್ಥಿ ಸಂಚಯನ ನಡೆಯಿತು.

ವೈದಿಕರಾದ ರಮೇಶ ಶರ್ಮಾ ಅವರ ನೇತೃತ್ವದ ತಂಡ ನೇತೃತ್ವ ವಹಿಸಿತ್ತು. ವಿಜಯ್ ರಾಘವೇಂದ್ರ, ನಟ ಶ್ರೀಮುರಳಿ, ತಂದೆ ಎಸ್.ಎ. ಚಿನ್ನೇಗೌಡ, ಸ್ಪಂದನಾ ತಂದೆ ಬಿ.ಕೆ. ಶಿವರಾಂ, ಚಿಕ್ಕಪ್ಪ, ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, ಚಿನ್ನೇಗೌಡ ಅವರ ಸಹೋದರರಾದ ಎಸ್.ಎ. ಗೋವಿಂದರಾಜು, ಎಸ್.ಎ. ಶ್ರೀನಿವಾಸ್ ಹಾಜರಿದ್ದರು.

3 ತಿಂಗಳಾದರೂ ಸಂಬಳ ಇಲ್ಲ: ಸಿ.ಎಂಗೆ ಪತ್ರ

ಪೀಣ್ಯದಾಸರಹಳ್ಳಿ: ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಸರ್ಕಾರಿ ಶಾಲೆಗಳ ಶಿಕ್ಷಕರು ಹಾಗೂ ಸಿಬ್ಬಂದಿಗೆ ಮೂರು ತಿಂಗಳಾದರೂ ಸಂಬಳ ನೀಡಿಲ್ಲ. ಈ ಬಗ್ಗೆ ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿರುವುದಾಗಿ ಶಾಸಕ ಎಸ್. ಮುನಿರಾಜು ತಿಳಿಸಿದರು.

ಅಬ್ಬಿಗೆರೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ಸೂರಜ್ ಫೌಂಡೇಶನ್ ವತಿಯಿಂದ ಸುಮಾರು 900 ವಿದ್ಯಾರ್ಥಿಗಳಿಗೆ ಉಚಿತ ನೋಟ್ ಪುಸ್ತಕಗಳನ್ನು ವಿತರಿಸಿ ಮಾತನಾಡಿದ ಅವರು, 'ಶಿಕ್ಷಕರಿಗೆ ಸರಿಯಾಗಿ ಸಂಬಳ ನೀಡದೆ, ಅಗತ್ಯ ಶಿಕ್ಷಕರ ಕೊರತೆ ನೀಗಿಸದಿದ್ದರೆ ಸರ್ಕಾರಿ ಶಾಲೆಗಳು ಉದ್ಧಾರವಾಗಬೇಕೆಂದರೆ ಹೇಗೆ' ಎಂದು ಪ್ರಶ್ನಿಸಿದರು.

'ಕ್ಷೇತ್ರದ ಸರ್ಕಾರಿ ಶಾಲೆಗಳಿಗೆ ಅಗತ್ಯವಿರುವ ಶಿಕ್ಷಕರ ವ್ಯವಸ್ಥೆ ಮಾಡುವ ಸಂಬಂಧ ಶಿಕ್ಷಣ ಸಚಿವರೊಂದಿಗೆ ಮಾತನಾಡಿ ಕ್ರಮ ಕೈಗೊಳ್ಳಲಾಗುವುದು. ಸರ್ಕಾರಿ ಶಾಲೆಗಳಲ್ಲೂ ಎಲ್ಲಾ ಸೌಲಭ್ಯಗಳು ಸಿಗುವಂತಾಗಬೇಕು' ಎಂದರು.

ಸೂರಜ್ ಫೌಂಡೇಶನ್ ಅಧ್ಯಕ್ಷೆ ಸುಜಾತಾ ಮುನಿರಾಜು ಅವರು ಮಾತನಾಡಿದರು.

ನಗರದಲ್ಲಿ ಇಂದು

ಅರ್ಧನಾರೀಶ್ವರ ನೃತ್ಯೋತ್ಸವ: ಧರಣಿ ಟಿ. ಕಶ್ಯಪ್, ಸುನೀತಾ ಮಂಜುನಾಥ್, ಗೌರವ ಅತಿಥಿಗಳು: ಸುನಂದಾ ದೇವಿ, ಅರುಂಧತಿ ರಮೇಶ್, ಆಯೋಜನೆ: ನಾಟ್ಯ ನಿನಾದ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10

ರಾಜೇಶ್ವರಿ ಮೂರ್ತಿ ಅವರ 'ಬಾಳ ಹೆಜ್ಜೆಯಲಿ' ಕೃತಿ ಬಿಡುಗಡೆ: ಅತಿಥಿಗಳು: ರೋಹಿತ್ ಚಕ್ರತೀರ್ಥ, ಬಿ.ಆರ್. ಲಕ್ಷ್ಮಣರಾವ್, ಜಿ.ಬಿ. ಹರೀಶ್, ಕೃಷ್ಣಮೂರ್ತಿ ಜೋಯಿಸ್, ಶಾಂತಾ ನಾಗಮಂಗಲ, ಪದ್ಮಾ ಅನಂತ ಭಾರದ್ವಾಜ್, ಸುರೇಶ್ ಭಟ್ಟ, ಕರುಣಾ ಸುರೇಶ್, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10

'ಕರ್ನಾಟಕದಲ್ಲಿ ನಗರ ಆಡಳಿತ' ವಿಚಾರಸಂಕಿರಣ: ಮುಖ್ಯ ಅತಿಥಿ: ಬೈರತಿ ಸುರೇಶ್, ಮುಖ್ಯ ಭಾಷಣ: ಎ. ರವೀಂದ್ರ, ಆಯೋಜನೆ: ಸ್ವರಾಜ್ ಫಾರ್ ಸಿಟಿಜನ್, ಸ್ಥಳ: ಬಿಐಸಿ, ದೊಮ್ಮಲೂರು, ಬೆಳಿಗ್ಗೆ 10

ಪದವಿ ಪ್ರದಾನ ದಿನ: ಅಧ್ಯಕ್ಷತೆ: ಡಿ.ಆರ್. ವಿಜಯ ಸಾರಥಿ, ಮುಖ್ಯ ಅತಿಥಿ: ಶ್ರೀನಿವಾಸ್ ಸಿ., ಉಪಸ್ಥಿತಿ: ಪದ್ಮಾ ವಿ., ರಂಗಸ್ವಾಮಿ ಬಿ.ವಿ., ಆಯೋಜನೆ ಹಾಗೂ ಸ್ಥಳ: ವಾಸವಿ ಜ್ಞಾನಪೀಠ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಳಿಗ್ಗೆ 10

ಮಾತೃಭೂಮಿ ಬೆಳಿಹಬ್ಬ: ಉದ್ಘಾಟನೆ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಪ್ರಶಸ್ತಿ ಪ್ರದಾನ: ಜಮೀರ್ ಅಹ್ಮದ್ ಖಾನ್, ಉಪಸ್ಥಿತಿ: ಪ್ರತಾಪ್ ಲಿಂಗಯ್ಯ, ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ: ಅಲೋಕ್ ಕುಮಾರ್, ಆಶಯ ನುಡಿ: ಬಂಜಗೆರೆ ಜಯಪ್ರಕಾಶ್, ಆಯೋಜನೆ:ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ರಾಷ್ಟ್ರೀಯ ಸೇವಾ ಯೋಜನೆ ರಾಜ್ಯ ಕೋಶ, ಮಾತೃಭೂಮಿ ಬೆಳಿಹಬ್ಬ ಸಮಿತಿ, ಸ್ಥಳ: ಯುವನಿಕ ಸಭಾಂಗಣ, ನೃಪತುಂಗ ರಸ್ತೆ, ಬೆಳಿಗ್ಗೆ 10.30

ಯೋಗ ಸಭಾಂಗಣದ ಉದ್ಘಾಟನೆ ಹಾಗೂ 9ನೇ ಅಂತರ ರಾಷ್ಟ್ರೀಯ ಯೋಗ ದಿನಾಚರಣೆ: ಉದ್ಘಾಟನೆ: ಪಿ. ರಾಮದಾಸ್, ವಿಶೇಷ ಉಪನ್ಯಾಸ: ಕೆ. ಗುರುರಾಜ ಕರಜಗಿ, ಆಯೋಜನೆ ಹಾಗೂ ಸ್ಥಳ: ಶ್ರೀ ಪ್ರಸನ್ನ ವೀರಾಂಜನೇಯ ಯೋಗ ಕೇಂದ್ರ, ಮಹಾಲಕ್ಷ್ಮಿ ಲೇಔಟ್, ಸಂಜೆ 5



ಗುರುರಾಜ ಕರಜಗಿ

ವಜ್ರ ಮಹೋತ್ಸವ: ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಆಂಡ್ರ್ಯೂಸ್ ಥಳತ್, ಅತಿಥಿಗಳು: ರಾಮಲಿಂಗಾರೆಡ್ಡಿ, ಕೆ.ಜೆ. ಜಾರ್ಜ್, ಡಾ. ಶರಣಪ್ರಕಾಶ್ ಪಾಟೀಲ, ದಿನೇಶ್ ಗುಂಡೂರಾವ್, ಆಯೋಜನೆ ಹಾಗೂ ಸ್ಥಳ: ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜು, ಬೆಳಿಗ್ಗೆ 10.30

ಗ್ರಂಥಪಾಲಕರ ದಿನಾಚರಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಸಿದ್ದರಾಮಯ್ಯ, ಡಿಜಿಟಲ್ ಗ್ರಂಥಾಲಯ ಲೋಕಾರ್ಪಣೆ: ಡಿ.ಕೆ. ಶಿವಕುಮಾರ್, ಪ್ರಶಸ್ತಿ ಪ್ರದಾನ: ಮಧು ಬಂಗಾರಪ್ಪ, ಅಧ್ಯಕ್ಷತೆ: ಎಂ. ಕೃಷ್ಣಪ್ಪ, ಆಯೋಜನೆ: ಸಾರ್ವಜನಿಕ ಗ್ರಂಥಾಲಯ ಇಲಾಖೆ, ಸ್ಥಳ: ಗ್ರಂಥಾಂಗಣ, ನಗರ ಕೇಂದ್ರ ಗ್ರಂಥಾಲಯ, ಹಂಪಿನಗರ, ಬೆಳಿಗ್ಗೆ 10.30

ಎಚ್.ಕೆ. ವೀರಬಸವಯ್ಯನವರ 78ನೇ ವರ್ಷದ ಸಂಸ್ಮರಣೆ ಹಾಗೂ 'ವೀರಶೈವ ಧರ್ಮ' ಪುಸ್ತಕ ಬಿಡುಗಡೆ: ಸಾನ್ನಿಧ್ಯ: ಮಲ್ಲಿಕಾರ್ಜುನ ದೇವರು ಸ್ವಾಮೀಜಿ, ಅಧ್ಯಕ್ಷತೆ: ಬಿ.ಎಸ್. ಪರಮಶಿವಯ್ಯ, ಮುಖ್ಯ ಅತಿಥಿ: ಎಚ್.ಕೆ. ಶಿವಾನಂದ, ಪುಸ್ತಕ ಪರಿಚಯ: ಗಂಗಾಧರ್ ಆರ್. ಗುರುಮಠ, ಉಪನ್ಯಾಸ: ಸಿ. ಶಿವಕುಮಾರಸ್ವಾಮಿ, ಆಯೋಜನೆ: ಶ್ರೀ ಸರ್ಪಭೂಷಣ ಶಿವಯೋಗಿಗಳ ಮಠದ ಟ್ರಸ್ಟ್, ಸ್ಥಳ: ಬಸವೇಶ್ವರ ಸುಜ್ಞಾನ ಮಂಟಪ, ವಿಜಯನಗರ, ಮಧ್ಯಾಹ್ನ 12.30

'ಜಷ್ನ್ ಎ ಅದಬ್' ಸಾಹಿತ್ಯೋತ್ಸವ: ಉದ್ಘಾಟನೆ: ಕಪೀಲ್ ಮೋಹನ್, ಗಾಯನ: ನಾಗಭೂಷಣ ಹೆಗಡೆ, ಆಯೋಜನೆ: ಜಷ್ನ್ ಎ ಅದಬ್, ಸ್ಥಳ: ಎಂ.ವಿ. ಸಭಾಂಗಣ, ಎಫ್‌ಕೆಸಿಸಿಐ, ಕೆಂಪೇಗೌಡ ರಸ್ತೆ, ಮಧ್ಯಾಹ್ನ 2.30

ಫ್ಯಾಷನ್ ಶೋ: ಮುಖ್ಯ ಅತಿಥಿ: ಡಿ.ಕೆ. ಶಿವಕುಮಾರ್, ರಾಗಿಣಿ ದ್ವಿವೇದಿ, ಆಯೋಜನೆ: ಇಪಿವಿಕೆ ಮಿಸ್ ದಿವಾ, ಸ್ಥಳ: ಮ್ಯಾನ್‌ಫೋ ಕನ್ವೆಂಷನ್ ಸೆಂಟರ್, ಹೆಬ್ಬಾಳ, ಸಂಜೆ 4.30

ರಾಗಿಣಿ ದ್ವಿವೇದಿ

ಸಿ. ಅಶ್ವಥ್ ಸ್ಮರಣಾರ್ಥ ಸುಮಧುರ ಭಾವಗೀತೆಗಳ ನಮನ: ಆಯೋಜನೆ: ಸ್ವರಾಂಜಲಿ, ಸ್ಥಳ: ಶುಕ್ರ ಸಭಾಂಗಣ, ಮಲ್ಲೇಶ್ವರ, ಸಂಜೆ 5

ಜಾನಪದ ಸಂಭ್ರಮ, ಸಾಧಕರು, ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ಅಭಿನಂದನಾ ಸಮಾರಂಭ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಬಸವ ಜಯಮೃತ್ಯುಂಜಯ ಸ್ವಾಮೀಜಿ, ಉದ್ಘಾಟನೆ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಡಿ.ವಿ. ಸದಾನಂದಗೌಡ, ಸನ್ಮಾನಿತರು: ಟಿ. ವೆಂಕಟೇಶ್, ಭಗವಾನ್ ಬಿ.ಸಿ., ಜಯರಾಮ್ ರಾಯಪುರ, ಆರ್. ಶ್ರೀನಿವಾಸಗೌಡ, ಆಯೋಜನೆ: ರಾಜ್ಯ ಒಕ್ಕಲಿಗರ ಒಕ್ಕೂಟ ಟ್ರಸ್ಟ್, ಸ್ಥಳ: ಸರ್. ಪುಟ್ಟಣ್ಣ ಚೆಟ್ಟಿ ಪುರಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 11



ನಿರ್ಮಲಾನಂದನಾಥ ಸ್ವಾಮೀಜಿ

ಊಂಜಲ್ ಸಂಗೀತೋತ್ಸವ: ಸುಷ್ಮಾ ಶ್ರೇಯಸ್, ವಾದ್ಯ ಸಹಕಾರ: ಎಂ.ಎಸ್. ಗೋವಿಂದಸ್ವಾಮಿ, ಗಣೇಶಮೂರ್ತಿ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ವೆಂಕಟೇಶ್ವರ ಸ್ವಾಮಿ ದೇವಸ್ಥಾನ (ಟಿಟಿಡಿ), 16ನೇ ಅಡ್ಡರಸ್ತೆ, ವೈಯಾಲಿಕಾವಲ್, ಸಂಜೆ 6

ಭರತನಾಟ್ಯ ರಂಗಪ್ರವೇಶ: ಪ್ರಣೀತಾ ಗಿರಿಧರ್, ಮುಖ್ಯ ಅತಿಥಿಗಳು: ಸುಗ್ಗನಹಳ್ಳಿ ಷಡಕ್ಷರಿ, ಕೀರ್ತಿ ಕುಮಾರ್, ಸ್ಥಳ: ತೆಲುಗು ವಿಜ್ಞಾನ ಸಮಿತಿ, ವೈಯಾಲಿಕಾವಲ್, ಸಂಜೆ 6

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಉಭಯ ರಾಜ್ಯಗಳ ಪ್ರತಿನಿಧಿಗಳ ನಡುವೆ ವಾಗ್ವಾದ

ಕಾವೇರಿ: ತಮಿಳುನಾಡು ಬೇಡಿಕೆ ಒಪ್ಪದ ರಾಜ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ: ತಮಿಳುನಾಡಿಗೆ ಕಾವೇರಿ ನೀರು ಬಿಡುವ ವಿಚಾರದಲ್ಲಿ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಕರ್ನಾಟಕ ಸರ್ಕಾರ ಹಾಗೂ ತಮಿಳುನಾಡು ಸರ್ಕಾರದ ಪ್ರತಿನಿಧಿಗಳ ನಡುವೆ ಶುಕ್ರವಾರ ವಾಗ್ವಾದ ನಡೆದಿದ್ದು, ಕರ್ನಾಟಕ ಸರ್ಕಾರವು ಬೇಡಿಕೆಗೆ ಒಪ್ಪದ ಕಾರಣ ತಮಿಳುನಾಡಿನ ಪ್ರತಿನಿಧಿಗಳು ಸಭೆಯಿಂದ ಹೊರ ನಡೆದರು.

ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ, ಕರ್ನಾಟಕವು ತಮಿಳುನಾಡಿಗೆ ಜೂನ್, ಜುಲೈ ಹಾಗೂ ಆಗಸ್ಟ್‌ನಲ್ಲಿ 45 ಟಿಎಂಸಿ ಅಡಿಯಷ್ಟು ನೀರು ಹರಿಸಬೇಕಿತ್ತು. ಆದರೆ, ಕರ್ನಾಟಕ ಸರ್ಕಾರವು ಹರಿಸಿದ್ದು ಆರೇಳು ಟಿಎಂಸಿ ಅಡಿಯಷ್ಟು ನೀರು' ಎಂದು ತಮಿಳುನಾಡು ಜಲಸಂಪನ್ಮೂಲ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸಂದೀಪ್ ಸಕ್ಸೇನಾ ಸಭೆಯಲ್ಲಿ ಆಕ್ಷೇಪಿಸಿದರು.

ಕರ್ನಾಟಕ ಜಲಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಪ್ರತಿಕ್ರಿಯಿಸಿ, 'ರಾಜ್ಯದಲ್ಲಿ ಈ ವರ್ಷ ಮಳೆ ಕೊರತೆ ಉಂಟಾಗಿದೆ. ಕೆಆರ್‌ಎಸ್ ಜಲಾಶಯದಲ್ಲಿ ಈಗ 114 ಟಿಎಂಸಿ ಅಡಿಯಷ್ಟು ನೀರು ಇದೆ. ಜಲಾಶಯ ತುಂಬದ ಕಾರಣ ಜೂನ್ ಹಾಗೂ ಜುಲೈ ತಿಂಗಳಲ್ಲಿ ನಿಗದಿಪಡಿಸಿದಷ್ಟು ನೀರು ಬಿಡಲು ಸಾಧ್ಯವಾಗಲಿಲ್ಲ. ಕಳೆದ ವಾರದಿಂದ ಪ್ರತಿದಿನ 5 ಸಾವಿರ ಕ್ಯೂಸೆಕ್ ನೀರು ಬಿಡುತ್ತಿದ್ದೇವೆ' ಎಂದರು.

ಈ ಮಾತಿಗೆ ಒಪ್ಪದ ಸಕ್ಸೇನಾ, 'ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ನ ಆದೇಶ ಉಲ್ಲಂಘಿಸುತ್ತಿದೆ. ನೀರು ಬಿಡದ ಕಾರಣ ನಮ್ಮ ರೈತರಿಗೆ ತೊಂದರೆಯಾಗಿದೆ. ಎರಡೂವರೆ ತಿಂಗಳ ಪಾಲಿನ 37 ಟಿಎಂಸಿ ಅಡಿ ನೀರನ್ನು ಹರಿಸಬೇಕು. ಕರ್ನಾಟಕ ಸರ್ಕಾರವು ಪ್ರತಿದಿನ ಬಿಳಿಗುಂಡ್ಲುವಿನಲ್ಲಿ 20 ಸಾವಿರ ಕ್ಯೂಸೆಕ್ ನೀರು ಬಿಡಬೇಕು' ಎಂದು ಪಟ್ಟು ಹಿಡಿದರು.

ಇದಕ್ಕೆ ಒಪ್ಪದ ರಾಕೇಶ್ ಸಿಂಗ್, 'ನಿತ್ಯ ಅಷ್ಟೊಂದು ನೀರು ಹರಿಸಲು ಸಾಧ್ಯವಿಲ್ಲ. ನಮ್ಮ ರೈತರ ಹಿತ ಕಾಪಾಡಬೇಕಿದೆ. ಪ್ರತಿದಿನ ಗರಿಷ್ಠ 8 ಸಾವಿರ ಕ್ಯೂಸೆಕ್ ನೀರು ಹರಿಸಬಹುದು' ಎಂದರು. ಅದಕ್ಕೆ ತಮಿಳುನಾಡಿನವರು ಒಪ್ಪಲಿಲ್ಲ. ಕರ್ನಾಟಕ ಸರ್ಕಾರ ನೆಪ ಹೇಳುತ್ತಿದೆ ಎಂದು ಆರೋಪಿಸಿ ಸಭೆಯಿಂದ ಹೊರ ನಡೆದರು. ಇದರಿಂದಾಗಿ, ಸಭೆ ಅಪೂರ್ಣಗೊಂಡಿತು. ತಮಿಳುನಾಡಿಗೆ ಎಷ್ಟು ಪ್ರಮಾಣದ ನೀರು ಬಿಡಬೇಕು ಎಂಬುದು ತಡರಾತ್ರಿ ಗೊತ್ತಾಗಲಿದೆ ಎಂದು ರಾಕೇಶ್ ಸಿಂಗ್ ತಿಳಿಸಿದರು.

ಸುಪ್ರೀಂ ಕೋರ್ಟ್ 2018ರ ಫೆಬ್ರುವರಿ 16ರಂದು ನೀಡಿರುವ ಆದೇಶದ ಪ್ರಕಾರ, ಸಾಮಾನ್ಯ ವರ್ಷಗಳಲ್ಲಿ ಕರ್ನಾಟಕವು ತಮಿಳುನಾಡಿಗೆ 177.25 ಟಿಎಂಸಿ ಅಡಿ ನೀರು ಬಿಡಬೇಕಿದೆ.

ಜೂನ್ ತಿಂಗಳಿಗೆ ನಿಗದಿಪಡಿಸಿದ ನೀರನ್ನು ಕರ್ನಾಟಕವು ಬಿಟ್ಟಿಲ್ಲ ಎಂದು ಆರೋಪಿಸಿ ತಮಿಳುನಾಡು ಜಲಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರಿಗೆ ಜುಲೈ 3ರಂದು ಪತ್ರ ಬರೆದಿದ್ದರು. ಜೂನ್ ತಿಂಗಳ ನೀರನ್ನು ಸೇರಿಸಿ ಜುಲೈ ತಿಂಗಳಲ್ಲಿ ಬಿಡುಗಡೆ ಮಾಡಲು ನಿರ್ದೇಶನ ನೀಡಬೇಕು ಎಂದು ಕೋರಿದ್ದರು. ಜತೆಗೆ, ಜಲಸಂಪನ್ಮೂಲ ಸಚಿವರು ಸಹ ಪತ್ರ ಬರೆದಿದ್ದರು. ಪ್ರಾಧಿಕಾರವು ಕರ್ನಾಟಕ ಜಲಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೆ ಜುಲೈ 4ರಂದು ಪತ್ರ ಬರೆದು, ಸುಪ್ರೀಂ ಕೋರ್ಟ್ ನಿಗದಿಪಡಿಸಿದಷ್ಟು ನೀರು ಹರಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸಲಹೆ ನೀಡಿತ್ತು.

ಜುಲೈ 14ರಂದು ನಡೆದ ಕಾವೇರಿ ನೀರು ನಿಯಂತ್ರಣಾ ಪ್ರಾಧಿಕಾರದ ಸಭೆಯಲ್ಲಿ ಈ ವಿಷಯ ಚರ್ಚೆಗೆ ಬಂದಿತ್ತು. ಒಂದೂವರೆ ತಿಂಗಳಲ್ಲಿ ಕರ್ನಾಟಕವು 3.37 ಟಿಎಂಸಿ ನೀರನ್ನು ಮಾತ್ರ ಹರಿಸಿದೆ ಎಂದು ತಮಿಳುನಾಡು ಸರ್ಕಾರ ಗಮನ ಸೆಳೆದಿತ್ತು. ಜೂನ್ ಹಾಗೂ ಜುಲೈ ತಿಂಗಳ ಬಾಕಿ ಸೇರಿದಂತೆ ನಿಗದಿಪಡಿಸಿದ ನೀರನ್ನು ಹರಿಸುವಂತೆ ಕರ್ನಾಟಕ ಸರ್ಕಾರದ ಪ್ರತಿನಿಧಿಗಳಿಗೆ ಪ್ರಾಧಿಕಾರವು ಸಲಹೆ ನೀಡಿತ್ತು.

ರಾಜ್ಯದ ವಿರುದ್ಧ 'ಸುಪ್ರೀಂ'ಗೆ ಮೊರೆ

ಚೆನ್ನೈ: ಕಾವೇರಿ ನೀರು ಹರಿಸಲು ಕರ್ನಾಟಕ ಸರ್ಕಾರ ನಿರಾಕರಿಸಿರುವುದರ ವಿರುದ್ಧ ಸುಪ್ರೀಂ ಕೋರ್ಟ್ ಮೊರೆ ಹೋಗಲು ತಮಿಳುನಾಡು ಸರ್ಕಾರ ಶುಕ್ರವಾರ ನಿರ್ಧರಿಸಿದೆ.

ಜೂನ್ ಆರಂಭದಿಂದ ಬಾಕಿಯಿರುವ ನೀರನ್ನು ಬಿಡುಗಡೆ ಮಾಡುವಂತೆ ತಮಿಳುನಾಡು ಒತ್ತಾಯಿಸಿತ್ತು. ನೀರು ಹರಿಸದಿದ್ದರೆ ಕಾವೇರಿ ಕಣಿವೆ ಪ್ರದೇಶದ ಕುರುವೈ (ಅಲ್ಪಾವಧಿಯ) ಬೆಳೆಗಳ ಮೇಲೆ ಪರಿಣಾಮ ಬೀರಲಿದೆ ಎಂಬುದು ತಮಿಳುನಾಡಿನ ವಾದ. ತಮಿಳುನಾಡಿಗೆ ಪ್ರತಿ ತಿಂಗಳು ಹರಿಸಬೇಕಾದ ನೀರಿನ ಪ್ರಮಾಣವನ್ನು ಮರುಹಂಚಿಕೆ ಮಾಡಿ 2018ರಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ಕರ್ನಾಟಕ ಗೌರವಿಸುತ್ತಿಲ್ಲ ಎಂದು ಜಲಸಂಪನ್ಮೂಲ ಸಚಿವ ದುರೈ ಮುರುಗನ್ ಆರೋಪಿಸಿದ್ದಾರೆ.

ಶುಕ್ರವಾರ ನವದೆಹಲಿಯಲ್ಲಿ ನಡೆದ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಆಗಸ್ಟ್ 22 ರವರೆಗೆ 8,000 ಕ್ಯೂಸೆಕ್ ನೀರು ಮಾತ್ರ ಹರಿಸುವುದಾಗಿ ಕರ್ನಾಟಕ ಹೇಳಿದ ಬೆನ್ನಲ್ಲೇ, ತಮಿಳುನಾಡು ಕರ್ನಾಟಕದ ಜತೆಗೆ ಕಾನೂನು ಸಮರಕ್ಕೆ ಇಳಿದಿದೆ.



ಸಾಂದರ್ಭಿಕ ಚಿತ್ರ

ನಟ ಸುದೀಪ್ ಪ್ರಕರಣ ಆರೋಪಿಗಳಿಗೆ ಸಮನ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನ್ನ ಮಾನಹಾನಿ ಆಗಿದೆ' ಎಂದು ಆರೋಪಿಸಿ ಚಿತ್ರನಟ ಸುದೀಪ್ ದಾಖಲಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳಾದ ಚಿತ್ರ ನಿರ್ಮಾಪಕ ಎನ್.ಎಂ.ಕುಮಾರ್ ಹಾಗೂ ಎನ್.ಎಂ.ಸುರೇಶ್ ಅವರಿಗೆ ಸಮನ್ಸ್ ಜಾರಿಗೊಳಿಸಲು ನಗರದ 13ನೇ ಎಸಿಎಂಎಂ ಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಗುರುವಾರವಷ್ಟೇ (ಆ.10) ಫಿರ್ಯಾದುದಾರ ಸುದೀಪ್ ಅವರ ಸ್ವಯಂ ಹೇಳಿಕೆ ದಾಖಲು ಮಾಡಿಕೊಂಡಿದ್ದ ನ್ಯಾಯಾಧೀಶ ವೆಂಕಣ್ಣ ಬಸಪ್ಪ ಹೊಸಮನಿ ಅವರು, ಶುಕ್ರವಾರ ಆರೋಪಿಗಳಿಗೆ ಸಮನ್ಸ್ ಜಾರಿಗೊಳಿಸಿದ್ದು, ಇದೇ 26ರಂದು ಕೋರ್ಟ್‌ಗೆ ಹಾಜರಾಗುವಂತೆ ಆದೇಶಿಸಿದ್ದಾರೆ.

ಪ್ರಕರಣವೇನು?: 'ನನ್ನ ಸಿನಿಮಾದಲ್ಲಿ ನಟಿಸುತ್ತೇನೆ ಎಂದು ಹೇಳಿ ಸುದೀಪ್ ಕಳೆದ 7-8 ವರ್ಷಗಳ ಹಿಂದೆ ಮುಂಗಡ ಹಣ ಪಡೆದಿದ್ದರು. ಆದರೆ, ಇದುವರೆವಿಗೂ ಕಾಲ್‌ಶೀಟ್ ನೀಡಿಲ್ಲ. ನನ್ನ ಹಣವನ್ನೂ ವಾಪಸ್ ಕೊಡುತ್ತಿಲ್ಲ' ಎಂದು ನಿರ್ಮಾಪಕ ಎಂ.ಎನ್.ಕುಮಾರ್ ಆರೋಪಿಸಿದ್ದರು. ಸಮಸ್ಯೆ ಬಗೆಹರಿಸುವಂತೆ ಕೋರಿ ಫಿಲ್ಮ್ ಛೇಂಬರ್ ಮೆಟ್ಟಿಲೇರಿದ್ದರು. ಮಾಧ್ಯಮ ಗೋಷ್ಠಿಗಳಲ್ಲೂ ಈ ಕುರಿತಂತೆ ಅವರು ಸಾರ್ವಜನಿಕವಾಗಿ ಸುದೀಪ್ ವಿರುದ್ಧ ಹೇಳಿಕೆಗಳನ್ನು ನೀಡಿದ್ದರು.

ಇದಕ್ಕೆ ಪ್ರತಿಯಾಗಿ ಸುದೀಪ್ ಕೋರ್ಟ್ ಮೆಟ್ಟಿಲೇರಿದ್ದು, 'ಕುಮಾರ್ ಹೇಳಿಕೆಯಿಂದ ನಾನು ಇಷ್ಟು ವರ್ಷಗಳ ಕಾಲ ಕಷ್ಟಪಟ್ಟು ಗಳಿಸಿದ್ದ ವರ್ಚಸ್ಸಿಗೆ ಧಕ್ಕೆಯಾಗಿದೆ. ನನ್ನ ಮಾನಹಾನಿಯಾಗಿದೆ' ಎಂದು ಆರೋಪಿಸಿ ಕ್ರಿಮಿನಲ್ ಮಾನಹಾನಿ ಪ್ರಕರಣ ದಾಖಲಿಸಿದ್ದಾರೆ.

ತಾಲೀಮು...

ನಗರದ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ನಡೆಯಲಿರುವ ಸ್ವಾತಂತ್ರ್ಯ ದಿನಾಚರಣೆಯ ಪಥಸಂಚಲನಕ್ಕೆ ಶುಕ್ರವಾರ ಪೂರ್ವಭಾವಿ ತಯಾರಿ ನಡೆಯಿತು.
ಪ್ರಜಾವಾಣಿ ಚಿತ್ರ/ ಬಿ.ಕೆ.ಜನಾರ್ದನ್

ಶಾಂಗ್ರೀಲಾ ಹೋಟೆಲ್‌ಗೆ ಬಾಂಬ್ ಬೆದರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸಂತನಗರದಲ್ಲಿರುವ ಶಾಂಗ್ರೀಲಾ ಪಂಚತಾರಾ ಹೋಟೆಲ್‌ಗೆ ಬಾಂಬ್ ಬೆದರಿಕೆ ಸಂದೇಶ ಬಂದಿದ್ದು, ಈ ಸಂಬಂಧ ಹೈಗ್ರೌಂಡ್ಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಹೋಟೆಲ್‌ನ ಇ- ಮೇಲ್‌ಗೆ ಆಗಸ್ಟ್ 8ರಂದು ಬಾಂಬ್ ಬೆದರಿಕೆ ಸಂದೇಶ ಬಂದಿದೆ. ಆಡಳಿತ ಮಂಡಳಿ ಜೊತೆ ಚರ್ಚೆ ನಡೆಸಿದ ಬಳಿಕವೇ ಹೋಟೆಲ್‌ನ ಪ್ರತಿನಿಧಿ ಶುಕ್ರವಾರ ಠಾಣೆಗೆ ಬಂದು ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ. ಹೋಟೆಲ್‌ನಲ್ಲಿ ತಪಾಸಣೆ ಸಹ ನಡೆಸಲಾಗಿದ್ದು, ಯಾವುದೇ ಅನುಮಾನಾಸ್ಪದ ವಸ್ತುಗಳು ಸಿಕ್ಕಿಲ್ಲ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬೆಂಗಳೂರು ಮಾತ್ರವಲ್ಲದೇ ದೇಶದ ಹಲವೆಡೆ ಇರುವ ಶಾಂಗ್ರೀಲಾ ಹೋಟೆಲ್‌ಗಳ ಇ-ಮೇಲ್‌ಗೆ ಬೆದರಿಕೆ ಸಂದೇಶ ಬಂದಿರುವುದಾಗಿ ದೂರುದಾರ ತಿಳಿಸಿದ್ದಾರೆ. ಸಾಮೂಹಿಕವಾಗಿ ಸಂದೇಶ ಕಳುಹಿಸಿ ಹೋಟೆಲ್‌ನವರಿಗೆ ಬೆದರಿಕೆಯೊಡ್ಡಿರುವುದು ಗೊತ್ತಾಗಿದೆ' ಎಂದು ಮೂಲಗಳು ತಿಳಿಸಿವೆ.

ಹಣಕ್ಕೆ ಬೇಡಿಕೆ: 'ನಿಮ್ಮ ಹೋಟೆಲ್‌ನಲ್ಲಿ ಬಾಂಬ್ ಇರಿಸಿ ಸ್ಫೋಟಿಸಲಾಗುವುದು. ಹೀಗೆ ಮಾಡಬಾರದೆಂದರೆ, 10 ಸಾವಿರ ಡಾಲರ್ (₹ 8.29 ಲಕ್ಷ) ಹಣ ನೀಡಿ' ಎಂಬುದಾಗಿ ಆರೋಪಿಗಳು ಸಂದೇಶದಲ್ಲಿ ಬರೆದಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಯಾರೋ ಕಿಡಿಗೇಡಿಗಳು, ನಕಲಿ ಇ-ಮೇಲ್ ಸೃಷ್ಟಿಸಿದ್ದಾರೆ. ಅದರ ಮೂಲಕ ಸಾಮೂಹಿಕವಾಗಿ ಎಲ್ಲ ಹೋಟೆಲ್‌ಗಳಿಗೂ ಇ-ಮೇಲ್ ಕಳುಹಿಸಿ ಬೆದರಿಕೆಯೊಡ್ಡಿದ್ದಾರೆ. ತಾಂತ್ರಿಕ ಪುರಾವೆಗಳನ್ನು ಆಧರಿಸಿ ಆರೋಪಿಗಳನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

ಕರ್ನಾಟಕ ಸುವರ್ಣ ಮಹೋತ್ಸವ ಸಿದ್ಧತೆಗೆ ವಿಭಾಗವಾರು ಸಭೆ

ಬೆಂಗಳೂರು: ನ. 1 ರಿಂದ ಒಂದು ವರ್ಷ 'ಕರ್ನಾಟಕ ನಾಮಕರಣ ಸುವರ್ಣ ಮಹೋತ್ಸವ' ಆಚರಿಸಲಾಗುವುದು. ಇದರ ಸಿದ್ಧತೆಗಾಗಿ ಕಂದಾಯ ವಿಭಾಗವಾರು ಸಾಹಿತಿಗಳು ಮತ್ತು ಕಲಾವಿದರ ಸಭೆ ನಡೆಸಿ, ಸಲಹೆ ಪಡೆಯಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ವಿಧಾನಸೌಧದಲ್ಲಿ ಬುಧವಾರ ಸಾಹಿತಿಗಳು, ರಂಗಕರ್ಮಿಗಳು ಮತ್ತು ಕಲಾವಿದರ ಜತೆ ಸಮಾಲೋಚನಾ ಸಭೆ ನಡೆಸಿದ ಬಳಿಕ ಅವರು, 'ಆಗಸ್ಟ್ 22 ಕ್ಕೆ ಬೆಳಗಾವಿ ವಿಭಾಗದ ಸಭೆ, ಆ.25 ಕ್ಕೆ ಮೈಸೂರು ವಿಭಾಗ ಮತ್ತು ಆ.28 ರಂದು ಕಲಬುರಗಿ ವಿಭಾಗದ ಸಭೆ ನಡೆಸಲಾಗುವುದು' ಎಂದರು.

ಗೂಂಡಾ ಕಾಯ್ದೆ: ಪುನೀತ್ ಕೆರೆಹಳ್ಳಿ ಸಿಸಿಬಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರ ರಕ್ಷಣಾ ಪಡೆ ಅಧ್ಯಕ್ಷ ಪುನೀತ್ ಕೆರೆಹಳ್ಳಿ ವಿರುದ್ಧ ಗೂಂಡಾ ಕಾ ಯ್ದೆ ಯ ಡಿ ಪ್ರಕರಣ ದಾಖಲಿಸಲಾಗಿದ್ದು, ಸಿಸಿಬಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಪುನೀತ್ ವಿರುದ್ಧ ರಾಜ್ಯದ 11 ಠಾಣೆಗಳಲ್ಲಿ ಎಫ್‌ಐಆರ್ ದಾಖಲಾಗಿತ್ತು. ಕೆಲ ಪ್ರಕರಣಗಳಲ್ಲಿ ಶಿಕ್ಷೆ ಆಗಿತ್ತು. ಅಪರಾಧ ಪ್ರಕರಣಗಳಲ್ಲಿ ಪದೇ ಪದೇ ಭಾಗಿಯಾಗುತ್ತಿರುವುದರಿಂದ ಪುನೀತ್ ವಿರುದ್ಧ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಹಾಸನ ಜಿಲ್ಲೆಯ ಆಲೂರು ತಾಲ್ಲೂಕಿನ ಕೆರೆಹಳ್ಳಿಯ ಪುನೀತ್, ನಗರದ ಜೆ.ಪಿ.ನಗರ 7ನೇ ಹಂತದಲ್ಲಿ ವಾಸವಿದ್ದ. ರಾಷ್ಟ್ರ ರಕ್ಷಣಾ ಪಡೆ ಹೆಸರಿನಲ್ಲಿ ಕೋಮುಸೌಹಾರ್ದಕ್ಕೆ ಧಕ್ಕೆ ತರುತ್ತಿದ್ದ. ಎಲ್ಲ ಕೃತ್ಯಗಳ ಬಗ್ಗೆ ವರದಿ ಸಿದ್ಧಪಡಿಸಿ ವಶಕ್ಕೆ ಪಡೆಯಲಾಗಿದೆ' ಎಂದು ತಿಳಿಸಿವೆ.

'ಕಾರ್ಯಕರ್ತರಿಗೆ ಪೊಲೀಸ್ ಕಿರುಕುಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರದ ನೀತಿ, ಕಾರ್ಯಕ್ರಮಗಳನ್ನು ಸಾಮಾಜಿಕ ಜಾಲತಾಣದಲ್ಲಿ ಪ್ರಶ್ನಿಸುವ ನಮ್ಮ ಪಕ್ಷದ ಕಾರ್ಯಕರ್ತರನ್ನು ಪೊಲೀಸರು ಹೆದರಿಸಿ ಕಿರುಕುಳ ನೀಡುತ್ತಿದ್ದಾರೆ' ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ, ಮತ್ತು ವಿಧಾನಪರಿಷತ್ ಸದಸ್ಯ ಎನ್. ರವಿಕುಮಾರ್ ಆರೋಪಿಸಿದ್ದಾರೆ.

ಈ ಸಂಬಂಧ ಶುಕ್ರವಾರ ಉನ್ನತ ಪೊಲೀಸ್ ಅಧಿಕಾರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದರು. ಕಾಂಗ್ರೆಸ್ ಸರ್ಕಾರದ ನಿರ್ದೇಶನದ ಮೇರೆಗೆ ಪೊಲೀಸರು ಕಾರ್ಯಕರ್ತರನ್ನು ಹೆದರಿಸುವ ಕೆಲಸದಲ್ಲಿ ತೊಡಗಿದ್ದಾರೆ ಎಂದು ದೂರಿದರು.

'ಮಂಡ್ಯದಲ್ಲಿ ಇಬ್ಬರು ಮತ್ತು ಹಾಸನದಲ್ಲಿ ನಾಲ್ವರು ಕಾರ್ಯಕರ್ತರನ್ನು ಕಸ್ಟಡಿಗೆ ತೆಗೆದುಕೊಂಡಿದ್ದಾರೆ. ಈ ರೀತಿ ವಶಕ್ಕೆ ತೆಗೆದುಕೊಂಡವರನ್ನು 10, 12, 15 ಗಂಟೆ ವಿಚಾರಣೆ ನಡೆಸಿ ಬಿಡುತ್ತಿದ್ದಾರೆ. ರಾಜ್ಯ ಸರ್ಕಾರದ ಭ್ರಷ್ಟಾಚಾರ, ಲಂಚಗುಳಿತನ ಪ್ರಶ್ನಿಸುವ ಮತ್ತು ಟೀಕಿಸುವ ಹಕ್ಕು ಎಲ್ಲರಿಗೂ ಇದೆ. ಜಾಲತಾಣದಲ್ಲಿ ಸಕ್ರಿಯವಾಗಿರುವ ನಮ್ಮ ಕಾರ್ಯಕರ್ತರ ಮನೆಗೆ ಹೋಗಿ ಠಾಣೆಗೆ ಕರೆದೊಯ್ಯುತ್ತಿದ್ದಾರೆ' ಎಂದರು.

ಸಾಮಾಜಿಕ ಜಾಲತಾಣದಲ್ಲಿ ಕಾಂಗ್ರೆಸ್ ಅನ್ನು ಟೀಕಿಸಿ ಪೋಸ್ಟ್ ಮಾಡಲಾಗಿದೆ. ಸುಳ್ಳು ಪೋಸ್ಟ್ ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ. ಆರೋಪಗಳ ಬಗ್ಗೆ ತನಿಖೆ ಮಾಡಲಿ. ಆದರೆ, ಕಾರ್ಯಕರ್ತರನ್ನು ಕರೆದುಕೊಂಡು ಹೋಗಿ ಬೆದರಿಸುವುದು ಸರಿಯಲ್ಲ ಎಂದು ಆಕ್ಷೇಪಿಸಿದರು.

'ಅಪರಾಧ ವಿಭಾಗದ ಡಿಸಿಪಿ ಬದ್ರಿನಾಥ್ ಅವರನ್ನು ಭೇಟಿ ಮಾಡಿದ್ದೇವೆ. ಕಾರ್ಯಕರ್ತರಿಂದ ಮಾಹಿತಿ ಪಡೆದು ಬಿಟ್ಟು ಕಳಿಸಿದ್ದೇವೆ ಎಂದು ತಿಳಿಸಿದ್ದಾರೆ. ಏನೇ ಇದ್ದರೂ ನಮ್ಮನ್ನು ಸಂಪರ್ಕಿಸಿ ಎಂದಿದ್ದೇವೆ. ಕಾರ್ಯಕರ್ತರನ್ನು ಹೆದರಿಸಬೇಡಿ ಎಂದು ಅವರಿಗೆ ಹೇಳಿದ್ದೇವೆ. ಬೆಂಗಳೂರಿನಲ್ಲಿ ಯಾರನ್ನೂ ಅರೆಸ್ಟ್ ಮಾಡಿಲ್ಲ' ಎಂದು ಪ್ರಶ್ನೆಯೊಂದಕ್ಕೆ ರವಿಕುಮಾರ್ ಅವರು ಉತ್ತರಿಸಿದರು.

ಬಿಎಂಟಿಸಿ ಬಸ್ ಡಿಕ್ಕಿ: ಸವಾರ ಸಾವು

ಬೆಂಗಳೂರು: ಬಿಎಂಟಿಸಿ ಬಸ್ಸಿನ ಚಕ್ರ ತಲೆ ಮೇಲೆ ಹರಿದು ಮಂಜುನಾಥ್ (42) ಅವರು ಶುಕ್ರವಾರ ಮೃತಪಟ್ಟಿದ್ದು, ನಿರ್ಲಕ್ಷ್ಯದ ಚಾಲನೆ ಆರೋಪದಡಿ ಚಾಲಕನನ್ನು ಕಬ್ಬನ್ ಪಾರ್ಕ್ ಸಂಚಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಹೊಸಕೋಟೆಯ ಮಂಜುನಾಥ್, ಕೆಲಸ ನಿಮಿತ್ತ ದ್ವಿಚಕ್ರ ವಾಹನದಲ್ಲಿ ನಗರಕ್ಕೆ ಬಂದಿದ್ದರು. ಇದೇ ಸಂದರ್ಭದಲ್ಲಿ ಈ ಅವಘಡ ಸಂಭವಿಸಿದೆ. ಮೃತದೇಹವನ್ನು ಆಸ್ಪತ್ರೆಯಲ್ಲಿ ಇರಿಸಲಾಗಿದ್ದು, ಸಂಬಂಧಿಕರಿಗೆ ಮಾಹಿತಿ ನೀಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಮಂಜುನಾಥ್ ಅವರು ಸಂಜೆ ಸಿದ್ದಯ್ಯ ಜಂಕ್ಷನ್ ಬಳಿ ದ್ವಿಚಕ್ರ ವಾಹನದಲ್ಲಿ ಹೊರಟಿದ್ದರು. ಇದೇ ಮಾರ್ಗವಾಗಿ ಹೊರಟಿದ್ದ ಬಿಎಂಟಿಸಿ ಬಸ್ಸಿನ ಚಾಲಕ, ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ಚಾಲನೆ ಮಾಡಿದ್ದರು. ದ್ವಿಚಕ್ರ ವಾಹನಕ್ಕೆ ಬಸ್ ಡಿಕ್ಕಿ ಹೊಡೆದಿತ್ತು. ರಸ್ತೆಯಲ್ಲಿ ವಾಹನ ಸಮೇತ ಬಿದ್ದಿದ್ದ ಮಂಜುನಾಥ್ ತಲೆ ಮೇಲೆಯೇ ಬಸ್ಸಿನ ಮುಂಭಾಗದ ಚಕ್ರ ಹರಿದಿತ್ತು' ಎಂದು ತಿಳಿಸಿದರು.

'ತೀವ್ರ ರಕ್ತಸ್ರಾವದಿಂದ ಮಂಜುನಾಥ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಪಘಾತದ ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋಗಿ ಬಸ್ ಜಪ್ತಿ ಮಾಡಲಾಗಿದೆ. ಬಿಎಂಟಿಸಿ ಚಾಲಕನನ್ನು ಬಂಧಿಸಿ, ಆತನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಹೇಳಿದರು.

ಕೊಡಿಯೇರಿ ಪ್ರಕರಣ: ಮಧ್ಯಂತರ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣ ಅಕ್ರಮ ವರ್ಗಾವಣೆ ಪ್ರಕರಣದ ಆರೋಪಿಯಾಗಿರುವ ಕೇರಳದ ಸಿಪಿಎಂ ನಾಯಕ ಕೊಡಿಯೇರಿ ಬಾಲಕೃಷ್ಣನ್ ಪುತ್ರ ಬಿನೇಶ್ ಕೊಡಿಯೇರಿ ವಿರುದ್ಧದ ಜಾರಿ ನಿರ್ದೇಶನಾಲಯದ ಕಾನೂನು ಪ್ರಕ್ರಿಯೆಗೆ ರಾಜ್ಯ ಹೈಕೋರ್ಟ್ ಗುರುವಾರ ಮಧ್ಯಂತರ ತಡೆ ನೀಡಿದೆ.

ಬಿನೇಶ್ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ್ ಚಂದನ್‌ಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಅರ್ಜಿದಾರರ ಪರ ವಕೀಲರು, 'ಎನ್‌ಡಿಪಿಎಸ್ (ಮಾದಕ ಔಷಧಗಳು ಮತ್ತು ನಶೀಲಿ ಪದಾರ್ಥಗಳು) ಕಾಯ್ದೆ-1985ರ ಅಡಿ ಬಿನೇಶ್ ಆರೋಪಿಯಲ್ಲ. ಆದ್ದರಿಂದ, ಅವರ ವಿರುದ್ಧದ ಪಿಎಂಎಲ್‌ಎ) ಅಡಿಯಲ್ಲಿನ ಪ್ರಕರಣವನ್ನು ಮುಂದುವರಿಸಲಾಗದು' ಎಂದರು.

ಜಾರಿ ನಿರ್ದೇಶನಾಲಯದ ಪರ ವಕೀಲ ಪಿ.ಪ್ರಸನ್ನಕುಮಾರ್, 'ಪಿಎಂಎಲ್‌ಎ ಕಾಯ್ದೆ ಅಡಿಯಲ್ಲಿ ಅಪರಾಧಕ್ಕೆ ಕುಮ್ಮಕ್ಕು ನೀಡಿದವರನ್ನೂ ಶಿಕ್ಷೆಗೆ ಗುರಿಪಡಿಸಬೇಕಾಗುತ್ತದೆ' ಎಂದು ಪ್ರತಿಪಾದಿಸಿದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠವು, 'ಮುಂದಿನ ವಿಚಾರಣೆಯವರೆಗೆ ತಡೆ ನೀಡಲಾಗಿದೆ' ಎಂದು ಆದೇಶಿಸಿತು. ಆರೋಪ ನಿಗದಿ ಮಾಡುವ ಪ್ರಕ್ರಿಯೆಯನ್ನು ವಿಚಾರಣಾ ನ್ಯಾಯಾಲಯ ಇದೇ 18ಕ್ಕೆ ನಿಗದಿಪಡಿಸಿತ್ತು.

ಮೂವರು ಬಾಂಗ್ಲಾ ಪ್ರಜೆಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದೊಳಗೆ ಅಕ್ರಮವಾಗಿ ನುಸುಳಿದ್ದ ಬಾಂಗ್ಲಾ ದೇಶದ ಮೂವರು ಪ್ರಜೆಗಳನ್ನು ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು ಬಂಧಿಸಿದ್ದಾರೆ. ಸದ್ಯ ಮೂವರು ನ್ಯಾಯಾಂಗ ಬಂಧನದಲ್ಲಿದ್ದಾರೆ.

'ಅಬ್ದುಲ್ ಖಾದಿರ್ ತಾಲೂಕ್ದಾರ್, ಮೊಹಮ್ಮದ್ ಜಾಹೀದ್ ಹಾಗೂ ಖಲೀಲ್ ಚಪ್ರಾಸಿ ಬಂಧಿತರು. ಎನ್‌ಐಎ ಅಧಿಕಾರಿಗಳ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

40 ಜನ ಅಕ್ರಮ ವಾಸ: 'ಅಬ್ದುಲ್ ಖಾದಿರ್ ಹಾಗೂ ಇತರರು, ಮಧ್ಯವರ್ತಿಗಳಿಗೆ ತಲಾ ₹ 20 ಸಾವಿರ ನೀಡಿ ದೇಶದೊಳಗೆ ನುಸುಳಿದ್ದರು. ಬೆಂಗಳೂರಿಗೆ ಬಂದು, ನಕಲಿ ಗುರುತಿನ ಚೀಟಿಗಳನ್ನು ಮಾಡಿಸಿಕೊಂಡಿದ್ದರು' ಎಂದು ಪೊಲೀಸರು ತಿಳಿಸಿದರು.

'ಅಬ್ದುಲ್ ಜೊತೆಯಲ್ಲಿ 40 ಮಂದಿ ಅಕ್ರಮವಾಗಿ ನುಸುಳಿದ್ದು, ಎಲ್ಲರೂ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಸ್ವಚ್ಛತೆ, ಕಾರ್ಮಿಕರಾಗಿ ಕೆಲಸ ಮಾಡಿ ಕೊಂಡಿದ್ದಾರೆ. ಇವರ ಹೆಸರು, ವಿವರಗಳನ್ನು ಎನ್‌ಐಎ ಅಧಿಕಾರಿಗಳು ಮಾಹಿತಿ ನೀಡಿದ್ದು, ಎಲ್ಲರನ್ನೂ ಪತ್ತೆ ಮಾಡಬೇಕಿದೆ' ಎಂದು ಹೇಳಿದರು.

ತನಿಖೆ ವೇಳೆ ಮಾಹಿತಿ: 'ವಿಧ್ವಂಸಕ ಕೃತ್ಯಕ್ಕೆ ಸಂಚು ರೂಪಿಸಿದ್ದ ಪ್ರಕರಣದ ತನಿಖೆ ನಡೆಸುತ್ತಿರುವ ಎನ್‌ಐಎ ಅಧಿಕಾರಿಗಳಿಗೆ ಅಕ್ರಮ ವಾಸಿಗಳ ಬಗ್ಗೆ ಮಾಹಿತಿ ಸಿಕ್ಕಿತ್ತು. ಅದರನ್ವಯ ಕಾರ್ಯಾಚರಣೆ ನಡೆಸಿ ಅಕ್ರಮವಾಸಿಗಳನ್ನು ಪತ್ತೆ ಮಾಡಿದ್ದಾರೆ' ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿಗಳು

ಯುವತಿ ಮೃತದೇಹ ಪತ್ತೆ: ಕೊಲೆ ಶಂಕೆ

ಬೆಂಗಳೂರು: ಮಹದೇವಪುರ ಠಾಣೆ ವ್ಯಾಪ್ತಿಯಲ್ಲಿ ಮಹಾನಂದಾ (21) ಅವರ ಮೃತದೇಹ ಶುಕ್ರವಾರ ಬೆಳಿಗ್ಗೆ ಪತ್ತೆಯಾಗಿದ್ದು, ಕೊಲೆ ಶಂಕೆ ವ್ಯಕ್ತವಾಗಿದೆ.

'ಕಲಬುರಗಿಯ ಮಹಾನಂದಾ, ಕೆಲಸ ಅರಸಿ ಸಹೋದರಿ ಜೊತೆ ನಗರಕ್ಕೆ ಬಂದಿದ್ದರು. ಪೆಟ್ರೋಲ್ ಬಂಕ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದರು. ಆ.10ರಂದು ನಾಪತ್ತೆಯಾಗಿದ್ದರು. ಇವರ ಶವ ಮನೆ ಬಳಿ ಪತ್ತೆಯಾಗಿದೆ. ಶವದ ಕತ್ತಿನ ಭಾಗದಲ್ಲಿ ಗಾಯ ಗುರುತು ಇದೆ. ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಮಹಾನಂದಾ ಅವರು ಗುರುವಾರ ಕೆಲಸಕ್ಕೆ ಹೋಗಿರಲಿಲ್ಲ. ಮನೆಯಲ್ಲೇ ಇದ್ದರು. ಸಂಜೆ ಹೊರಗಡೆ ಹೋಗಿದ್ದರು. ರಾತ್ರಿಯಾದರೂ ವಾಪಸು ಬಂದಿರಲಿಲ್ಲ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನಾಪತ್ತೆ ಬಗ್ಗೆ ಅವರ ಸಹೋದರಿ ದೂರು ನೀಡಿದ್ದರು' ಎಂದು ತಿಳಿಸಿವೆ.

ಪೇಂಟಿಂಗ್ ಕೆಲಸಕ್ಕೆ ಬಂದು ಚಿನ್ನ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೇಂಟಿಂಗ್ ಕೆಲಸಕ್ಕೆಂದು ಹೋಗಿ ಮನೆಯಿಂದ ಚಿನ್ನಾಭರಣ ಕದ್ದೊಯ್ದಿದ್ದ ಆರೋಪಿ ಉಮೇಶ್‌ಪ್ರಸಾದ್ ಜಾಧವ (32) ಅವರನ್ನು ಬಸವನಗುಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಉತ್ತರ ಪ್ರದೇಶದ ಆರೋಪಿ ಕೆಲಸ ಹುಡುಕಿಕೊಂಡು ಬಂದಿದ್ದ. ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಕಳವು ಮಾಡಿ ಊರಿಗೆ ಪರಾರಿಯಾಗಿದ್ದ. ಇತ್ತೀಚೆಗೆ ಪುನಃ ಬೆಂಗಳೂರಿಗೆ ಬಂದಿದ್ದಾಗ ಸೆರೆ ಹಿಡಿಯಲಾಗಿದೆ' ಎಂದು ಪೊಲೀಸರು ಹೇಳಿದರು.

'ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದು, ಸಂಬಳ ಕಡಿಮೆ ಎಂದು ಕೆಲಸ ಬಿಟ್ಟಿದ್ದು, ಪೇಂಟಿಂಗ್ ಕೆಲಸ ಮಾಡುತ್ತಿದ್ದ. ಪೇಂಟಿಂಗ್ ವೇಳೆ ಮನೆಯಲ್ಲಿ ಆಭರಣವಿಟ್ಟಿರುವ ಜಾಗ ತಿಳಿದುಕೊಳ್ಳುತ್ತಿದ್ದ. ಪೇಂಟಿಂಗ್ ಕೆಲಸ ಅಂತಿಮ ಹಂತದಲ್ಲಿರುವಾಗ, ಚಿನ್ನಾಭರಣ ಕದ್ದು ಪರಾರಿಯಾಗುತ್ತಿದ್ದ. ಸದ್ಯ ಈತನಿಂದ 100 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದರು.

ಯೂಟ್ಯೂಬ್ ನೋಡಿ ಕಳ್ಳತನ

ಬೆಂಗಳೂರು: ಯೂಟ್ಯೂಬ್ ವಿಡಿಯೊ ನೋಡಿ ಹ್ಯಾಂಡಲ್ ಲಾಕ್ ಮುರಿಯುವುದನ್ನು ಕಲಿತು ಬೈಕ್ ಕಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಹನುಮಂತನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆಂಧ್ರಪ್ರದೇಶದ ಹೇಮಾದ್ರಿ ಹಾಗೂ ಪವನ್ ಬಂಧಿತರು. ಇಬ್ಬರು ಬಿ.ಟೆಕ್ ಪದವೀಧರರು. ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿರುವುದಾಗಿ ಮನೆಯಲ್ಲಿ ಹೇಳಿ ಬೆಂಗಳೂರಿಗೆ ಬಂದಿದ್ದರು. ಬಂಧಿತರಿಂದ ಎರಡು ಬೈಕ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬೈಕ್ ಹ್ಯಾಂಡಲ್ ಮುರಿಯುವುದು ಹೇಗೆ ಎಂಬುದನ್ನು ಯೂಟ್ಯೂಬ್ ವಿಡಿಯೊ ನೋಡಿ ಆರೋಪಿಗಳು ತಿಳಿದುಕೊಂಡಿದ್ದರು. ಅದರಂತೆ, ಸಂಚು ರೂಪಿಸಿ ಬೈಕ್ ಕದಿಯುತ್ತಿದ್ದರು. ನಂತರ, ಬೈಕ್‌ಗಳನ್ನು ಮಾರಿ ಹಣ ಸಂಪಾದಿಸುತ್ತಿದ್ದರು. ಇತ್ತೀಚೆಗೆ ಠಾಣೆ ವ್ಯಾಪ್ತಿಯಲ್ಲಿ ಬೈಕ್ ಕಳ್ಳತನವಾಗಿತ್ತು. ತನಿಖೆ ನಡೆಸಿದಾಗ, ಆರೋಪಿಗಳು ಸಿಕ್ಕಿಬಿದ್ದರು' ಎಂದು ತಿಳಿಸಿವೆ.

ಆನೆದಂತ ಮಾರಾಟ ಯತ್ನ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನೆ ದಂತಗಳನ್ನು ಮಾರಲು ಯತ್ನಿಸುತ್ತಿದ್ದ ಆರೋಪದಡಿ ಶ್ರೀಶೈಲ ಎಂಬಾತನನ್ನು ಆರ್.ಎಂ.ಸಿ ಯಾರ್ಡ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಜೆ.ಸಿ.ನಗರ ನಿವಾಸಿ ಶ್ರೀಶೈಲ, ಉದ್ಯಮಿಯೊಬ್ಬರ ಮನೆಯಲ್ಲಿ ಉದ್ಯಾನ ನಿರ್ವಹಣೆ ಕೆಲಸ ಮಾಡುತ್ತಿದ್ದ. ಸ್ನೇಹಿತ ಸಮೀವುದ್ದೀನ್ ನೀಡಿದ್ದ ದಂತವನ್ನು ವರ್ಷದಿಂದ ಮನೆಯಲ್ಲಿಟ್ಟುಕೊಂಡಿದ್ದ' ಎಂದು ಪೊಲೀಸರು ಹೇಳಿದರು.

'ಆರೋಪಿ ಯಶವಂತಪುರ ಕೈಗಾರಿಕೆ ಪ್ರದೇಶದ ಉಲ್ಲಾಸ್ ರಸ್ತೆಯಲ್ಲಿ ಆ.10ರಂದು ನಿಂತಿದ್ದು, ಚೀಲದಲ್ಲಿ ಆನೆದಂತಗಳಿದ್ದವು. ಸ್ಥಳೀಯರೊಬ್ಬರು ಠಾಣೆಗೆ ಮಾಹಿತಿ ನೀಡಿದ್ದರು. ಈತನಿಂದ 7.42 ಕೆ.ಜಿ ತೂಕದ 5 ದಂತಗಳನ್ನು ಜಪ್ತಿ ಮಾಡಲಾಗಿದೆ' ಎಂದರು.

'ಆನೆದಂತಗಳನ್ನು ನೀಡಿದ್ದ ಪ್ರಮುಖ ಆರೋಪಿ ಸಮೀವುದ್ದೀನ್ ವಾಪಸು ಒಯ್ದಿರಲಿಲ್ಲ. ದಂತಗಳನ್ನು ಎಲ್ಲಿಂದ ತರಲಾಗಿತ್ತು ಎಂಬುದು ಸಮೀವುದ್ದೀನ್ ಬಂಧನದ ಬಳಿಕವೇ ತಿಳಿಯಲಿದೆ' ಎಂದು ಪೊಲೀಸರು ಹೇಳಿದರು.

ಆರೋಪಿಯಿಂದ ಜಪ್ತಿ ಮಾಡಲಾದ ಆನೆದಂತಗಳು

ತಹಶೀಲ್ದಾರ್ ವಿರುದ್ಧ ನ್ಯಾಯಾಂಗ ನಿಂದನೆ

ದೋಷಾರೋಪ ನಿಗದಿಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಯಾಲಯದ ಆದೇಶದ ಹೊರತಾಗಿಯೂ ಜಮೀನು ಮಾಲೀಕರಿಗೆ ಸಾಗುವಳಿ ಚೀಟಿ ಮಂಜೂರು ಮಾಡಲು ವಿಳಂಬ ಮಾಡಿರುವ ಬೆಂಗಳೂರು ಉತ್ತರ ಹೆಚ್ಚುವರಿ ತಾಲ್ಲೂಕಿನ (ಈಗ ಯಲಹಂಕ ತಾಲ್ಲೂಕು) ತಹಶೀಲ್ದಾರ್ ವಿರುದ್ಧ ನ್ಯಾಯಾಂಗ ನಿಂದನೆಯ ದೋಷಾರೋಪ ನಿಗದಿಪಡಿಸಲು ಹೈಕೋರ್ಟ್ ನಿರ್ಧರಿಸಿದೆ.

ಸಾಗುವಳಿ ಚೀಟಿ ನೀಡಬೇಕೆಂಬ ಆದೇಶವನ್ನು ಪಾಲಿಸದ ತಹಶೀಲ್ದಾರ್ ವಿರುದ್ಧ ತಾರಹುಣಸೆ ಅಗ್ರಹಾರ ನಿವಾಸಿ ದೊಡ್ಡಣ್ಣ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿದ್ದು, ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ಶುಕ್ರವಾರ ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, 'ಸಾಗುವಳಿ ಚೀಟಿ ಮಂಜೂರು ಕೋರಿ ಅರ್ಜಿದಾರರು ಮನವಿ ಸಲ್ಲಿಸಿದರೆ, ಅದನ್ನು ಕಾನೂನು ರೀತಿ ಪರಿಶೀಲಿಸಿ ತಹಶೀಲ್ದಾರ್ ಕ್ರಮ ಕೈಗೊಳ್ಳಲಿದ್ದಾರೆ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ಇದನ್ನು ಒಪ್ಪದ ನ್ಯಾಯಪೀಠ, '2005ರಲ್ಲಿ ಸಾಗುವಳಿ ಚೀಟಿ ನೀಡುವ ತೀರ್ಮಾನವಾಗಿದೆ. ಅರ್ಜಿದಾರರು ಮನವಿಯನ್ನೂ ಕೊಟ್ಟಿದ್ದಾರೆ. ಸಾಗುವಳಿ ಚೀಟಿ ನೀಡಲು ಸಾಧ್ಯವಿಲ್ಲ ಎಂಬ ತಹಶೀಲ್ದಾರರ ಹಿಂಬರಹವನ್ನು ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ ರದ್ದುಪಡಿಸಿ, ಎರಡು ತಿಂಗಳಲ್ಲಿ ಸಾಗುವಳಿ ಚೀಟಿ ಮಂಜೂರು ಮಾಡಬೇಕು ಎಂದು 2022ರ ಸೆಪ್ಟೆಂಬರ್ 28ರಂದು ನಿರ್ದೇಶಿಸಿತ್ತು. ಆದರೆ, ಆಧಾರರಹಿತ ತಾಂತ್ರಿಕ ನೆಪ ಮುಂದಿಟ್ಟುಕೊಂಡು ತಹಶೀಲ್ದಾರ್ ಸಾಗುವಳಿ ಚೀಟಿ ನೀಡಲು ವಿಳಂಬ ಮಾಡಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿತು.

'ಈ ಪ್ರಕರಣದಲ್ಲಿ ತಹಶೀಲ್ದಾರ್‌ಗೆ ನ್ಯಾಯಾಲಯದ ಆದೇಶದ ಬಗ್ಗೆ ಗಂಭೀರತೆ ಇಲ್ಲದಿರುವುದು ಸ್ಪಷ್ಟವಾಗುತ್ತಿದೆ. ಆದ್ದರಿಂದ, ಮುಂದಿನ ವಿಚಾರಣೆ ವೇಳೆ ಅವರ ವಿರುದ್ಧ ನ್ಯಾಯಾಂಗ ನಿಂದನೆ ಆರೋಪದಡಿ ದೋಷಾರೋಪ ನಿಗದಿಪಡಿಸಲಾಗುವುದು. ಆ ದಿನ ತಹಶೀಲ್ದಾರ್ ವಿಚಾರಣೆಗೆ ಖುದ್ದು ಹಾಜರಾಗಬೇಕು' ಎಂದು ನಿರ್ದೇಶಿಸಿ ವಿಚಾರಣೆಯನ್ನು ಎರಡು ವಾರ ಮುಂದೂಡಿತು.

ಚಿತ್ರಾವಳಿ

ಸ್ವಾತಂತ್ರ್ಯ ದಿನಾಚರಣೆಯ ಆಚರಣೆ ನಿಮಿತ್ತ ಮಹಾಲಕ್ಷ್ಮಿ ಲೇಔಟ್‌ನ ಅಂಗಡಿಯೊಂದರಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಪ್ರತಿಮೆಗಳನ್ನು ಸಾಲಾಗಿ ಜೋಡಿಸುತ್ತಿರುವ ದೃಶ್ಯ. ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

ಬೆಂಗಳೂರಿನ ಇನ್‌ಸ್ಟಿಟ್ಯೂಷನ್ ಆಫ್ ಎಂಜಿನಿಯರ್ಸ್ ಸಂಸ್ಥೆ ಶುಕ್ರವಾರ ಆಯೋಜಿಸಿದ್ದ ಮೈನಿಂಗ್ ಎಂಜಿನಿಯರ್‌ಗಳ 33ನೇ ರಾಷ್ಟ್ರೀಯ ಸಮಾವೇಶದಲ್ಲಿ ಡಿ.ವಿ.ಪಿಚ್ಚಮುತ್ತು ಅವರಿಗೆ ಸಚಿವ ಎಚ್‌.ಸಿ. ಮಹದೇವಪ್ಪ ಅವರು ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಿದರು. ಮೇದಾ ವೆಂಕಟಯ್ಯ, ಆರ್‌.ಗಿರೀಶ್, ಡಿಯೋ ಕುಮಾರ್, ಜಯವಿಭವ ಸ್ವಾಮಿ, ಎಂ.ಲಕ್ಷ್ಮಣ ಇದ್ದರು. – ಪ್ರಜಾವಾಣಿ ಚಿತ್ರ

ಪೀಣ್ಯ ದಾಸರಹಳ್ಳಿ ಸಮೀಪದ ಮಲ್ಲಸಂದ್ರ ವಾರ್ಡ್‌ನ ರವೀಂದ್ರನಗರದಲ್ಲಿ ₹ 20 ಲಕ್ಷ ವೆಚ್ಚದ ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಶಾಸಕ ಎಸ್‌. ಮುನಿರಾಜು ಗುದ್ದಲಿ ಪೂಜೆ ನೆರವೇರಿಸಿದರು. ದಾಸರಹಳ್ಳಿ ಕ್ಷೇತ್ರದ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಟಿ. ಶಿವಕುಮಾರ್, ವಿನೋದ್ ಗೌಡ, ಎಸ್ಸಿ ಎಸ್ಟಿ ವಿಭಾಗದ ಅಧ್ಯಕ್ಷ ಗಂಗಾಧರ್, ಮುಖಂಡ ಡಾ. ಸುರೇಶ್ ಕೆಂಪೇಗೌಡ, ವಾರ್ಡ್ ಅಧ್ಯಕ್ಷ ಗಂಗರಾಜು, ಪ್ರಧಾನ ಕಾರ್ಯದರ್ಶಿ ರಘು ಹಾಗೂ ಬಿಬಿಎಂಪಿ ಅಧಿಕಾರಿಗಳು ಇದ್ದರು.

ಮಣಿಪುರದಲ್ಲಿ ಶಾಂತಿ ಸ್ಥಾಪಿಸುವಂತೆ ಒತ್ತಾಯಿಸಿ ಡಿಎಂಕೆ ಯುವ ಘಟಕದ ಸದಸ್ಯರು ಶುಕ್ರವಾರ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ



ಹೆಣ್ಣುಮಕ್ಕಳು ಎಳವೆಯಲ್ಲಿ ಋತುಮತಿಯಾಗುತ್ತಿದ್ದಾರೆ. ಮೊದಲ ಬಾರಿಗೆ ಋತುಮತಿಯಾಗುವವರು ಶಾಲೆ, ಮನೆಗಳಲ್ಲಿ ಕಸಿವಿಸಿ ಅನುಭವಿಸುತ್ತಿರುವ ಉದಾಹರಣೆಗಳಿವೆ. ಸಂತೈಸುವಿಕೆ, ಮುಕ್ತ ಹಾಗೂ ಆಪ್ತ ವಾತಾವರಣವಿದ್ದರೆ ಹೆಣ್ಣುಮಕ್ಕಳ ‘ ಆ ದಿನ‘ಗಳು ತ್ರಾಸದಾಯಕವಾಗುವುದಿಲ್ಲ, ಈ ಬಗ್ಗೆ ಯಾರಿಗೆ, ಹೇಗೆ ಅರಿವು ಮೂಡಿಸಬೇಕು? ಈ ಕುರಿತು ಶಿವಮೊಗ್ಗದ ರೋಗಲಕ್ಷಣ ಶಾಸ್ತ್ರಜ್ಞೆ (ಪೆಥಾಲಜಿಸ್ಟ್) ಡಾ. ವಿನಯಾ ಶ್ರೀನಿವಾಸ್ ಒಂದಿಷ್ಟು ಕಿವಿಮಾತುಗಳನ್ನು ಹೇಳಿದ್ದಾರೆ.

ಮೊದಲ ಆ ದಿನ ಇರಲಿ ಸಾಂತ್ವನ

ಡಾ. ವಿನಯಾ ಶ್ರೀನಿವಾಸ್

ಗೊಂಬೆಗಳ ಮಧ್ಯೆ ಆಟವಾಡಿಕೊಂಡಿರುತ್ತಿದ್ದ ಮೂರನೇ ಕ್ಲಾಸಿನ ಪುಟ್ಟ ಬಾಲಕಿ ಸಮನ್ವಾಳಿಗೆ (ಹೆಸರು ಬದಲಾಯಿಸಲಾಗಿದೆ) ಒಂದು ವಾರದಿಂದ ಕಿಬ್ಬೊಟ್ಟೆ ನೋವು. ತಿಂದು ಅಜೀರ್ಣವಾಗಿರಬೇಕು ಎಂದುಕೊಂಡು ಪೋಷಕರು ಸುಮ್ಮನಾದರು. ಕೆಲ ದಿನ ಕಳೆದರೂ ಮನೆ ಮದ್ದಿಗೂ ಕಡಿಮೆಯಾಗದ ಆ ನೋವು ವೈದ್ಯರಲ್ಲಿ ತೋರಿಸಿ ಮದ್ದು ಪಡೆಯಬೇಕು ಎನ್ನುವಷ್ಟರಲ್ಲಿ ಋತುಸ್ರಾವ!.

ಹಾ! ಎಂಟು ವರ್ಷದ ಪೋರಿ ಋತುಮತಿಯಾಗುವುದಾ? ಎಂದು ಹುಬ್ಬೇರಿಸುವಂತಿಲ್ಲ. ಈಗೀಗ ಇಂಥ ಪ್ರಕರಣಗಳು ಹೆಚ್ಚುತ್ತಿವೆ. ಎಳವೆಯಲ್ಲಿ ಹೆಣ್ಣುಮಕ್ಕಳು ಋತುಮತಿಯಾಗುತ್ತಿದ್ದಾರೆ.

ಹಿಂದೆ ಹದಿನಾರರ ಹರೆಯದಲ್ಲಿ ಕಾಣಿಸಿಕೊಳ್ಳುತ್ತಿದ್ದ ಮೊದಲ ಋತುಸ್ರಾವ ಈ ದಿನಗಳಲ್ಲಿ ಎಂಟು, ಹತ್ತು ವರ್ಷಕ್ಕೆ ಕಾಣಿಸಿಕೊಳ್ಳುತ್ತಿದೆ. ಆದರೆ, ಅದಕ್ಕೆ ಪೂರಕವಾಗಿ ಮಕ್ಕಳಿಗೆ ಮಾರ್ಗದರ್ಶನ ಮಾಡಲು ಪೋಷಕರು ಮತ್ತು ಶಾಲಾ ಶಿಕ್ಷಕರು ಅಣಿಯಾಗಿದ್ದಾರೆಯೇ ಎಂದು ಯೋಚಿಸಿದರೆ ಉತ್ತರ ಸಿಗುವುದು ಕಷ್ಟವೇ.

ಇತ್ತೀಚೆಗೆ ಯುನೆಸ್ಕೊ ನಡೆಸಿದ ಸಮೀಕ್ಷೆ/ಅಧ್ಯಯನದ ಪ್ರಕಾರ ಋತುಮತಿಯಾಗುವ ವಿಷಯದ ಬಗ್ಗೆ ಕಿಶೋರಿಯರಿಗೆ, ಶಿಕ್ಷಕರಾಗಲಿ, ಪೋಷಕರಾಗಲಿ ಮನಸ್ಸು ಬಿಚ್ಚಿ ತಿಳಿ ಹೇಳಿದಂತೆ ಕಾಣುತ್ತಿಲ್ಲ. ಆ ಕಾರಣಕ್ಕಾಗಿಯೇ ಎಷ್ಟೋ ಹೆಣ್ಣು ಮಕ್ಕಳು ಮೊದಲ ಬಾರಿಗೆ ಋತುಸ್ರಾವ ಕಂಡಾಗ ಗಾಬರಿಯಾಗುತ್ತಾರೆ ಮತ್ತು ಭಯಪಡುತ್ತಾರೆ. ಈ ನಿಟ್ಟಿನಲ್ಲಿ ಶಿಕ್ಷಕರಿಂದಲೂ ಕಿಶೋರಿಯರಿಗೆ ಅಗತ್ಯ ಸ್ಪಂದನೆ ಸಿಗುತ್ತಿಲ್ಲ. ಈ ಎಲ್ಲ ಅಂಶಗಳೂ ವರದಿಯಲ್ಲಿ ಉಲ್ಲೇಖವಾಗಿದೆ.

ಮೂಢನಂಬಿಕೆಗಳನ್ನು ಬಿಡಿ

ಹೆಣ್ಣು ಮಕ್ಕಳಲ್ಲಿ ಕಂಡು ಬರುವ ಈ ಸಹಜ ಶಾರೀರಿಕ ಪ್ರಕ್ರಿಯೆಯೊಂದರ ಬಗ್ಗೆ ಅನೇಕ ಮೂಢನಂಬಿಕೆಗಳು ಮತ್ತು ತಪ್ಪು ಕಲ್ಪನೆಗಳು ಇಂದಿಗೂ ಗ್ರಾಮೀಣ ಪ್ರದೇಶಗಳಲ್ಲಿ ಇವೆ. ಬಹಳ ಹಿಂದಿನಿಂದಲೂ ಅಂಟಿಕೊಂಡಿರುವ ಈ ಅಪನಂಬಿಕೆಗಳನ್ನು ಒಮ್ಮೆಲೇ ಕಿತ್ತೊಗೆಯುವುದು ಕಷ್ಟ ಸಾಧ್ಯ. ಆದರೆ ಎಳವೆಯಿಂದಲೇ ಮಕ್ಕಳಿಗೆ ಈ ಬಗ್ಗೆ ವೈಜ್ಞಾನಿಕ ಮತ್ತು ಸಮರ್ಪಕ ಅರಿವು ಮೂಡಿಸಿದರೆ ಮುಂದೆ ಮೌಢ್ಯರಹಿತ ಸುದಿನಗಳನ್ನು ಕಾಣಬಹುದು.

ಅಂತೆಯೇ ಮನೆಯಲ್ಲಿ ರೂಢಿಸಿಕೊಂಡಿರುವ ಕೆಲವು ವಿಧಿವಿಧಾನಗಳನ್ನು ಒಮ್ಮೆಗೇ ವಿರೋಧಿಸದಿರಲು ಮಕ್ಕಳಿಗೆ ತಿಳಿಸಬೇಕು. ಹಂತ ಹಂತವಾಗಿ ಮಾತ್ರವೇ ಇದರಿಂದ ಸಂಪೂರ್ಣ ಹೊರಬರುವುದು ಸಾಧ್ಯ ಎಂದೂ ಕಿಶೋರಿಯರಿಗೆ ತಿಳಿಸಬೇಕು.

ಯಾರು ಮಾರ್ಗದರ್ಶನ ನೀಡಬೇಕು?

ಈ ಹಂತದಲ್ಲಿ ತಾಯಿಯ ಮಾರ್ಗದರ್ಶನ ಬಹಳ ಮುಖ್ಯ. ತಾಯಿ ಅಥವಾ ಮನೆಯಲ್ಲಿ ಹಿರಿಯ ಅಕ್ಕ, ಅಜ್ಜಿ ಹೀಗೆ ಯಾರಾದರೂ ಮಾರ್ಗದರ್ಶನ ನೀಡಬಹುದು. ಮನೆಯಲ್ಲಿ ಬೆಳೆಯುತ್ತಿರುವ ಹೆಣ್ಣುಮಕ್ಕಳನ್ನು ತಾಯಂದಿರು ಸೂಕ್ಷ್ಮವಾಗಿ ಗಮನಿಸುತ್ತಿರಬೇಕು. ಕಿಶೋರಿಯರ ಕಂಕುಳಲ್ಲಿ ಮತ್ತು ಜನನಾಂಗದ ಭಾಗದಲ್ಲಿ ಕೂದಲಿನ ಬೆಳವಣಿಗೆ ಹಾಗೂ ಸ್ತನಗಳು ಗಾತ್ರದಲ್ಲಿ ದೊಡ್ಡದಾಗುವ ಲಕ್ಷಣಗಳು ಕಂಡಾಗ ಅಮ್ಮಂದಿರು ಮೊದಲು ಮಕ್ಕಳಿಗೆ ಆಪ್ತರಾಗಲು ಪ್ರಯತ್ನಿಸಬೇಕು. ಅವರನ್ನು ಕರೆದು ಯಾವುದೇ ಮುಜುಗರವಿಲ್ಲದೆ ಋತುಚಕ್ರ ಎಂಬ ಸಹಜ ಮಾಸಿಕ ಪ್ರಕ್ರಿಯೆಯ ಬಗ್ಗೆ ತಿಳಿ ಹೇಳಬೇಕು.

ಇವೆಲ್ಲವನ್ನೂ ತಿಳಿಸಿ ಹೇಳಬೇಕು

- ಮುಂದೊಂದು ದಿನ ಋತುಸ್ರಾವ ಕಾಣಿಸಿಕೊಳ್ಳಬಹುದು. ಮೂತ್ರ ಮಾಡುವ ಭಾಗದಲ್ಲಿ ರಕ್ತಸ್ರಾವ ಕಂಡರೆ ಭಯ ಅಥವಾ ಆತಂಕ ಪಡುವ ಅಗತ್ಯವಿಲ್ಲ. ಮನೆಯಲ್ಲಿದ್ದಾಗ ಕಾಣಿಸಿದರೆ ಕೂಡಲೇ ತಾಯಿಯ ಗಮನಕ್ಕೆ ಅಥವಾ ಶಾಲೆಯಲ್ಲಿದ್ದಾಗ ಕಂಡು ಬಂದರೆ ತರಗತಿಯ ಶಿಕ್ಷಕಿಯ ಗಮನಕ್ಕೆ ತರಬೇಕು.
- ಅದೊಂದು ಸಹಜ ಮಾಸಿಕ ಪ್ರಕ್ರಿಯೆ. ಅದು ಅಪವಿತ್ರ ಅಥವಾ ಮೈಲಿಗೆಯಲ್ಲ. ಅದು ಕಾಯಿಲೆಯೂ ಅಲ್ಲ, ಹೆಣ್ಣು ಮಕ್ಕಳನ್ನು ಮುಂದಿನ ಸಂತಾನೋತ್ಪತ್ತಿ ಪ್ರಕ್ರಿಯೆಗೆ ಅಣಿ ಮಾಡುವ ಶಾರೀರಿಕ ಬದಲಾವಣೆ ಅಷ್ಟೇ.
- ಆ ಸಮಯದಲ್ಲಿ ಸ್ರಾವ ಹೊರಗಿನ ಬಟ್ಟೆಗಳಿಗೆ ಹರಿಯದಂತೆ ಬಟ್ಟೆ ಅಥವಾ ಪ್ಯಾಡ್‌ಗಳನ್ನು ಒಳ ಉಡುಪುಗಳ ಮೇಲಿರಿಸಿ ಬಳಸುವ ವಿಧಾನವನ್ನು ಆ ಮಕ್ಕಳಿಗೆ ತೋರಿಸಿ ಕೊಡಬೇಕು.
- ಋತುಸ್ರಾವ ಕಂಡುಬರುವ ಮೊದಲು ಅಥವಾ ಆ ಅವಧಿಯಲ್ಲಿ ಕಾಣಿಸಿಕೊಳ್ಳುವ ಕಿಬ್ಬೊಟ್ಟೆ ನೋವು ಸಾಮಾನ್ಯ. ಉತ್ತಮ ಆಹಾರ ಮತ್ತು ಆಟೋಟಗಳಲ್ಲಿ ಭಾಗವಹಿಸುವುದರಿಂದ ಅದನ್ನು ನಿಯಂತ್ರಿಸಿಕೊಳ್ಳಬಹುದು.
- ಆರರಿಂದ ಎಂಟು ಗಂಟೆಗೊಮ್ಮೆ ಪ್ಯಾಡ್‌ಗಳನ್ನು ಬದಲಿಸಿಕೊಳ್ಳಬೇಕು.
- ಪ್ಯಾಡ್ ಒದ್ದೆಯಾದಾಗಲೂ ಬದಲಿಸಲು ಹೇಳಬೇಕು.
- ಆ ಸಮಯದಲ್ಲಿ ಸ್ವಚ್ಛತೆ ಬಹಳ ಮುಖ್ಯ. ಋತುಸ್ರಾವವನ್ನು ತಡೆಯಲು ಬಳಸುವ ಪ್ಯಾಡ್‌ಗಳನ್ನು ಶೌಚಾಲಯದ ಗುಂಡಿಯೊಳಗೆ ಎಸೆಯಬಾರದು. ಅದಕ್ಕೆಂದೇ ಮೀಸಲಿಟ್ಟಿರುವ ಕಸದ ಬುಟ್ಟಿಯೊಳಗೆ ಕಾಗದದಲ್ಲಿ ಸುತ್ತಿ ಬಿಸಾಡಬೇಕು
- ಒಳ ಉಡುಪುಗಳನ್ನು ಸ್ವಚ್ಛವಾಗಿ ತೊಳೆದು ಬಿಸಿಲಿನಲ್ಲಿ ಒಣಗಿಸಬೇಕು. ಇದರಿಂದ ಆ ಭಾಗಕ್ಕೆ ತಗುಲುವ ಸೋಂಕನ್ನು ನಿಯಂತ್ರಿಸಬಹುದು.



ಶಿಕ್ಷಕ/ಶಿಕ್ಷಕಿಯರ ಜವಾಬ್ದಾರಿ

ನಾಲ್ಕರಿಂದ ಏಳನೆಯ ತರಗತಿಯವರೆಗಿನ ಮಕ್ಕಳಿಗೆ ಪಾಠ ಮಾಡುವ ಶಿಕ್ಷಕಿಯರು ಈ ತರಗತಿಗಳಿಗೆ ಬರುವ ವಯೋಮಾನದ ಹೆಣ್ಣು ಮಕ್ಕಳು ಋತುಮತಿಯಾಗುತ್ತಾರೆ ಎಂಬ ಅಂಶವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಈ ಮಕ್ಕಳನ್ನು ಆಗಾಗ್ಗೆ ಪ್ರತ್ಯೇಕವಾಗಿ ಕರೆದು ಕೂರಿಸಿಕೊಂಡು, ಈ ವಯೋಮಾನದಲ್ಲಿ ಆಗುವಂತಹ ಶಾರೀರಿಕ ಪ್ರಕ್ರಿಯೆಯನ್ನು ಎದುರಿಸಲು ಅವರನ್ನು ಅಣಿ ಮಾಡಬೇಕು. ‘ಯಾವುದೇ ಆತಂಕ ಪಡದೇ ತಮ್ಮನ್ನು ಭೇಟಿ ಮಾಡಿ ವಿಷಯವನ್ನು ಹೇಳಿಕೊಳ್ಳುವಂತೆ’ ತಿಳಿಸಿ ಅವರಲ್ಲಿ ಧೈರ್ಯ ತುಂಬಬೇಕು. ಒಂದೊಮ್ಮೆ ಶಾಲೆಯಲ್ಲೇ ಮೊದಲ ಬಾರಿಗೆ ಕಿಶೋರಿಯರು ಋತುಮತಿಯಾದರೆ, ಅವರನ್ನು ಮನೆಗೆ ಕಳುಹಿಸುವ ಅಥವಾ ತಂದೆ ತಾಯಿಯರನ್ನೇ ಶಾಲೆಗೆ ಕರೆಯಿಸುವ ವ್ಯವಸ್ಥೆ ಮಾಡಿಕೊಳ್ಳಬೇಕು.

ಶಿಕ್ಷಕಿಯರಿಗೆ ಕಿವಿಮಾತು

ನಿಮ್ಮ ಶಾಲೆಯ ಹತ್ತಿರ ಮಹಿಳಾ ವೈದ್ಯರಿದ್ದರೆ ಅಥವಾ ಶುಶ್ರೂಷಕರಿದ್ದರೆ ಅವರನ್ನು ಆಹ್ವಾನಿಸಿ ನಿಮ್ಮ ವಿದ್ಯಾರ್ಥಿನಿಯರಿಗೆ ಇಂತಹ ಸೂಕ್ಷ್ಮ ವಿಷಯಗಳ ಬಗ್ಗೆ ಅರಿವು ಮೂಡಿಸಬಹುದು. ಋತುಸ್ರಾವಕ್ಕೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಮತ್ತು ಆ ಅವಧಿಯಲ್ಲಿ ಮಕ್ಕಳು ವಹಿಸಬೇಕಾದ ಎಚ್ಚರಗಳ ಬಗ್ಗೆಯೂ ಅವರಿಂದ ಮಾಹಿತಿಯನ್ನು ಪಡೆಯಬಹುದು.

ಇತ್ತೀಚಿನ ದಿನಗಳಲ್ಲಿ ಋತುಸ್ರಾವವನ್ನು ಸುಲಭವಾಗಿ ನಿರ್ವಹಿಸಲು ಹೊಸ ಬಗೆಯ ಒಳ ಉಡುಪುಗಳು, ಮರುಬಳಕೆಗೆ ಯೋಗ್ಯವಾದ ಹತ್ತಿಯ ಪ್ಯಾಡ್‌ಗಳಿವೆ. ಇವುಗಳ ಬಗ್ಗೆ ವಿವರವಾದ ಮಾಹಿತಿಯನ್ನು ಹೆಣ್ಣುಮಕ್ಕಳಿಗೆ ತಿಳಿಸಬೇಕು. ಇದರಿಂದ ಅವರು ಮುಟ್ಟಿನ ನೈರ್ಮಲ್ಯದ ಬಗ್ಗೆ ಜಾಗೃತರಾಗುತ್ತಾರೆ. ಇದು ಎಲ್ಲ ಮಹಿಳೆಯರಲ್ಲಿಯೂ ಸಂಭವಿಸುವ ಸಹಜ ಕ್ರಿಯೆ ಎಂಬ ಅಂಶವನ್ನು ಮನನ ಮಾಡಿಕೊಂಡು ಅದರಿಂದ ಯಾವುದಕ್ಕೂ ವಿನಾಯಿತಿ ಪಡೆಯದೆ ಎಲ್ಲ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಮುಂದಾಗುತ್ತಾರೆ.

ಅಕಾಲದಲ್ಲಿ ಋತುಸ್ರಾವಕ್ಕೊಳಗಾಗುವ ಕಿಶೋರಿಯರಿಗೆ ಬಳಸಲು ಶಾಲೆಗಳಲ್ಲಿ ಪ್ಯಾಡ್‌ಗಳನ್ನು ಇಡುವ ವ್ಯವಸ್ಥೆಯೂ ಇರಬೇಕು. ಅವಕಾಶಗಳಿದ್ದಾಗ ಶಾಲಾ ಆಡಳಿತ ಮಂಡಳಿಯವರು ವೈದ್ಯರ ಸಂಘ ಸಂಸ್ಥೆಗಳ ನೆರವನ್ನು ಪಡೆಯಬೇಕು. ಈ ದಿನಗಳಲ್ಲಿ ಎಲ್ಲ ವೈದ್ಯ ಸಂಘಗಳಲ್ಲಿ ಮಹಿಳಾ ಘಟಕವೂ ಸಕ್ರಿಯವಾಗಿದ್ದು, ಮಹಿಳಾ ವೈದ್ಯರು ಇಂತಹ ಸಮಾಜಪರ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ಅದರ ಸದುಪಯೋ ಗವನ್ನು ಆಡಳಿತ ಮಂಡಳಿ ಹಾಗೂ ಶಿಕ್ಷಕರು ಪಡೆಯಬೇಕು.

ಶಿಕ್ಷಕಿಯರಂತೆ ಶಿಕ್ಷಕರೂ ಈ ಸೂಕ್ಷ್ಮ ವಿಷಯಗಳನ್ನು ಅರಿತಿರಬೇಕು. ಒಂದು ವೇಳೆ ಸ್ವತಃ ಕರೆದು ಆ ಬಗ್ಗೆ ಮಾತನಾಡಲು ಇರಿಸು ಮುರಿಸಾದರೆ, ಶಾಲೆಯ ಹಿರಿಯ ವಿದ್ಯಾರ್ಥಿನಿಯರ ಅಥವಾ ಇತರ ಮಹಿಳಾ ಸಿಬ್ಬಂದಿಯ ನೆರವು ಪಡೆಯಬಹುದು. ಮಕ್ಕಳ ತಾಯಂದಿರಿಗೆ ಮಾಹಿತಿಯನ್ನು ಕೊಡುವ ವ್ಯವಸ್ಥೆಯನ್ನು ಶೀಘ್ರವಾಗಿ ಮಾಡಬಹುದು.

ಗಂಡುಮಕ್ಕಳಿಗೂ ಅರಿವು

ಋತುಸ್ರಾವದ ಬಗ್ಗೆ ಹೆಣ್ಣುಮಕ್ಕಳಂತೆ ಗಂಡುಮಕ್ಕಳಲ್ಲೂ ಅರಿವು ಮೂಡಿಸಬೇಕು. ಮನೆಯಲ್ಲಿ ತಾಯಿ, ಶಾಲೆಯಲ್ಲಿ ಶಿಕ್ಷಕಿಯರು ಮಾಡುವಂತಾಗಬೇಕು. ಋತುಸ್ರಾವದ ಬಗ್ಗೆ ಸರ್ಮಪಕವಾದ, ವೈಜ್ಞಾನಿಕವಾದ ಮಾಹಿತಿಯನ್ನು ಮಕ್ಕಳಿಗೆ ನೀಡಿದರೆ, ಅದರ ಬಗ್ಗೆ ಮುಜುಗರ, ಗೇಲಿಯ ಮಾತುಗಳು ಬರುವುದಿಲ್ಲ.

ಋತುಸ್ರಾವವಾದ ಹೆಣ್ಣುಮಕ್ಕಳ ಬಗ್ಗೆ ಗೇಲಿ ಮಾಡುವುದಾಗಲಿ, ಮನಸ್ಸಿಗೆ ಗಾಸಿ ಉಂಟು ಮಾಡುವ ಮಾತು ಗಳನ್ನಾಗಲಿ ಆಡದೇ ಅವರಿಗೆ ನೈತಿಕ ಸ್ಥೈರ್ಯ ತುಂಬುವ ಕೆಲಸ ಸಹಪಾಠಿಗಳಿಂದ, ಸಹೋದರರಿಂದ ಆಗಬೇಕು.

ಸ್ವಾತಂತ್ರ್ಯೋತ್ಸವದ ವಿಶೇಷ

ತ್ರಿವರ್ಣ ತಿನಿಸುಗಳು

ಮನಸ್ಸು ಗಡಿಬಿಡಿಯಿಲ್ಲದೇ ಸಮಾಧಾನವಾಗಿದ್ದಾಗ ಎಷ್ಟೊಂದು ಹೊಸರುಚಿಗಳು ಹೊಳೆಯುತ್ತವೆ. ಕೃತಕ ಬಣ್ಣ, ಪ್ರಿಸರ್ವೇಟಿವ್ ಬಳಸದೇ, ನಿಸರ್ಗದಲ್ಲೇ ಸಿಗುವ ಪದಾರ್ಥಗಳಿಂದಲೇ ರುಚಿ–ಅಂದ ಹೆಚ್ಚಿರುವ ತಿನಿಸುಗಳು ಹಿತವಾಗಿರುತ್ತವೆ. ಸ್ವಾತಂತ್ರ್ಯೋತ್ಸವ ಸಂಭ್ರಮದ ಹೊಸ್ತಿಲಲ್ಲಿ ನಿತ್ಯದ ನಮ್ಮ ತರಕಾರಿ, ಕಾಳುಗಳಲ್ಲಿ ಅಡಗಿರುವ ಆಕರ್ಷಕ ಬಣ್ಣ, ಪರಿಮಳದೊಂದಿಗೆ ತ್ರಿವರ್ಣ ತಿನಿಸುಗಳನ್ನು ತಯಾರಿಸಿದ್ದಾರೆ ಬಾಗಲಕೋಟೆಯ ನವನಗರದ ಜಾನಕಿ ಎಸ್. ತ್ರಿವರ್ಣ ರುಚಿಯ ತಿನಿಸುಗಳ ರೆಸಿಪಿಗಳನ್ನೂ ಇಲ್ಲಿ ಪರಿಚಯಿಸಿದ್ದಾರೆ.

ತಿರಂಗಾ ಇಡ್ಲಿ

ಬೇಕಾಗುವ ಸಾಮಗ್ರಿ: ಇಡ್ಲಿ ಹಿಟ್ಟು , ಒಂದು ಕ್ಯಾರೆಟ್, ಕೊತ್ತಂಬರಿ ಸೊಪ್ಪು ಸಣ್ಣ ಕಟ್ಟು, ಎಣ್ಣೆ, ಉದ್ದಿನ ಬೇಳೆ, ಸಾಸಿವೆ 1 ಚಮಚ, ಶುಂಠಿ ಹಸಿಮೆಣಸು ಸ್ವಲ್ಪ, ಉಪ್ಪು.

ಮಾಡುವ ವಿಧಾನ: ಉದ್ದಿನಬೇಳೆ ನೆನಸಿ ರುಬ್ಬಿ ರವೆ ಸೇರಿಸಿ ಹಿಂದಿನ ರಾತ್ರಿ ತಯಾರಿಸಿ ಇಟ್ಟಿರುವ ಇಡ್ಲಿ ಹಿಟ್ಟನ್ನು ಮೂರು ಭಾಗ ಮಾಡಬೇಕು. ಕಾಲು ಚಮಚ ಎಣ್ಣೆ ಹಾಕಿ ಕೊತ್ತಂಬರಿ ಸೊಪ್ಪು ಹಸಿಮೆಣಸು ಸ್ವಲ್ಪ ಬಾಡಿಸಿ , ಶುಂಠಿ ಸೇರಿಸಿ ರುಬ್ಬಿ ಒಂದು ಭಾಗದ ಹಿಟ್ಟಿಗೆ ಹಾಕಿ ಮಿಕ್ಸ್ ಮಾಡಬೇಕು. ಒಗ್ಗರಣೆಗೆ ಎಣ್ಣೆ ಸಾಸಿವೆ ಉದ್ದಿನಬೇಳೆ ಹಾಕಿ ರುಬ್ಬಿದ ಕ್ಯಾರಟ್ ಸೇರಿಸಿ, ಇನ್ನೊಂದು ಭಾಗದ ಹಿಟ್ಟಿಗೆ ಹಾಕಿ ಕಲಸಬೇಕು. ಬೇರೆ ಬೇರೆ ತಟ್ಟೆಗಳಿಗೆ ಈ ಮಿಶ್ರಣ ಹಾಕಿ ಹದಿನೈದು ನಿಮಿಷ ಉಗಿಯೊಳಗೆ ಬೇಯಿಸಿದರೆ, ಆಕರ್ಷಕ ಕೇಸರಿ, ಬಿಳಿ, ಹಸಿರು ಮೂರು ಬಣ್ಣದ ತಿರಂಗಾ ಇಡ್ಲಿ ರೆಡಿ.

ಕೊತ್ತಂಬರಿ ಸೊಪ್ಪಿನ ಬದಲು ಸಬ್ಬಸಿಗೆ ಬಳಸಬಹುದು. ಇದನ್ನ ಸಣ್ಣಗೆ ಕತ್ತರಿಸಿ ಒಗ್ಗರಣೆ ಹಾಕಿ ಇಡ್ಲಿ ಹಿಟ್ಟಿಗೆ ಮಿಕ್ಸ್ ಮಾಡಬೇಕು.

ಸುವರ್ಣ ಕೋಸಂಬರಿ

ನಳಪಾಕ



ಬೇಕಾಗುವ ಸಾಮಗ್ರಿ: ಕ್ಯಾರಟ್ ತುರಿ, ಕ್ಯಾಬೇಜ್, ಮೂಲಂಗಿ ಸೊಪ್ಪು, ಹಸಿ ಮೆಣಸು 2, ನಿಂಬೆ 1, ತೆಂಗಿನಕಾಯಿ ತುರಿ, ಎಣ್ಣೆ , ಸಾಸಿವೆ ಕಾಳು, ಬಿಳಿ ಎಳ್ಳು 2 ಚಮಚ, ಈರುಳ್ಳಿ 1, ಉಪ್ಪು.

ಮಾಡುವ ವಿಧಾನ: ಒಗ್ಗರಣೆಗೆ ಎಣ್ಣೆ ಹಾಕಿ ಸಾಸಿವೆ ಸ್ವಲ್ಪ, ಹಸಿಮೆಣಸು, ಎಳ್ಳು ಹಾಕಿ ಹುರಿದು, ಕ್ಯಾರೆಟ್ ಮತ್ತು ಕ್ಯಾಬೇಜ್ ತುರಿಯ ಮೇಲೆ ಸ್ವಲ್ಪ ಸ್ವಲ್ಪ ಹಾಕಿ, ಕಾಯಿತುರಿ, ಲಿಂಬು ರಸ, ಉಪ್ಪು ಸೇರಿಸಿ ಬೇರೆ ಬೇರೆ ಕಲಸಿಡಬೇಕು. ಸಣ್ಣಗೆ ಹೆಚ್ಚಿದ ಮೂಲಂಗಿ ಸೊಪ್ಪು, ಈರುಳ್ಳಿ, ಹಸಿಮೆಣಸು, ಉಪ್ಪು ಲಿಂಬು ಸೇರಿಸಿ ಕಾಯಿತುರಿ ಹಾಕಿ ಕಲಸಿದರೆ ರುಚಿಯಾದ ಸುವರ್ಣ ಕೋಸಂಬರಿ ಸವಿಯಬಹುದು.

ಅಮೃತ ಲಾಡು

ಬೇಕಾಗುವ ಸಾಮಗ್ರಿ: ತೆಂಗಿನಕಾಯಿ ತುರಿ 1 ಕಪ್, ಕ್ಯಾರೆಟ್ ತುರಿ 1ಕಪ್, ಬಟಾಣಿ ಕಾಳು 1ಕಪ್, ಸಕ್ಕರೆ 1 1/2 ಕಪ್, ಏಲಕ್ಕಿ ಪುಡಿ, ತುಪ್ಪ 1ಕಪ್, ಹಾಲು 1/2 ಕಪ್.

ಮಾಡುವ ವಿಧಾನ: ಕಾಯಿತುರಿ, ಕ್ಯಾರೆಟ್ ತುರಿ ಬೇರೆ ಬೇರೆಯಾಗಿ ಒಂದು ಚಮಚ ತುಪ್ಪದಲ್ಲಿ ಹುರಿದು, ಹಾಲು ಸ್ವಲ್ಪ ಹಾಕಿ ಬೇಯಿಸಿ, ನಾಲ್ಕು ಚಮಚ ಸಕ್ಕರೆ ಹಾಕಿ ಸ್ವಲ್ಪ ಹೊತ್ತು ಕೈಯ್ಯಾಡಿಸುತ್ತಿದ್ದರೆ ಗಟ್ಟಿ ಹದ ಬರುತ್ತದೆ. ತಣ್ಣಗೆ ಆದಮೇಲೆ ಲಾಡು ತಯಾರಿಸಿ. ನೆನಸಿದ ಬಟಾಣಿ ಕಾಳನ್ನು ರುಬ್ಬಿ ಕಾಲು ಕಪ್ಪ ತುಪ್ಪದಲ್ಲಿ ಚೆನ್ನಾಗಿ ಹುರಿದು, ಮುಕ್ಕಾಲು ಕಪ್ ಸಕ್ಕರೆ ಸೇರಿಸಿ, ಏಲಕ್ಕಿ ಪುಡಿ ಹಾಕಿ ಇನ್ನಷ್ಟು ಕೈಯಾಡಿಸಿದರೆ ಮಿಶ್ರಣ ಹದ ಬರುತ್ತದೆ. ನಂತರ ತಣ್ಣಾಗಾದ ಮೇಲೆ ಲಾಡು ಮಾಡಿ. ಮೃದುವಾಗಿರುತ್ತದೆ.

ಸ್ಪಂದನ

ಡಾ. ವೀಣಾ ಎಸ್. ಭಟ್

ವಿಳಂಬ ತಾಯ್ತನ; ತೊಂದರೆಗಳೇನು?

- **ನನಗೆ ವಯಸ್ಸು 33 ವರ್ಷ. ನನ್ನ ಪತ್ನಿಗೆ 31 ವರ್ಷ. ಇತ್ತೀಚೆಗಷ್ಟೇ ಮದುವೆಯಾಗಿದ್ದೇವೆ. ಮೂವತ್ತು ವರ್ಷ ವಯೋಮಾನದ ನಂತರದವರಿಗೆ ಫಲವಂತಿಕೆ ಕಡಿಮೆ ಎಂದು ತುಂಬಾ ಜನ ಹೇಳುತ್ತಾರೆ ? ಈಗ ನಾವು ಮಕ್ಕಳು ಹೊಂದಲು ಸಮಸ್ಯೆಯಾಗುವುದಿಲ್ಲವೇ ?**

ಹೆಸರು, ಊರು ತಿಳಿಸಿಲ್ಲ

ನಿಮಗೆ ಮತ್ತು ನಿಮ್ಮ ಮಡದಿಗೆ ಈಗಾಗಲೇ 30 ವರ್ಷ ದಾಟಿರುವುದರಿಂದ ನೀವು ತಡಮಾಡದೇ ಆದಷ್ಟು ಬೇಗನೆ ಮಗುವನ್ನು ಪಡೆಯಲು ಪ್ರಯತ್ನಿಸಿ. ಈ ಕಾಲದಲ್ಲಿ ಮಹಿಳೆಯರು ವಿದ್ಯಾಭ್ಯಾಸ, ಉದ್ಯೋಗದತ್ತ ಹೆಚ್ಚು ಗಮನ ಹರಿಸುತ್ತಿರುವುದರಿಂದ ಮದುವೆ ಕೂಡಾ ತಡವಾಗುತ್ತಿದೆ. ತಡವಾದರೂ ಬೇಗ ಮಗು ಮಾಡಿಕೊಳ್ಳಲು ಪ್ರಯತ್ನಿಸಬೇಕು. ನಿಮ್ಮ ಮಡದಿಗೆ ನಿಯಮಿತವಾಗಿ ಫೋಲಿಕ್ ಆಸಿಡ್ 5ಮಿಲಿ.ಗ್ರಾಂ ಮಾತ್ರೆ ತೆಗೆದುಕೊಳ್ಳುತ್ತಿರಲು ತಿಳಿಸಿ (ಗರ್ಭಧಾರಣೆಗೂ ಕನಿಷ್ಠ 6 ವಾರಗಳ ಮೊದಲೇ ಅವರು ಈ ಮಾತ್ರೆಗಳನ್ನ ಸೇವಿಸುತ್ತಿರಬೇಕು). ಅವರ ದೇಹದ ತೂಕ ಹೆಚ್ಚಿದ್ದರೆ, ಕಡಿಮೆ ಮಾಡಿಕೊಳ್ಳಬೇಕು.

30 ವರ್ಷಗಳ ನಂತರ ಮಹಿಳೆಯರಲ್ಲಿ ಸಂತಾನೋತ್ಪತ್ತಿ ಪ್ರಕ್ರಿಯೆಗಳ ಕ್ಷಮತೆ ಕಡಿಮೆಯಾಗುತ್ತಾ ಹೋಗುತ್ತದೆ. ವಯಸ್ಸಾದ ಹಾಗೆ ‘ಅಂಡಾಶಯದ ಮೀಸಲು‘ (ಒವೆರಿಯನ್ ರಿಸರ್ವ) ಕಡಿಮೆಯಾಗುತ್ತದೆ. ಅಂದರೆ ಅಂಡಾಶಯದ ಕೋಶಿಕೆಗಳು ಬೆಳವಣಿಗೆ ಹೊಂದಿ ಅಂಡೋತ್ಪತ್ತಿಯಾಗುವ ಪ್ರಕ್ರಿಯೆ ಕಡಿಮೆಯಾಗುತ್ತಾ ಹೋಗುತ್ತದೆ. ಈ ಬಗ್ಗೆ ನಿಮಗೆ ಅರಿವಿರಬೇಕು ಹಾಗೂ ತಡವಾಗಿ ತಾಯ್ತನವಾಗುವುದರಿಂದ ಉಂಟಾಗುವ ತೊಡಕುಗಳ ಬಗ್ಗೆ ನಿಮ್ಮಿಬ್ಬರಿಗೆ ಹಾಗೂ ಕುಟುಂಬದವರು ತಿಳಿದಿರಬೇಕು.

ತಡ ತಾಯ್ತನದ ಪರಿಣಾಮ

ತಡವಾಗಿ ತಾಯ್ತನ ಉಂಟಾಗುವುದರಿಂದ ಗರ್ಭಪಾತ, ಅಕಾಲಿಕ ಹೆರಿಗೆಗಳ ಸಂಭವ ಹೆಚ್ಚಾಗುತ್ತದೆ.

ತಡವಾಗಿ ಗರ್ಭಧರಿಸಿದಾಗ ಗರ್ಭಿಣಿಯರ ಏರು ರಕ್ತದೊತ್ತಡದ ಸಂಭವವೂ ಹೆಚ್ಚಾಗುತ್ತದೆ. ಗರ್ಭವಿಷಭಾದೆ (ಪ್ರೀಎಕ್ಲಾಂಪ್ಸಿಯಾ) ಕೂಡ ಉಂಟಾಗಬಹುದು. ಇದರಿಂದ ತಾಯಿ ಹಾಗೂ ಗರ್ಭಸ್ಥ ಶಿಶು ಇಬ್ಬರಿಗೂ ಅಪಾಯ ಉಂಟಾಗಬಹುದು. ಗರ್ಭಧರಿಸುವ ವೇಳೆ ಮಧುಮೇಹ ಉಂಟಾಗುವ (ಜೆಸ್ಟೇಷನಲ್ ಡಯಾಬಿಟಿಸ್ ಮೆಲೆಟಸ್) ಸಂಭವ ಹೆಚ್ಚು. ಗರ್ಭದಲ್ಲಿನ ಮಗುವಿನ ಬೆಳವಣಿಗೆ ಕುಂಠಿತವಾಗಿ ಮಗುವಿನ ತೂಕ ಕಡಿಮೆ ಆಗಬಹುದು (ಐ.ಯು.ಜಿ.ಆರ್). ಗರ್ಭಜಲದ ಪ್ರಮಾಣ ಕೂಡ ಕಡಿಮೆಯಾಗಿ ತೊಡಕುಗಳು ಉಂಟಾಗಬಹುದು.

‘ಡೌನ್‌ಸಿಂಡ್ರೋಮ್’ ಮತ್ತು ಆಟಿಸಂ ಮುಂತಾದ ಅಸಹಜತೆಗಳಿರುವ ಮಗು ಜನಿಸುವ ಸಾಧ್ಯತೆ ಇದೆ. ಗರ್ಭಧಾರಣೆಯ 12ನೇ ವಾರದಲ್ಲಿ ಈ ಬಗ್ಗೆ ಸ್ಕ್ರೀನಿಂಗ್ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಈ ಬಗ್ಗೆ ಕೂಡ ನಿಮಗೆ ಅರಿವಿರಬೇಕು.

ಇನ್ನೂ ಕೆಲವರಲ್ಲಿ ಗರ್ಭಾಶಯದಲ್ಲಿ ನಾರುಗಡ್ಡೆಗಳು(ಫೈಬ್ರಾಯ್ಡ) ಬೆಳೆಯುವುದರಿಂದಲೂ ಕೆಲವು ತೊಡಕುಗಳು ಉಂಟಾಗಬಹುದು. ಹೆರಿಗೆಯಲ್ಲೂ ಕೃತಕ ಹೆರಿಗೆ ನೋವನ್ನುಭರಿಸುವ ಔಷಧಗಳು ಹೆಚ್ಚು ಕೆಲಸಮಾಡದೇ ಸಿಸೇರಿಯನ್ ಶಸ್ತ್ರಚಿಕಿತ್ಸೆಯಾಗುವ ಸಂಭವಗಳು ಹೆಚ್ಚಾಗಬಹುದು.

ಸಹಜ ಹೆರಿಗೆಯಲ್ಲಿ ವ್ಯತ್ಯಾಸ

ಹೆಚ್ಚಿನ ಸಂದರ್ಭಗಳಲ್ಲಿ ಹೆರಿಗೆ ನೋವು ಆರಂಭವಾದರೂ ಗರ್ಭಕೋಶದ ಸ್ನಾಯುಗಳ ಜಡತೆಯುಂಟಾಗಿ ಮತ್ತು ಅಂತಹ ಮಹಿಳೆಯರ ಕಟಿರದ ಸ್ನಾಯುರಜ್ಜುಗಳು ಸ್ಥಿತಿಸ್ಥಾಪಕತ್ವ ಗುಣವನ್ನು ಕಳೆದುಕೊಳ್ಳಬಹುದು. ಇದರಿಂದ ಹೆರಿಗೆ ನೋವು ದೀರ್ಘಾವಧಿಯವರೆಗೆ ಉಂಟಾದರೂ ಸಹಜ ಹೆರಿಗೆಯಾಗದೇ ತಾಯಿಮಗು ಇಬ್ಬರಿಗೂ ದಣಿವು ಉಂಟಾಗಬಹುದು.

ಒಮ್ಮೆ ಸಹಜ ಹೆರಿಗೆಯಾದರೂ ಕಸ ಹೊರಗೆ ಬರದೆ ತೊಂದರೆಯಾಗುವುದು, ಪ್ರಸವಾನಂತರದ ರಕ್ತಸ್ರಾವ ಕೂಡ ಹೆಚ್ಚಾಗಬಹುದು. ಹೆರಿಗೆಯ ನಂತರ ಕೂಡ ಎದೆಹಾಲು ಸಮರ್ಪಕವಾಗಿ ಉತ್ಪಾದನೆಯಾಗದೇ ಸುರಕ್ಷಿತ ಸ್ತನ್ಯಪಾನಕ್ಕೂ ಕೂಡಾ ತೊಡಕಾಗಬಹುದು.

ಹಾಗಾಗಿ, ನೀವು ಆದಷ್ಟು ಬೇಗನೆ ಗರ್ಭಧರಿಸಲು ಪ್ರಯತ್ನಿಸಿ. ಒಮ್ಮೆ ಗರ್ಭಧರಿಸಿದರೆ ತಜ್ಞ ವೈದ್ಯರ ಮೇಲ್ವಿಚಾರಣೆಯಲ್ಲಿರಿ. ನಿಯಮಿತ ತಪಾಸಣೆಗೊಳಪಡುತ್ತಿರಿ. ಜೊತೆಗೆ ಎಲ್ಲ ರೀತಿಯ ಸೌಲಭ್ಯಗಳಿರುವ ಉತ್ತಮ ಆಸ್ಪತ್ರೆಯಲ್ಲಿಯೇ ಹೆರಿಗೆ ಮಾಡಿಸಿಕೊಳ್ಳುವುದು ಉತ್ತಮ. ನೀವು ಆದಷ್ಟು ಬೇಗ ಗರ್ಭಧರಿಸಿ, ಆರೋಗ್ಯವಂತ ಮಗುವಿಗೆ ಜನಿಸಲಿ ಎಂದು ಆಶಿಸುತ್ತೇನೆ.

ಸ್ಪಂದನ... ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **bhoomika@prajavani.co.in**ಗೆ ಕಳುಹಿಸಬಹುದು

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿಕೆ

ಅನಧಿಕೃತ ಶಾಲೆ: ಕ್ರಮಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 1,695 ಅನಧಿಕೃತ ಶಾಲೆಗಳನ್ನು ಗುರುತಿಸಲಾಗಿದೆ. ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ಇಂತಹ ಶಾಲೆಗಳ ವಿರುದ್ಧ ತಕ್ಷಣಕ್ಕೆ ಕ್ರಮಕೈಗೊಳ್ಳದೆ ಲೋಪ ಸರಿಪಡಿಸಿಕೊಳ್ಳಲು ಸಮಯ ನೀಡಬೇಕು. ಹೊಸದಾಗಿ ಅನಧಿಕೃತ ಶಾಲೆಗಳು ಪತ್ತೆಯಾದರೆ ಅಧಿಕಾರಿಗಳನ್ನೇ ಹೊಣೆ ಮಾಡಬೇಕು ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಗುರುವಾರ ಹೇಳಿದರು.

ವಿಧಾನಸೌಧದಲ್ಲಿ ಶುಕ್ರವಾರ ನಡೆದ ಸಭೆಯ ನಂತರ ಮಾತನಾಡಿದ ಅವರು, ಸಮಯಾವಕಾಶ ನೀಡಿದ ನಂತರವೂ ಲೋಪ ಸರಿಪಡಿಸಿಕೊಳ್ಳದ ಶಾಲೆಗಳನ್ನು ಮುಚ್ಚಿಸಲಾಗುವುದು. 26 ಶಾಲೆಗಳು ನೋಂದಣಿಯನ್ನೇ ಮಾಡಿಲ್ಲ, 76 ಅನುಮತಿ ಪಡೆಯದೆ ಉನ್ನತೀಕರಿಸಿದ ಶಾಲೆಗಳು, 143 ಇತರೆ ಪಠ್ಯಕ್ರಮ ಅನುಸರಿಸುತ್ತಿವೆ. ಅನುಮತಿ ಪಡೆಯದೆ ಹೆಚ್ಚುವರಿ ವಿಭಾಗಗಳನ್ನು ಪಡೆದಿರುವವು 631, ಸ್ಥಳಾಂತರಿಸಿರುವ ಶಾಲೆಗಳು 190, ಒಂದೇ ಕಟ್ಟಡದಲ್ಲಿ ಕೇಂದ್ರ ಮತ್ತು ರಾಜ್ಯ ಪಠ್ಯಕ್ರಮ ಬೋಧಿಸುತ್ತಿರುವ 495 ಶಾಲೆಗಳಿವೆ ಎಂದರು.

ಸರ್ಕಾರಿ ಶಾಲೆಗಳ ನೀರು ಮತ್ತು ವಿದ್ಯುತ್ ಬಾಕಿ ಮೊತ್ತವನ್ನು ಮನ್ನಾ ಮಾಡುವಂತೆ ಮುಖ್ಯಮಂತ್ರಿಗೆ ಮನವಿ ಮಾಡಲಾಗುವುದು.

–ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಸಚಿವ

ಸರ್ಕಾರಿ, ಅನುದಾನಿತ ಶಾಲೆಗಳ ಮಕ್ಕಳಿಗೆ ವಾರದಲ್ಲಿ ಎರಡು ದಿನಗಳು ಮೊಟ್ಟೆ ವಿತರಿಸುವ ಯೋಜನೆಗೆ ಆ. 18ರಂದು ಚಾಲನೆ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ಅನಧಿಕೃತ ಶಾಲೆಗಳ ಪಟ್ಟಿಯಿಂದ ತೆಗೆಯಲು ಕ್ಯಾಮ್ಸ್ ಮನವಿ

ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಹೆಚ್ಚುವರಿ ತರಗತಿ ನಡೆಸಲು ಪ್ರತ್ಯೇಕ ಅನುಮತಿ ಅಗತ್ಯವಿಲ್ಲ ಎಂಬ ಆದೇಶ ಕಡೆಗಣಿಸಿ, 620 ಶಾಲೆಗಳನ್ನ ಅನಧಿಕೃತ ಎಂದು ನಮೂದಿಸಲಾಗಿದೆ. ಅಂತಹ ಶಿಕ್ಷಣ ಸಂಸ್ಥೆಗಳನ್ನು ಅನಧಿಕೃತ ಪಟ್ಟಿಯಿಂದ ಕೈಬಿಡಬೇಕು ಎಂದು ಕರ್ನಾಟಕ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟದ (ಕ್ಯಾಮ್ಸ್) ಗೌರವಾಧ್ಯಕ್ಷ ಪುಟ್ಟಣ್ಣ, ಪ್ರಧಾನ ಕಾರ್ಯದರ್ಶಿ ಡಿ.ಶಶಿಕುಮಾರ್ ಮನವಿ ಮಾಡಿದರು.

ಅಗ್ನಿ ಸುರಕ್ಷತೆ ಪ್ರಮಾಣಪತ್ರ, ಕಟ್ಟಡ ಸುರಕ್ಷತೆ ಪ್ರಮಾಣಪತ್ರ ಕಡ್ಡಾಯಕ್ಕೆ ತಡೆ ನೀಡಿದ್ದರೂ, 2018ಕ್ಕಿಂತ ಹಿಂದೆ ಆರಂಭವಾಗಿರುವ ಹಳೆಯ ಶಿಕ್ಷಣ ಸಂಸ್ಥೆಗಳ ಮಾನ್ಯತೆ ನವೀಕರಿಸಿಲ್ಲ. ಅಂತಹ ಸಂಸ್ಥೆಗಳಿಗೆ ತಕ್ಷಣ ಮಾನ್ಯತೆ ನೀಡಲು ಸೂಚಿಸಬೇಕು ಎಂದರು.

ಅವರ ಮಾತುಗಳನ್ನು ಆಲಿಸಿದ ಮಧು ಬಂಗಾರಪ್ಪ, ಅನಧಿಕೃತ ಪಟ್ಟಿಯಿಂದ ಕೈಬಿಡುವ ಕುರಿತು ಪರಿಶೀಲಿಸಲಾಗುವುದು. ಖಾಸಗಿ ಶಾಲೆಗಳು ಪ್ರತಿವರ್ಷ ಅಗ್ನಿಶಾಮಕ ದಳದಿಂದ ಅನುಮತಿ ನವೀಕರಣ ಮಾಡಿಕೊಳ್ಳಬೇಕು ಎಂಬ ನಿಯಮವನ್ನು ಸಡಿಲಿಸಲು ಸಾಧ್ಯವಿಲ್ಲ. ನಮಗೆ ಮಕ್ಕಳ ಸುರಕ್ಷತೆ ಮುಖ್ಯ. ಅದೇ ರೀತಿ ಶಾಲಾ ಮಕ್ಕಳನ್ನು ಆಡಳಿತ ಮಂಡಳಿ ಸೇವೆಗಳಿಗೆ ಬಳಸಿಕೊಂಡರೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಬಿಟ್ ಕಾಯಿನ್: ವಿಚಾರಣೆ 22ಕ್ಕೆ

ಬೆಂಗಳೂರು: 'ಬಿಟ್ ಕಾಯಿನ್ ಹಗರಣದ ತನಿಖೆಯನ್ನು ವಿಶೇಷ ತನಿಖಾ ದಳಕ್ಕೆ ವಹಿಸಲಾಗಿದೆ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಅರುಹಿದೆ.

ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ಹಾಗೂ ಕಾನೂನು ಪ್ರಕ್ರಿಯೆ ರದ್ದುಗೊಳಿಸಲು ಕೋರಿ ಆರೋಪಿಗಳಾದ ಶ್ರೀಕೃಷ್ಣ ರಮೇಶ್ ಅಲಿಯಾಸ್ ಶ್ರೀಕಿ, ಸಹ ಆರೋಪಿಗಳಾದ ಸುನೀಶ್ ಹೆಗ್ಡೆ, ಪ್ರಸಿದ್ಧ ಶೆಟ್ಟಿ ಹಾಗೂ ಹೇಮಂತ್ ಮುದ್ದಪ್ಪ ಸಲ್ಲಿಸಿರುವ ಅರ್ಜಿಗಳನ್ನು ನ್ಯಾಯಮೂರ್ತಿ ಹೇಮಂತ್ ಚಂದನ್‌ಗೌಡರ್ ಏಕ ಸದಸ್ಯ ಪೀಠ ವಿಚಾರಣೆ ನಡೆಸಿತು. ಅರ್ಜಿದಾರರ ವಕೀಲರಾದ ಸಿ.ಎಚ್.ಹನುಮಂತರಾಯ ಮತ್ತು ಸಂದೇಶ್ ಚೌಟ, 'ಅರ್ಜಿದಾರರ ವಿರುದ್ಧ ತುಮಕೂರು, ಬೆಂಗಳೂರು ಗ್ರಾಮಾಂತರ, ಬೆಂಗಳೂರು ಸಿಸಿಬಿಯಲ್ಲಿ ಪ್ರತ್ಯೇಕ ಎಫ್‌ಐಆರ್ ದಾಖಲಾಗಿರುವುದು ಕಾನೂನು ಬಾಹಿರ' ಎಂದರು.

ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ ಅವರು, ' ಮುಂದಿನ ವಿಚಾರಣೆಗೆ ಎಸ್‌ಐಟಿ ತನಿಖೆಯ ವರದಿಗಳನ್ನು ಸಲ್ಲಿಸಲಾಗುವುದು. ಅರ್ಜಿ ವಿಚಾರಣೆ ಮುಂದೂಡಬೇಕು' ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣೆಯನ್ನು ಇದೇ 22ಕ್ಕೆ ಮುಂದೂಡಿತು.

'ಸಕಾಲ'ಕ್ಕೆ ಇನ್ನಷ್ಟು ಸೇವೆಗಳು: ಸಚಿವ

ಬೆಂಗಳೂರು: 'ಸಕಾಲ'ದಡಿ ಈಗ 1,115 ಕ್ಕೂ ಹೆಚ್ಚು ಸರ್ಕಾರಿ ಸೇವೆಗಳನ್ನು ನೀಡಲಾಗುತ್ತಿದ್ದು, ಇನ್ನಷ್ಟು ಹೊಸ ಸೇವೆಗಳನ್ನು ಸೇರಿಸುವ ಚಿಂತನೆ ಇದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ವಿಕಾಸಸೌಧದಲ್ಲಿ ಶುಕ್ರವಾರ ನಡೆದ ಸಕಾಲ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, 11 ವರ್ಷಗಳಿಂದ ಸಕಾಲ ಸೇವೆ ನೀಡಲಾಗುತ್ತಿದೆ. ಹಲವರಿಗೆ ಈ ಬಗ್ಗೆ ಮಾಹಿತಿಯೇ ಇಲ್ಲ. ವ್ಯಾಪಕವಾಗಿ ಜಾಗೃತಿ ಮೂಡಿಸುವ ಕೆಲಸ ಆಗಬೇಕು ಎಂದರು.

'ಸಕಾಲ ಅಡಿ ಅರ್ಜಿ ಸಲ್ಲಿಸಿದವರಿಗೆ ಸೇವೆ ನೀಡುವಲ್ಲಿ ವಿಳಂಬ ಧೋರಣೆ ಸರಿಯಲ್ಲ. ಜನರ ಮನೆಬಾಗಿಲಿಗೆ ತಲುಪಿಸುವ ಸಲುವಾಗಿ ಸಕಾಲ ಯೋಜನೆ ಆರಂಭಿಸಲಾಯಿತು. ಆದರೆ, ಜನಪರ ಸೇವೆ ನೀಡಬೇಕಾದ ಅಧಿಕಾರಿಗಳು ಸಾರ್ವಜನಿಕರ ಸೇವಾ ಅರ್ಜಿ ವಿಲೇವಾರಿಗೆ ತಡ ಮಾಡುತ್ತಿರುವುದು ಸರಿಯಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಇದೊಂದು ಮಾದರಿ ಹಾಗೂ ಯಶಸ್ವಿ ಯೋಜನೆ. ನಮ್ಮ ಯೋಜನೆಯನ್ನು ಇತರೆ ರಾಜ್ಯಗಳೂ ಅನುಸರಿಸುತ್ತಿವೆ. ಉತ್ತಮ ಸೇವೆ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆದೇಶವೂ ಇದೆ. ಅಧಿಕಾರಿಗಳು ಸಮಯಕ್ಕೆ ಸರಿಯಾಗಿ ಸೇವೆ ನೀಡಿ, ಜನಪರ ಮತ್ತು ಆಡಳಿತ ಸುಧಾರಣೆ ನಿಟ್ಟಿನಲ್ಲಿ ಸರ್ಕಾರದ ಜತೆ ಸಹಕರಿಸಬೇಕು' ಎಂದು ಮನವಿ ಮಾಡಿದರು. ಸಕಾಲ ಯೋಜನೆಯ ಅಡಿಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸೇವಾ ಅರ್ಜಿಗಳು ಬಾಕಿ ಇದ್ದು, ಅದನ್ನು ಶೀಘ್ರ ವಿಲೇವಾರಿಗೆ ಅಧಿಕಾರಿಗಳಿಗೆ ಸಚಿವರು ಸೂಚಿಸಿದರು.

'ಬೆಳಗಾವಿಯಲ್ಲಿ ಗೃಹಲಕ್ಷ್ಮಿಗೆ ಚಾಲನೆ'

ಬೆಳಗಾವಿ: 'ಇಲ್ಲಿನ ಜಿಲ್ಲಾ ಕ್ರೀಡಾಂಗಣದಲ್ಲಿ ಆಗಸ್ಟ್ 29 ಅಥವಾ 30ರಂದು ಗೃಹಲಕ್ಷ್ಮಿ ಯೋಜನೆಗೆ ಚಾಲನೆ ನೀಡಲಾಗುವುದು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪಾಲ್ಗೊಳ್ಳುವರು. ಸೋನಿಯಾ ಗಾಂಧಿ ಬರುವುದು ಖಚಿತವಾಗಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಕಾರ್ಯಕ್ರಮದ ಸಿದ್ಧತೆ ಪರಿಶೀಲಿಸಿ, 'ಸಮಾರಂಭದಲ್ಲಿ 1 ಲಕ್ಷಕ್ಕೂ ಹೆಚ್ಚು ಫಲಾನುಭವಿಗಳು ಪಾಲ್ಗೊಳ್ಳುವರು. ಈವರೆಗೆ 1.33 ಕೋಟಿ ಪೈಕಿ 1.06 ಕೋಟಿ ಕುಟುಂಬಗಳ ಫಲಾನುಭವಿಗಳು ನೋಂದಾಯಿಸಿದ್ದಾರೆ' ಎಂದರು.

'ನಾವು ವಿಭಾಗೀಯ ಕೇಂದ್ರಸ್ಥಾನಗಳಲ್ಲಿ ಗ್ಯಾರಂಟಿ ಯೋಜನೆಗಳಿಗೆ ಚಾಲನೆ ನೀಡುತ್ತಿದ್ದೇವೆ. ಬೆಂಗಳೂರಿನಲ್ಲಿ ಶಕ್ತಿ, ಕಲಬುರಗಿಯಲ್ಲಿ ಗೃಹಜ್ಯೋತಿ ಯೋಜನೆಗೆ ಚಾಲನೆ ನೀಡಿದಂತೆ ಮೈಸೂರಿನಲ್ಲಿ ಅನ್ನಭಾಗ್ಯಕ್ಕೆ ಚಾಲನೆ ನೀಡುತ್ತೇವೆ' ಎಂದರು.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ.
ಕುಲಸಚಿವರ ಕಛೇರಿ, ಉದ್ಯಾನಗಿರಿ, ನವನಗರ, ಬಾಗಲಕೋಟೆ – 587104.
ದೂ. : 08354–230286, ಇ–ಮೇಲ್ : registrar@uhsbagalkot.edu.in

ಸಂಖ್ಯೆ : ಕು/ತೋ.ವಿ.ವಿ.ಬಾ./ನೇ.ವಿ./2023–24 ದಿನಾಂಕ : 10–08–2023

ಅಧಿಸೂಚನೆ

ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರು ತಮ್ಮ ಸುತ್ತೋಲೆ ದಿನಾಂಕ : 10–08–2023 ರ ಅನುಸಾರ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯಲ್ಲಿ ಖಾಲಿ ಇರುವ ಕುಲಪತಿಗಳ ಹುದ್ದೆಗಾಗಿ ಅರ್ಜಿಗಳನ್ನು ಅಹ್ವಾನಿಸಲಾಗಿದ್ದು, ಸದರಿ ಹುದ್ದೆಗೆ ಅರ್ಜಿಗಳನ್ನು ಸಲ್ಲಿಸಲು ಸರ್ಕಾರವು ಹೊರಡಿಸಿದ ಸುತ್ತೋಲೆ ದಿನಾಂಕ : 10–08–2023 ರಿಂದ 30 ದಿನಗಳ ಕಾಲಾವಕಾಶವನ್ನು ನೀಡಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ವೆಬ್‌ಸೈಟ್ : https://uhsbagalkot.karnataka.gov.in ಸಂಪರ್ಕಿಸಿ.

ಸಹಿ/– ಡಾ॥ ಟಿ. ಬಿ. ಅಳ್ಳೊಳ್ಳಿ,
ಕುಲಸಚಿವರು.

ಡಿಐಪಿಆರ್/ಬಾಗಲಕೋಟೆ/84/ಮಣಿಪಾಲ್/2023–24

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ.

ಐಎಫ್‌ಟಿ ಸಂಖ್ಯೆ ಲೋಇ/ಕಾನಿಇ/ಬವಿ/ಟಿಎಸ್–4/1716/2023–24 ದಿನಾಂಕ : 10–08–2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಅರ್ಹ ಗುತ್ತೇದಾರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಟೆಂಡರುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಕಾಮಗಾರಿಗಳಿಗೆ ದ್ವಿ ಲಕೋಟೆ ಟೆಂಡರಿಂಗ್ ಪದ್ಧತಿಯನ್ನು ಅನುಸರಿಸಲಾಗುವುದು. ಗುತ್ತೇದಾರರು ಈ ಕೆಳಕಾಣಿಸಿದ ಕಾಮಗಾರಿಗಳಲ್ಲಿ ಯಾವುದಾದರೂ ಅಥವಾ ಎಲ್ಲಾ ಕಾಮಗಾರಿಗಳಿಗೆ ಟೆಂಡರುಗಳನ್ನು ಸಲ್ಲಿಸಬಹುದಾಗಿರುತ್ತದೆ. ಇದಕ್ಕಾಗಿ ಗುತ್ತೇದಾರರು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ https://kppp.karnataka.gov.inವನ್ನು ಸಂದರ್ಶಿಸಬಹುದಾಗಿರುತ್ತದೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತೇದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸೂಚನೆ : ಕಾರಣಾಂತರಗಳಿಂದಾಗಿ ಈ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಯಾವುದೇ ಬದಲಾವಣೆಗಳಾದಲ್ಲಿ ಗುತ್ತೇದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ಕ್ರ ಸಂ	ಕಾಮಗಾರಿಯ ವಿವರ	ಮೀಸಲಾತಿ ವಿವರ	ಕಾಮಗಾರಿ ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)
	3054–(ಯೋಜನೇತರ)–ರಾಜ್ಯ ಹೆದ್ದಾರಿಗಳ ನಿರ್ವಹಣೆ :		
1)	PWD/2023-24/RD/WORK_INDENT1733	ಪರಿಶಿಷ್ಟ ಜಾತಿ	63.60
2)	PWD/2023-24/RD/WORK_INDENT1740	ಸಾಮಾನ್ಯ ವರ್ಗ	66.93
3)	PWD/2023-24/RD/WORK_INDENT2235	ಸಾಮಾನ್ಯ ವರ್ಗ	80.95
4)	PWD/2023-24/RD/WORK_INDENT1658	ಪರಿಶಿಷ್ಟ ವರ್ಗ	73.80
5)	PWD/2023-24/RD/WORK_INDENT1739	ಸಾಮಾನ್ಯ ವರ್ಗ	79.80
	3054–(ಯೋಜನೇತರ)–ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ :		
6)	PWD/2023-24/RD/WORK_INDENT1729	ಅನ್ವಯಿಸುವುದಿಲ್ಲ	106.69
7)	PWD/2023-24/RD/WORK_INDENT1738	ಅನ್ವಯಿಸುವುದಿಲ್ಲ	131.41
8)	PWD/2023-24/RD/WORK_INDENT2233	ಪರಿಶಿಷ್ಟ ಜಾತಿ	84.80
9)	PWD/2023-24/RD/WORK_INDENT1730	ಅನ್ವಯಿಸುವುದಿಲ್ಲ	115.80
	8443–ಠೇವಣಿ ಕಾಮಗಾರಿಗಳು :		
10)	PWD/2023-24/BD/WORK_INDENT156	ಅನ್ವಯಿಸುವುದಿಲ್ಲ	150.00

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.
ಅ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ 18–08–2023 ರಂದು 12.00 ಗಂಟೆಯ ವರೆಗೆ. ಆ)ಇ–ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 21–08–2023 ರಂದು 16.00 ಗಂಟೆಯ ವರೆಗೆ. ಇ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ. 22–08–2023ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರ್,
ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/202/ಕೆಎಸ್‌ಎಂಸಿಎ/2023–24

Infosys®
Navigate your next

ಇನ್‌ಫೋಸಿಸ್ ಲಿಮಿಟೆಡ್
ಕಾರ್ಪೊರೇಟ್ ಗುರುತು ಸಂಖ್ಯೆ (ಸಿಐಎನ್): L85110KA1981PLC013115
ನೋಂದಾಯಿತ ಕಛೇರಿ: ಎಲೆಕ್ಟ್ರಾನಿಕ್ಸ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು – 560100
ದೂರವಾಣಿ: 91 80 2852 0261, ಫ್ಯಾಕ್ಸ್: 91 80 2852 0362
investors@infosys.com, www.infosys.com

ಸೂಚನೆ
ಕಂಪನಿಯ ಈಕ್ವಿಟಿ ಷೇರುಗಳನ್ನು ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿಗೆ ವರ್ಗಾವಣೆ (ಐಇಪಿಎಫ್) ಕುರಿತು

ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿ ಪ್ರಾಧಿಕಾರ (ಲೆಕ್ಕಪತ್ರಗಳು, ಪರಿಶೋಧನೆ, ವರ್ಗಾವಣೆ ಮತ್ತು ಮರುಪಾವತಿ) ನಿಯಮಾವಳಿಗಳು, 2016 (ನಿಯಮಾವಳಿಗಳು) ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಇದರ ಅನ್ವಯ ಕೋರಿಕೆ ಬಾರದೆ ಏಳು ವರ್ಷಗಳವರೆಗೆ ಉಳಿದ, ಆರ್ಥಿಕ ವರ್ಷ 2016–17ರಲ್ಲಿ ಘೋಷಿಸಲಾದ ಮಧ್ಯಮಾವಧಿ ಲಾಭಾಂಶವನ್ನು ಮೇಲೆ ಹೇಳಲಾದ ನಿಯಮಾವಳಿಗನುಸಾರವಾಗಿ ಐಇಪಿಎಫ್ ಖಾತೆಗೆ ದಿನಾಂಕ **ನವೆಂಬರ್ 19, 2023** ರಂದು ವರ್ಗಾಯಿಸಲಾಗುವುದು ಎಂದು ಷೇರುದಾರರಿಗೆ ಈ ಮೂಲಕ ಸೂಚನೆ ನೀಡಲಾಗಿದೆ. ತತ್ಸಂಬಂದಧಿತ ಷೇರುಗಳನ್ನು ಸಹ ಮೇಲೆ ಉಲ್ಲೇಖಿಸಿದ ನಿಯಮಾವಳಿಗನುಸಾರವಾಗಿ ಐಎಪಿಎಫ್ ಖಾತೆಗೆ ವರ್ಗಾವಣೆ ಮಾಡಲಾಗುವುದು.

ನಿಯಮಾವಳಿಗನುಸಾರವಾಗಿ ಕಂಪನಿಯು ಯಾರ ಷೇರುಗಳು ಐಇಪಿಎಫ್‌ಗೆ ವರ್ಗಾವಣೆಯಾಗಲು ಅರ್ಹವಾಗಿವಿಯೋ ಅಂತಹ ಷೇರುದಾರರಿಗೆ ಸೂಚನಾ ಪತ್ರಗಳನ್ನು ವೈಯಕ್ತಿಕವಾಗಿ ಕಳುಹಿಸಲಾಗುತ್ತಿದೆ. ಅಂತಹ ಷೇರುದಾರರ ಪೂರ್ಣವಿವರಗಳನ್ನು ಕಂಪನಿಯ ಜಾಲತಾಣದಲ್ಲಿ ಒದಗಿಸಲಾಗಿದೆ:https://www.infosys.com/investors/shareholder-services/Pages/transfer-equity-shares.aspx.

ಈ ಸಂಬಂಧವಾಗಿ ಕೆಳಕಂಡ ಅಂಶಗಳನ್ನು ದಯಮಾಡಿ ಗಮನಿಸಿ:

1) **ಷೇರುಗಳನ್ನು ನೀವು ಭೌತಿಕ ರೂಪದಲ್ಲಿ ಹೊಂದಿದ್ದರೆ:** ಷೇರುಗಳ ದ್ವಿಪ್ರತಿ(ಗಳನ್ನು)ಯನ್ನು ನೀಡಿ ಐಇಪಿಎಫ್‌ಗೆ ವರ್ಗಾಯಿಸಲಾಗುವುದು. ನಿಮ್ಮ ಹೆಸರಿನಲ್ಲಿ(ರುಗಳಲ್ಲಿ) ನೋಂದಾಯಿಸಲ್ಪಟ್ಟಿದ್ದ ಮೂಲ ಷೇರುಪತ್ರ(ಗಳು) ಸ್ವಯಂ ರದ್ದಾಗುತ್ತವೆ.
2) **ಷೇರುಗಳನ್ನು ನೀವು ಡಿಮ್ಯಾಟ್ ರೂಪದಲ್ಲಿ ಹೊಂದಿದ್ದರೆ:** ಐಇಪಿಎಫ್ ಖಾತೆಗೆ ವರ್ಗವಾಗಲು ಅರ್ಹವಾದ ನಿಮ್ಮ ಷೇರುಗಳನ್ನು ನಿಮ್ಮ ಡಿಮ್ಯಾಟ್ ಖಾತೆಯಿಂದ ವರ್ಗಾವಣೆ ಮಾಡಲಾಗುವುದು.

ಒಂದು ವೇಳೆ ದಿನಾಂಕ **ನವೆಂಬರ್ 10, 2023**ರ ಒಳಗೆ ಕ್ರಮಬದ್ಧ ಕೋರಿಕೆ ಬರದಿದ್ದಲ್ಲಿ, ಕಂಪನಿಯು ಲಾಭಾಂಶ ಮತ್ತು ಷೇರುಗಳನ್ನು ಐಇಪಿಎಫ್‌ಗೆ ವರ್ಗಾಯಿಸುವ ಪ್ರಕ್ರಿಯೆಯನ್ನು, ಯಾವುದೇ ಸೂಚನೆ ಕೊಡದೆ ಜಾರಿಮಾಡುತ್ತದೆ. ನಿಯಮಾವಳಿಗನುಸಾರ ಐಇಪಿಎಫ್‌ಗೆ ವರ್ಗಾವಣೆಯಾದ ಕೋರಿಕೆ ಬಾರದ ಲಾಭಾಂಶದ ಹಣ/ತತ್ಸಂಬಂಧಿತ ಷೇರುಗಳ ಕುರಿತಾಗಿ ಕಂಪನಿಗೆ ಯಾವುದೇ ಬಾಧ್ಯತೆಯಿರುವುದಿಲ್ಲವೆಂಬುದನ್ನು ಈ ಮೂಲಕ ಸ್ಪಷ್ಟಪಡಿಸಲಾಗಿದೆ. ಸದರಿ ಷೇರುದಾರರು ತಮ್ಮ ಲಾಭಾಂಶ ಮತ್ತು ಷೇರುಗಳನ್ನು ಐಇಪಿಎಫ್‌ನಿಂದ ಮರಳಿ ಪಡೆಯುಲು ಕಂಪನಿಯಿಂದ ಹಕ್ಕು ಪತ್ರ ಪಡೆದ ನಂತರ ಐಇಪಿಎಫ್‌ಗೆ ನಿಗದಿತ ಐಇಪಿಎಫ್–5 ನಮೂನೆಯಲ್ಲಿ ಆನ್ಲೈನ್ ಮೂಲಕ ಅರ್ಜಿ ಸಲ್ಲಿಸಿ ತಮ್ಮ ಷೇರುಗಳು ಹಾಗೂ ಲಾಭಾಂಶವನ್ನು ಪಡೆಯಬಹುದಾಗಿರುತ್ತದೆ.

ಸದರಿ ವಿಷಯ ಕುರಿತಾದ ಯಾವುದೇ ವಿಚಾರಣೆಗಳಿದ್ದಲ್ಲಿ ಷೇರುದಾರರು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರಾದ ಶ್ರೀಮತಿ ಶೋಭಾ ಆನಂದ್, ಉಪ ಉಪಾಧ್ಯಕ್ಷರು, ಮೆ॥ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ ವಿಭಾಗ: ಇನ್‌ಫೋಸಿಸ್ ಲಿಮಿಟೆಡ್, ಸೆಲೇನಿಯಮ್ ಟವರ್ ಬಿ, ಪ್ಲಾಟ್ 31–32, ಫೈನಾನ್ಷಿಯಲ್ ಡಿಸ್ಟ್ರಿಕ್ಟ್, ನಾನಕ್ರಮ್‌ಗುಡ, ಸೆರಿಲಿಂಗಂಪಲ್ಲಿ ಮಂಡಲ್, ಹೈದರಾಬಾದ – 500032. ದೂರವಾಣಿ: +91 40 6716 2222 ಅಥವಾ ವಿ ಅಂಚೆ: einward.ris@kfintech.com ಸಂಪರ್ಕಿಸಲು ಕೋರಲಾಗಿದೆ.

ಇನ್‌ಫೋಸಿಸ್ ಲಿಮಿಟೆಡ್ ಪರವಾಗಿ
ಸಹಿ/–
ಎ.ಜಿ.ಎಸ್. ಮಣಿಕಂಠ
ಕಂಪನಿ ಕಾರ್ಯದರ್ಶಿ

ಆಗಸ್ಟ್ 11, 2023
ಬೆಂಗಳೂರು, ಭಾರತ

ಸುಧಾ ಹಾಗೂ ಮಯೂರ ಓದಿರಿ

ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು
ಟೆಂಡರ್ ಆಹ್ವಾನ ಪ್ರಕಟಣೆ
ಟೆಂಡರ್ ಮುಂದೂಡಿಕೆ ಪ್ರಕಟಣೆ ಸಂಖ್ಯೆ : 22,23,24,26/2022–23 2nd Call Dtd : 10.08.2023

ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು ಚಿಕ್ಕಮಗಳೂರು ಜಿಲ್ಲೆಯ **ಚಿಕ್ಕಮಗಳೂರು, ಕಡೂರು, ತರೀಕೆರೆ ತಾಲ್ಲೂಕಿನ 88(ಪ್ಯಾಕೇಜ್ ಒಳಗೊಂಡಂತೆ)** ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ ಪೋರ್ಟಲ್ ಮುಲಕ ದಿನಾಂಕ 31.7.2023 ರಂದು ಟೆಂಡರ್ ಆಹ್ವಾನಿಸಲಾಗಿತ್ತು. ತಾಂತ್ರಿಕ ಕಾರಣಗಳಿಂದ ಟೆಂಡರನ್ನು ಮುಂದೂಡಲಾಗಿದೆ. **ಕನಿಷ್ಠ ಮೊತ್ತ ರೂ. 50.80 ಲಕ್ಷ ಗರಿಷ್ಠ ಮೊತ್ತ ರೂ.80.17** ಲಕ್ಷದ ಕಾಮಗಾರಿಯನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ Standard Tender Document-KW-3&4 ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು. ಗುತ್ತಿಗೆದಾರರಿಗೆ ಅಧಿನಿಯಮ 1 ರಲ್ಲಿ ನಮೂದಿಸಿರುವ ಕನಿಷ್ಟ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ: **10.08.2023 ರಿಂದ 28.08.2023** ರವರೆಗೆ ಸಂಜೆ 5.00 ಗಂಟೆಯೊಳಗೆ ಸಲ್ಲಿಸಬೇಕು, ಟೆಂಡರನ್ನು ದಿನಾಂಕ **29.08.2023** ರಂದು ಸಂಜೆ 05:30ಕ್ಕೆ ತೆರೆಯಲಾಗುವುದು. ಈ ದಿನಾಂಕದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯನ್ನು https://kppp.karnataka.gov.in ನಲ್ಲಿ ಓದಿಕೊಳ್ಳುವುದು ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN - UO4010KA2002SGC030438)

ಬದಲಾವಣೆ ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ)

ಬೆವಿಕಂ ವಿಚಾರಣೆ ಸಂಖ್ಯೆ: ಮುಇಂವಿ/ಚಿವ/ಅಇಂವಿ(ಕ)/ಸಕಾನಿಇಂ–1/2023–24/ಎಫ್‌ಟಿಎನ್‌ಸಿ/004 ಕರೆ 3 ದಿನಾಂಕ: 25.07.2023 ರ ಅನ್ವಯ ಫಾಸ್ಟ್ ಟ್ರ್ಯಾಕ್ (ಎಫ್‌ಟಿಎನ್‌ಸಿ) ಹೊಸ ಸಂಪರ್ಕ ಕೋಶಕ್ಕಾಗಿ 76 ಸಂಖ್ಯೆಗಳ ತಾತ್ಕಾಲಿಕ ಮಾನವ ಸಂಪನ್ಮೂಲ ಸೇವಗಳನ್ನು ಒದಗಿಸಲು ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿದೆ. ಇ–ಪೋರ್ಟಲ್‌ನಲ್ಲಿ ಬಿಡ್ ದಾಖಲೆಗಳ ಲಭ್ಯತೆ: 14–08–2023 @ 11:00 ಗಂಟೆಯಿಂದ. ಬಿಡ್ ಪೂರ್ವ ಸಭೆ: 28–08–2023 @ 11:00 ಗಂಟೆಗೆ. ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 04–09–2023 ರ 16:00 ಗಂಟೆಯವರೆಗೆ. ಬಿಡ್ ದಾಖಲಾತಿ ಸಲ್ಲಿಸಲು ಕೊನೆಯ ದಿನಾಂಕ: 15–09–2023 ರಂದು 17: ಗಂಟೆಯವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಹಾಗೂ ಸಮಯ: 19–09–2023 @ 11:00 ಗಂಟೆಗೆ. ಪಾವತಿಸಬೇಕಾದ ಇಎಂಡಿ: ರೂ.3,07,252/– ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ (ಪ್ರೊಕ್ಯೂರ್‌ಮೆಂಟ್) ಪೋರ್ಟಲ್ ವೆಬ್‌ಸೈಟ್ kpppusers@karnataka.gov.in ನಿಂದ 14–08–2023 ರಂದು ಅಥವಾ ನಂತರ ಪಡೆಯಬಹುದು. ಆಸಕ್ತ ಬಿಡ್‌ದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ (ಪ್ರೊಕ್ಯೂರ್‌ಮೆಂಟ್) ಪೋರ್ಟಲ್‌ನಲ್ಲಿ ನೋಂದಾಯಿಸಿ ಕೊಳ್ಳಬೇಕು. ಟೆಂಡರ್ ಪ್ರಕ್ರಿಯೆ ಶುಲ್ಕ, ಇಎಂಡಿ, ಇತ್ಯಾದಿ ಮುಂತಾದ ಎಲ್ಲಾ ಪಾವತಿಗಳನ್ನು ಇ–ಪಾವತಿ ವಿಧಾನದಲ್ಲಿ ಪಾವತಿಸತಕ್ಕದ್ದು. ಮುಂದೆ, ಯಾವುದೇ ಸ್ಪಷ್ಟತೆಗಾಗಿ ಸಹಾಯವಾಣಿ 080–68948777 ಹಾಗೂ 080–46010000 ಅಥವಾ ಇ–ಮೇಲ್: hphelpdesk.blr@rteservices.com ಮೂಲಕ ಸಂಪರ್ಕಿಸಬಹುದು.

ಸಹಿ/– ಮುಖ್ಯ ಇಂಜಿನಿಯರ್ (ವಿದ್ಯುತ್),
ಕಾ & ಪಾ ವಲಯ, ಬೆವಿಕಂ, ಚಿತ್ರದುರ್ಗ

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ : 1912
ಬೆಸ್ಕಾಂ ಮಿತ್ರ MOBILE APP ಡೌನ್‌ಲೋಡ್ ಮಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ, ಮಂಡ್ಯ ವಿಭಾಗ,
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ಸಂ: 02/ 2023–2024 ದಿನಾಂಕ: 07–08–2023
ಮಂಡ್ಯ ಜಿಲ್ಲೆಯ ವಿವಿಧ ಕಾಮಗಾರಿಗಳಿಗಾಗಿ
ಟೆಂಡರ್ ಪ್ರಕಟಣೆ

ಐಟಂವಾರು ದರದ ಟೆಂಡರುನ್ನು ಕೆಳಗೆ ಕಾಣಿಸಿದ ಕಾಮಗಾರಿಗಾಗಿ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **KW-1** ರ ರೀತಿ ಒಂದು ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://www.eproc.karnataka.gov.in** ಮುಖಾಂತರ ಕಾಮಗಾರಿಯ ಟೆಂಡರ್‌ಗಾಗಿ ಭಾಗವಹಿಸಬಹುದು. ಟೆಂಡರ್ ದಾಖಲಾತಿಗಳನ್ನು ದಿನಾಂಕ 09.08.2023ರಿಂದ ಇ–ಪೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ವಿಚಾರಣೆ **ದಿನಾಂಕ 16.08.2023 ಸಂಜೆ 4.00 ಗಂಟೆವರೆಗೆ,** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ : 17.08.2023 ಸಂಜೆ 4.30 ಘಂಟೆವರೆಗೆ,** ಆರ್ಥಿಕ ಬಿಡ್ ತೆರೆಯುವ **ದಿನಾಂಕ : 19.08.2023 ಬೆಳಿಗ್ಗೆ 11.00ಗಂಟೆಗೆ** ಅಥವಾ ನಂತರದ ಕೆಲಸದ ದಿನಗಳು [**ಅಂದಾಜು ಮೊತ್ತ 50.00 ಲಕ್ಷದೊಳಗಿನ ಕಾಮಗಾರಿಗಳಿಗೆ**] ಟೆಂಡರ್ ಪ್ರಕ್ರಿಯೆ ಬೆಲೆ ಇ–ಪೋರ್ಟಲ್‌ರಂತೆ. ಕಾಲಮಿತಿ: ಮಳೆಗಾಲ ಸೇರಿ **2 ತಿಂಗಳು ಒಟ್ಟು 163 (ಒಂದನೂರ ಅರವತ್ತು ಮೂರು)** ಕಾಮಗಾರಿಗಳ ಪೈಕಿ **ಗರಿಷ್ಠ ಅಂದಾಜು ಮೊತ್ತ ರೂ.21.66 ಲಕ್ಷಗಳು ಕನಿಷ್ಠ ರೂ.4.00 ಲಕ್ಷಗಳು,** ಇ.ಎಂ.ಡಿ. ಬೆಲೆ ಇ–ಪೋರ್ಟಲ್‌ರಂತೆ, ಕೆಲಸಗಳ ವಿವರ, ಅಂದಾಜು ಮೊತ್ತ, ಇ.ಎಂ.ಡಿ., ಮೊತ್ತ ಮುಂತಾದ ಮಾಹಿತಿಗಳನ್ನು ಸದರಿ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಟಿಪ್ಪಣಿ: 1. ಈ ಕೆಳಗೆ ಸಹಿ ಮಾಡಿರುವವರುಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ /ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ.
2. ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/–ಕಾ.ಇಂ.,ಲೋ.ಇ.,ವಿಭಾಗ, ಮಂಡ್ಯ

ಕರ್ನಾಟಕ ಸರ್ಕಾರದ ಸಚಿವಾಲಯ
ಆರ್ಥಿಕ ಇಲಾಖೆ, ವಿದಾನಸೌಧ, ಬೆಂಗಳೂರು–560 001.
ಸಂಖ್ಯೆ: ಆಇ/02/ಬಿಎಂಬಿ/2023 ದಿನಾಂಕ : 11-08-2023

ಪತ್ರಿಕಾ ಪ್ರಕಟಣೆ

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ ಎಫ್.ಡಿ.02 ಬಿಎಂಬಿ 2013, ದಿನಾಂಕ: 5ನೇ ಸೆಪ್ಟೆಂಬರ್ 2013 ನಿಬಂಧನೆಯ ಮೇರೆಗೆ ಹೊರಡಿಸಲಾದ 9.54%, ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2023, (9.54% Karnataka SDL 2023) ದಿನಾಂಕ: 10ನೇ ಸೆಪ್ಟೆಂಬರ್ 2023 ದಿನಾಂಕವೂ ಸೇರಿ ಆವರೆಗೆ ಸಲ್ಲತಕ್ಕ ಎಲ್ಲ ಬಡ್ಡಿ ಸಮೇತ, ದಿನಾಂಕ: 11ನೇ ಸೆಪ್ಟೆಂಬರ್ 2023ರಂದು ನಮೂದು ಬೆಲೆಯಲ್ಲಿ ಸಂದಾಯ ಮಾಡಲಾಗುವುದೆಂದು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ನಗೋಷಿಯೇಬಲ್ ಇನಸ್ಟ್ರುಮೆಂಟ್ಸ್ ಅಕ್ಟ್ 1881ರ ರೀತ್ಯ ಮೇಲೆ ಹೇಳಲಾದ ದಿನಾಂಕದಂದು ರಾಜ್ಯ ಸರ್ಕಾರವು ರಜಾ ಘೋಷಿಸಿದ ಸಂದರ್ಭದಲ್ಲಿ ರಾಜ್ಯದಲ್ಲಿ ಪಾವತಿ ಕಛೇರಿಗಳು ಹಿಂದಿನ ದಿನವೇ ಸಾಲಗಳನ್ನು ಮರುಪಾವತಿ ಮಾಡುತ್ತವೆ. 11ನೇ ಸೆಪ್ಟೆಂಬರ್ 2023ರಂದು ಮತ್ತು ಆ ತರುವಾಯ ಸದರಿ ಸಾಲದ ಮೇಲೆ ಯಾವುದೇ ಬಡ್ಡಿ ಪ್ರಾಪ್ತವಾಗುವುದಿಲ್ಲ.

2) ಸರ್ಕಾರದ ಸೆಕ್ಯೂರಿಟಿಗಳ ನಿಬಂಧನೆಗಳು, 2007ರ ಉಪ ನಿಬಂಧನೆ 24(2) ಮತ್ತು 24(3)ರನ್ವಯ ಸಬ್‌ಸಿಡರಿ ಜನರಲ್ ಲೆಡ್ಜರ್ ಅಥವಾ ಕನ್‌ಸ್ಟಿಟುಅಂಟ್ ಸಬ್‌ಸಿಡರಿ ಜನರಲ್ ಲೆಡ್ಜರ್ ಖಾತೆ ಅಥವಾ ಸ್ಟಾಕ್ ಸರ್ಟಿಫಿಕೇಟ್ ರೂಪದಲ್ಲಿ ಸರ್ಕಾರದ ಸೆಕ್ಯೂರಿಟಿಗಳನ್ನು ಹೊಂದಿದ ನೋಂದಾಯಿತ ಧಾರಕರುಗಳಿಗೆ, ಪರಿಪಕ್ವಗೊಂಡ ಉತ್ಪತ್ತಿಗಳನ್ನು ಅವರ ಬ್ಯಾಂಕ್ ಖಾತೆಯ ವಿವರಗಳನ್ನೊಳಗೊಂಡ ಪೇ ಆರ್ಡರ್ ಮೂಲಕ ಅಥವಾ ಅವರು ಇ ಬ್ಯಾಂಕಿಂಗ್ ಖಾತೆಯನ್ನು ಹೊಂದಿದ್ದಲ್ಲಿ, ಆ ಬ್ಯಾಂಕ್ ಖಾತೆಗೆ ಜಮೆ ಮಾಡುವ ಮೂಲಕ ಪಾವತಿಸಲಾಗುವುದು. ಸೆಕ್ಯೂರಿಟಿ ಮೊತ್ತವನ್ನು ಪಾವತಿಸಲು ಮೂಲ ವಂತಿಗೆದಾರರು ಅಥವಾ ತದನಂತರದ ಧಾರಕರು ಬ್ಯಾಂಕ್ ಅಥವಾ ಖಜಾನೆ ಮತ್ತು ಉಪ ಖಜಾನೆ ಅಥವಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆ, ಬಡ್ಡಿಯ ಸಂದಾಯಕ್ಕಾಗಿ ಮೊಹರೊತ್ತಲಾಗಿದೆಯೋ / ನೋಂದಾಯಿತವಾಗಿವೆಯೋ, ಅಂತಹ ಬ್ಯಾಂಕ್‌ಗಳಲ್ಲಿ, ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸತಕ್ಕದ್ದು.

3) ಅದಾಗ್ಯೂ, ಬ್ಯಾಂಕ್ ಖಾತೆಯ ವಿವರಗಳು ಇಲ್ಲದ / ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ಮೂಲಕ ವಂತಿಗೆಗಳ ಸ್ವೀಕೃತಿ ಸೌಲಭ್ಯವಿಲ್ಲದ ಸಂದರ್ಭಗಳಲ್ಲಿ ವಾಯಿದೆಯ ದಿನದಂದು ಮರುಸಂದಾಯವು ಅನುಕೂಲವಾಗುವಂತೆ, 9.54% ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2023 **(9.54% Karnataka SDL 2023)** ಹೊಂದಿದ ಧಾರಕರು ತಮ್ಮ ಸೆಕ್ಯೂರಿಟಿಗಳನ್ನು 20 ದಿನಗಳಿಗೆ ಮುಂಚಿತವಾಗಿ ಪಬ್ಲಿಕ್ ಡೆಟ್ ಆಫೀಸ್‌ಗಳಲ್ಲಿ ಒಪ್ಪಿಸತಕ್ಕದ್ದು, ಸೆಕ್ಯೂರಿಟಿಗಳ ಹಿಂಭಾಗದಲ್ಲಿ ಕೆಳಕಂಡಂತೆ ಯಥಾರೀತಿ ಬರೆದು ಮರುಸಂದಾಯಕ್ಕಾಗಿ ಅವುಗಳನ್ನು ಒಪ್ಪಿಸಬೇಕು.

"ಸರ್ಟಿಫಿಕೇಟ್ ಮೇಲೆ ಬಾಕಿಯಿರುವ ಅಸಲನ್ನು ಪಡೆಯಲಾಗಿದೆ".

4. ಭಾರತೀಯ ಸ್ಟೇಟ್ ಬ್ಯಾಂಕಿನ ಶಾಖೆಯ ಪೈಕಿ ಯಾವುದೇ ಬ್ಯಾಂಕಿನ ಶಾಖೆಯು ಖಜಾನೆ ಕೆಲಸವನ್ನು ನಡೆಸುವ ಸ್ಥಳಗಳಲ್ಲಿ ಸಾಲಪತ್ರಗಳು ಸ್ಟಾಕ್ ಸರ್ಟಿಫಿಕೇಟ್‌ಗಳ ರೂಪದಲ್ಲಿದ್ದರೆ, ಅವುಗಳನ್ನು ಸಂಬಂಧಪಟ್ಟ ಬ್ಯಾಂಕಿನ ಶಾಖೆಗೆ ಒಪ್ಪಿಸಬೇಕೇ ಹೊರತು ಖಜಾನೆಗೆ ಅಥವಾ ಉಪಖಜಾನೆಗೆ ಒಪ್ಪಿಸಕೂಡದು. ಈ ವಿಷಯವನ್ನು ವಿಶೇಷವಾಗಿ ಯಾವಾಗಲೂ ಗಮನದಲ್ಲಿಡಬೇಕು.

ಸಂದಾಯದ ಬಗ್ಗೆ ಸೆಕ್ಯೂರಿಟಿಗಳಿಗೆ ಎಲ್ಲಿ ಮೊಹರೊತ್ತಲಾಗಿದೆಯೋ ಆ ಸ್ಥಳಗಳಲ್ಲಿ ಹೊರತು ಬೇರೆ ಸ್ಥಳಗಳಲ್ಲಿ ಸಂದಾಯವನ್ನು ಪಡೆಯಬಯಸುವ ಧಾರಕರು, ಸಂಬಂಧಪಟ್ಟ ಸಾರ್ವಜನಿಕ ಋಣ ಕಛೇರಿಗೆ ಪಾವತಿಯಾಗಿರುವುದಾಗಿ ಯಥಾರೀತಿ ಬರೆದು ರಿಜಿಸ್ಟರ್ಡ್ ಮತ್ತು ವಿಮೆ ಮಾಡಿದ ಅಂಚೆ ಮೂಲಕ ಕಳುಹಿಸತಕ್ಕದ್ದು ಸಾರ್ವಜನಿಕ ಋಣ ಕಛೇರಿಯು ಡ್ರಾಫ್ಟ್ ಮೂಲಕ ಹಣ ಸಂದಾಯ ಮಾಡುತ್ತದೆ. ಅಂಥ ಡ್ರಾಫ್ಟ್‌ನ್ನು ಯಾವುದೇ ಖಜಾನೆ, ಉಪಖಜಾನೆ ಅಥವಾ ಕರ್ನಾಟಕ ರಾಜ್ಯದಲ್ಲಿ ಸರ್ಕಾರದ ಖಜಾನೆ ಕೆಲಸವನ್ನು ನಿರ್ವಹಿಸುವ ಭಾರತೀಯ ಸ್ಟೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಒಪ್ಪಿಸಿ ಹಣ ಪಡೆಯಬಹುದು.

ಸಹಿ/–
ಸರ್ಕಾರದ ಕಾರ್ಯದರ್ಶಿ
(ಆಯವ್ಯಯ ಮತ್ತು ಸಂಪನ್ಮೂಲ) ಆರ್ಥಿಕ ಇಲಾಖೆ

DIPR/CP/RO888/AAPL/2023-24

ಮಕ್ಕಳ ರಕ್ಷಣಾ ನಿರ್ದೇಶನಾಲಯ
ವಿಶ್ವೇಶ್ವರಯ್ಯ, ಚಿಕ್ಕಗೋಪುರ, 3ನೇ ಮಹಡಿ ಡಾಖಖ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560001. E-mail Id: icps.kar@gmail.com
ಸಂಖ್ಯೆ: ಮರನಿ/ಆಡಳಿತ/CHL-09/2023–24 ದಿನಾಂಕ: 09.08.2023

ಇ–ಟೆಂಡರ್ ಪ್ರಕಟಣೆ

ಮಕ್ಕಳ ಸಹಾಯವಾಣಿ, WCD Control Room ವೀಕ್ಷಣಾಲಯ ಆವರಣ, ಮಡಿವಾಳ, ಬೆಂಗಳೂರು ಇಲ್ಲಿಗೆ e-procurement ಮೂಲಕ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ಬಾಹ್ಯ ಮೂಲ ಏಜನ್ಸಿಯನ್ನು ಗುರುತಿಸಲು ಟೆಂಡರನ್ನು ಆಹ್ವಾನಿಸಲಾದೆ. ಟೆಂಡರ್ ವಿವರಣೆಯನ್ನು ಮಕ್ಕಳ ರಕ್ಷಣಾ ನಿರ್ದೇಶನಾಲಯದ Website: https://icps.karnataka.gov.in & https://kppp.karnataka.gov.in live tender ನಲ್ಲಿ ಈ ಲಿಂಕ್ ಮೂಲಕ ಟೆಂಡರ್ ಪ್ರಕಟಣೆಯ ನಮೂನೆಗಳನ್ನು ಪಡೆಯಬಹುದು.

ಸಹಿ/– ನಿರ್ದೇಶಕರು
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/874/ಆಕಾರ್/2023–24

ಕರ್ನಾಟಕ ಸರ್ಕಾರ
ನಗರಸಭೆ ಕಾರ್ಯಾಲಯ, ಹಾವೇರಿ–581 110
ವೆಬ್ ಸೈಟ್ : www.havericity.mrc.gov.in
ಇ–ಮೇಲ್–: itstaff_ulb_haveri@yahoo.com
ಜಿಲ್ಲೆ: ಹಾವೇರಿ
ದೂರವಾಣಿ ಕಛೇರಿ: 08375–232444
ಜನಹಿತ ಸಹಾಯವಾಣಿ: 080 375–23108108
ರಾಜ್ಯ: ಕರ್ನಾಟಕ

ಕ್ರ.ಸಂ/ನಸಹಾ/ತಾವಿ/ಟೆ.ಪ್ರ/ವಹಿ :2023–24 ದಿನಾಂಕ: 08–08–2023

ಟೆಂಡರ ಪ್ರಕಟಣೆ

ಈ ಮೂಲಕ ಯಾವತ್ತೂ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, ಇ–ಪ್ರಕ್ಯೂರಮೆಂಟ್ ಮೂಲಕ ರೂ.50.00 ಲಕ್ಷಗಳ ಹಾವೇರಿ ನಗರಸಭೆ ವ್ಯಾಪ್ತಿಯಲ್ಲಿ ಬರುವ ಗೂಗಿಕಟ್ಟಿಯಲ್ಲಿರುವ ಹೈ–ಟೆಕ್ ರಂಗಮಂದಿರ ನಿರ್ವಹಣೆಯ ಟೆಂಡರ್ ಕರೆಯಲಾಗಿದ್ದು, ಆಸಕ್ತವುಳ್ಳ ಗುತ್ತಿಗೆದಾರರು ತಮ್ಮ–ತಮ್ಮ ದರಗಳನ್ನು ಈ ಕೆಳಕಾಣಿಸಿದ ವೆಬ್ ಸೈಟ್ ಮೂಲಕ ನಮೂದಿಸಬಹುದಾಗಿದೆ.kppp.karnataka.gov.in ನಲ್ಲಿ ನೋಡಿ ತಿಳಿದುಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಈ ಕಾರ್ಯಾಲಯದ ಕಛೇರಿಯಲ್ಲಿ ಕೇಳಿ ತಿಳಿದು ಕೊಳ್ಳಬಹುದಾಗಿದೆ.

ಸಹಿ/– ಪೌರಾಯುಕ್ತರು,
ನಗರಸಭೆ, ಹಾವೇರಿ.

ವಾ.ಸಾ.ಇ/ಹಾವೇರಿ/105/2023–24/ದೇಶಪಾಂಡೆಪಬ್ಲಿಸಿಟಿ

SAINIK SCHOOL KODAGU
(Under Ministry of Defence, Govt. of India)
PO Kudige Dist: Kodagu, Karnataka PIN: 571232

RECRUITMENT NOTIFICATION NO : 04/2023

Applications are invited for the following vacancy at Sainik School Kodagu and the details are as follows:-

Sl. No.	Name of the Post	No. of Posts / Type of Post	Age as on Date of receipt of application	Category
1	Office Superintendent	01 (Regular)	18-50 Years	Unreserved

How to Apply. For detailed Notification including Application Form, visit School website **www.sainikschoolkodagu.edu.in** from **14 August 2023 (Monday).** The School administration reserves the right to cancel the vacancy due to administrative reasons. Last date of receipt of filled in applications is **12 September 2023 (Tuesday).**

PRINCIPAL

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರರವರ ಕಛೇರಿ, ರಸ್ತೆ ಮೂಲಸೌಕರ್ಯ ಮಹದೇವಪುರ ವಿಭಾಗ,
ನಂ. 97/2, 2ನೇ ಮಹಡಿ, ಕೃಷ್ಣಶೈನ್ ಕಟ್ಟಡ, ಮಾರತಹಳ್ಳಿ ಬ್ರಿಡ್ಜ್ ಹತ್ತಿರ, ಮಾರತಹಳ್ಳಿ, ಬೆಂಗಳೂರು–37.
ಸಂ: ಕಾಪಾಅ/ರಮೂಸೌ–ಮಪುರ/ಟೆಂಡರ್/01/2023–24 ದಿನಾಂಕ: 11.08.2023

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಆರ್‌ಎಫ್‌ಪಿ)
(ಜಿಒಕೆ ಕೆಪಿ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ, ಮಹಾದೇವಪುರ ವಿಭಾಗ ಇವರು ಮುಖ್ಯ ಆಯುಕ್ತರ ಪರವಾಗಿ, ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ	ಕಾಮಗಾರಿಯ ವಿವರ	ಕಾಮಗಾರಿಯ ಅಂದಾಜು ವೆಚ್ಚ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ. ಗಳಲ್ಲಿ)
1	ರಸ್ತೆ ಮೂಲಸೌಕರ್ಯ ಮಹಾದೇವಪುರ ವಿಭಾಗ ಮಾರತಹಳ್ಳಿ, ಹೂಡಿ & ವೈಟ್‌ಫೀಲ್ಡ್ ವಿಧಾನಸಭಾ ಕ್ಷೇತ್ರಗಳಲ್ಲಿ ಫುಟ್‌ಪಾತ್ ಸೇರಿದಂತೆ ಆರ್ಟೇರಿಯಲ್ ಮತ್ತು ಸಬ್ ಆರ್ಟೇರಿಯಲ್ ರಸ್ತೆಗಳ ವಾರ್ಷಿಕ ನಿರ್ವಹಣೆ.	61.02	1,25,000/–

1) ಟೆಂಡರ್ ಡಾಕ್ಯುಮೆಂಟ್‌ಗಳು ದೊರೆಯುವ ದಿನಾಂಕ: **14.08.2023ರಿಂದ** 2) ಪ್ರಿ–ಬಿಡ್ ಮೀಟಿಂಗ್: **21.08.2023ರ ಸಂಜೆ 15.30 ಗಂಟೆಗೆ.** 3) ಬಿಡ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **23.08.2023ರ 16.00 ಗಂಟೆಯವರೆಗೆ** 4) ತಾಂತ್ರಿಕ ಪ್ರಸ್ತಾಪಗಳನ್ನು ತೆರೆಯುವ ದಿನಾಂಕ: **24.08.2023, 16.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: **www.kppp.karnataka.gov.in**

ಸಹಿ/– ಕಾರ್ಯಪಾಲಕ ಅಭಿಯಂತರರು,
ರಸ್ತೆ ಮೂಲಸೌಕರ್ಯ–ಮಹಾದೇವಪುರ ವಿಭಾಗ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋ.ಇ ವಿಭಾಗ, ಶಿವಮೊಗ್ಗ
ಟೆಂಡರ್ ಪ್ರಕಟಣೆ ಸಂಖ್ಯೆ:ಕಾಪಾಲಿ/ಶಿವಿಶಿ/ಜೆಇ–2/ಐಎಫ್‌ಟಿ–01/2023–24
ದಿನಾಂಕ:09–08–2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ 'ನೊಂದಾಯಿತ 1ನೇ ದರ್ಜೆ, 2ನೇ ದರ್ಜೆ, 3ನೇ ದರ್ಜೆ & 4ನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ಇ–ಪ್ರಕ್ಯೂರಮೆಂಟ್ ಪೋರ್ಟಲ್ ಆವೃತ್ತಿ–2.0 kppp.karnataka.gov.in ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ ಮೀಸಲಿಡಲಾದ ಕಾಮಗಾರಿಗಳು
3054–03–337–0–05–200 ರಾಜ್ಯ ಹೆದ್ದಾರಿ ರಸ್ತೆ ನಿರ್ವಹಣೆ
1. ಹೊಸನಗರ ತಾಲ್ಲೂಕು 2 ಕಾಮಗಾರಿ 2. ಸಾಗರ ತಾಲ್ಲೂಕು 1 ಕಾಮಗಾರಿ 3. ಸೊರಬ ತಾಲ್ಲೂಕು 1 ಕಾಮಗಾರಿ
3054–04–337–1–10–200 ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ
1. ಹೊಸನಗರ ತಾಲ್ಲೂಕು 1 ಕಾಮಗಾರಿ 2. ಸಾಗರ ತಾಲ್ಲೂಕು 4 ಕಾಮಗಾರಿ 3. ಶಿಕಾರಿಪುರ ತಾಲ್ಲೂಕು 1 ಕಾಮಗಾರಿ 4. ಸೊರಬ ತಾಲ್ಲೂಕು 3 ಕಾಮಗಾರಿ
ಪರಿಶಿಷ್ಟ ಪಂಗಡ ಗುತ್ತಿಗೆದಾರರಿಗೆ ಮೀಸಲಿಡಲಾದ ಕಾಮಗಾರಿಗಳು
3054–03–337–0–05–200 ರಾಜ್ಯ ಹೆದ್ದಾರಿ ರಸ್ತೆ ನಿರ್ವಹಣೆ
1. ಸೊರಬ ತಾಲ್ಲೂಕು 1 ಕಾಮಗಾರಿ
3054–04–337–1–10–200 ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ
1. ಹೊಸನಗರ ತಾಲ್ಲೂಕು 1 ಕಾಮಗಾರಿ 2. ಸಾಗರ ತಾಲ್ಲೂಕು 1 ಕಾಮಗಾರಿ 3. ಸೊರಬ ತಾಲ್ಲೂಕು 1 ಕಾಮಗಾರಿ
3054–03–337–0–05–200 ರಾಜ್ಯ ಹೆದ್ದಾರಿ, ಸೇತುವೆ ನಿರ್ವಹಣೆ
1. ಸಾಗರ ತಾಲ್ಲೂಕು 1 ಕಾಮಗಾರಿ
3054–04–337–1–10–200 ಜಿಲ್ಲಾ ಮುಖ್ಯ ರಸ್ತೆಗಳ ಸೇತುವೆ ನಿರ್ವಹಣೆ
1. ಸಾಗರ ತಾಲ್ಲೂಕು 1 ಕಾಮಗಾರಿ
ಎಲ್ಲಾ ಗುತ್ತಿಗೆದಾರರಿಗೆ ಭಾಗವಹಿಸಬಹುದಾದ ಕಾಮಗಾರಿಗಳು
3054–03–337–0–05–200 ರಾಜ್ಯ ಹೆದ್ದಾರಿ ರಸ್ತೆ ನಿರ್ವಹಣೆ
1. ಹೊಸನಗರ ತಾಲ್ಲೂಕು 2 ಕಾಮಗಾರಿ 2. ಸಾಗರ ತಾಲ್ಲೂಕು 7 ಕಾಮಗಾರಿ 3. ಶಿಕಾರಿಪುರ ತಾಲ್ಲೂಕು 2 ಕಾಮಗಾರಿ 4. ಸೊರಬ ತಾಲ್ಲೂಕು 6 ಕಾಮಗಾರಿ
3054–04–337–1–10–200 ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ
1. ಹೊಸನಗರ ತಾಲ್ಲೂಕು 7 ಕಾಮಗಾರಿ 2. ಸಾಗರ ತಾಲ್ಲೂಕು 10 ಕಾಮಗಾರಿ 3. ಶಿಕಾರಿಪುರ ತಾಲ್ಲೂಕು 3 ಕಾಮಗಾರಿ 4. ಸೊರಬ ತಾಲ್ಲೂಕು 9 ಕಾಮಗಾರಿ
3054–03–337–0–05–200 ರಾಜ್ಯ ಹೆದ್ದಾರಿ, ಸೇತುವೆ ನಿರ್ವಹಣೆ
1. ಸಾಗರ ತಾಲ್ಲೂಕು 1 ಕಾಮಗಾರಿ
3054–04–337–1–10–200 ಜಿಲ್ಲಾ ಮುಖ್ಯ ರಸ್ತೆಗಳ ಸೇತುವೆ ನಿರ್ವಹಣೆ
1. ಸಾಗರ ತಾಲ್ಲೂಕು 3 ಕಾಮಗಾರಿ

ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮತ್ತು ಸಲ್ಲಿಸಲು ಕ್ರ.ಸಂ.10,29,30,55,56,57 ರ ಕಾಮಗಾರಿಗೆ ದಿನಾಂಕ:10–08–2023 ರಿಂದ 18–08–2023 ರ ವರೆಗೆ, ಕ್ರ.ಸಂ.:4,11,12,13,14,17,31,32,33,34,35,36, 58,59,60,61,62,63,64,65 ದಿನಾಂಕ: 11.08.2023 ರಿಂದ 19–08–2023 ವರೆಗೆ. ಕ್ರ.ಸಂ:1,2,3,5,6,7,8,9,15,16,18,19,20,21,22,23,24,25,26, 27,28,37,38,39,40,41,42,43,44,45,46,47,48,49,50,51,52,53, 66,67,68,69 ದಿನಾಂಕ:14–08–2023 ರಿಂದ 21–08–2023 ರ ವರೆಗೆ,
ಕಾಮಗಾರಿಗಳನ್ನು ಪೂರ್ಣಗೊಳಿಸಲು ಕಾಲಾವಧಿ(ಮಳೆಗಾಲ ಸೇರಿ) :ಎಲ್ಲಾ ಕಾಮಗಾರಿಗಳಿಗೆ ದಿನಾಂಕ : 31–03–2024
ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182–274942) ಹಾಗೂ ದೂರವಾಣಿ ಸಂಖ್ಯೆ: 080–25501216/ 080–25501227 ರಿಂದ ಮಾಹಿತಿ ಪಡೆಯಬಹುದು.

ಸಹಿ/– ಕಾ.ಇಂ, ಲೋಕೋಪಯೋಗಿ ಇಲಾಖೆ, ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/22/08/23–24/306

❦ ಸುಭಾಷಿತ ❦

ಸೋಲಿನ ಭೀತಿ ನಿಮಗಿದ್ದರೆ, ಹೆಚ್ಚು ದೂರ ಕ್ರಮಿಸಲು ನಿಮಗೆ ಸಾಧ್ಯವಾಗದು.

–ಸ್ಟೀವ್ ಜಾಬ್ಸ್

ಮಣಿಪುರ ಕುರಿತು ಸಂಸತ್ ಚರ್ಚೆ ವಿಷಾದನೀಯ ಸ್ಥಿತಿಯ ಪ್ರತಿಫಲನ

ನರೇಂದ್ರ ಮೋದಿ ನೇತೃತ್ವದ ಸರ್ಕಾರದ ವಿರುದ್ಧ ಲೋಕಸಭೆಯಲ್ಲಿ ವಿರೋಧ ಪಕ್ಷಗಳು ಮಂಡಿಸಿದ ಅವಿಶ್ವಾಸ ನಿರ್ಣಯ ಹಾಗೂ ಅದರ ಸುತ್ತಲಿನ ಚರ್ಚೆಗಳು ಮೂರು ದಿನಗಳಿಂದ ದೇಶದ ಜನರ ಗಮನವನ್ನು ಸೆಳೆದಿವೆ. ಆದರೆ ಈ ಚರ್ಚೆಗಳು ತೀರಾ ನಿರಾಶಾದಾಯಕ ಆಗಿದ್ದವು. ಏಕೆಂದರೆ ಅವು ಎಂದಿನ ಆವೇಶದ ಭಾಷಣಗಳ ಆಚೆಗೆ ವಿಸ್ತರಿಸಿಕೊಳ್ಳಲಿಲ್ಲ. ಅವಿಶ್ವಾಸ ನಿರ್ಣಯವು ಮೋದಿ ಅವರು ಮಣಿಪುರದಲ್ಲಿ ನಡೆಯುತ್ತಿರುವ ಹಿಂಸಾಚಾರದ ಬಗ್ಗೆ ಮೌನ ಮುರಿಯುವಂತೆ ಮಾಡುವ ಸೀಮಿತ ಉದ್ದೇಶವನ್ನು ಹೊಂದಿತ್ತು ಎಂದಾದರೆ, ನಿರ್ಣಯದ ಯಶಸ್ಸಿನ ಬಗ್ಗೆಯೇ ಪ್ರಶ್ನೆಗಳು ಮೂಡುತ್ತವೆ. ಏಕೆಂದರೆ, ಪ್ರಧಾನಿಯವರು ಮಣಿಪುರದ ವಿಚಾರವಾಗಿ ಕೊನೆಗೂ ಮಾತನಾಡಿದರಾದರೂ, ಅದರ ಎಲ್ಲ ಆಯಾಮಗಳ ಬಗ್ಗೆ ಅವರು ಪ್ರತಿಕ್ರಿಯೆ ನೀಡಲಿಲ್ಲ. ದೇಶವನ್ನು ಈಗ ಕಾಡುತ್ತಿರುವ ಅತ್ಯಂತ ಗಹನವಾದ ವಿಷಯವೊಂದರ ಬಗ್ಗೆ ಪ್ರಧಾನಿಯವರು ಮಾತನಾಡುವಂತೆ ಮಾಡಲು ವಿರೋಧ ಪಕ್ಷಗಳು ಸಂಸದೀಯ ಪ್ರಕ್ರಿಯೆಗಳಲ್ಲಿ ಅಂತಿಮ ಅಸ್ತ್ರವಾಗಿರುವ ಅವಿಶ್ವಾಸ ನಿರ್ಣಯ ಮಂಡಿಸಬೇಕಾಗುತ್ತದೆ ಎಂದಾದರೆ, ಅದೊಂದು ವಿಷಾದನೀಯ ಸ್ಥಿತಿ ಎನ್ನದೆ ವಿಧಿಯಿಲ್ಲ. ಈ ಸ್ಥಿತಿಯು ವಿರೋಧ ಪಕ್ಷಗಳ ಅಸಹಾಯಕತೆಯನ್ನೂ ಸರ್ಕಾರದ ಹಾಗೂ ಅದರ ನಾಯಕನ ಅಹಂಕಾರ, ಸಂವೇದನಾಶೂನ್ಯತೆ, ಪ್ರಶ್ನೆಗೆ ಅತೀತರಾಗಿದ್ದೇವೆ ಎಂಬ ಮನೋಭಾವವನ್ನೂ ತೋರಿಸುತ್ತದೆ. ಈ ಸ್ಥಿತಿಯು ದೇಶದ ಪ್ರಜಾತಂತ್ರ ವ್ಯವಸ್ಥೆ ತಲುಪಿರುವ ಅವಸ್ಥೆಯ ಪ್ರತಿಬಿಂಬವೂ ಹೌದು.

ಅಲ್ಲಿನ ಮಾತುಗಳು, ಮುಂಬರುವ ಲೋಕಸಭಾ ಚುನಾವಣೆಗೆ ಪ್ರಚಾರ ಕಾರ್ಯವು ಸಂಸತ್ತಿನಿಂದಲೇ ಶುರುವಾಗಿದೆಯೇನೋ ಎಂದು ಅನ್ನಿಸುವಂತೆ ಇದ್ದವು

ಮಣಿಪುರದಲ್ಲಿ ಶಾಂತಿಯನ್ನು ಮರುಸ್ಥಾಪನೆ ಮಾಡಲು ಸರ್ಕಾರವು ಏನು ಮಾಡಲಿದೆ ಎಂಬುದನ್ನು ತಿಳಿಸುವ ವಿಚಾರವಾಗಿ ಪ್ರಧಾನಿಯವರ ಮಾತುಗಳಲ್ಲಿ ಅಥವಾ ಗೃಹ ಸಚಿವ ಅಮಿತ್ ಶಾ ಅವರ ಮಾತುಗಳಲ್ಲಿ ಹೆಚ್ಚಿನ ವಿವರಗಳೇನೂ ಇರಲಿಲ್ಲ. ಪರಿಸ್ಥಿತಿ ಸುಧಾರಿಸುತ್ತದೆ ಎಂಬ ಆಶಾಭಾವನೆ ಅವರ ಮಾತುಗಳಲ್ಲಿ ಇತ್ತು. ಸಮರ್ಥನೆ ಸಾಧ್ಯವೇ ಇಲ್ಲ ಎಂಬ ಹಂತ ತಲುಪಿರುವ ರಾಜ್ಯ ಸರ್ಕಾರದ ಸಮರ್ಥನೆ ಇತ್ತು. ಇವುಗಳ ಜೊತೆಯಲ್ಲಿ, ಈಗ ಮಾಮೂಲು ಎಂಬಂತಾಗಿರುವ, ಮಣಿಪುರದ, ಈಶಾನ್ಯ ಭಾರತದ ಯಾವುದೇ ರಾಜ್ಯದ ಅಥವಾ ಭಾರತದ ಯಾವುದೇ ಪ್ರದೇಶದ ಸಮಸ್ಯೆಗಳಿಗೆ ಕಾಂಗ್ರೆಸ್ ಹೊಣೆ ಎನ್ನುವ ಮಾತುಗಳು ಕೂಡ ಇದ್ದವು. ಮೂರು ತಿಂಗಳಿನಿಂದ ಮಣಿಪುರದಲ್ಲಿ ಸಂಘರ್ಷ ನಡೆದಿರುವಾಗ, 'ನಾವು ಪರಿಹಾರ ಕಂಡುಕೊಳ್ಳುತ್ತೇವೆ' ಎಂದು ಪ್ರಧಾನಿಯವರು ಆಡಿದ ಮಾತುಗಳು ಬದ್ಧತೆಯನ್ನಾಗಲೀ, ವಿಶ್ವಾಸವನ್ನಾಗಲೀ ವ್ಯಕ್ತಪಡಿಸುತ್ತಿಲ್ಲ. ಪ್ರಧಾನಿಯವರು ಸುದೀರ್ಘವಾಗಿ ಮಾತನಾಡಿದರು. ಅವರ ಮಾತುಗಳಲ್ಲಿ ಮಣಿಪುರದ ಬಗ್ಗೆ ಉಲ್ಲೇಖವೇ ಆಗದಿದ್ದಾಗ ವಿರೋಧ ಪಕ್ಷಗಳ ಸದಸ್ಯರು ಸಭಾತ್ಯಾಗ ಮಾಡಿದರು. ಆ ನಂತರದಲ್ಲಿ ಪ್ರಧಾನಿಯವರು ಮಣಿಪುರದ ಬಗ್ಗೆ ಮಾತನಾಡಿದರು. ಪ್ರಧಾನಿಯವರು ತಮ್ಮ ಭಾಷಣದಲ್ಲಿ ಹೆಚ್ಚಿನ ಸಮಯವನ್ನು ವಿರೋಧ ಪಕ್ಷಗಳನ್ನು ಅಣಕಿಸಲು, ಗೇಲಿ ಮಾಡಲು ಹಾಗೂ ಟೀಕಿಸಲು ಬಳಸಿಕೊಂಡರು. 'ನನ್ನನ್ನು ಪ್ರಶ್ನಿಸಲು ನಿಮಗೆ ಅದೆಷ್ಟು ಧೈರ್ಯ' ಎಂಬ ಧೋರಣೆ ಅವರ ಮಾತುಗಳಲ್ಲಿ ಇತ್ತು. ಮಾತುಗಳಲ್ಲಿ ಆರ್ಭಟ ಇತ್ತು. ರಾಜಕೀಯ ನಿಲುವುಗಳು ಬಿಗಿಗೊಳ್ಳುತ್ತಿರುವ, ರಾಷ್ಟ್ರ ರಾಜಕಾರಣದಲ್ಲಿನ ಅಂತರ ಹಾಗೂ ಬಿಕ್ಕಟ್ಟು ಹೆಚ್ಚುತ್ತಿರುವ ಸೂಚನೆಗಳು ಆ ಮಾತುಗಳಲ್ಲಿ ಇದ್ದವು. ದುರದೃಷ್ಟದ ವಿಚಾರವೆಂದರೆ, ಚರ್ಚೆ, ಸಂವಾದ ಹಾಗೂ ನಿರ್ಣಯ ಕೈಗೊಳ್ಳುವುದಕ್ಕೆ ದೇಶದ ಅತ್ಯುನ್ನತ ವೇದಿಕೆಯಾಗಿರುವ ಸಂಸತ್ತು ಸೋತುಹೋಗಿರುವುದರ ಸೂಚನೆಗಳು ಅಲ್ಲಿನ ಮಾತುಗಳಲ್ಲಿ ಇದ್ದವು. ಇವಿಷ್ಟನ್ನು ಹೊರತುಪಡಿಸಿದರೆ ಅಲ್ಲಿನ ಮಾತುಗಳು ಹೆಚ್ಚಿನದೇನನ್ನೂ ಧ್ವನಿಸಲಿಲ್ಲ.

ಅಲ್ಲಿ ಮಾತುಗಳ ಆಲಿಸುವಿಕೆ ಇರಲಿಲ್ಲ. ಬದಲಿಗೆ, ಮಾತನಾಡುವಿಕೆ ಮಾತ್ರವೇ ಇತ್ತು. ಮಾತುಗಳನ್ನು ಆಡಿದವರು ದೇಶದ ಮುಂದೆ ತಾವು ಚರ್ಚಿಸಲು ಬಯಸಿದ ವಿಷಯಗಳ ಬಗ್ಗೆ ಸಂವಾದ ನಡೆಸಲಿಲ್ಲ. ತಮ್ಮತಮ್ಮಲ್ಲಿಯೇ ಮಾತನಾಡಿಕೊಂಡರು. ಪ್ರಧಾನಿಯವರು ತಾವು ಹೇಳಬೇಕಿದ್ದುದನ್ನು ಹೇಳಲು ಮಾತ್ರ ಎಂಬಂತೆ ಲೋಕಸಭೆಗೆ ಬಂದರು. ಅಲ್ಲಿನ ಮಾತುಗಳು, 2024ರ ಲೋಕಸಭಾ ಚುನಾವಣೆಗೆ ಪ್ರಚಾರ ಕಾರ್ಯವು ಸಂಸತ್ತಿನಿಂದಲೇ ಶುರುವಾಗಿದೆಯೇನೋ ಎಂದು ಅನ್ನಿಸುವಂತೆ ಇದ್ದವು. ವಿರೋಧ ಪಕ್ಷಗಳು ಹೊಸದೊಂದು ಮೈತ್ರಿಕೂಟವನ್ನು ರಚಿಸಿಕೊಂಡ ನಂತರದಲ್ಲಿ ಆಡಳಿತಾರೂಢರನ್ನು ನೇರವಾಗಿ ಎದುರಿಸಿದ ಮೊದಲ ಮಹತ್ವದ ವೇದಿಕೆ ಇದಾಗಿತ್ತು. ಸಂಸತ್ತಿನಲ್ಲಿ ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಯ ಸಂದರ್ಭದಲ್ಲಿ ಏನು ಹೇಳಲಾಯಿತು ಹಾಗೂ ಹೇಗೆ ಹೇಳಲಾಯಿತು ಎಂಬುದು, ಮುಂದೆ ಬರಲಿರುವ ಚುನಾವಣೆಯಲ್ಲಿ ಯಾವುದಕ್ಕೆ ಆದ್ಯತೆ ನೀಡಬೇಕು, ಯಾವುದನ್ನು ಪಕ್ಕಕ್ಕೆ ಸರಿಸಬೇಕು ಎಂಬುದಕ್ಕೆ ಭೂಮಿಕೆ ಸಜ್ಜುಗೊಳಿಸಿಕೊಡಲಿದೆ.

ದಿನದ ಟ್ವೀಟ್

ನೀರು ಪೋಲಾಗದಿರಲಿ

ನೀರು ಮತ್ತು ಅದರ ಅಗತ್ಯ ಇರುವ ನಾಗರಿಕರಿಗೆ ಸಂಪೂರ್ಣ ಅಗೌರವ ತೋರುವ ನಡೆ ಇದು. ನೀರನ್ನು ಯಥೇಚ್ಛವಾಗಿ ಬಳಸಿ ಜನ ಕಾರು ಹಾಗೂ ಮನೆಯ ಆವರಣ ತೊಳೆಯುವುದನ್ನು ಪ್ರತಿನಿತ್ಯ ವಾಯುವಿಹಾರದ ವೇಳೆ ನಾನು ಗಮನಿಸುತ್ತೇನೆ. ಬಿಡಬ್ಲ್ಯುಎಸ್‌ಎಸ್‌ಬಿ (ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ) ಈ ಸಂಬಂಧ ಗಸ್ತು ಪಡೆಯನ್ನು ನಿಯೋಜಿಸಿ ಇಂತಹವರಿಗೆ ದಂಡ ವಿಧಿಸುವ, ನೀರಿನ ಸಂಪರ್ಕ ಕಡಿತ ಮಾಡುವಂತಹ ಕ್ರಮಗಳನ್ನು ತೆಗೆದುಕೊಳ್ಳಬೇಕು. ಇದರಿಂದ ಅವರಿಗೆ ನೀರಿನ ಮೌಲ್ಯ ಅರ್ಥವಾಗುತ್ತದೆ.

ಆನಂದ ಗುಂಡೂರಾವ್, ಬಿ-ಪ್ಯಾಕ್ ಸದಸ್ಯ

ಕಿಡಿನುಡಿ

ಭಾರತದ ಕ್ರಿಮಿನಲ್ ಅಪರಾಧ ಕಾನೂನಿನ ತಿರುಳನ್ನು ಆಮೂಲಾಗ್ರವಾಗಿ ಬದಲಾಯಿಸಲು ಕೇಂದ್ರ ಸರ್ಕಾರವು ಮೂರು ಮಸೂದೆಗಳನ್ನು ಈಗಷ್ಟೇ ಮಂಡಿಸಿದೆ. ಈ ಬಗ್ಗೆ ಯಾವುದೇ ಸಮಾಲೋಚನೆ ನಡೆದಿಲ್ಲ. ಚರ್ಚೆ ಇಲ್ಲ. ಅವುಗಳನ್ನು ಪರಿಶೀಲನೆಗೆ ಒಳಪಡಿಸಲು ಯಾವ ಪ್ರಸ್ತಾವಕ್ಕೂ ಅವಕಾಶವಿಲ್ಲ. ದೇವರೇ ನಮ್ಮೆಲ್ಲರ ನೆರವಿಗೆ ಬರಬೇಕು.

ರಾಜದೀಪ್ ಸರ್‌ದೇಸಾಯಿ, ಪತ್ರಕರ್ತ

25 ವರ್ಷಗಳ ಹಿಂದೆ

ಬುಧವಾರ, 12-8-1998

● ಕಾವೇರಿ ಪ್ರಾಧಿಕಾರಕ್ಕೆ ಅಧಿಸೂಚನೆ ಯೋಜನೆಗೆ ಶಾಸನದ ಸ್ವರೂಪ

ನವದೆಹಲಿ, ಆ. 11– ಸರ್ಕಾರಕ್ಕೆ ನೀಡಿರುವ ಬೆಂಬಲವನ್ನು ಪುನರ್‌ವಿಮರ್ಶಿಸುವ ಜಯಲಲಿತಾ ಅವರ ಬೆದರಿಕೆಯ ನಡುವೆಯೇ ಪ್ರಧಾನಿ ನೇತೃತ್ವದ ಕಾವೇರಿ ನದಿ ಪ್ರಾಧಿಕಾರ ಮತ್ತು ಅದಕ್ಕೆ ಪೂರಕವಾಗಿ ಕಾರ್ಯನಿರ್ವಹಿಸುವ ಉಸ್ತುವಾರಿ ಸಮಿತಿಯನ್ನು ಒಳಗೊಂಡ ನೂತನ ಕಾವೇರಿ ಜಲ ಯೋಜನೆಗೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಇಂದು ಅಧಿಸೂಚನೆ ಹೊರಡಿಸಿತು.

ನ್ಯಾಯಮಂಡಳಿಯ ಮಧ್ಯಂತರ ಆಜ್ಞೆಯನ್ನು ಜಾರಿಗೆ ತರುವಂತೆ ಕರ್ನಾಟಕಕ್ಕೆ ಆಜ್ಞಾಪಿಸಬೇಕೆಂದು ಸುಪ್ರೀಂ ಕೋರ್ಟ್‌ನಲ್ಲಿ ತಮಿಳುನಾಡು ಹೂಡಿರುವ ಮೊಕದ್ದಮೆ ಹಿನ್ನೆಲೆಯಲ್ಲಿ ಈ ಯೋಜನೆ ಜಾರಿಗೆ ಬಂದಿದೆ.

● ಅತಿಕ್ರಮಣ ತಡೆಗೆ 'ಭೂಮಿ ಸಂರಕ್ಷಣ ಪ್ರಾಧಿಕಾರ'

ಬೆಂಗಳೂರು, ಆ. 11– ಸರ್ಕಾರಿ ಭೂಮಿ ಅತಿಕ್ರಮಿಸುವುದನ್ನು ನಿಯಂತ್ರಿಸಲು ಶಾಸನಬದ್ಧ ಅಧಿಕಾರವುಳ್ಳ 'ಸರ್ಕಾರಿ ಭೂಮಿ ಸಂರಕ್ಷಣ ಪ್ರಾಧಿಕಾರ' ರಚಿಸಲು ರಾಜ್ಯ ಸರ್ಕಾರ ಉದ್ದೇಶಿಸಿದೆ.

50 ವರ್ಷಗಳ ಹಿಂದೆ

ಭಾನುವಾರ, 12-8-1973

● ಆಳವಾದ ಶೋಧನೆಗೆ ವಿಶೇಷ ಅಧಿಕಾರಿ ನೇಮಕ ಸಂಭವ

ಬೆಂಗಳೂರು, ಆ. 11– ಭದ್ರಾವತಿ ಕಬ್ಬಿಣ ಹಾಗೂ ಉಕ್ಕು ಕಾರ್ಖಾನೆಯ ಕೆಲವು ವ್ಯವಹಾರಗಳ ಬಗ್ಗೆ 'ಆಳವಾದ ಶೋಧನೆ' ಅಗತ್ಯವೆಂದು ಶ್ರೀ ಆರ್.ಸಿ.ದತ್ ಅವರು ಹೇಳಿರುವ ವಿಷಯಗಳನ್ನು ಪರಿಶೀಲಿಸಲು ವಿಶೇಷ ಅಧಿಕಾರಿಯೊಬ್ಬರನ್ನು ಸರ್ಕಾರ ನೇಮಿಸುವ ಸಂಭವವಿದೆ.

ಕೈಗಾರಿಕಾ ಸಚಿವ ಶ್ರೀ ಎಸ್.ಎಂ.ಕೃಷ್ಣ ಅವರು ಇಂದು ಈ ಸೂಚನೆಯನ್ನು ವರದಿಗಾರರಿಗೆ ನೀಡಿದರು.

'ದತ್ ಸಮಿತಿಯ ವರದಿಯನ್ನು ಮಂತ್ರಿಮಂಡಲದ ಮುಂದೆ ಮಂಡಿಸುತ್ತೇನೆ. ಅವರ ಶಿಫಾರಸುಗಳ ಬಗ್ಗೆ ಮಂತ್ರಿಮಂಡಲ ತೀರ್ಮಾನ ಕೈಗೊಳ್ಳುವುದು' ಎಂದು ದತ್ ವರದಿಯನ್ನು ವರದಿಗಾರರಿಗೆ ಬಿಡುಗಡೆ ಮಾಡಿದಾಗ ಸಚಿವರು ಹೇಳಿದರು.

● ನ್ಯಾಯಾಂಗವು ಕಾರ್ಯಾಂಗದ ಕೈಗೊಂಬೆ ಆಗುವ ಭಯ

ನವದೆಹಲಿ, ಆ. 11– ನ್ಯಾಯಾಧೀಶರನ್ನು ನೇಮಿಸುವ ಬಗೆಗೆ ಸರ್ಕಾರ ಅನುಸರಿಸುತ್ತಿರುವ ನೀತಿಯನ್ನು ನೋಡಿದರೆ 'ನ್ಯಾಯಾಂಗವನ್ನು ಕಾರ್ಯಾಂಗದ ಕೈಗೊಂಬೆಯನ್ನಾಗಿ ಮಾಡುವ' ಮತ್ತು 'ಪ್ರಜಾಸತ್ತಾತ್ಮಕ ವ್ಯವಸ್ಥೆಯ ಪ್ರಜಾಪ್ರಭುತ್ವವನ್ನೇ ತಲೆಕೆಳಗು ಮಾಡುವ' ಭಯ ತಲೆದೋರಿದೆ.

ಅಖಿಲ ಭಾರತ ವಕೀಲರ ಸಮ್ಮೇಳನದಲ್ಲಿ ಮಾತನಾಡಿದ ಹಿರಿಯ ವಕೀಲರು ಇಂದು ಈ ಭಯ ವ್ಯಕ್ತಪಡಿಸಿದರು.

ಸರ್ಕಾರ ಹೊಂದಿರುವ ಧೋರಣೆಯನ್ನು ತಳೆದಿರುವ ವ್ಯಕ್ತಿಗಳನ್ನೇ ನ್ಯಾಯಾಧೀಶರ ಹಿರಿಯ ಸ್ಥಾನಗಳಿಗೆ ಆಯ್ಕೆ ಮಾಡುವ ಸರ್ಕಾರದ ನೀತಿಯನ್ನು ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಮಾಜಿ ಅಟಾರ್ನಿ ಜನರಲ್ ಎಂ.ಸಿ.ಸೆಟಲ್‌ವಾಡ್ ಅವರು ಟೀಕಿಸಿದರು.

ಭಿನ್ನ ಸಂಸ್ಕೃತಿಗಳ ನಡುವೆ ಸಂವಹನ ಇರುವಂತೆ ಮಾಡುವುದು ಈಗಿನ ಅಗತ್ಯ

ಅಪಪ್ರಚಾರಕ್ಕೆ ತಕ್ಕ ಪ್ರತ್ಯುತ್ತರ

ಸೂರ್ಯ–ನಮಸ್ಕಾರ

ಎ.ಸೂರ್ಯ ಪ್ರಕಾಶ್

ಖ್ಯಾತ ಮುಸ್ಲಿಂ ವಿದ್ವಾಂಸ ಮುಹಮ್ಮದ್ ಬಿನ್ ಅಬ್ದುಲ್ ಕರೀಂ ಅಲ್–ಇಸ್ಸಾ ಅವರು ಭಾರತದ ಪ್ರಜಾತಂತ್ರ ವ್ಯವಸ್ಥೆ, ಇಲ್ಲಿನ ಬಹುತ್ವ ಹಾಗೂ ಭಾರತದ ಸಂವಿಧಾನದ ಮೂಲಭೂತ ಮೌಲ್ಯಗಳ ಬಗ್ಗೆ ಪ್ರಶಂಸೆಯ ಮಾತುಗಳನ್ನು ಆಡಿದ್ದಾರೆ. ಈ ಮಾತುಗಳ ಪರಿಣಾಮವಾಗಿ, ಪೊಳ್ಳು ಜಾತ್ಯತೀತವಾದಿಗಳು, ಮೋದಿ ನಿಂದಕರು ಮತ್ತು ಈಗ ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವವರು ಇಸ್ಲಾಂ ಕುರಿತು ಭೀತಿ ಹರಡುತ್ತಿದ್ದಾರೆ ಎಂದು ಸುಳ್ಳು ಹರಡುತ್ತಿರುವವರ ಬಾಯಿ ಬಂದ್ ಆಗಿದೆ. ಅಲ್–ಇಸ್ಸಾ ಅವರು ಮುಸ್ಲಿಂ ವರ್ಲ್ಡ್ ಲೀಗ್‌ನ ಮಹಾ ಪ್ರಧಾನ ಕಾರ್ಯದರ್ಶಿ.

ವಿಶ್ವದಾದ್ಯಂತ ಇರುವ ಮುಸ್ಲಿಮರನ್ನು ಮುಸ್ಲಿಂ ವರ್ಲ್ಡ್ ಲೀಗ್ ಪ್ರತಿನಿಧಿಸುತ್ತಿದೆ. ಅದರ ಮುಖ್ಯಸ್ಥರಾಗಿರುವ ಅಲ್–ಇಸ್ಸಾ ಅವರಿಂದ ಬಂದಿರುವ ಮಾತುಗಳು ಗಮನಾರ್ಹ. ಈ ಮಾತುಗಳು, ಭಾರತ ವಿರೋಧಿ ಶಕ್ತಿಗಳು ದೇಶದ ಒಳಗೆ ಹಾಗೂ ಹೊರಗೆ ನಡೆಸುತ್ತಿರುವ ಪ್ರಚಾರಾಂದೋಲನದ ಬಗ್ಗೆ ಭಾರತೀಯ ಮುಸ್ಲಿಮರಲ್ಲಿ ಅರಿವು ಮೂಡಿಸುವಂತೆ ಇವೆ. ಭಾರತೀಯ ಮುಸ್ಲಿಮರು ಭಾರತದಲ್ಲಿ ಅನುಭವಿಸುತ್ತಿರುವ ಸ್ವಾತಂತ್ರ್ಯ, ಅವರಿಗೆ ಇಲ್ಲಿರುವ ಅವಕಾಶಗಳ ಬಗ್ಗೆಯೂ ಅರಿವು ನೀಡುವಂತೆ ಇವೆ.

ಅಲ್–ಇಸ್ಸಾ ಅವರು ಈ ಮೊದಲು ಸೌದಿ ಅರೇಬಿಯಾ ದೇಶದ ಕಾನೂನು ಸಚಿವರಾಗಿದ್ದರು. ಅವರ ಮಾತುಗಳನ್ನು ಇಸ್ಲಾಂನ ಅಧಿಕೃತ ದನಿ ಎಂಬಂತೆ ಪರಿಗಣಿಸಲಾಗುತ್ತದೆ. ಅವರು ಇಸ್ಲಾಮಿಕ್ ಹಲಾಲ್ ಸಂಘಟನೆಯ ಅಧ್ಯಕ್ಷ ಕೂಡ ಹೌದು. ಅವರು ಮಂದಗಾಮಿ ಧೋರಣೆಯ ಇಸ್ಲಾಂ ಹಾಗೂ ಅಂತರ್‌ಧರ್ಮೀಯ ಸಂವಾದಗಳ ಪರ ನಿಲುವು ಹೊಂದಿರುವವರು. ಎರಡು ಪವಿತ್ರ ಮಸೀದಿಗಳ ರಕ್ಷಕನ ಸ್ಥಾನದಲ್ಲಿರುವ ಸೌದಿ ಅರೇಬಿಯಾದ ದೊರೆ 2022ರ ಜುಲೈನಲ್ಲಿ ಹಜ್ ಧಾರ್ಮಿಕ ಪ್ರವಚನ ನೀಡಲು ಆಹ್ವಾನಿಸಿದ್ದು ಅಲ್–ಇಸ್ಸಾ ಅವರನ್ನು. ಆ ಪ್ರವಚನದ ವೇಳೆ ಅಲ್–ಇಸ್ಸಾ ಅವರು, ಮುಸ್ಲಿಮರು ದ್ವೇಷಭಾವನೆಯನ್ನು ತೊರೆಯಬೇಕು ಎಂದು ಹೇಳಿದ್ದರು.

ಈಚೆಗೆ ಭಾರತಕ್ಕೆ ಭೇಟಿ ನೀಡಿದ್ದ ಅವರು, ಹಲವು ಸಭೆಗಳಲ್ಲಿ ಪಾಲ್ಗೊಂಡರು. ಅದರಲ್ಲಿ ಒಂದು ವಿವೇಕಾನಂದ ಅಂತರರಾಷ್ಟ್ರೀಯ ಪ್ರತಿಷ್ಠಾನದ್ದು (ವಿಐಎಫ್). ವಿಐಎಫ್‌ನಲ್ಲಿನ ಪ್ರಮುಖ ಹಿಂದೂ ಧಾರ್ಮಿಕ ನಾಯಕರ ಜೊತೆ ಅವರು ಆಳವಾದ ಚರ್ಚೆಯಲ್ಲಿ ಭಾಗಿಯಾಗಿದ್ದರು. ಜಗತ್ತಿನ ಅತ್ಯಂತ ಹಳೆಯ ನಾಗರಿಕತೆಗಳಲ್ಲಿ ಒಂದಾಗಿರುವ ಭಾರತದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. 'ಇಂದಿನ ಜಗತ್ತು ಎದುರಿಸುತ್ತಿರುವ ಕೆಲವು ಪ್ರಮುಖ ಬಿಕ್ಕಟ್ಟುಗಳನ್ನು ಬಗೆಹರಿಸುವ ಶಕ್ತಿಯು ಭಾರತೀಯ ತತ್ವಶಾಸ್ತ್ರಕ್ಕೆ ಇದೆ' ಎಂದರು. ಅವರ ಪ್ರಕಾರ, ಮುಸ್ಲಿಂ ಜಗತ್ತು ಭಾರತದ ತಾತ್ವಿಕತೆಯನ್ನು ಅರ್ಥ ಮಾಡಿಕೊಂಡು ಅದರಿಂದ ಪ್ರಯೋಜನ ಪಡೆದುಕೊಳ್ಳಬೇಕು.

ಹಿಂದೂ ಧರ್ಮಗುರುಗಳ ಜೊತೆಗಿನ ಮಾತುಕತೆಯಲ್ಲಿ ಅಲ್–ಇಸ್ಸಾ ಅವರು ಆಡಿದ ಪ್ರಮುಖ ಮಾತುಗಳು ಯಾವುವು ಎಂಬುದನ್ನು ವಿಐಎಫ್‌ನಿಂದ ಬಂದ ಪ್ರಕಟಣೆಯಲ್ಲಿ ಹೇಳಲಾಗಿದೆ: ಬೇರೆ ಬೇರೆ ನಾಯಕರು ತಮ್ಮ ರಾಜಕೀಯ ಅಜೆಂಡಾಕ್ಕೆ ಅನುಗುಣವಾಗಿ ಕುರಾನ್‌ಗೆ ನೀಡಿರುವ ಭಿನ್ನ ವ್ಯಾಖ್ಯಾನಗಳು ಅಪಾರ್ಥಕ್ಕೆ, ಅಪನಂಬಿಕೆಗೆ ಹಾಗೂ ಇತರರ ಬಗ್ಗೆ ದ್ವೇಷಕ್ಕೆ ಎಡೆಮಾಡಿಕೊಟ್ಟಿವೆ; ಪರಸ್ಪರ ಗೌರವವನ್ನು ಕುರಾನ್ ಸಾರುತ್ತದೆ, ಬಹುತ್ವವನ್ನು ಗುರುತಿಸುವುದರಿಂದ ಭಿನ್ನ ಸಂಸ್ಕೃತಿಗಳ ನಡುವೆ ಒಳ್ಳೆಯ ಸಂಬಂಧ ಉಳಿಯುತ್ತದೆ. ಹೀಗಾಗಿ ಭಿನ್ನ ಸಂಸ್ಕೃತಿಗಳ ನಡುವೆ ಸಂವಹನ ಇರುವಂತೆ ಮಾಡುವುದು ಈಗಿನ ಅಗತ್ಯ.

ಸಹಬಾಳ್ವೆಯನ್ನು ಪಸರಿಸುವಲ್ಲಿ ಅಲ್–ಇಸ್ಸಾ ಅವರ ಹಿನ್ನೆಲೆಯೇನು ಎಂಬುದನ್ನು ಅವರ ಕೆಲಸಗಳೇ ಹೇಳುತ್ತವೆ. ಮೂರು ವರ್ಷಗಳ ಹಿಂದೆ ಪೋಲೆಂಡಿನ 'ಕಾನ್‌ಸಂಟ್ರೇಷನ್ ಶಿಬಿರ'ಕ್ಕೆ ನಿಯೋಗವೊಂದನ್ನು ಒಯ್ದಿದ್ದ ಅವರು, ಸಹಬಾಳ್ವೆಯನ್ನು ಸಾಧಿಸುವ ವಿಚಾರದಲ್ಲಿ ಮುಸ್ಲಿಂ ವರ್ಲ್ಡ್ ಲೀಗ್ ಯಹೂದಿ ಸಮುದಾಯದ ಜೊತೆ ನಿಲ್ಲಲಿದೆ ಎಂದು ಹೇಳಿದ್ದರು. ಇದು ಅಸಾಮಾನ್ಯವಾದುದು, ಅವರನ್ನು ಶಾಂತಿಯ ನಿಜ ದೂತನನ್ನಾಗಿಸುವಂಥದ್ದು.

ಯಾವುದೇ ದೇಶದಲ್ಲಿನ ಅಲ್ಪಸಂಖ್ಯಾತರು ಆ ದೇಶದ ಜೊತೆ ಪೂರ್ತಿಯಾಗಿ ಒಂದಾಗಬೇಕಾದ ಅಗತ್ಯವನ್ನು ಅಲ್–ಇಸ್ಸಾ ಅವರು ತಮ್ಮ ಬಹಿರಂಗ ಭಾಷಣಗಳಲ್ಲಿ ಒತ್ತಿ ಹೇಳುತ್ತಾರೆ. ಅಲ್ಪಸಂಖ್ಯಾತರಿಗೆ ಅವರ ಸಲಹೆ ಹೀಗಿದೆ: ನಿಮ್ಮ ದೇಶವನ್ನು ಪ್ರೀತಿಸಿ, ನಿಮ್ಮ ದೇಶಕ್ಕಾಗಿ ಯಾವುದೇ ತ್ಯಾಗಕ್ಕೂ ಸಿದ್ಧರಿರಿ. ಇಸ್ಲಾಂನ ಮೂಲಭೂತವಾದಿಗಳ ನಿಲುವಿಗೆ ವ್ಯತಿರಿಕ್ತವಾಗಿ ಅಲ್–ಇಸ್ಸಾ ಅವರು, ಬಹುತ್ವವು ಜಗತ್ತಿನ ವಾಸ್ತವ ಎಂದೂ ಅದನ್ನು ಎಲ್ಲರೂ ಒಪ್ಪಿಕೊಳ್ಳಬೇಕು ಎಂದೂ ಭಾರತಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಹಲವು ಬಾರಿ ಹೇಳಿದರು. ನಾಗರಿಕತೆಗಳ ನಡುವಿನ ಸಂಘರ್ಷವನ್ನು ತಡೆಯಲು ಇದೊಂದೇ ದಾರಿ.

ಭಾರತದ ಸಂವಿಧಾನ ಹಾಗೂ ಪ್ರಜಾತಂತ್ರದ ಬಗ್ಗೆ ಮೆಚ್ಚುಗೆಯ ಮಾತನಾಡುವಾಗ ಅಲ್–ಇಸ್ಸಾ ಅವರು ಮೋದಿ ನೇತೃತ್ವದ ಸರ್ಕಾರದ ಬಗ್ಗೆ ನಿರ್ದಿಷ್ಟವಾಗಿ ಏನೂ ಹೇಳಲಿಲ್ಲ. ಬದಲಿಗೆ, ಭಾರತವು ಒಂದು ನಾಗರಿಕತೆಯಾಗಿ ಪ್ರಜಾತಂತ್ರ ಹಾಗೂ ಸಹಿಷ್ಣುತೆಯ ಬಗ್ಗೆ ಹೊಂದಿರುವ ಬದ್ಧತೆ, ದೇಶದ ಸಂವಿಧಾನದ ಮೂಲಭೂತ ಮೌಲ್ಯಗಳ ಬಗ್ಗೆ ಮಾತನಾಡಿದರು. ಹೀಗಿದ್ದರೂ ಮೋದಿ ವಿರೋಧಿಗಳಿಗೆ ಸಮಾಧಾನ ಆಗಲಿಲ್ಲ. ಉದಾಹರಣೆಗೆ, ವಿರೋಧ ಪಕ್ಷದ ವಕ್ತಾರರೊಬ್ಬರು ಟಿ.ವಿ. ಕಾರ್ಯಕ್ರಮವೊಂದರಲ್ಲಿ, 'ಅಲ್–ಇಸ್ಸಾ ಯಾರು? ಅವರ ಹಿನ್ನೆಲೆ ಏನು? ಅವರು ಎನ್‌ಜಿಒ ನಡೆಸುತ್ತಿದ್ದಾರೆ ಅನ್ನಿಸುತ್ತದೆ, ಅದಕ್ಕೆ ಕೇಂದ್ರ ಸರ್ಕಾರದ ನೆರವು ಬೇಕು ಅನ್ನಿಸುತ್ತಿದೆ' ಎಂದು ಹೇಳಿದಂತಿತ್ತು.

ಅಲ್–ಇಸ್ಸಾ ಅವರ ಮಾತುಗಳನ್ನು ಇನ್ನೊಬ್ಬ ಟೀಕಾಕಾರ 'ಸಾರ್ವಜನಿಕರ ನಡುವೆ ಸದಭಿಪ್ರಾಯ ಮೂಡಿಸುವ ಕೆಲಸವಷ್ಟೇ' ಎಂದು ವ್ಯಂಗ್ಯವಾಡಿದರು. ಅಲ್–ಇಸ್ಸಾ ಅವರು 'ಸರ್ಕಾರಿ ಮುಸ್ಲಿಂ' ಎಂದು ದೂರಿದರು. ಇಂತಹ ಮಾತುಗಳೇ ದುರಂತ. ಅಲ್ಲದೆ, ದೇಶದ ಕೆಲವು ರಾಜಕಾರಣಿಗಳು ಹಾಗೂ ಕೆಲವು ರಾಜಕೀಯ ಪಕ್ಷಗಳು ಸೌಹಾರ್ದ ಕದಡುವುದನ್ನೇ ಹೇಗೆ ನೆಚ್ಚಿಕೊಂಡಿವೆ ಎಂಬುದನ್ನು ತೋರಿಸುತ್ತದೆ. ಮೋದಿ ನೇತೃತ್ವದ ಸರ್ಕಾರವು ಅಲ್ಪಸಂಖ್ಯಾತರ ವಿಚಾರದಲ್ಲಿ ತಾರತಮ್ಯದ ನಡೆ ಅನುಸರಿಸುತ್ತಿದೆ ಎಂಬ ಭಾವನೆಯನ್ನು ಮುಸ್ಲಿಮರ ತಲೆಯಲ್ಲಿ ತುಂಬಿದವರಿಗೆ ಸೌದಿ ಅರೇಬಿಯಾದ ಮುಸ್ಲಿಂ ಧರ್ಮಗುರುವೊಬ್ಬರು ಬಹುತ್ವದೊಂದಿಗೆ ಭಾರತದಲ್ಲಿ ಇರುವ ಸೌಹಾರ್ದ ಭಾವದ ಮಾತನಾಡಿದ್ದನ್ನು, ವಿಶ್ವದ ಇತರರು ಭಾರತವನ್ನು ಅನುಕರಿಸಬೇಕು ಎಂದು ಮೆಚ್ಚುಗೆಯ ಮಾತುಗಳನ್ನು ಆಡಿರುವುದನ್ನು ಒಪ್ಪಿಕೊಳ್ಳಲು ಆಗುತ್ತಿಲ್ಲ.

ಸೌದಿ ಅರೇಬಿಯಾದಲ್ಲಿ ಹಾಗೂ ಮುಸ್ಲಿಂ ಜಗತ್ತಿನಲ್ಲಿ ಅಲ್–ಇಸ್ಸಾ ಅವರು ಹೊಂದಿರುವ ಹೆಚ್ಚುಗಾರಿಕೆಯನ್ನು ಗಮನಿಸಿದರೆ, ಭಾರತದ ನಾಗರಿಕತೆಯ ಮೌಲ್ಯಗಳ ಬಗ್ಗೆ, ಇಲ್ಲಿನ ಸಂವಿಧಾನದ ಬಗ್ಗೆ ಅವರು ಹೊಂದಿರುವ ಗೌರವವು ಈ ದೇಶವನ್ನು ಹಾಗೂ ಇಲ್ಲಿನ ಪ್ರಜಾತಂತ್ರವನ್ನು ಕೀಳಾಗಿ ಕಾಣುತ್ತಿರುವವರಲ್ಲಿ ಮನಃಪರಿವರ್ತನೆ ತರುವಂತಹ ಪ್ರಭಾವ ಬೀರಬಲ್ಲದು ಎಂದು ಅನ್ನಿಸುತ್ತದೆ. ವಿಶ್ವದ ಅತಿದೊಡ್ಡ ಪ್ರಜಾತಂತ್ರ ರಾಷ್ಟ್ರದಲ್ಲಿ, ವಿಶ್ವದ ಅತ್ಯಂತ ವೈವಿಧ್ಯಮಯವಾದ ಸಮಾಜದಲ್ಲಿ ತಾವು ಪಡೆದಿರುವುದರ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಲು ಅಲ್ಪಸಂಖ್ಯಾತ ಸಮುದಾಯದವರಿಗೆ ಇಂಬು ಕೊಡುತ್ತದೆ ಎಂಬ ಆಶಾಭಾವನೆ ಇಟ್ಟುಕೊಳ್ಳಬಹುದು. ಕಳೆದ ವರ್ಷದ ಹಜ್ ಸಂದರ್ಭದಲ್ಲಿ ಧಾರ್ಮಿಕ ಪ್ರವಚನ ನೀಡಲು ಆಹ್ವಾನಿತರಾಗಿದ್ದ ವ್ಯಕ್ತಿಯು ಭಾರತದ ಬಗ್ಗೆ ಇಷ್ಟೊಂದು ಒಳ್ಳೆಯ ಮಾತುಗಳನ್ನು ಹೇಳಿದ್ದಾರೆ ಎಂದಾದರೆ, ಆ ಮಾತಿಗೆ ಮಹತ್ವ ಇರಲೇಬೇಕು. ಜಾಗತಿಕ ಸೌಹಾರ್ದಕ್ಕಾಗಿ ಅಭಿಯಾನ ಕೈಗೊಂಡಿರುವ, ಅರೇಬಿಯಾದಿಂದ ಬಂದ ಶಾಂತಿದೂತ ಈ ಮಾತನ್ನು ಹೇಳಿದ್ದಾರೆ ಎಂದಾದರೆ, ಆ ಮಾತಿನಲ್ಲಿ ಮಹತ್ವ ಇದ್ದಿರಲೇಬೇಕು.

ಚುರುಮುರಿ

ವೈರಸ್ ಪೈಲ್ಸ್

● ತುರುವೇಕೆರೆ ಪ್ರಸಾದ್

'ಲೇಯ್, ನಮ್ ಕೈಪಕ್ಷದ ಶಾಸಕರಿಗೆ ಈ ಪರಿಸ್ಥಿತಿ ಬರಬಾರದಾಗಿತ್ತು' ಎಂದು ಹರಟೆಕಟ್ಟೇಲಿ ಲೊಚಗುಟ್ಟಿದ ಗುದ್ಲಿಂಗ.

'ಈಗ ಅವರೇ ಆಳೋರಲ್ವಾ? ಅವರಿಗೇನ್ ಕಮ್ಮಿಯಾಗಿದೆ?' ಕೇಳಿದ ಕಲ್ಲೇಶಿ.

'ಅಯ್ಯೋ ಹಿಂದೆ ಜನತಾದರ್ಶನದಲ್ಲಿ ಸಿಎಂ ನೋಡಕ್ಕೆ, ಕಷ್ಟ ಯೋಳ್ಕಳಕ್ಕೆ ಜನ ವೋಯ್ತಿದ್ರು. ಈಗ ಶಾಸಕರೇ ಸಿಎಂ ದರ್ಶನ ಮಾಡಿ ತಮ್ ಕಷ್ಟ ಯೇಳ್ಕಳೋ ಪರಿಸ್ಥಿತಿ ಬಂದದೆ'.

'ಕೆಲವು ಸಚಿವರು ತಾ ತಾ ಅಂತಾವ್ರೆ ಅನ್ನೋ ಆರೋಪ ಬಂದೈತೆ. ಜೊತೆಗೆ ಎಲ್ಲಾ ಕಡೆ ಬರ ಬೀಳಂಗಾಗಿ ಕಾಲಿಟ್ಟಲ್ಲಿ ಕೂಳೆ, ಕೈ ಇಟ್ಟಲ್ಲಿ ಕೊಳೆ ಅನ್ನೋ ಅಂಗಾಗದೆ. ಇಂಗಾದ್ರೆ ಮುಂದಿನ್ ದೊಡ್ ಎಲೆಕ್ಷನ್ ಎಂಗ್ ಗೆಲ್ಲದು ಅಂತ ತಾರಾತಿಗಡಿ ಯೋಳ್ಕಳಕ್ಕೆ ಸಿಎಂ ತಾವ ಬಂದಿದ್ರಂತೆ'.

'ಹ್ಲೂಂಕಣ್ಲಾ! ಪರಿಸ್ಥಿತಿ ಇರ್ವಾರಾ ಕೆಟ್ಹೋಗದಂತೆ. ಡಮಾರ್ ಅಂದಿರೋ ಒಂದು ಟ್ರಾನ್ಸ್‌ಫಾರ್ಮರ್ರೂ ಕೊಡಕ್ಕಿಲ್ಲ ಅಂದ್ರೆ ಎಂಗೆ? ಟ್ರಾನ್ಸ್‌ಫಾರ್ಮರ್ರೇ ಇಲ್ಲ ಅಂದ್ರೆ ಗೃಹಜ್ಯೋತಿ ಉರ್ಸಾದು ಎಂಗೆ? ನಮ್ಗೆ ಅನ್ಯಾಯ ಆದಂಗಲ್ವಾ ಅಂತ ಫಾರ್ಮರ್ಸು ಕೇಳ್ತಾವ್ರಂತೆ' ಎಂದ ಮಾಲಿಂಗ.

'ಟ್ರಾನ್ಸ್‌ಫಾರ್ಮರ್ಸ್‌ದು ಒಂದು ಸಂಕಟ, ಫಾರ್ಮರ್ಸುದು ಒಂದು ವ್ಯಥೆ, ಟ್ರಾನ್ಸ್‌ಫರ್ಸ್‌ದೂ ಅದ್ವಾನ ಆಗದೆ ಅಂತ ಗುಲ್ಲೆದ್ದದೆ'.

'ಹ್ಲೂಂಕಣ್ಲಾ, ನಾವ್ ಕೇಳಿದ್ ಪ್ರಾಪರ್ಟಿ ಡೆವಲಪ್‌ಮೆಂಟ್ ಆಫೀಸರ್‌ಗಳನ್ನೇ (ಪಿಡಿಒ) ಆಯಕಟ್ಟಿನ ಜಾಗಕ್ಕೆ ಆಕುಸ್ಕಬೇಕು ಅಂತ ಪೈಪೋಟಿಗೆ ಬಿದ್ದವ್ರೆ'.

'ರಸ್ತೆದೂ ಅಂಗೇ ಆಗದಂತೆ. ಗುಡ್ ರೋಡಿರ್ಲಿ, ಮಡ್ ರೋಡ್ ಮಾಡಕ್ಕೂ ಅನುದಾನ ಬತ್ತಿಲ್ಲ ಅಂತ ಸಾಸಕರು ಗರಂ ಆಗವ್ರಂತೆ'.

'ಗ್ಯಾರಂಟಿ ಅಂತ ಬೇಕಾದಷ್ಟು ಸವಲತ್ತು ಕೊಟ್ಟಿಲ್ವಾ? ಸ್ವಲ್ಪ ಅಡ್ಜೆಸ್ಟ್ ಮಾಡ್ಕಬೇಕಪ್ಪ?'

'ಅದೆಂಗಾಯ್ತದೆ? ಬಸ್ಸಲ್ಲಿ ಫ್ರೀ ಬುಟ್ಟಿದೀವಿ ಅಂತ ಗುಂಡಿ ಗೊಟ್ರು ಇರೋ ರಸ್ತೇಲಿ ಬಸ್ ಎತ್ತಾಕ್ಬುಟ್ರೆ ಸ್ತ್ರೀ ಶಕ್ತಿ ಸುಮ್ಕೆ ಇರುತ್ತಾ?'

'ಇವೇ ಇಂಗಾಗವೆ, ಇನ್ನು ಕುಮಾರಣ್ಣ ಜೇಬಲ್ಲಿ ಮಡಿಕ್ಕಂಡಿರೋ ಪೆನ್‌ಡ್ರೈವ್‌ನಲ್ಲಿ ಅದ್ಯಾವ್ಯಾವ ಪಲ್ಟಿ ಹೊಡ್ಸೋ ಸರ್ಕಸ್ ಫೈಲ್ಸ್ ಇವೆಯೋ ದೇವರಿಗೇ ಗೊತ್ತು'.

'ಅವು ಸರ್ಕಸ್ ಫೈಲ್ಸ್ ಅಲ್ಲ, ಅಂಗೇ ಅಮರಿಕೊಳ್ಳೋ ವೈರಸ್ ಪೈಲ್ಸ್' ಎಂದ ಪರ್ಮೇಶಿ. ಎಲ್ಲಾ ಗೊಳ್ಳೆಂದು ನಕ್ಕರು.

ಸಂಗತ

ಗ್ರಂಥಪಾಲನೆ ಮತ್ತು ವೈಜ್ಞಾನಿಕ ತಳಹದಿ

ಜನಸಾಮಾನ್ಯರಿಗೂ ಗ್ರಂಥಾಲಯಗಳ ಸೇವೆ ಲಭ್ಯವಾಗುವಂತೆ ಮಾಡುವಲ್ಲಿ 'ಗ್ರಂಥಾಲಯ ಪಿತಾಮಹ'ನ ಪಾತ್ರ ಹಿರಿದಾದುದು

● ರಾಜಕುಮಾರ ಕುಲಕರ್ಣಿ

ದೇಶದಲ್ಲಿ ಪ್ರತಿವರ್ಷ ಆಗಸ್ಟ್ 12ರಂದು 'ಗ್ರಂಥಪಾಲಕರ ದಿನ' ಆಚರಿಸಲಾಗುತ್ತದೆ. ಅಂದು, 'ಗ್ರಂಥಾಲಯ ಪಿತಾಮಹ' ಎಂಬ ಗೌರವಕ್ಕೆ ಪಾತ್ರರಾಗಿರುವ ಎಸ್.ಆರ್.ರಂಗನಾಥನ್ ಅವರ ಜನ್ಮದಿನ. ಭಾರತದಲ್ಲಿ ಗ್ರಂಥಾಲಯಗಳ ಸ್ಥಾಪನೆ ಮತ್ತು ಅವುಗಳ ಅಭಿವೃದ್ಧಿಗೆ ಚಳವಳಿಯ ಸ್ವರೂಪ ನೀಡಿದವರು ರಂಗನಾಥನ್.

ರಂಗನಾಥನ್ ಅವರು ಗ್ರಂಥಾಲಯ ವಿಜ್ಞಾನದಲ್ಲಿ ಶಿಕ್ಷಣ ಪಡೆದವರಲ್ಲ. ಅಂದು ಗ್ರಂಥಾಲಯ ಎನ್ನುವುದು ಶಾಸ್ತ್ರೀಯವಾಗಿ ಅಧ್ಯಯನ ಮಾಡುವ ವಿಷಯವೂ ಆಗಿರಲಿಲ್ಲ. ಗಣಿತದಲ್ಲಿ ಸ್ನಾತಕೋತ್ತರ ಶಿಕ್ಷಣ ಪಡೆದ ಅವರು, ಮದ್ರಾಸ್ ವಿಶ್ವವಿದ್ಯಾಲಯದಲ್ಲಿ 1924ರಲ್ಲಿ ಗ್ರಂಥಪಾಲಕರಾಗಿ ನಿಯುಕ್ತಿಗೊಳ್ಳುವುದರೊಂದಿಗೆ ಗ್ರಂಥಾಲಯ ಕ್ಷೇತ್ರವನ್ನು ಪ್ರವೇಶಿಸಿದರು. ಪರಿಣಾಮವಾಗಿ, ಆ ವರ್ಷವನ್ನು ಗ್ರಂಥಾಲಯ ಕ್ಷೇತ್ರದಲ್ಲಿ ಒಂದು ಚಾರಿತ್ರಿಕ ಘಟನೆಗೆ ಕಾರಣವಾದ ವರ್ಷವೆಂದು ಉಲ್ಲೇಖಿಸಲಾಗಿದೆ.

ಅರೆಕಾಲಿಕ ಉಪನ್ಯಾಸಕರಾಗಿದ್ದಾಗ ವಿದ್ಯಾರ್ಥಿಗಳ ಆದರ ಮತ್ತು ಗೌರವಕ್ಕೆ ಪಾತ್ರರಾಗಿದ್ದ ರಂಗನಾಥನ್ ಅವರಿಗೆ, ಆರಂಭದಲ್ಲಿ ಗ್ರಂಥಪಾಲಕ ಹುದ್ದೆ ನೀರಸ ಎನಿಸಿತ್ತು. ತಾವು ಮೊದಲು ಬೋಧಿಸುತ್ತಿದ್ದ ಕಾಲೇಜಿನ ಪ್ರಾಚಾರ್ಯರಲ್ಲಿ ಬೇಸರವನ್ನು ಹೇಳಿಕೊಂಡು, ಕಾಯಂ ಹುದ್ದೆಗೆ ರಾಜೀನಾಮೆ ನೀಡಿ ಹಿಂದಿನ ಹುದ್ದೆಗೇ ಹಿಂದಿರುಗಲು ಬಯಸಿದರು. ಪ್ರಾಚಾರ್ಯರಾದ ಮಿ.ಡಂಕನ್ ಅವರು ವಿಶ್ವವಿದ್ಯಾಲಯದ ಮೂಲಕ ರಂಗನಾಥನ್ ಅವರನ್ನು ತರಬೇತಿಗೆಂದು ಇಂಗ್ಲೆಂಡಿಗೆ ಕಳುಹಿಸಿ, ಭಾರತಕ್ಕೊಬ್ಬ ಗ್ರಂಥಾಲಯ ಚಳವಳಿಯ ರೂವಾರಿ ದೊರೆಯುವಂತೆ ಮಾಡಿದರು.

ಲಂಡನ್‌ನ ಸ್ಕೂಲ್ ಆಫ್ ಲೈಬ್ರರಿಯನ್‌ಶಿಪ್‌ನಲ್ಲಿ ರಂಗನಾಥನ್ ತರಬೇತಿ ಪಡೆದರು. ಇಂಗ್ಲೆಂಡಿನಲ್ಲಿ ನೂರಾರು ಗ್ರಂಥಾಲಯಗಳನ್ನು ದರ್ಶಿಸಿದ ಅವರಿಗೆ ಭಾರತ ಮತ್ತು ವಿದೇಶದಲ್ಲಿನ ಗ್ರಂಥಾಲಯಗಳ ನಡುವಿನ ವ್ಯತ್ಯಾಸದ ಅರಿವಾಯಿತು. ಅಲ್ಲಿನ ಓದುಗಸ್ನೇಹಿ ಕಟ್ಟಡಗಳು, ಗ್ರಂಥಪಾಲಕರ ಸೇವಾ ಮನೋಭಾವ, ಅತ್ಯುತ್ತಮ ಪೀಠೋಪಕರಣ, ಪುಸ್ತಕಗಳು ಎಲ್ಲವನ್ನೂ ವೀಕ್ಷಿಸಿದ ಅವರು, ಭಾರತದಲ್ಲಿ ತಾವು ಮಾಡಬೇಕಾದ ಯೋಜನೆಗಳ ನೀಲನಕ್ಷೆಯನ್ನು ಲಂಡನ್‌ನಲ್ಲಿ ಇರುವಾಗಲೇ ಸಿದ್ಧಪಡಿಸಿಕೊಂಡರು. ಭಾರತಕ್ಕೆ ಮರಳಿ ಮುಂದಿನ ನಾಲ್ಕೂವರೆ ದಶಕಗಳ ಕಾಲ ಗ್ರಂಥಾಲಯಗಳ ಸ್ಥಾಪನೆ ಮತ್ತು ಬೆಳವಣಿಗೆಯನ್ನೇ ತಮ್ಮ ಬದುಕಿನ ಧ್ಯೇಯವಾಗಿಸಿಕೊಂಡರು.

ಗ್ರಂಥಾಲಯದ ಆಡಳಿತಕ್ಕೆ ವೈಜ್ಞಾನಿಕ ತಳಹದಿ ಕಟ್ಟಿಕೊಡಲು ರಂಗನಾಥನ್ ಐದು ಸೂತ್ರಗಳನ್ನು ರಚಿಸಿದರು. 1931ರಲ್ಲಿ ರಚನೆಯಾದ ಈ ಸೂತ್ರಗಳು ಸಾರ್ವಕಾಲಿಕ ಮಹತ್ವ ಪಡೆದಿವೆ. ಅವು ಹೀಗಿವೆ: ಗ್ರಂಥಗಳು ಉಪಯೋಗಕ್ಕಾಗಿ ಇವೆ. ಪ್ರತಿಯೊಬ್ಬ ಓದುಗನಿಗೆ ಅವನದೇ ಗ್ರಂಥ. ಪ್ರತಿಯೊಂದು ಗ್ರಂಥಕ್ಕೆ ಒಬ್ಬ ಓದುಗ. ಓದುಗನ ಸಮಯ ಉಳಿಸಿ. ಗ್ರಂಥಾಲಯ ಬೆಳೆಯುತ್ತಿರುವ ಸಂಸ್ಥೆ.

'ಮಾಹಿತಿಯು ಉಪಯೋಗಕ್ಕಾಗಿ ಇದೆ' ಎಂದು ಹೇಳುವುದರ ಮೂಲಕ ರಂಗನಾಥನ್ ಅವರ ಐದು ಸೂತ್ರಗಳನ್ನು ಪ್ರಸ್ತುತ ದಿನಗಳಲ್ಲೂ ಉಪಯೋಗಿಸಲಾಗುತ್ತಿದೆ. ಅವರ ನಿರಂತರ ಪ್ರಯತ್ನದ ಪರಿಣಾಮವಾಗಿ ದೇಶದಲ್ಲಿ ಸಾರ್ವಜನಿಕ ಗ್ರಂಥಾಲಯಗಳು ಸ್ಥಾಪನೆಯಾದವು. ಸೇವಾ ಗುಣಮಟ್ಟದ ಸುಧಾರಣೆಗಾಗಿ ಅವುಗಳ ಆರ್ಥಿಕ ನೆಲೆಯನ್ನು ಸುಭದ್ರಗೊಳಿಸಲು 1949ರಲ್ಲಿ ಪ್ರಥಮ ಬಾರಿಗೆ ಅಂದಿನ ಮದ್ರಾಸ್ ಸರ್ಕಾರಕ್ಕೆ ಸಾರ್ವಜನಿಕ ಗ್ರಂಥಾಲಯ ಕಾಯ್ದೆಯನ್ನು ರಂಗನಾಥನ್ ರೂಪಿಸಿಕೊಟ್ಟರು. ಸರ್ಕಾರವು ಸಾರ್ವಜನಿಕ ತೆರಿಗೆಯಿಂದ ವಸೂಲಾಗುವ ಹಣದಲ್ಲಿ ಇಂತಿಷ್ಟು ಪ್ರಮಾಣದ ಹಣವನ್ನು ಸಾರ್ವಜನಿಕ ಗ್ರಂಥಾಲಯಗಳ ಅಭಿವೃದ್ಧಿಗಾಗಿ ವಿನಿಯೋಗಿಸಿಕೊಳ್ಳಬೇಕೆಂದು ಈ ಕಾಯ್ದೆಯಲ್ಲಿ ಹೇಳಲಾಗಿದೆ. ಇಂದು ದೇಶದ ಅನೇಕ ರಾಜ್ಯಗಳಲ್ಲಿ ಸಾರ್ವಜನಿಕ ಗ್ರಂಥಾಲಯ ಕಾಯ್ದೆ ಜಾರಿಯಲ್ಲಿದೆ.



ಅಮೆರಿಕನ್ ಗ್ರಂಥಪಾಲಕಿ ಕೊಕ್ರೇನ್ 'ಪರ್ಸನಲ್ ಕಮ್ಯುನಿಕೇಷನ್' ಎಂಬ ಲೇಖನದಲ್ಲಿ ರಂಗನಾಥನ್ ಅವರ ವ್ಯಕ್ತಿತ್ವದ ಕುರಿತು ಹೀಗೆ ಬರೆಯುತ್ತಾರೆ: 'ಇದು 1970ರ ಮಾತು. ರಂಗನಾಥನ್ ಅವರನ್ನು ಭೇಟಿಯಾಗಲು ಬೆಂಗಳೂರಿನ ಅವರ ಮನೆಗೆ ಹೋದ ಆ ದಿನ ರವಿವಾರವಾಗಿತ್ತು. ವಾರದ ರಜಾ ದಿನವಾಗಿದ್ದರೂ ಅಂದು ರಂಗನಾಥನ್ ಅವರೊಡನೆ ಹತ್ತಕ್ಕಿಂತ ಹೆಚ್ಚು ಜನ ಮಾತು ಮತ್ತು ಚರ್ಚೆಯಲ್ಲಿ ತೊಡಗಿದ್ದರು. ವೃತ್ತಿಯಿಂದ ಗ್ರಂಥಪಾಲಕರಾಗಿದ್ದ ಅವರೆಲ್ಲ ರಂಗನಾಥನ್‌ರ ಸುತ್ತ ವಿಧೇಯ ವಿದ್ಯಾರ್ಥಿಗಳಂತೆ ಕುಳಿತು, ಅವರು ಹೇಳುತ್ತಿದ್ದುದನ್ನು ಏಕಾಗ್ರಚಿತ್ತರಾಗಿ ಆಲಿಸುತ್ತಿದ್ದರು. ನಾಲ್ಕಾರು ಗಂಟೆಗಳ ಚರ್ಚೆಯ ನಂತರವೂ ರಂಗನಾಥನ್‌ರ ಮುಖದಲ್ಲಿ ಸ್ವಲ್ಪವೂ ಬಳಲಿಕೆ ಮತ್ತು ಬೇಸರ ಕಾಣಿಸದಿದ್ದುದನ್ನು ನೋಡಿ ನನಗೆ ಅಚ್ಚರಿಯಾಯಿತು. ಏಕೆಂದರೆ ಆ ಸಂದರ್ಭ ರಂಗನಾಥನ್‌ರಿಗೆ 78 ವರ್ಷ ವಯಸ್ಸಾಗಿತ್ತು. ಗಾಂಧೀಜಿ ಆದರ್ಶವನ್ನು ಅವರು ರೂಢಿಸಿಕೊಂಡಿದ್ದರು. ಅವರ ಊಟ ಮತ್ತು ಉಡುಪಿನಲ್ಲಿ ಸರಳತೆ ಎದ್ದು ಕಾಣುತ್ತಿತ್ತು. ಖಾಸಗಿ ಬದುಕನ್ನು ಅನೇಕ ಇತಿಮಿತಿಗಳಿಗೆ ಸೀಮಿತಗೊಳಿಸಿಕೊಂಡು, ದುಡಿಮೆಯ ಹಣವನ್ನೆಲ್ಲ ಗ್ರಂಥಾಲಯಗಳ ಅಭಿವೃದ್ಧಿಗಾಗಿ ವಿನಿಯೋಗಿಸಿದ್ದರು'.

ಒಟ್ಟಿನಲ್ಲಿ, ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಒಂದು ಕ್ಷೇತ್ರವನ್ನು ರಂಗನಾಥನ್ ತಮ್ಮ ಸೇವಾ ಮನೋಭಾವ ಹಾಗೂ ಸಂಶೋಧನಾತ್ಮಕ ಗುಣದಿಂದ ಸಮಾಜದ ಮುಖ್ಯವಾಹಿನಿಗೆ ತಂದು ನಿಲ್ಲಿಸಿದರು. ಜನಸಾಮಾನ್ಯರಿಗೂ ಪುಸ್ತಕಗಳು ಓದಲು ದೊರೆಯುವಂತೆ ಮಾಡಿ ಆ ಮೂಲಕ ಸ್ವಸ್ಥ ಮತ್ತು ಸಾಂಸ್ಕೃತಿಕ ಸಮಾಜದ ನಿರ್ಮಾಣಕ್ಕೆ ಕಾರಣರಾದರು.

ವಾಚಕರ ವಾಣಿ

ಅನುಕರಣೀಯ ನಡೆ

ದಾವಣಗೆರೆಯಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮವೊಂದರಲ್ಲಿ, ಕಾಂಗ್ರೆಸ್ ಮುಖಂಡ ಎಚ್.ಆಂಜನೇಯ ಅವರು ವೇದಿಕೆಯ ಮೇಲೆ ಉಪಸ್ಥಿತರಿದ್ದ ನ್ಯಾಯಾಧೀಶರ ಜೊತೆ ಕುಳಿತುಕೊಳ್ಳಲು ನಿರಾಕರಿಸಿ, ಸಭಿಕರ ಮಧ್ಯೆ ಕುಳಿತುಕೊಂಡದ್ದು ಮಾಧ್ಯಮಗಳಲ್ಲಿ ವರದಿಯಾಗಿದೆ. ಆಂಜನೇಯ ಅವರು ಕೋವಿಡ್ ನಿಯಮ ಉಲ್ಲಂಘನೆಯಡಿ ದಾಖಲಾಗಿರುವ ಪ್ರಕರಣವನ್ನು ಎದುರಿಸುತ್ತಿರುವ ಆರೋಪಿಯಾಗಿದ್ದಾರೆ. ಹೀಗಾಗಿ, ಆರೋಪಿಯೊಬ್ಬ ನ್ಯಾಯಾಧೀಶರ ಪಕ್ಕ ಕುಳಿತುಕೊಳ್ಳುವುದು ತಮಗೆ ಸರಿಕಾಣದು, ತಮ್ಮ ಅಂತಃಸಾಕ್ಷಿ ಅದಕ್ಕೆ ಒಪ್ಪುವುದಿಲ್ಲ ಎಂದು ಹೇಳುವ ಮೂಲಕ ಆಂಜನೇಯ ಅವರು ಉತ್ತಮ ನಡೆ ಪ್ರದರ್ಶಿಸಿದ್ದಾರೆ. ಹಾಗೆ ಕುಳಿತರೆ ಸದರಿ ನ್ಯಾಯಾಧೀಶರಿಗೂ ಮುಜುಗರ ಉಂಟಾಗುವ ಸಾಧ್ಯತೆ ಇತ್ತು. ನ್ಯಾಯಾಧೀಶರ ಸ್ಥಾನ ತುಂಬಾ ಪವಿತ್ರವಾದದ್ದು. ಅವರ ಮೇಲೆ ಯಾರೂ ಪ್ರಭಾವ ಬೀರುವಂತಿಲ್ಲ. ಈ ಮೊದಲು ತಾವೇ ವಕೀಲರಾಗಿ ವಾದಿಸಿದ್ದ ಕಕ್ಷಿದಾರರ ಪ್ರಕರಣ ತಮ್ಮ ಮುಂದೆ ಬಂದಾಗ, ಅಂತಹ ಪ್ರಕರಣದಿಂದ ನ್ಯಾಯಾಧೀಶರು ಹಿಂದಕ್ಕೆ ಸರಿದ ಹಲವಾರು ನಿದರ್ಶನಗಳಿವೆ.

ವಿಷಾದದ ಸಂಗತಿಯೆಂದರೆ, ಅನೇಕ ರಾಜಕಾರಣಿಗಳು ಕ್ರಿಮಿನಲ್ ಪ್ರಕರಣಗಳನ್ನು ಎದುರಿಸಿ ಜೈಲಿಗೆ ಹೋಗಿ ಬಂದಿದ್ದರೂ ರಾಜಾರೋಷವಾಗಿ ಮಂತ್ರಿ ಪದವಿ ಸೇರಿದಂತೆ ಉನ್ನತ ಸ್ಥಾನಗಳಲ್ಲಿ ಕುಳಿತುಕೊಳ್ಳುತ್ತಾರೆ. ಅದೇನೇ ಇರಲಿ, ಆಂಜನೇಯ ಅವರು ಈಗ ಉನ್ನತ ಪರಂಪರೆಯನ್ನು ಹಾಕಿಕೊಟ್ಟಿದ್ದು, ಅದಕ್ಕಾಗಿ ಅವರು ಅಭಿನಂದನಾರ್ಹರು.

ಕೆ.ವಿ.ವಾಸು, ಮೈಸೂರು

ಮಾಡುವವರಾರು?

ಆನೆಗಳ ಸಂಖ್ಯೆ
ಏರಿಕೆಯಲ್ಲಿ ರಾಜ್ಯದ ಪ್ರಗತಿ,
ನಾಡಿನ 'ಬಿಳಿಯಾನೆ'ಗಳ
ಮಾಡುವವರಾರು ಗಣತಿ?

ಮಲ್ಲಿಕಾರ್ಜುನ, ಸುರಧೇನುಪುರ

ಪೊಲೀಸರಿಗೆ 'ತಾರಾ' ವರ್ಚಸ್ಸು!

ದಾವಣಗೆರೆ ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ಕೊಲೆ ಪ್ರಕರಣವೊಂದರ ಪ್ರಮುಖ ಆರೋಪಿಯನ್ನು ಪೊಲೀಸ್ ಇಲಾಖೆಯಲ್ಲಿರುವ 'ತಾರಾ' ಎಂಬ ಹೆಸರಿನ ಶ್ವಾನವು ಕೃತ್ಯ ನಡೆದ ಕೆಲವೇ ಹೊತ್ತಿನಲ್ಲಿ ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿರುವುದು ಅತ್ಯಂತ ಸಮಾಧಾನದ ಸಂಗತಿ. ಕೃತ್ಯ ನಡೆದ ಸ್ಥಳದಿಂದ ಆರೋಪಿಯ ಬೆವರಿನ ವಾಸನೆಯನ್ನು ಗ್ರಹಿಸಿ ಹೊರಟ ಶ್ವಾನ, ಸುಮಾರು ಎಂಟು ಕಿ.ಮೀ. ದೂರ ಕ್ರಮಿಸಿ, ಆತನನ್ನು ಪತ್ತೆ ಮಾಡುವಲ್ಲಿ ಯಶಸ್ವಿಯಾಗಿದೆ.

ಬೆಲ್ಜಿಯನ್ ಮ್ಯಾಲಿನೋವ ತಳಿಯ ಈ ಶ್ವಾನ ಕೊಲೆ, ಕಳ್ಳತನದಂತಹ ಅಪರಾಧಿಗಳನ್ನು ಪತ್ತೆ ಹಚ್ಚುವಲ್ಲಿ ನಿಪುಣ ಎನಿಸಿದೆ. ಪೊಲೀಸರು ಭೇದಿಸಲಾಗದಂತಹ ಅಪರಾಧ ಕೃತ್ಯಗಳನ್ನು ಪೊಲೀಸ್ ಇಲಾಖೆಯ ಶ್ವಾನಗಳು ಪತ್ತೆ ಹಚ್ಚಿ ಇಲಾಖೆಯ ಹಿರಿಮೆಯನ್ನು ಹೆಚ್ಚಿಸುತ್ತಿವೆ. ಈಗ ಕೊಲೆ ಆರೋಪಿಯನ್ನು ಹಿಡಿದುಕೊಟ್ಟಿರುವ ತಾರಾ, ಇಲಾಖೆಯ ಗೌರವಕ್ಕೆ ಪಾತ್ರವಾಗಿದೆ ಹಾಗೂ ಜಿಲ್ಲೆಯಲ್ಲಿ ಅಪರಾಧ ಕೃತ್ಯ ಎಸಗುವವರಿಗೆ ಸಿಂಹಸ್ವಪ್ನವಾಗಿದೆ.

ಪವನ್ ಜಯರಾಂ, ಸಿದ್ಧಯ್ಯನಪುರ, ಚಾಮರಾಜನಗರ

ಸರ್ಕಾರದ ಕೈಗೊಂಬೆಯಾಗಲಿದೆಯೇ ಆಯೋಗ?

ಮುಖ್ಯ ಚುನಾವಣಾ ಆಯುಕ್ತ ಮತ್ತು ಚುನಾವಣಾ ಆಯುಕ್ತರ ನೇಮಕಕ್ಕೆ ಸಂಬಂಧಿಸಿದಂತೆ ಕಾನೂನು ಸಚಿವರು ರಾಜ್ಯಸಭೆಯಲ್ಲಿ ಮಂಡಿಸಿರುವ ಮಸೂದೆಯು ನಿಸ್ಸಂದೇಹವಾಗಿ ಮುಕ್ತ ಚುನಾವಣೆ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ. ಇದು, ಆಯೋಗದ ಮೇಲೆ ಹಿಡಿತ ಸಾಧಿಸುವ ಹುನ್ನಾರ. ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ನ ಆದೇಶವನ್ನು ಮೂಲೆಗುಂಪು ಮಾಡಲು ಹೊರಟಿದೆ. ಆಯುಕ್ತರ ನೇಮಕಾತಿಯಲ್ಲಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯ ಉಪಸ್ಥಿತಿಯನ್ನೇ ಇಲ್ಲವಾಗಿಸಲು ಮುಂದಾಗಿದೆ. ಈ ಮಸೂದೆಯೇನಾದರೂ ಕಾಯ್ದೆಯಾಗಿ ಜಾರಿಗೆ ಬಂದರೆ, ಇಡೀ ಚುನಾವಣಾ ಆಯೋಗವೇ ಆಳುವ ಸರ್ಕಾರದ ಕೈಗೊಂಬೆಯಾಗಿ 'ಮುಕ್ತ ಹಾಗೂ ನ್ಯಾಯಸಮ್ಮತ' ಚುನಾವಣೆ ಕನಸಾಗಿ ಉಳಿಯಬಹುದು.

ಈಗ ಮಂಡಿತವಾಗಿರುವ ಮಸೂದೆಯ ಪ್ರಕಾರ, ಸಿಜೆಐ ಬದಲಿಗೆ ಸಂಪುಟ ದರ್ಜೆಯ ಸಚಿವರೊಬ್ಬರು ಆಯ್ಕೆ ಸಮಿತಿಯ ಸದಸ್ಯರಾಗಲಿದ್ದಾರೆ. ಸರ್ಕಾರ ತನಗೆ ಬೇಕಾದವರು ಮತ್ತು ತನ್ನ ಬೆಂಬಲಿಗರನ್ನು ನೆಪಮಾತ್ರಕ್ಕೆ ಆಯೋಗದಲ್ಲಿ ಕೂರಿಸಿ, ತನಗೆ ಬೇಕಾದ ರೀತಿಯಲ್ಲಿ ಚುನಾವಣೆಯನ್ನು ನಡೆಸಲು ಅದನ್ನು ದುರ್ಬಳಕೆ ಮಾಡಿಕೊಳ್ಳಬಹುದು. ಭಾರತವು ಅನೇಕ ದುರ್ಬಲ ಚುನಾವಣಾ ಆಯುಕ್ತರನ್ನು ಕಂಡಿದೆ. ಹಾಗೆಯೇ ಟಿ.ಎನ್.ಶೇಷನ್ ಅವರಂತಹ ದಕ್ಷ ಆಯುಕ್ತರನ್ನೂ ನೋಡಿದೆ. ದೇಶದ ಪ್ರಜಾಪ್ರಭುತ್ವವು ಸರಿದಾರಿಯಲ್ಲಿ ಸಾಗಬೇಕಾದರೆ ಚುನಾವಣಾ ಆಯೋಗವು ಸದೃಢವಾಗಿದ್ದು, ಆಳುವ ಸರ್ಕಾರದ ಮುಲಾಜಿನಿಂದ ಮುಕ್ತವಾಗಿರಬೇಕು. ಅದಾಗದಿದ್ದರೆ ಪ್ರಜಾಪ್ರಭುತ್ವದ ಹೆಸರಿನ ಮುಖವಾಡ ಹಾಕಿಕೊಂಡ ಸರ್ವಾಧಿಕಾರವು ದೇಶವನ್ನು ಆಳಲು ಪ್ರಾರಂಭಿಸುತ್ತದೆ.

ಮೋದೂರು ಮಹೇಶಾರಾಧ್ಯ, ಹುಣಸೂರು

ಅಂಗನವಾಡಿ ಕಾರ್ಯಕರ್ತೆಯರ ಹೊರೆ ಇಳಿಸಿ

ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ರಾಜ್ಯದ ಅಂಗನವಾಡಿ ಕೇಂದ್ರಗಳಿಗೆ ಸರ್ಕಾರದಿಂದ ಅನುದಾನ ಬಿಡುಗಡೆ ಆಗದೇ ಇರುವುದರಿಂದ, ಬೆಳಗಾವಿಯ ಮೆಣಸಿನಗಲ್ಲಿಯ ಅಂಗನವಾಡಿ ಕಾರ್ಯಕರ್ತೆಯೊಬ್ಬರು ಅನಿವಾರ್ಯವಾಗಿ ತಮ್ಮ ಮಾಂಗಲ್ಯ ಸರವನ್ನೇ ಅಡವಿಟ್ಟು ಬಾಡಿಗೆ ಕಟ್ಟುವಂತೆ ಆಗಿರುವುದು (ಪ್ರ.ವಾ., ಆ. 11) ಅತ್ಯಂತ ದುರದೃಷ್ಟಕರ. ಇದು ಸರ್ಕಾರದ ಇಲಾಖೆಗಳ ಬೇಜವಾಬ್ದಾರಿ, ನಿಷ್ಕಾಳಜಿಯನ್ನು ಎತ್ತಿ ತೋರಿಸುತ್ತದೆ. ವಾರ್ಷಿಕ ಆಯವ್ಯಯದ ಆಧಾರದ ಮೇಲೆ ಪ್ರತಿಯೊಂದು ಇಲಾಖೆಗೂ ನೂರಾರು ಕೋಟಿ ರೂಪಾಯಿಯನ್ನು ಮೀಸಲಿಡಲಾಗುತ್ತದೆ. ಅಷ್ಟಾದರೂ ಸಾವಿರಾರು ಅಂಗನವಾಡಿ ಕೇಂದ್ರಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವುದು ಬೇಸರದ ಸಂಗತಿ. ಕನಿಷ್ಠ ಗೌರವಧನಕ್ಕೆ ಕೆಲಸ ಮಾಡುತ್ತಿರುವ ಅಂಗನವಾಡಿ ಕಾರ್ಯಕರ್ತರು ಹಲವು ಸರ್ಕಾರಿ ಕಾರ್ಯಕ್ರಮಗಳ ಮಾಹಿತಿ ಸಂಗ್ರಹದ ಕರ್ತವ್ಯವನ್ನೂ ನಿರ್ವಹಿಸುತ್ತಿದ್ದಾರೆ. ಇಂತಹ ಅಧಿಕ ಕೆಲಸದ ಒತ್ತಡದ ನಡುವೆ ಕೇಂದ್ರದ ಬಾಡಿಗೆಯನ್ನೂ ಕೈಯಿಂದ ಕಟ್ಟುವಂತಹ ಸ್ಥಿತಿ ಅವರಿಗೆ ಎದುರಾಗಿರುವುದು ವಿಪರ್ಯಾಸ. ಇದು ನಮ್ಮ ಆಡಳಿತ ವ್ಯವಸ್ಥೆಯ ವೈಫಲ್ಯವನ್ನು ಬಹಿರಂಗಗೊಳಿಸಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಲೋಪದೋಷಗಳ ಕಡೆ ಗಮನಹರಿಸಿ ಶೀಘ್ರದಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕು.

ಶ್ರೀಧರ್ ಡಿ.ರಾಮಚಂದ್ರಪ್ಪ, ತುರುವನೂರು, ಚಿತ್ರದುರ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಸಪಥಗಳ ‘ಅಂಕಣ ಕರ್ನಾಟಕ’

• ರಘುನಾಥ ಚ.ಹ.

ಅಂಕಣ ಸಾಹಿತ್ಯಕ್ಕಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಮೊದಲಿಗರು ಯಾರು? ಕನ್ನಡ–ಕರ್ನಾಟಕ ಕುರಿತ ರಸಪ್ರಶ್ನೆಗಳಲ್ಲಿ ಪುನರಾವರ್ತನೆಗೊಳ್ಳುವ ಈ ಪ್ರಶ್ನೆಗೆ ಉತ್ತರ: ಹಾ.ಮಾ. ನಾಯಕ. ‘ಸಂಪ್ರತಿ’ ಕೃತಿಗಾಗಿ 1989ರಲ್ಲಿ ಅವರಿಗೆ ಅಕಾಡೆಮಿ ಪ್ರಶಸ್ತಿ ದೊರಕಿತು. ಅಂಕಣ ಬರಹಗಳಿಗಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಮತ್ತಿಬ್ಬರು ಬರಹಗಾರರು ಕನ್ನಡದಲ್ಲಿದ್ದಾರೆ: ಕೀರ್ತಿನಾಥ ಕುರ್ತಕೋಟಿ (‘ಉರಿಯ ನಾಲಿಗೆ’, 1995) ಮತ್ತು ಮೂಡ್ನಾಕೂಡು ಚಿನ್ನಸ್ವಾಮಿ (‘ಬಹುತ್ವದ ಭಾರತ ಮತ್ತು ಬೌದ್ಧ ತಾತ್ವಿಕತೆ’, 2022). ಈ ಮೂರು ಕೃತಿಗಳಲ್ಲಿ ‘ಸಂಪ್ರತಿ’ ಮತ್ತು ‘ಉರಿಯ ನಾಲಿಗೆ’ ಕೃತಿಗಳಿಗೆ ಸಂಬಂಧಿಸಿದಂತೆ ವಿಶೇಷವೊಂದಿದೆ. ಇವೆರಡೂ ಅಂಕಣಬರಹಗಳಾಗಿ ಪ್ರಕಟಗೊಂಡಿದ್ದು ‘ಪ್ರಜಾವಾಣಿ’ ಪತ್ರಿಕೆಯಲ್ಲಿ. ಮೂಡ್ನಾಕೂಡು ಅವರ ಕೃತಿಯ ಬರಹಗಳು ಪ್ರಕಟಗೊಂಡಿದ್ದು ‘ಪ್ರಜಾವಾಣಿ’ಯ ಸೋದರ ಪತ್ರಿಕೆ ‘ಸುಧಾ’ದಲ್ಲಿ. ಒಂದೇ ಬಳಗದ ಪತ್ರಿಕೆಗಳ ಮೂರು ಅಂಕಣಗಳಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿರುವುದು ಭಾರತೀಯ ಪತ್ರಿಕೋದ್ಯಮದಲ್ಲೂ ದಾಖಲೆ, ಸಾಹಿತ್ಯದಲ್ಲೂ ದಾಖಲೆ. ಕನ್ನಡದ ಮಟ್ಟಿಗಂತೂ ‘ಪ್ರಜಾವಾಣಿ’, ‘ಸುಧಾ’ ಹೊರತುಪಡಿಸಿದರೆ ಬೇರೆ ಯಾವ ಪತ್ರಿಕೆಯಲ್ಲಿ ಪ್ರಕಟವಾದ ಅಂಕಣ ಸಾಹಿತ್ಯವು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯ ಗೌರವಕ್ಕೆ ಪಾತ್ರವಾಗಿಲ್ಲ.

ಭಾರತೀಯ ಭಾಷೆಗಳಲ್ಲಿಯೇ ಅಂಕಣ ಸಾಹಿತ್ಯಕ್ಕಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಮೊದಲಿಗರು ಎನ್ನುವ ಹೆಮ್ಮೆ ಹಾ.ಮಾ. ನಾಯಕ ಅವರದ್ದು, ಕನ್ನಡದ್ದು. ಈ ಅಗ್ಗಳಿಕೆ ಅಂಕಣ ಪ್ರಕಾರಕ್ಕೊಂದು ಮಾನ್ಯತೆ ತಂದುಕೊಟ್ಟಿತಲ್ಲದೆ, ಅಂಕಣ ಬರಹಗಳನ್ನು ಸಹೃದಯರು ಗಂಭೀರವಾಗಿ ಪರಿಗಣಿಸಲು ಪ್ರೇರಣೆಯಾಯಿತು. ಕುರ್ತಕೋಟಿಯವರಿಗೆ ದೊರೆತ ಪ್ರಶಸ್ತಿ, ಅಂಕಣ ಸಾಹಿತ್ಯದ ಸಾಧ್ಯತೆಗಳನ್ನು ಮತ್ತಷ್ಟು ನಿಚ್ಚಳಗೊಳಿಸಿತು.

ಬಹುತೇಕ ವಿಷಯಗಳಿಗೆ ಸಂಬಂಧಿಸಿದಂತೆ ಕನ್ನಡ ಪತ್ರಿಕೋದ್ಯಮಕ್ಕೆ ಮೊದಲಗಿತ್ತಿಯಂತಿರುವ ‘ಪ್ರಜಾವಾಣಿ’, ಅಂಕಣಗಳ ಪ್ರಕಟಣೆಗೆ ಸಂಬಂಧಿಸಿದಂತೆಯೂ ಮುಂಚೂಣಿಯಲ್ಲಿದೆ. ಕನ್ನಡದ ಅನೇಕ ಉತ್ತಮ ಬರಹಗಾರರಿಗೆ ಅಂಕಣಕಾರರ ಪೋಷಾಕು ತೊಡಿಸುವ ಮೂಲಕ, ಅವರ ಸೃಜನಶೀಲತೆಯ ವಿಸ್ತರಣೆಗೆ ಪತ್ರಿಕೆ ಆಡುಂಬೊಲವಾಗಿದೆ. ಆಯಾ ಕಾಲದ ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ ಆಗುಹೋಗುಗಳಿಗೆ ಸೃಜನಶೀಲ ಪ್ರತಿಸ್ಪಂದನಗಳೂ ಆಗಿರುವುದರಿಂದ, ‘ಆಧುನಿಕ ಕರ್ನಾಟಕ’ದ ಚರಿತ್ರೆಯ ರೂಪದಲ್ಲಿ ‘ಪ್ರಜಾವಾಣಿ’ ಅಂಕಣ ಬರಹಗಳನ್ನು ನೋಡಲು ಸಾಧ್ಯವಿದೆ. ವಿಷಯ ವೈವಿಧ್ಯದ ದೃಷ್ಟಿಯಿಂದಲೂ ಪತ್ರಿಕೆಯ ಅಂಕಣಗಳು ಬಹುಮೂಲ್ಯವಾದವು. ಕುಲದೀಪ್ ನಯ್ಯರ್ (‘ಅಂತರಂಗ’) ಹಾಗೂ ರಾಮಚಂದ್ರ ಗುಹಾ ಅವರ (‘ಗುಹಾಂಕಣ’) ಅಂಕಣಗಳು ಹಲವು ತಲೆಮಾರುಗಳ ಓದುಗರ ಚಾರಿತ್ರಿಕ ಹಾಗೂ ರಾಜಕೀಯ ಪ್ರಜ್ಞೆಯನ್ನು ಹರಿತಗೊಳಿಸಿವೆ. ಎ. ನಾರಾಯಣ ಅವರ ‘ಅನುರಣನ’ ಸಮಕಾಲೀನ ರಾಜಕೀಯ ಘಟನೆಗಳ ತಾತ್ವಿಕತೆಯನ್ನು ಒಳನೋಟಗಳೊಂದಿಗೆ ವಿಶ್ಲೇಷಿಸುವ ಜನಪ್ರಿಯ ಅಂಕಣ. ಶೇಖರ್ ಗುಪ್ತಾ ಅವರ ‘ರಾಷ್ಟ್ರಕಾರಣ’ ಹಾಗೂ ಆಕಾರ್ ಪಟೇಲ್ ‘ದೂರ ದರ್ಶನ’ ಅಂಕಣಗಳು ಕೂಡ ಸಮಕಾಲೀನ ರಾಜಕಾರಣದ ಬಗ್ಗೆ ಓದುಗರ ಸಂವೇದನೆಯನ್ನು ಸೂಕ್ಷ್ಮಗೊಳಿಸುವಂತಿದ್ದವು.

ಭಾಷೆಗೆ ಸಂಬಂಧಿಸಿದಂತೆಯೂ ‘ಪ್ರಜಾವಾಣಿ’ ಅಂಕಣಗಳು ಬಾಳಿಕೆಯುಳ್ಳಂಥವು. ಪ್ರೊ. ಜಿ. ವೆಂಕಟಸುಬ್ಬಯ್ಯ ಅವರ ‘ಇಗೋ ಕನ್ನಡ’, ಕೆ.ವಿ. ನಾರಾಯಣರ ‘ಪದಸಂಪದ’, ಓ.ಎಲ್. ನಾಗಭೂಷಣ ಸ್ವಾಮಿ ಅವರ ‘ನುಡಿಯೊಳಗಾಗಿ’ ಕನ್ನಡ ನುಡಿಯನ್ನು ಶ್ರೀಮಂತಗೊಳಿಸಿರುವ ಅಂಕಣಗಳು. ಕುರ್ತಕೋಟಿ ಅವರ ‘ಸಮ್ಮುಖ’ ಅಂಕಣ, ಲೇಖಕರು ತಮ್ಮ ಕಾಲದ ಸಾಂಸ್ಕೃತಿಕ ವಿದ್ಯಮಾನಗಳೊಂದಿಗೆ ನಡೆಸಿದ ಅಪೂರ್ವ ಅನುಸಂಧಾನವಾಗಿದೆ. ಭಾಷೆ, ಸಾಹಿತ್ಯ, ಕಲೆ, ಸಿನಿಮಾ, ಶಿಲ್ಪ, ಪುರಾಣ, ಕಾವ್ಯಮೀಮಾಂಸೆ – ಹೀಗೆ, ಕುರ್ತಕೋಟಿ ಅವರ ಅಂಕಣ ಬರಹಗಳು ಎಲ್ಲ ದಿಕ್ಕಿಗೂ ತಮ್ಮ ನಾಲಿಗೆ ಚಾಚಿಕೊಂಡಿವೆ; ‘ಉರಿಯ ನಾಲಿಗೆ’ ಶೀರ್ಷಿಕೆಯಲ್ಲಿ ಪುಸ್ತಕವಾಗಿವೆ. ‘ಬೇವು ಬೆಲ್ಲ’ ಹೆಸರಿನಲ್ಲಿ 1962ರಿಂದ 1966ರವರೆಗೆ ನಿರಂಜನರು ಬರೆದ ಅಂಕಣಬರಹಗಳು ಪುಸ್ತಕ ರೂಪದಲ್ಲೂ ಪ್ರಕಟಗೊಂಡು ಸಹೃದಯರ ಗಮನಸೆಳೆದಿವೆ. ‘ವಿಚಾರಸರಣಿ’ ಹೆಸರಿನಲ್ಲಿ ಜಿ.ಪಿ. ರಾಜರತ್ನಂ ಬರೆದ ಅಂಕಣಬರಹಗಳೂ ಜನಪ್ರಿಯಗೊಂಡಿದ್ದವು.

‘ಹಲವು ಕನ್ನಡಂಗಳ’ ಚೆಲುವನ್ನು ಅಂಕಣಗಳ ಮೂಲಕ ಹಿಡಿದಿಡುವ ಪ್ರಯತ್ನವನ್ನೂ ‘ಪ್ರಜಾವಾಣಿ’ ನಡೆಸಿದೆ. ಈ ನಿಟ್ಟಿನಲ್ಲಿ ನೆನಪಿಸಿಕೊಳ್ಳಬಹುದಾದ ಪ್ರಮುಖ ಅಂಕಣ: 1966ರಿಂದ 1999ರವರೆಗೆ ಪ್ರತಿ ರವಿವಾರ ಪ್ರಕಟಗೊಂಡ ಸಿದ್ಧಲಿಂಗ ಪಟ್ಟಣಶೆಟ್ಟಿ ಅವರ ‘ಚಹಾದ ಜೋಡಿ ಚೂಡಾದ್ಹಾಂಗ’. ನಾ. ದಾಮೋದರ ಶೆಟ್ಟಿ ಅವರ ‘ತೆಂಕಣದ ಸುಳಿಗಾಳಿ’ ಹಾಗೂ ವೀರಣ್ಣ ದಂಡೆ ಅವರ ‘ಕಲ್ಬುರ್ಗಿಯ ಕಲರವ’ ಅಂಕಣಗಳು ಪ್ರಾದೇಶಿಕ ಸ್ವಾದವನ್ನು ಹೊಂದಿದ್ದವು. ಪ್ರಾದೇಶಿಕ ಅನನ್ಯತೆಯನ್ನು ಹಿಡಿದಿಡುವ ಉದ್ದೇಶದ ಈ ಅಂಕಣ ಬರಹಗಳು ಎಲ್ಲ ಭಾಗಗಳ ಕನ್ನಡಿಗರಿಗೂ ರುಚಿಸಿದವು.

> **ನಂ ನಮಸ್ಕಾರ ನಿಮಗ**
>
> ನನ್ನ ಸಾಹಿತ್ಯಿಕ ವ್ಯಕ್ತಿತ್ವ ಹಾಗೂ ಹೆಸರಿಗೆ ಹೊಸ ಆಯಾಮ ನೀಡಿದ ಅಂಕಣ ‘ಚಹಾದ ಜೋಡಿ ಚೂಡಾದ್ಹಾಂಗ’. ಈ ಲೇಖನಗಳನ್ನು ಲಕ್ಷಗಟ್ಟಲೆ ಕೋಟಿಗಟ್ಟಲೆ ಕನ್ನಡಿಗರು ಓದಿದ್ದಾರೆ, ಮೆಚ್ಚಿದ್ದಾರೆ. ನಾಡಿನ ತುಂಬ ನಾನು ಹೋದಲ್ಲೆಲ್ಲ ನನ್ನನ್ನು ಗುರುತಿಸಿ ತಮ್ಮ ಬಳಗದವನೇ ಎಂಬಂತೆ ಪ್ರೀತಿಸಿದ್ದಾರೆ.
>
> **ಸಿದ್ಧಲಿಂಗ ಪಟ್ಟಣಶೆಟ್ಟಿ,**
> ಚಹಾದ ಜೋಡಿ ಚೂಡಾದ್ಹಾಂಗ
> 5ನೇ ಸಂಪುಟ

ರಹಮತ್ ತರೀಕೆರೆ ಅವರ ‘ನಡೆದಷ್ಟೂ ನಾಡು’ ಕನ್ನಡನಾಡಿನ ಸಾಂಸ್ಕೃತಿಕ ಚಹರೆಗಳನ್ನು ದಾಖಲಿಸುವ ಮತ್ತೊಂದು ವಿಶಿಷ್ಟ ಪ್ರಯತ್ನ. ‘ಸಾಪ್ತಾಹಿಕ ಪುರವಣಿ’ಯಲ್ಲಿ ಪ್ರಕಟಗೊಂಡ ಈ ಅಂಕಣ ಮಾಲಿಕೆಯಲ್ಲಿ ರಹಮತ್ ಅವರು ತಮ್ಮ ವಿಮರ್ಶಕನ ಚಾಳೀಸನ್ನು ತೆರೆದಿಟ್ಟು, ಪತ್ರಿಕೆಯ ಓದುಗರೊಂದಿಗಿನ ಸಂವಹನಕ್ಕೆ ತಮ್ಮನ್ನು ರೂಪಿಸಿಕೊಂಡ ಬಗೆ ವಿಶಿಷ್ಟವಾದುದು. ಅಕಡೆಮಿಕ್ ಗಾಂಭೀರ್ಯವನ್ನು ಬಿಟ್ಟುಕೊಟ್ಟದ್ದರೂ ಜನಪ್ರಿಯ ಶೈಲಿಯಲ್ಲೇ ಮಹತ್ವದ ಸಂಗತಿಗಳನ್ನು ತಮ್ಮ ಒಳನೋಟಗಳೊಂದಿಗೆ ದಾಖಲಿಸಲು ಸಾಧ್ಯವಾದುದು ರಹಮತ್‌ರ ವಿಶೇಷ. ಅವರ ಅಲೆದಾಟದ ಬರಹಗಳು ಸಹೃದಯರನ್ನು ಊರಿಂದ ಊರಿಗೆ ಕೈಹಿಡಿದು ನಡೆಸಿದಷ್ಟು ಆಪ್ತವಾಗಿದ್ದವು. ಕೃಪಾಕರ–ಸೇನಾನಿ ಜೋಡಿಯ ‘ಅವ್ಯಕ್ತ ಭಾರತ’ ಅಂಕಣ ಬರಹಗಳು ಕಾಡಿನ ದಾರಿಗಳಲ್ಲಿ ಮಾನವೀಯ ನಾಡಿಮಿಡಿತಗಳ ಗುರುತಿಸುವ ಅಪೂರ್ವ ಪ್ರಯತ್ನ. ನಾಗತಿಹಳ್ಳಿ ಚಂದ್ರಶೇಖರ ಅವರ ‘ರೆಕ್ಕೆ-ಬೇರು’ ಅಂಕಣ ಬರಹಗಳು ಜನಮನ್ನಣೆ ಗಳಿಸಿವೆ, ಪುಸ್ತಕ ರೂಪದಲ್ಲೂ ಸಂಕಲನಗೊಂಡಿವೆ. ಎಂ.ಎಸ್. ಶ್ರೀರಾಮ್ ಅವರ ಅಂಕಣ ಬರಹಗಳು ಸಹಕಾರ ಹಾಗೂ ಆರ್ಥಿಕ ಕ್ಷೇತ್ರದ ಬಗ್ಗೆ ವಿಶಿಷ್ಟ ಒಳನೋಟಗಳನ್ನು ಹೊಂದಿವೆ.

ರಾಜಕಾರಣ ಹಾಗೂ ಸಾಂಸ್ಕೃತಿಕ ಸಂವಾದಗಳಿಗೆ ಆಸ್ಪದ ಕೊಡುವಂತಿದ್ದ ಬರಗೂರು ರಾಮಚಂದ್ರಪ್ಪನವರ ‘ಸಂವೇದನೆ’ ಹಾಗೂ ‘ಪರಂಪರೆಯೊಂದಿಗಿನ ಪಿಸುಮಾತು’ ಅಂಕಣ ಬರಹಗಳ ವೈವಿಧ್ಯದ ಜೊತೆಗೆ ಸಾಧ್ಯತೆಗಳಿಗೆ ನಿದರ್ಶನದಂತಿದ್ದವು. ‘ಪರಂಪರೆಯೊಂದಿಗಿನ ಪಿಸುಮಾತು’ ಪುಸ್ತಕ ರೂಪದಲ್ಲೂ ಪ್ರಕಟಗೊಂಡಿದೆ.

ಎಚ್.ಎಸ್. ಶಿವಪ್ರಕಾಶ್ ಅವರ ‘ಪ್ರತಿಸ್ಪಂದನ’ ಶೀರ್ಷಿಕೆಯ ಅಂಕಣ ಬರಹಗಳನ್ನು ಕೂಡ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಗುರುತಿಸಬಹುದು. ಲಿಂಗದೇವರು ಹಳೆಮನೆ ಅವರ ‘ಬೆಳಕು ಬೆರಗು’, ನಟರಾಜ್ ಹುಳಿಯಾರ್ ಅವರ ‘ಕನ್ನಡಿ’ ಸಾಂಸ್ಕೃತಿಕ ವಾಗ್ವಾದಗಳಿಗೆ ಅನುವು ಕಲ್ಪಿಸಿದ ಬರಹಗಳ ಅಂಕಣಗಳು. ಯು.ಆರ್. ಅನಂತಮೂರ್ತಿ ಅವರು ‘ಪ್ರಜಾವಾಣಿ’ ಪತ್ರಿಕೆಗೆ ಬರೆದ ‘ಅನುಸಂಧಾನ’ ಅಂಕಣ ಬರಹಗಳು ತಮ್ಮ ವೈಚಾರಿಕ ಪ್ರಖರತೆಯಿಂದ ಸಹೃದಯರ ಗಮನಸೆಳೆದಿದ್ದು, ‘ರುಚಿಕರ ಸತ್ಯಗಳ ಕಾಲ’ ಹೆಸರಿನಲ್ಲಿ ಪುಸ್ತಕ ರೂಪದಲ್ಲಿ ಪ್ರಕಟವಾಗಿವೆ. ಪಿ. ಲಂಕೇಶ್ ಅವರು ಅಂಕಣ ಬರವಣಿಗೆಯ ಸಾಮು ಆರಂಭಿಸಿದ್ದು ‘ಪ್ರಜಾವಾಣಿ’ಯಲ್ಲೇ. ಎಸ್. ದಿವಾಕರ್, ಜಯಂತ ಕಾಯ್ಕಿಣಿ ಹಾಗೂ ವಿವೇಕ ಶಾನಭಾಗ ಅವರು ಕೂಡ ‘ಪ್ರಜಾವಾಣಿ’ಯ ಅಂಕಣ ಪ್ರಯೋಗಗಳ ಭಾಗವಾಗಿದ್ದರು.

ವೈದೇಹಿ ಅವರ ‘ಹರಿವ ನೀರು’– ಪ್ರಖರ ಸ್ತ್ರೀ ಸಂವೇದನೆಯೊಂದಿಗೆ, ಕಥನ, ಕಾವ್ಯ, ವಿಮರ್ಶೆ, ವ್ಯಕ್ತಿ ಪರಿಚಯ, ನೆನಪು – ಹೀಗೆ ಭಾವಲೋಕದ ಹರಿವಿಗೆ ಸಿಕ್ಕಿದ್ದನ್ನೆಲ್ಲ ಒಳಗೊಳ್ಳುವ ಹಂಬಲದಿಂದ, ಆರ್ದ್ರತೆಯಿಂದ ಸಹೃದಯರ ಗಮನಸೆಳೆದ ಅಂಕಣ. ಎಂ.ಎಸ್. ಆಶಾದೇವಿ ಅವರ ‘ನಾರೀಕೇಳಾ’ ಭಾರತೀಯ ಸಾಹಿತ್ಯದ ವಿಶಿಷ್ಟ ಸಂಕಥನಗಳನ್ನು ಹೆಣ್ಣಿನ ವೈಚಾರಿಕತೆಯಲ್ಲಿ ಪರಿಶೀಲಿಸುವ ಭಿನ್ನ ಪ್ರಯೋಗ ಹಾಗೂ ಓದುಗರ ದೃಷ್ಟಿಕೋನಗಳಿಗೆ ಹೊಸ ಚಾಚುಗಳನ್ನು ನೀಡುವ ಹಂಬಲದ ಮಹತ್ವಾಕಾಂಕ್ಷೆಯ ಬರವಣಿಗೆ. ಡಾ. ಆಶಾ ಬೆನಕಪ್ಪ ಅವರ ‘ಅಂತಃಕರಣ’ ಕನ್ನಡ ಅಂಕಣ ನಕಾಶೆಯಲ್ಲಿ ಭಿನ್ನ ನಮೂನೆ. ಮಕ್ಕಳ ತಜ್ಞೆಯಾಗಿ ತಮ್ಮ ಅಪಾರ ಅನುಭವಗಳನ್ನು ಆಶಾ ಬೆನಕಪ್ಪ ಅಂಕಣ ಬರಹಗಳಲ್ಲಿ ಹಂಚಿಕೊಂಡಿದ್ದರು. ಓದುಗರ ಅಂತಃಕರಣವನ್ನು ಮಿಡಿಯುವುದರ ಜೊತೆಗೆ, ಸಮಾಜದೊಂದಿಗಿನ ನಮ್ಮ ಉತ್ತರದಾಯಿತ್ವವನ್ನು ಆತ್ಮವಿಮರ್ಶೆಗೆ ಒಳಪಡಿಸುವಷ್ಟು ‘ಅಂತಃಕರಣ’ದ ಬರಹಗಳು ಪರಿಣಾಮಕಾರಿಯಾಗಿದ್ದವು.

ಸಮಾಜದ ಹಲವು ವಲಯಗಳಿಗೆ ವೇದಿಕೆಯಾಗುವ ಪತ್ರಿಕೆಯ ಹಂಬಲದಲ್ಲಿ ಗುರ್ತಿಸಬಹುದಾದ ಕೆಲವು ಪ್ರಯೋಗಗಳ ರೂಪದಲ್ಲಿ – ಡಾ. ಅನುಪಮಾ ನಿರಂಜನ (ಮಹಿಳಾವಾಣಿ – ಸ್ವಾಸ್ಥ್ಯ, ಸಮಸ್ಯೆ, ಸಲಹೆ), ಲಕ್ಷ್ಮೀಶ ತೋಳ್ಪಾಡಿ (ಭಾರತ ಯಾತ್ರೆ), ಪ್ರಸನ್ನ (ಸಂಭಾಷಣೆ), ಪ್ರಕಾಶ್ ರೈ (ಅವರವರ ಭಾವಕ್ಕೆ), ಪೃಥ್ವಿದತ್ತ ಚಂದ್ರಶೋಭಿ (ನಿಜದನಿ), ಜಿ.ಎಸ್. ಜಯದೇವ (ಹಳ್ಳಿಹಾದಿ), ಡಾ. ದೇವಿ ಶೆಟ್ಟಿ (ಹೃದಯ ಸಂವಾದ), ಮನು ಬಳಿಗಾರ (ಸಾಕ್ಷಿಪ್ರಜ್ಞೆ), ಗುರುರಾಜ ಕರಜಗಿ (ಕರುಣಾಳು ಬಾ ಬೆಳಕೆ), ಐ.ಎಂ. ವಿಠಲಮೂರ್ತಿ (ಆಡಳಿತದ ನೆನಪುಗಳು), ಬಿ.ಕೆ. ಶಿವರಾಂ (ಪೊಲೀಸ್ ಕಂಡ ಕಥೆಗಳು), ಪ್ರೀತಿ ನಾಗರಾಜ್ (ಮಿರ್ಚಿ ಮಂಡಕ್ಕಿ), ಕಲೀಮ್ ಉಲ್ಲಾ (ಕ್ಲಾಸ್ ಟೀಚರ್) ಅವರ ಅಂಕಣ ಬರಹಗಳನ್ನು ಗುರುತಿಸಬಹುದಾಗಿದೆ.

ಆಯಾ ಕಾಲದ ಬಹುತೇಕ ಅತ್ಯುತ್ತಮ ಬರಹಗಾರರು ‘ಪ್ರಜಾವಾಣಿ’ಯ ಅಂಕಣಪ್ರಯೋಗಕ್ಕೆ ತಮ್ಮನ್ನೊಡ್ಡಿಕೊಂಡವರೇ ಆಗಿದ್ದಾರೆ. ಬಹುತೇಕ ಅಂಕಣಗಳು ಪುಸ್ತಕ ರೂಪದಲ್ಲೂ ಪ್ರಕಟಗೊಂಡು ಸಹೃದಯರ ಮೆಚ್ಚುಗೆ ಹಾಗೂ ಪ್ರಶಸ್ತಿ ಪುರಸ್ಕಾರಗಳ ಮನ್ನಣೆಗೆ ಪಾತ್ರವಾಗಿವೆ.

ವಸು ಮಳಲಿ (ಕಳ್ಳುಬಳ್ಳಿ) ಅಂಕಣ ಬರಹಗಳಿಗೆ ದೇವನೂರ ಮಹಾದೇವ ಅವರ ಪ್ರತಿಕ್ರಿಯೆ: ‘ವಸು ಮಳಲಿ ಅವರು ತಮ್ಮ ಅಂಕಣದಲ್ಲಿ ನಾನು ಬರೆಯಬಹುದಾಗಿದ್ದ ಲೇಖನಗಳನ್ನು ಬರೆಯುತ್ತಿದ್ದರು. ಆದರೆ, ಅವು ನಾನು ಬರೆಯಬಹುದಾಗಿದ್ದಕ್ಕಿಂತ ಹೆಚ್ಚು ಪ್ರಬುದ್ಧವಾಗಿರುತ್ತಿದ್ದವು’ – ಈ ಮೆಚ್ಚುಗೆ ವಸು ಮಳಲಿ ಅವರಿಗೆ ಸಂದದ್ದೂ ಹೌದು, ಪತ್ರಿಕೆಯ ಅಂಕಣಗಳ ಘನತೆಯನ್ನು ಗುರುತಿಸುವಂತಹದ್ದೂ ಹೌದು. ಸಾಹಿತಿಗಳು ಹಾಗೂ ವಿವಿಧ ಕ್ಷೇತ್ರಗಳ ಸೃಜನಶೀಲರನ್ನು ಜನರೊಂದಿಗೆ ನೇರವಾಗಿ ಮುಖಾಮುಖಿಯಾಗಿಸಿದ್ದು ‘ಪ್ರಜಾವಾಣಿ’ ಅಂಕಣ ಬರಹಗಳ ಮತ್ತೊಂದು ಸಾಧನೆ.

ನಾಡಿನ ಬರಹಗಾರರು ಮಾತ್ರವಲ್ಲದೆ, ಪತ್ರಿಕೆಯ ಭಾಗವಾದ ಪತ್ರಕರ್ತರೂ ಅಂಕಣಕಾರರಾಗಿ ಯಶಸ್ಸು ಕಂಡಿರುವ, ಜನಮನ ತಲುಪಿರುವ ಹಲವು ಉದಾಹರಣೆಗಳಿವೆ. ಅದು ಬೇರೆಯದೇ ಅಧ್ಯಾಯ.

ಚಿತ್ರಗಳು: ಪ್ರಜಾವಾಣಿ ಆರ್ಕೈವ್ಸ್

‘ಸಿನಿಪಯಣದ ಸ್ಪೆಷಲ್ ಸಿನಿಮಾ ಕ್ಷೇತ್ರಪತಿ

ನವೀನ್ ಶಂಕರ್

‘ಗುಲ್ಟು’ ಖ್ಯಾತಿಯ ನಟ ನವೀನ್ ಶಂಕರ್ ನಟನೆಯ ಬಹುನಿರೀಕ್ಷಿತ ‘ಕ್ಷೇತ್ರಪತಿ’ ಸಿನಿಮಾದ ಟ್ರೈಲರ್ ಬಿಡುಗಡೆಯಾಗಿದ್ದು, ಸಿನಿಮಾ ಆ.18ರಂದು ತೆರೆಕಾಣಲಿದೆ. ಸಿನಿಮಾ ಬಿಡುಗಡೆ ಹೊಸ್ತಿಲಲ್ಲಿ ನವೀನ್, ‘ಕ್ಷೇತ್ರಪತಿ’ ಪಯಣದ ಒಂದಿಷ್ಟು ಹೆಜ್ಜೆಗಳನ್ನು ಮೆಲುಕು ಹಾಕಿದ್ದಾರೆ.

‘ನನ್ನ ಸಿನಿಪಯಣದಲ್ಲೊಂದು ಸ್ಪೆಷಲ್ ಸಿನಿಮಾ ಇದು. ಹೇಗೆ ಸಿನಿಮಾದೊಳಗೊಂದು ಕ್ರಾಂತಿ ಇದೆಯೋ, ಈ ಸಿನಿಮಾ ಆರಂಭಿಸಿದ್ದೂ ಒಂದು ರೀತಿ ಕ್ರಾಂತಿಯೇ. ಉತ್ತರ ಕರ್ನಾಟಕ ಭಾಗದವನಾಗಿ ಆ ಭಾಗದ ಕಥೆಯನ್ನು ಹೇಳುವ ಉತ್ಸುಕತೆ ನನಗಿತ್ತು. ‘ಗುಲ್ಟು’ ಆದ ಮೇಲೆ ನಿರ್ದೇಶಕ ಶ್ರೀಕಾಂತ್ ಭೇಟಿಯಾಗಿ ‘ಕ್ಷೇತ್ರಪತಿ’ ಕಥೆ ಹೇಳಿದ್ದರು. ‘ಈ ಪಿಕ್ಚರ್ ಮಾಡಾಣ. ಪ್ರೊಡ್ಯೂಸರ್ ಅದಾರ?’ ಎಂದು ಕೇಳಿದ್ದೆ. ‘ಪ್ರೊಡ್ಯೂಸರ್ ಇಲ್ರಿ’ ಎಂಬ ಉತ್ತರ ಬಂದಿತ್ತು. ನಾವೇ ₹13 ಲಕ್ಷ ದುಡ್ಡು ಹಾಕಿ ಟ್ರೈಲರ್ ಸಿದ್ಧಪಡಿಸಿ, ನಂತರ ನಿರ್ಮಾಪಕರನ್ನು ಪಡೆದೆವು. ಒಂದು ಉತ್ತಮ ವಿಷಯವನ್ನು ಹೊತ್ತ ಕಥೆ ಇದು. ರೈತನನ್ನು ನಾವು ದೇವರು ಮಾಡಿದ್ದೇವೆ. ಸಮಸ್ಯೆ ಬಗೆಹರಿಸಲು ಸಾಧ್ಯವಾಗದೆ ಇದ್ದ ಸಂದರ್ಭದಲ್ಲಿ ದೇವರನ್ನಾಗಿ ಮಾಡಿಬಿಡುತ್ತೇವೆ. ಬೇಡ, ರೈತನನ್ನು ಮನುಷ್ಯನನ್ನಾಗಿ ನೋಡಿ. ಅವನಿಗೆ ಕನಿಷ್ಠ ಗೌರವ ಸಿಗಲಿ. ಇದರ ಬಗ್ಗೆ ಈ ಸಿನಿಮಾದಲ್ಲಿ ಮಾತನಾಡಿದ್ದೇವೆ. ‘ಬಸವ’ ಎಂಬ ಹುಡುಗ ರೈತಾಪಿ ಕುಟುಂಬದಿಂದ ಬಂದ ಹುಡುಗ. ನನ್ನಂತ ‘ಬಸವ’ ಬಹಳ ಕಡೆ ಇದ್ದಾರೆ. ಇವರ ಹೋರಾಟದ ಕಥೆ ‘ಕ್ಷೇತ್ರಪತಿ’. ಈ ಸಿನಿಮಾ ಭರವಸೆ ಮೂಡಿಸಲಿ ಎನ್ನುವುದು ನನ್ನ ಆಶಯ’ ಎನ್ನುತ್ತಾರೆ ನವೀನ್ ಶಂಕರ್.

‘ಯಾಕೆ ನಮ್ಮ ಕಡೆ ಸಿನಿಮಾ ಬರುವುದಿಲ್ಲ ಎಂದು ಯೋಚಿಸುತ್ತಿದ್ದೆ. ಬೇರೆ ಭಾಗದ ಪ್ರಯತ್ನಗಳನ್ನು ನೋಡುತ್ತಿದ್ದೆವು. ಅಳತೆಗೆ ಸಿಗದಷ್ಟು ಸಮಸ್ಯೆಗಳು ಉತ್ತರ ಕರ್ನಾಟಕದಲ್ಲಿದೆ. ನಮ್ಮ ಸಿನಿಮಾದಲ್ಲಿ 75–80 ಜನ ಕಲಾವಿದರು ಉತ್ತರ ಕರ್ನಾಟಕ ಭಾಗದವರಿದ್ದಾರೆ. ರವಿ ಬಸ್ರೂರು ಅವರು ನಮ್ಮ ಭಾಷೆಯ ಸೊಗಡನ್ನು ಹಿಡಿದು ಹಾಡು ಮಾಡಿದ್ದಾರೆ. 130 ಚಿತ್ರಮಂದಿರಗಳಲ್ಲಿ ಸಿನಿಮಾ ಬಿಡುಗಡೆಯಾಗಲಿದೆ. ಉತ್ತರ ಕರ್ನಾಟಕ ಭಾಗದ ಹೆಚ್ಚಿನ ಚಿತ್ರಮಂದಿರಗಳಲ್ಲಿ ಸಿನಿಮಾ ತೆರೆಕಾಣಲಿದೆ’ ಎಂದರು ನವೀನ್.

ಆಶ್ರಗ ಕ್ರಿಯೇಷನ್ಸ್ ಲಾಂಛನದಲ್ಲಿ ನಿರ್ಮಾಣವಾಗಿರುವ ಈ ಚಿತ್ರವನ್ನು ಶ್ರೀಕಾಂತ್ ಕಟಗಿ ನಿರ್ದೇಶಿಸಿದ್ದಾರೆ. ರವಿ ಬಸ್ರೂರು ಸಂಗೀತ ನಿರ್ದೇಶನವಿರುವ ಈ ಚಿತ್ರಕ್ಕೆ ವೈ.ವಿ.ಬಿ. ಶಿವಸಾಗರ್ ಛಾಯಾಚಿತ್ರಗ್ರಹಣ, ಮನು ಶೇಡ್ಗಾರ್ ಸಂಕಲನ, ನರಸಿಂಹ ಸಾಹಸ ನಿರ್ದೇಶನ ಹಾಗೂ ಜೀವನ್ ಅವರ ನೃತ್ಯ ನಿರ್ದೇಶನವಿದೆ. ಅರ್ಚನಾ ಜೋಯಿಸ್, ಅಚ್ಯುತ್ ಕುಮಾರ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ❖

ಸಿನಿ ಬಿಟ್ಸ್

ಶಿವಣ್ಣ ಸ್ವ್ಯಾಗ್‌ಗೆ ಫ್ಯಾನ್ಸ್ ಫಿದಾ!



ಶಿವರಾಜ್‌ಕುಮಾರ್

‘ಜೈಲರ್’ ಸಿನಿಮಾದಲ್ಲಿ ಶಿವರಾಜ್‌ಕುಮಾರ್ ಕಾಣಿಸಿಕೊಳ್ಳುವುದು ಎರಡು ಸಲ ಮಾತ್ರ. ಒಮ್ಮೆ ಮಂಡ್ಯದಲ್ಲಿ ಅವರನ್ನು ಭೇಟಿ ಮಾಡಲು ರಜನೀಕಾಂತ್ ಬರುವ ಸನ್ನಿವೇಶದಲ್ಲಿ. ಆಗ ರಜನೀಕಾಂತ್ ಅವರನ್ನು ಬಾಗಿಲ ಹೊರಗೆ ತಡೆಯುವವನನ್ನು ಫ್ಯಾನ್‌ಗೆ ನೇತುಹಾಕಿ, ಗಿರಗಿರ ತಿರುಗಿಸುವ ಶಿಕ್ಷೆಯನ್ನು ಶಿವರಾಜ್‌ಕುಮಾರ್ ಪಾತ್ರ ನೀಡುತ್ತದೆ. ಆಮೇಲೆ ಅಂತ್ಯದಲ್ಲಿ ಕುಟುಂಬದವರನ್ನೆಲ್ಲ ಲಾಕ್ ಮಾಡಿರುವುದಾಗಿ ಖಳ ಹೇಳುವಾಗ. ವಿಡಿಯೊದಲ್ಲಿಯೇ ಆ ಖಳನಿಗೆ ಶಿವರಾಜ್‌ಕುಮಾರ್ ಬಂದು ಕುಟುಂಬದವರನ್ನು ರಕ್ಷಿಸುವ ದೃಶ್ಯವನ್ನು ರಜನಿ ತೋರಿಸುತ್ತಾರೆ. ಲಾಂಗು ಹಿಡಿದು ಠಳಾಯಿಸುವ ಮಂದಿಯನ್ನು ಶಿವರಾಜ್‌ಕುಮಾರ್ ಕಣ್ಣಿನ ಕತ್ತಿಯಿಂದಲೇ ಕೊಲ್ಲುವೋಪಾದಿಯಲ್ಲಿ ಸಂಯೋಜಿಸಿರುವ ದೃಶ್ಯವಿದು. ಕೂಳರ ದೇಹದಿಂದ ಹೊಮ್ಮಿ ಮುಖಕ್ಕೆ ಸಿಡಿದ ರಕ್ತ ಒರೆಸಿಕೊಳ್ಳಲು ರಮ್ಯಾಕೃಷ್ಣಾ ಅವರತ್ತ ಟಿಶ್ಯೂ ಪೇಪರ್‌ಗಳ ಡಬ್ಬವನ್ನು ಶಿವರಾಜ್‌ಕುಮಾರ್ ಮೆಲ್ಲಗೆ ತಳ್ಳುತ್ತಾರೆ. ಈ ದೃಶ್ಯಗಳೀಗ ಸಾಮಾಜಿಕ ಮಾಧ್ಯಮಗಳಲ್ಲಿ ಈಗ ಟ್ರೆಂಡ್ ಆಗಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5408 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಈ ಸಲ ಸೂಚನೆಯನ್ನು ಹೀಗೆ ಕೊಡಿ! (3)
3.ಹಕ್ಕಿ ಪ್ರಾಣಿ ಇತ್ಯಾದಿಗಳನ್ನು ಇಡುವ ಗೂಡು (3)
6.ರೀತಿಯೊಡನೆ ಜೊತೆಗೂಡುವ ಪದ್ಧತಿ (3)
7.ಕಚೇರಿಯ ನೌಕರ ವರ್ಗ (3)
8.ಜಾಳು ಜಾಳಾಗಿರುವ ಬಟ್ಟೆಯ ಬಲೆ (3)
9.ಚಿತೆಯೊಳಗೆ ಶೂನ್ಯವಿದ್ದರೆ ಈ ಯೋಚನೆ! (2)
10.ಜೈನರ ದೇವಾಲಯ (3)
12.ನಗರದಲ್ಲಿರುವ ಮನುಷ್ಯ (2)
14.ಈತ ದುಡ್ಡಿಲ್ಲದವನು (3)
15.ಪದ್ಮವಿಲ್ಲಿ ವಿರಳವಾಗಿದೆ (3)
16. ಇದು ಮಣ್ಣಿಗೆ ಸಂಬಂಧಿಸಿದ್ದು (3)
17. ಒನಪು ತೋರಿದಾಗ ಬಂದಿರುವ ಸ್ಮರಣೆ (3)
18.ಬವಣೆ ಪಟ್ಟುಕೊಂಡು ಬೆಳೆದ ಈ ಧಾನ್ಯ ಉಲ್ಟಾ ಕಾಣುತ್ತಿದೆಯಲ್ಲಾ? (3)

ಮೇಲಿಂದ ಕೆಳಕ್ಕೆ

1.ಸಮರ್ಪಕವಾದ ಉತ್ತರ (5)
2.ಪ್ರಸವಕ್ಕೊಂದು ಪರ್ಯಾಯ ಪದ (3)
3.ದೀವಟಿಗೆ ಇಲ್ಲಿ ಕಾಣುತ್ತಿದೆ (2)
4.ವಿಲಾಸಪ್ರಿಯತೆಯಿದು (4)
5.ನೆಟ್ಟಗೆ ಉದ್ದವಾಗಿ ಮೇಲೆಯಾಗಿ ಬೆಳೆಯುವ ಸಸ್ಯ (3)
9.ಹರುಕು ಬಟ್ಟೆ ಇಲ್ಲಿದೆ (2)
10.ಬಡವರ ನಾಡಿನಲ್ಲಿರುವ ಕ್ಷಾಮ (2)
11.ತುರಗದ ಮೊಗವಿದು (5)
12.ಹಜಾರವನ್ನು ಹೀಗೂ ಕರೆವರು (4)
13.ವಿರೋಧ ಪಕ್ಷವಿದು (3)
14.ಬಡಾವಣೆಯಲ್ಲಿರುವ ಕಷ್ಟ ಕೋಟಲೆ! (3)
16.ಚಿಕ್ಕ ಮಗುವನ್ನು ಹೀಗೂ ಕರೆಯುತ್ತಾರೆ (2)



5407ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಭಿಮಾನ
3.ಕಿಡಿಗೇಡಿ 5.ನರ್ತಕಿ
6.ತವಕ 8.ಸಂಕರ
9.ವಿಯೋಗ 10.ಕಲಹ
12.ಕುಣಿಕೆ 14.ಕಳೆಬರ
15.ಋಷುವತು

ಮೇಲಿಂದ ಕೆಳಕ್ಕೆ:
1.ಅವಿರತ 2.ನಯನ
3.ಕಿಟಕಿ
4.ಡಿಹೇಣರ 7.ಕರಗ
8.ಸಂದೂಕ
9.ವಿದೂಷಕ
11.ಹಕೀಕತ್ತು 12.ಕುಠಾರ
13.ಕೆಸರು

ಸುಡೊಕು 5794

1		3	5		6		4	7
				4			8	
7		4	9			5		3
	1				5			
		7		9				5
5	2		6		3			
8		1		5			6	
			1		4	8		9
4		9		6			5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5793 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಆಗಸ್ಟ್ 12, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಅಧಿಕ ಶ್ರಾವಣ ಕೃಷ್ಣ ಏಕಾದಶಿ ಗಂ. 06-32 ನಕ್ಷತ್ರ: ಮೃಗಶಿರಾ ಗಂ. 06-03 ಯೋಗ: ಹರ್ಷಣ ಗಂ. 15-22, ಕರಣ: ಬಾಲವ ಗಂ. 06-32, ಕರ್ಕಾಟಕ ಮಾಸದ 26 ನೇ ದಿನ, ಮಳೆನಕ್ಷತ್ರ: ಆಶ್ಲೇಷ 3. ರಾಹುಕಾಲ : ಬೆಳಿಗ್ಗೆ 09-00 - 10-30 ಸೂರ್ಯೋದಯ : 06-21 ಸೂರ್ಯಾಸ್ತ : 06-50, ಮುಸ್ಲಿಂ ದಿನಾಂಕ : 24 ಮೊಹರಮ್ ದಿನ ವಿಶೇಷ : ಕಮಲ ಏಕಾದಶಿ (ಪುರುಷೋತ್ತಮ ಏಕಾದಶಿ) ಅದೃಷ್ಟ ಸಂಖ್ಯೆ : 2, 4

ಮೇಷ: ನಾಳೆಯ ಬಗ್ಗೆ ಯೋಚಿಸಿ ಬುದ್ಧಿವಂತಿಕೆಯಿಂದ ಬದುಕ ಬೇಕಾದ ದಿನ. ನಿಮ್ಮದೇ ಆದ ಭಾವನಾ ಪ್ರಪಂಚ ನಿಮ್ಮನ್ನು ಮತ್ತೆ ಮತ್ತೆ ಸೆಳೆಯುತ್ತದೆ. ನಿಮ್ಮ ಪ್ರಯತ್ನಗಳು ಯಾವುದೇ ಕಾರಣಕ್ಕೂ ನಿಷ್ಫಲವೆನಿಸುವುದಿಲ್ಲ.

ವೃಷಭ: ಸಹಭಾಗಿಗೆ ಅಥವಾ ಮಕ್ಕಳಿಗೆ ಸಹಾಯ ಮಾಡುವುದರಲ್ಲಿ ಈ ದಿನ ನಿಮಗೆ ಹೆಚ್ಚು ಆನಂದ ಸಿಗಬಹುದು. ಕದಡಿದ ಮನಸ್ಸಿಗೆ ಸಂಜೆಯ ವೇಳೆಗೆ ತಣ್ಣನೆಯ ವಾತಾವರಣ ಸಂತೋಷ ನೀಡುತ್ತದೆ

ಮಿಥುನ: ಸಾರ್ವಜನಿಕರಲ್ಲಿ ಹೆಚ್ಚಾಗಿ ಬೆರೆಯುವ ಸಂದರ್ಭ ಬರುವುದರಿಂದ ಆರೋಗ್ಯದಲ್ಲಿ ಗಮನ ವಹಿಸಿ. ಸಂಜೆಯ ಸಮಯದಲ್ಲಿ ಶಿರೋ ವೇದನದಿಂದ ಬಳಲುವ ಸಾಧ್ಯತೆ. ವ್ಯವಹರಿಸುವಾಗ ಬುದ್ಧಿವಂತಿಕೆ ಅಗತ್ಯ.

ಕರ್ಕಾಟಕ: ಹಿತೈಷಿಗಳಾಗಿದ್ದ ಬಂಧು-ಮಿತ್ರರು ಹಿತಶತ್ರುಗಳಾಗುವ ಸಾಧ್ಯತೆಯು ಅಧಿಕವಾಗಿ ತೋರುವುದು. ಆದ್ದರಿಂದ ವ್ಯವಹಾರದಲ್ಲಿ ಜೀವನದಲ್ಲಿ ಕೊರತೆ ಕಾಣುವುದಿಲ್ಲ. ಕುಟುಂಬದಲ್ಲಿ ಸುಖ ನೆಮ್ಮದಿ ವೃದ್ಧಿ.

ಸಿಂಹ: ಗೃಹಸೌಖ್ಯ ಉತ್ತಮವಿದ್ದು ಸಾಮಾಜಿಕವಾಗಿ ಸ್ಥಾನಮಾನ ಪ್ರಾಪ್ತಿ. ಆಫೀಸಿನ ಕೆಲಸಗಳನ್ನು ಮಾಡಿಮುಗಿಸುವಲ್ಲಿ ಆತುರ ತೋರುವುದು ಸರಿಯಲ್ಲ. ದೇವರ ಕೃಪೆಯಿಂದ ಭಾಗ್ಯದ ಬಾಗಿಲು ತೆರೆಯುವುದು.

ಕನ್ಯಾ: ಯಾವುದೇ ಉದ್ವೇಗಕ್ಕೆ ಒಳಗಾಗದೆ ಹೊಸ ಸ್ಫೂರ್ತಿಯಿಂದ ಕಾರ್ಯ ನಿರ್ವಹಿಸುವಿರಿ. ವಿದೇಶ ಪ್ರವಾಸ ಯೋಜನೆಗಳು ಲಾಭವನ್ನೇ ನೀಡಲಿದೆ. ಆಕಸ್ಮಿಕ ರೀತಿಯಲ್ಲಿ ಮದುವೆ ನಿಶ್ಚಯ ಕಾರ್ಯ ನಡೆಯಲಿದೆ.

ತುಲಾ: ನಿಮ್ಮ ಮಾತು ಇನ್ನೊಬ್ಬರ ಮನಸ್ಸಿಗೆ ನೋವಾಗದಂತೆ ಇರುವ ಬಗ್ಗೆ ಗಮನ ನೀಡಿ. ದೈವಬಲ ಒದಗುವುದರಿಂದ ನಿಮ್ಮ ಪ್ರಯತ್ನ ಕಾರ್ಯಗಳೆಲ್ಲವೂ ಶುಭ ಫಲಗಳನ್ನೇ ನೀಡಲಿದೆ.

ವೃಶ್ಚಿಕ: ಬಂಧು-ಮಿತ್ರರ ಸಹಾಯ ಸಹಕಾರಗಳು ಸಕಾಲಕ್ಕೆ ಒದಗುವುದರಿಂದ ನಿರಾಳ ಭಾವ ಮೂಡುವುದು. ಹಣಕಾಸು ಪರಿಸ್ಥಿತಿ ಸಂಪೂರ್ಣ ಹಿಡಿತದಲ್ಲಿಡಲು ಪ್ರಯತ್ನಿಸಿ. ಮಕ್ಕಳ ದೈನಂದಿನ ಚಟುವಟಿಕೆ ಕಡೆ ಗಮನ ನೀಡಿ.

ಧನು: ಕೆಲವೊಂದು ಕಠಿಣ ನಿರ್ಧಾರಗಳನ್ನು ಕೈಗೊಳ್ಳುವ ಪ್ರಸಂಗ ಬರಬಹುದು. ಮಹತ್ವದ ವಿಷಯವಾದ್ದರಿಂದ ಗಂಭೀರ ಚಿಂತನೆ ಅಗತ್ಯ ಜತೆಗೆ ವಕೀಲರ ಸಲಹೆ, ಮಾರ್ಗದರ್ಶನ ಪಡೆದು ಮುನ್ನುಗ್ಗುವುದು ಉತ್ತಮ.

ಮಕರ: ಅಧಿಕಾರಿಗಳ ಜೊತೆ ಮುಕ್ತ ಚರ್ಚೆ ನಡೆಸುವುದರಿಂದ ಸಮಸ್ಯೆಗಳ ಪರಿಹಾರವನ್ನು ಶಾಶ್ವತವಾಗಿ ಬಗೆಹರಿಸಿಕೊಳ್ಳುವಿರಿ. ಇತರರ ಮಾತನ್ನು ತಪ್ಪಾಗಿ ಅರ್ಥೈಸಿ ಭಿನ್ನಾಭಿಪ್ರಾಯ ಸೃಷ್ಟಿಸಿಕೊಳ್ಳಬೇಡಿ.

ಕುಂಭ: ಮಕ್ಕಳು ಮಾಡುವ ಸಣ್ಣಪುಟ್ಟ ತಪ್ಪುಗಳನ್ನು ಕ್ಷಮಿಸಿ ತಿಳಿಹೇಳಿ, ಯಾವುದೇ ಕಾರಣಗಳಿಗೂ ಈ ದಿನ ಮಕ್ಕಳನ್ನು ಶಿಕ್ಷಿಸಬೇಡಿ. ಸಾಂಸಾರಿಕ ಜೀವನದಲ್ಲಿ ಬಿರುಕು ಮೂಡದಂತೆ ನೋಡಿಕೊಳ್ಳಿ.

ಮೀನ: ಕೆಲಸ ಕಾರ್ಯಗಳಿಗೆ ಇಂದು ಯಾವುದೇ ತರಹದ ಅಡ್ಡಿ ಆತಂಕಗಳು ಇರುವುದಿಲ್ಲ. ಸಂಗೀತ ಕಲಾವಿದರು ಸಿಕ್ಕ ಅವಕಾಶವನ್ನು ತಿರಸ್ಕರಿಸಬೇಡಿ. ಕಷ್ಟಪಟ್ಟು ದುಡಿಯುವುದರಿಂದ ಆಸೆ ಈಡೇರುವುದು.

ಅಧ್ಯಾತ್ಮದ ಒಲವು ಸಹಜ: ಡಾ.ಸೋಮನಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಬ್ಬ ವಿಜ್ಞಾನಿ ತನ್ನ ಅಂತರಾತ್ಮ ಕುರಿತು ಅರಿತುಕೊಳ್ಳುವ ಪ್ರಕ್ರಿಯೆ ತಪ್ಪಲ್ಲ ಮತ್ತು ಭಾರತದಲ್ಲಿ ಜನಿಸಿರುವ ನಮಗೆ ಅಧ್ಯಾತ್ಮದೆಡೆ ಒಲವು ಸಹಜ' ಎಂದು ಇಸ್ರೊ ಅಧ್ಯಕ್ಷ ಡಾ.ಎಸ್.ಸೋಮನಾಥ್ ಹೇಳಿದ್ದಾರೆ.

ದಿಶಾ ಭಾರತ್ ಸಂಸ್ಥೆ ಇತ್ತೀಚೆಗೆ ಏರ್ಪಡಿಸಿದ್ದ 'ನನ್ನ ಭಾರತ' ಅಭಿಯಾನದ ಉಪನ್ಯಾಸ ನೀಡಿ, 'ಒಬ್ಬ ಅಧ್ಯಾತ್ಮಿಕ ಆಸಕ್ತಿಯುಳ್ಳ ವ್ಯಕ್ತಿಗೆ ತನ್ನನ್ನು ಕಾಡುವ ಅನೇಕ ಪ್ರಶ್ನೆಗಳಿಗೆ ಉತ್ತರಗಳಿದ್ದರೂ ಅದರ ಅನುಭವವನ್ನು ಪಡೆಯುವುದು ಮುಖ್ಯ' ಎಂದು ತಿಳಿಸಿದರು.

'ನಾವು ಅನುಭವಿಸದೇ ಇರುವ ಕೇಳಿರುವ ಸಂಗತಿಗಳು ನಂಬಿಕೆ ಎನಿಸುತ್ತವೆ. ಹಾಗೆಯೇ ವಿಜ್ಞಾನದಲ್ಲೂ ನಾವು ಹಲವು ಸಂಗತಿಗಳ ಕುರಿತ ತಿಳಿದಿದ್ದೇವೆ. ಆದರೆ, ನಮ್ಮ ನಂಬಿಕೆಯನ್ನು ಸಂಶೋಧನೆಯ ಮೂಲಕ ಅನುಭವವನ್ನಾಗಿಸಿಕೊಳ್ಳಲು ಮುಂದಾಗುತ್ತೇವೆ. ಆದ್ದರಿಂದಲೇ ವಿಜ್ಞಾನ ಮತ್ತು ಅಧ್ಯಾತ್ಮ ಎರಡೂ ಅಸ್ತಿತ್ವದಲ್ಲಿವೆ' ಎಂದು ಹೇಳಿದರು.

ಬಿಡಿಎ ನಕ್ಷೆ ಉಲ್ಲಂಘನೆ ಆರೋಪ • ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಕಟ್ಟಡಕ್ಕೆ ಕುತ್ತು

ಟೆಲಿಕಾಂ ಬಡಾವಣೆ: 'ಸಿ.ಎ' ನಿವೇಶನ ಮಾರಾಟ

• ಆರ್. ಮಂಜುನಾಥ್

ಬೆಂಗಳೂರು: 20 ವರ್ಷಗಳಿಂದ ಟೆಲಿಕಾಂ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಬಳಕೆಯಲ್ಲಿದ್ದ 'ನಾಗರಿಕ ಸೌಲಭ್ಯ' (ಸಿ.ಎ) ನಿವೇಶನವನ್ನು ಟೆಲಿಕಾಂ ನೌಕರರ ಗೃಹ ನಿರ್ಮಾಣ ಸಹಕಾರ ಸಂಘವು ಮಾರಾಟ ಮಾಡಿದೆ.

ವಿಜಯನಗರ 2ನೇ ಹಂತದ ಟೆಲಿಕಾಂ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಹಾಗೂ ಟೆಲಿಕಾಂ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ನಡುವಿನ 'ನಾಗರಿಕ ಸೌಲಭ್ಯ'ದ ಎರಡು ನಿವೇಶನಗಳ ಬಗ್ಗೆ 20 ವರ್ಷದ ನಂತರ ಗೊಂದಲ ಮೂಡಿದೆ. ಅಕ್ರಮಗಳನ್ನು ನಡೆಸಿರುವ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಸಹಕಾರ ಸಂಘಗಳ ನಿಬಂಧಕರು ಹಾಗೂ ಲೋಕಾಯುಕ್ತರಿಗೂ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ದೂರು ನೀಡಿದ್ದಾರೆ.

ಹೊಸಹಳ್ಳಿ ವಾರ್ಡ್‌ನಲ್ಲಿರುವ ವಿಜಯನಗರ ಟೆಲಿಕಾಂ ಬಡಾವಣೆಯ ಸುಮಾರು ಏಳು ಸಾವಿರ ಚದರ ಅಡಿ ವಿಸ್ತೀರ್ಣದ 5 ಮತ್ತು 6 ನಿವೇಶನಗಳನ್ನು ನಿಯಮಬಾಹಿರವಾಗಿ ಮಾರಾಟ ಮಾಡಿರುವ ಬಗ್ಗೆ ವಿವರಣೆ ನೀಡಲು ಸಹಕಾರ ಸಂಘಗಳ ನಿಬಂಧಕರು ಜೂನ್ 22ರಂದು ನೋಟಿಸ್ ಕೂಡ ಜಾರಿ ಮಾಡಿದ್ದಾರೆ.

ವಿಜಯನಗರ ಟೆಲಿಕಾಂ ಬಡಾವಣೆಯಲ್ಲಿರುವ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಕಟ್ಟಡ

ಟೆಲಿಕಾಂ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ಟೆಲಿಕಾಂ ಎಂಪ್ಲಾಯೀಸ್ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ) ಬಿಡಿಎ– 1975ರ ಕಾಯ್ದೆಯಂತೆ 1995–96ರಲ್ಲಿ 370 ನಿವೇಶನಗಳನ್ನು ವಿಜಯನಗರ ಟೆಲಿಕಾಂ ಬಡಾವಣೆಯಲ್ಲಿ ಹಂಚಿದೆ. ನಾಗರಿಕ ಸೌಲಭ್ಯ ಅಥವಾ ಕಟ್ಟಡಗಳನ್ನು ನಿರ್ಮಿಸಿ ಕೊಟ್ಟಿರಲಿಲ್ಲ. ಹೀಗಾಗಿ, 5 ಮತ್ತು 6ನೇ ನಿವೇಶನದಲ್ಲಿ 2002–03ರಲ್ಲಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಕ್ಕೆ ಕಟ್ಟಡ ನಿರ್ಮಿಸಿಕೊಳ್ಳಲು ಅನುಮತಿ ನೀಡಲಾಗಿತ್ತು. ಅದರಂತೆ ಕಟ್ಟಡ ನಿರ್ಮಾಣವಾಗಿ, ಸಂಘದ ಕಚೇರಿ ಸೇರಿದಂತೆ ಈವರೆಗೂ ನಾಗರಿಕ ಚಟುವಟಿಕೆಗಳು ಅಲ್ಲಿಯೇ ನಡೆಯುತ್ತಿವೆ ನಿವಾಸಿಗಳು ತಿಳಿಸಿದ್ದಾರೆ.

'ನಕ್ಷೆಯನ್ನೇ ಮಾರ್ಪಾಟು ಮಾಡಿ ನಿವೇಶನ 6 ಅನ್ನು ₹ 2.32 ಕೋಟಿಗೆ ಅನಿಲ ತಿಲಕ್ ಅವರಿಗೆ ಮಾರಾಟ ಮಾಡಲಾಗಿದೆ. ಬಡಾವಣೆಯ ನಿವಾಸಿಗಳಿಗೆ ವಂಚಿಸಿ ಈ ಕ್ರಯಪತ್ರ ಮಾಡಿಕೊಟ್ಟಿದ್ದಾರೆ' ಎಂದು ನಿವಾಸಿಗಳು ದೂರಿದ್ದಾರೆ.

'ಸಿ.ಎ ನಿವೇಶನ ಅಲ್ಲ'

'ಟೆಲಿಕಾಂ ಬಡಾವಣೆಯಲ್ಲಿ ನಾಗರಿಕ ಸೌಲಭ್ಯಗಳ ನಿವೇಶನ ಇಲ್ಲ. ಇತರೆ ನಿವೇಶನಗಳಂತೆ 5 ಮತ್ತು 6 ಕೂಡ ನಿವೇಶನಗಳೇ. ಅವುಗಳನ್ನು ಕ್ಷೇಮಾಭಿವೃದ್ಧಿ ಸಂಘ ಉಪಯೋಗಿಸಿಕೊಳ್ಳುತ್ತಿತ್ತು. ನಿವೇಶನಗಳನ್ನು ಸಂಘದ ನಿಯಮದಂತೆಯೇ ಮಾರಾಟ ಮಾಡಲಾಗಿದೆ. ಸಹಕಾರ ಸಂಘಗಳ ನಿಬಂಧಕರ ನೋಟಿಸ್‌ಗೆ ಉತ್ತರ ನೀಡಲಾಗಿದೆ' ಎಂದು ಟೆಲಿಕಾಂ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಜಿ. ಬಾಬು ತಿಳಿಸಿದರು.

'ನೋಟಿಸ್ ಸಹಜ': 'ಸಿ.ಎ ನಿವೇಶನಗಳನ್ನು ಮಾರಾಟ ಮಾಡಿಲ್ಲ. ಸಿ.ಎ ಎಂದರೆ ಸರ್ಕಾರದ್ದು. ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಕ್ಕೆ ಎಂದು ಕೊಟ್ಟಿಲ್ಲ. ಎಲ್ಲ ಸೊಸೈಟಿ ನಿವೇಶನಗಳು. ದೂರು ಬಂದಾಗ ನೋಟಿಸ್ ಕೊಡುವುದು ಸಹಜ' ಎಂದು ಸಹಕಾರ ಸಂಘದ ಆಥರೈಸ್ಡ್ ಡೈರೆಕ್ಟರ್ ಸಿ.ವಿ.ಮಂಜುನಾಥ ಪ್ರತಿಕ್ರಿಯಿಸಿದರು.

ಕ್ರಯಪತ್ರ ರದ್ದು ಮಾಡಲು ಮನವಿ

'ಬಿಡಿಎ ಮಂಜೂರು ಮಾಡಿರುವ ಮೂಲನಕ್ಷೆಯನ್ನು ತಿರುಚಿ, ನಾಗರಿಕರ ಬಳಕೆಗೆ ಸೇರಬೇಕಾದ ಜಾಗವನ್ನು ಟೆಲಿಕಾಂ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಪದಾಧಿಕಾರಿಗಳು ಮಾರಾಟ ಮಾಡಿದ್ದಾರೆ. ಕ್ರಯಪತ್ರ ರದ್ದುಪಡಿಸಲು ಸಹಕಾರ ಸಂಘಗಳ ನಿಬಂಧಕರಿಗೆ ದೂರು ನೀಡಲಾಗಿದೆ' ಎಂದು ಟೆಲಿಕಾಂ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಚಂದ್ರನಾಥ್ ಮನವಿ ಮಾಡಿದರು.

ಸುದ್ದಿ 2 ನಿಮಿಷ

'ಅಕ್ಷರಧಾಮ ಮಾದರಿಯಲ್ಲಿ ಉದ್ಯಾನ ನಿರ್ಮಿಸಿ'

ಬೆಂಗಳೂರು: 'ಕರ್ನಾಟಕ ನಾಮಕರಣದ ಸುವರ್ಣ ವರ್ಷಾಚರಣೆ ಪ್ರಯುಕ್ತ ನವದೆಹಲಿಯ 'ಅಕ್ಷರಧಾಮ' ಮಾದರಿಯಲ್ಲಿ ಇಲ್ಲಿ 'ಸಮಗ್ರ ಕರ್ನಾಟಕ ದರ್ಶನ ಉದ್ಯಾನ' ನಿರ್ಮಿಸಬೇಕು' ಎಂದು ಕನ್ನಡ ಗೆಳೆಯರ ಬಳಗವು ಸರ್ಕಾರಕ್ಕೆ ಮನವಿ ಮಾಡಿದೆ.

ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ಅವರು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಅವರಿಗೆ ವಿಸ್ತೃತ ವರದಿ ಸಹಿತ ಮನವಿ ಪತ್ರ ಸಲ್ಲಿಸಿದ್ದಾರೆ.

'ಪ್ರಥಮ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿಗಾಗಿ ಕನ್ನಡ ವಿಶ್ವವಿದ್ಯಾಲಯ ಸ್ಥಾಪನೆಯಾಯಿತು. ಈಗ ಕರ್ನಾಟಕ ನಾಮಕರಣದ ಸುವರ್ಣ ಮಹೋತ್ಸವ ವರ್ಷದ ಪ್ರಯುಕ್ತ 'ಸಮಗ್ರ ಕರ್ನಾಟಕ ದರ್ಶನ ಉದ್ಯಾನ' ನಿರ್ಮಿಸಿ, ಕರ್ನಾಟಕದ ಭವ್ಯ ಇತಿಹಾಸ, ಪರಂಪರೆ, ಸಂಸ್ಕೃತಿ ಹಾಗೂ ಕನ್ನಡ ಸಾಹಿತ್ಯದ ಸಮಗ್ರ ಚಿತ್ರಣವನ್ನು ವಿಶ್ವಕ್ಕೆ ಪರಿಚಯಿಸಬೇಕು. ಕರ್ನಾಟಕದ ರಾಜಧಾನಿ ಬೆಂಗಳೂರನ್ನು ಕನ್ನಡ ರಾಜಧಾನಿಯನ್ನಾಗಿಸುವ ಅಗತ್ಯವಿದ್ದು, ಈ ಸಂಬಂಧ 'ಕನ್ನಡ ಬೆಂಗಳೂರು; ಸುಂದರ ಬೆಂಗಳೂರು' ಎಂಬ ಕಾರ್ಯಕ್ರಮ ರೂಪಿಸಬೇಕು. ಎಲ್ಲಾ ಕನ್ನಡಪರ ಸಂಘ-ಸಂಸ್ಥೆಗಳ ಸಹಕಾರದಿಂದ ಇಡೀ ವರ್ಷ ಕಾರ್ಯಕ್ರಮ ನಡೆಸಿ, ಬೆಂಗಳೂರಿನಲ್ಲಿ ಕನ್ನಡ ಧ್ವನಿ ಗಟ್ಟಿಯಾಗಿ ಕೇಳುವಂತೆ ಮಾಡಬೇಕು' ಎಂದು ರಾ.ನಂ. ಚಂದ್ರಶೇಖರ ತಿಳಿಸಿದ್ದಾರೆ.

'ಒತ್ತಡದ ಬದುಕಿಗೆ ಮಾನಸಿಕ ಆರೋಗ್ಯ ಮುಖ್ಯ'

ಬೆಂಗಳೂರು: 'ಒತ್ತಡದ ಬದುಕಿನಲ್ಲಿ ದೈಹಿಕ ಆರೋಗ್ಯಕ್ಕೆ ನೀಡುವ ಮಹತ್ವವನ್ನು ಮಾನಸಿಕ ಆರೋಗ್ಯಕ್ಕೂ ನೀಡುವ ಅಗತ್ಯವಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಸಹಯೋಗದಲ್ಲಿ ಕ್ಲಿನಿಕಲ್ ಸೈಕಾಲಜಿ ಸೊಸೈಟಿ ಆಫ್ ಇಂಡಿಯಾ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಮಾನಸಿಕ ಆರೋಗ್ಯ ತಜ್ಞರ ವಾರ್ಷಿಕ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

'ಯೋಗ, ಧ್ಯಾನ ಹಾಗೂ ಧನಾತ್ಮಕ ಚಿಂತನೆಗಳ ಮೂಲಕ ನಮ್ಮ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ವ್ಯಕ್ತಿಯ ಹಾಗೂ ಸಮುದಾಯದ ಮಾನಸಿಕ ಆರೋಗ್ಯದ ಅಗತ್ಯತೆಗಳನ್ನು ನಿಭಾಯಿಸುವಲ್ಲಿ ಮನೋವೈದ್ಯರ ಪಾತ್ರ ಪ್ರಮುಖವಾದದ್ದು. ಹೀಗಾಗಿ ನಿಮ್ಹಾನ್ಸ್‌ನ ವೈದ್ಯರ ಮೇಲೆ ಹೆಚ್ಚಿನ ಜವಾಬ್ದಾರಿಯಿದೆ' ಎಂದು ಹೇಳಿದರು.

ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ, 'ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ಆರೋಗ್ಯಕ್ಕೂ ಹೆಚ್ಚಿನ ಮಹತ್ವ ನೀಡಬೇಕು. ತಜ್ಞ ವೈದ್ಯರ ಕೊರತೆ ಸೇರಿ ಮನೋವೈದ್ಯಕೀಯ ಕ್ಷೇತ್ರವು ಹಲವು ಸವಾಲುಗಳನ್ನು ಎದುರಿಸುತ್ತಿದೆ' ಎಂದು ತಿಳಿಸಿದರು.

'ಪ್ರಾಚೀನ ಸಾಹಿತ್ಯದಲ್ಲಿದೆ ಅರಸೊತ್ತಿಗೆಯ ನಿರಾಕರಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಸೊತ್ತಿಗೆಯ ನಿರಾಕರಣೆ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿದೆ. ಅದನ್ನು ಪುನರ್ ರೂಪಿಸಬೇಕು ಎಂದು ಕವಿ ಎಚ್.ಎಸ್. ಶಿವಪ್ರಕಾಶ್ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ನಡೆದ ಹಂಪ ನಾಗರಾಜಯ್ಯ ಅವರ 'ಸ್ಪೆಕ್ಟ್ರಂ ಆಫ್ ಕ್ಲಾಸಿಕಲ್ ಲಿಟರೇಚರ್ ಇನ್ ಕರ್ನಾಟಕ' (ಕರ್ನಾಟಕ ಅಭಿಜಾತ ಸಾಹಿತ್ಯದ ಇಂದ್ರಚಾಪ) ಸಂಪುಟ ಲೋಕಾರ್ಪಣೆ ಮತ್ತು ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

'ಕನ್ನಡ ಸಾಹಿತ್ಯ ಪರಂಪರೆ ವಿಶ್ವಕ್ಕೇ ಆದರ್ಶಪ್ರಾಯವಾದುದು. ಕನ್ನಡದ ಕರುಣೆ, ದಯೆ, ಸಮಾನತೆಯ ಮೌಲ್ಯಗಳು ಪುನರ್‌ಸ್ಥಾಪನೆಗೊಳ್ಳಬೇಕು' ಎಂದು ಆಶಯ ವ್ಯಕ್ತಪಡಿಸಿದರು.

ಕೃತಿಕಾರ ಹಂಪ ನಾಗರಾಜಯ್ಯ ಮಾತನಾಡಿ, 'ಕನ್ನಡದ ಅಮೂಲ್ಯ ವಿಚಾರಗಳನ್ನು ವಿಶ್ವಕ್ಕೆ ಹಂಚುವ ಉದ್ದೇಶದಿಂದ ಇಂಗ್ಲಿಷ್‌ನಲ್ಲಿ ಪ್ರಕಟಿಸಿದ್ದೇನೆ. ಇದು ಕೈದೀವಿಗೆ ಕೃತಿ' ಎಂದರು.

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಜಯಕರ್ ಎಸ್.ಎಂ. ಮಾತನಾಡಿ, 'ಹಂಪನಾ ಅವರ ಸಾಹಿತ್ಯವು ಸಮಾಜದ ಅಭಿವೃದ್ಧಿಗೆ ಪೂರಕವಾಗಿದ್ದು, ಸಾಹಿತ್ಯದ ವಿದ್ಯಾರ್ಥಿಗಳು ಓದಬೇಕು' ಎಂದರು.

ಸಾಹಿತಿ ಕಮಲ ಹಂಪನಾ, 'ಕರ್ನಾಟಕ ಎಂದು ನಾಮಕರಣವಾಗಿ 50 ವರ್ಷಗಳು ಕಳೆದಿವೆ. ಈ ಸಂದರ್ಭದಲ್ಲಿ ರಾಜ್ಯವನ್ನು ಸುವರ್ಣ ಕರ್ನಾಟಕ ಎಂದು ಕರೆಯುವದು ಸೂಕ್ತ' ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ. ಮುನಿಯಪ್ಪ ಅಧ್ಯಕ್ಷತೆ ವಹಿಸಿದ್ದರು. ಪ್ರೊ. ಡಿ.ಕೆ. ಚಿತ್ತಯ್ಯ ಪೂಜಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ವಿವಿಧ ಗ್ರಾ.ಪಂ.ಗಳಿಗೆ ಅಧ್ಯಕ್ಷರ ಆಯ್ಕೆ

ಕಣ್ಣೂರು: ಅಶೋಕ್ ಕುಮಾರ್ ಅಧ್ಯಕ್ಷ

ಕೆ.ಆರ್. ಪುರ: ಮಹದೇವಪುರ ಕ್ಷೇತ್ರದ ಕಣ್ಣೂರು ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಅಶೋಕ್ ಕುಮಾರ್ ಮತ್ತು ಉಪಾಧ್ಯಕ್ಷರಾಗಿ ಲಲಿತಾ ದೇವರಾಜ್ ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಅಧಿಕಾರಿ ಮೋಹನ್ ತಿಳಿಸಿದರು.

ಒಟ್ಟು 31 ಸದಸ್ಯರಲ್ಲಿ ಅಶೋಕ್ ಕುಮಾರ್ ಪರವಾಗಿ 19 ಮತಗಳು ಬಂದರೆ, ಗೋಪಾಲ ಕೃಷ್ಣ ಪರವಾಗಿ 12 ಮತಗಳು ಚಲಾವಣೆಯಾದವು. ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಲಲಿತಾ ದೇವರಾಜ್ 18 ಮತ ಪಡೆದು ಆಯ್ಕೆಯಾದರು. ಆಂಜಿನಮ್ಮ ಪರವಾಗಿ 13 ಮತಗಳು ಬಂದವು. ಬಿಜೆಪಿ ಗ್ರಾಮಾಂತರ ಮಂಡಲ ಅಧ್ಯಕ್ಷ ನಟರಾಜ್, ಮುಖಂಡರಾದ ಪಾಪಣ್ಣ, ಬೈರತಿ ರಮೇಶ್, ಬಿದರಹಳ್ಳಿ ರಾಜೇಶ್, ಮೋಹನ ರೆಡ್ಡಿ, ನಾರಾಯಣ ಟಿ.ಪಿ., ಹೂಡಿ ಪಿಳ್ಳಪ್ಪ, ಮಹೇಶ್, ರಘುನಾಥ್ ಜನಾರ್ದನ ಗೌಡ ಹಾಗೂ ಪಂಚಾಯತಿ ಸದಸ್ಯರು ಇದ್ದರು.

ಅರಕೆರೆ: ಮುನಿಲಕ್ಷ್ಮಮ್ಮ ಅಧ್ಯಕ್ಷೆ

ಹೆಸರುಘಟ್ಟ: ಹೋಬಳಿಯ ಅರಕೆರೆ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಮುನಿಲಕ್ಷ್ಮಮ್ಮ ಪರಶುರಾಮ್ ಹಾಗೂ ಉಪಾಧ್ಯಕ್ಷರಾಗಿ ರಾಮಯ್ಯ ಅವಿರೋಧವಾಗಿ ಮಂಗಳವಾರ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ವಿನೋದಮ್ಮ ತಿಳಿಸಿದರು.

ಕುಲವನಹಳ್ಳಿ: ಸುನಂದಮ್ಮ ಆಯ್ಕೆ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕಿನ ಕುಲವನಹಳ್ಳಿ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಸುನಂದಮ್ಮ ಆಯ್ಕೆಯಾದರು.

19 ಮಂದಿ ಸದಸ್ಯ ಬಲದ ಪಂಚಾಯಿತಿಯ ಮುಂದಿನ ಎರಡೂವರೆ ವರ್ಷಗಳ ಅವಧಿಗೆ ಅಧ್ಯಕ್ಷರಾಗಿ ಕುಲವನಹಳ್ಳಿ ವಾರ್ಡ್‌ನ ಸುನಂದಮ್ಮ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ವಡೇರಹಳ್ಳಿ: ರೇಣುಕಾ ಆಯ್ಕೆ

ಯಲಹಂಕ: ವಡೇರಹಳ್ಳಿ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ರೇಣುಕಾ ಬಾಲಕೃಷ್ಣ ಮತ್ತು ಉಪಾಧ್ಯಕ್ಷರಾಗಿ ಕೆಂಪನಹಳ್ಳಿ ಸತೀಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಮುಂದಿನ ಎರಡೂವರೆ ವರ್ಷದ ಅವಧಿಗಾಗಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕಾಗಿ ಮಂಗಳವಾರ ಚುನಾವಣಾ ಪ್ರಕ್ರಿಯೆ ನಡೆಯಿತು. ಒಟ್ಟು 14 ಜನ ಸದಸ್ಯ ಬಲ ಹೊಂದಿರುವ ಪಂಚಾಯಿತಿಯಲ್ಲಿ ರೇಣುಕಾ ಮತ್ತು ಸತೀಶ್ ಮಾತ್ರ ನಾಮಪತ್ರ ಸಲ್ಲಿಸಿದ್ದರು.

ಸೊಣ್ಣೇನಹಳ್ಳಿ: ನಾಗೇಶ್ ಅಧ್ಯಕ್ಷ

ಹೆಸರಘಟ್ಟ: ಹೋಬಳಿಯ ಸೊಣ್ಣೇನಹಳ್ಳಿ ಗ್ರಾಮ ಪಂಚಾಯಿತಿಗೆ ಅಧ್ಯಕ್ಷರಾಗಿ ಎನ್.ನಾಗೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ 18 ಮತಗಳ ಪೈಕಿ 14 ಮತ ಪಡೆದ ರಮ್ಯಾ ಎಚ್.ಎಸ್ ಆಯ್ಕೆಯಾದರು ಎಂದು ಚುನಾವಣಾಧಿಕಾರಿ ತೋಟಗಾರಿಕಾ ಇಲಾಖೆ ಹಿರಿಯ ಸಹಾಯಕ ನಿರ್ದೇಶಕಿ ಶಿಲ್ಪಶ್ರೀ ಎಂ.ಎಸ್. ಘೋಷಿಸಿದರು.

ಗಂಟಿಗಾನಹಳ್ಳಿ ಗ್ರಾ. ಪಂಗೆ ಲಕ್ಷ್ಮೀಪತಿ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಲಕ್ಷ್ಮೀಪತಿ ಕೃಷ್ಣಪ್ಪ

ಯಲಹಂಕ: ಗಂಟಿಗಾನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಲಕ್ಷ್ಮೀಪತಿ ಕೃಷ್ಣಪ್ಪ ಹಾಗೂ ಉಪಾಧ್ಯಕ್ಷೆಯಾಗಿ ಆಂಜಿನಮ್ಮ ಆಯ್ಕೆಯಾಗಿದ್ದಾರೆ.

ಎರಡೂವರೆ ವರ್ಷದ ಅವಧಿಗೆ ಅಧ್ಯಕ್ಷ (ಸಾಮಾನ್ಯ)ಮತ್ತು ಉಪಾಧ್ಯಕ್ಷ (ಸಾಮಾನ್ಯ-ಮಹಿಳೆ) ಸ್ಥಾನಕ್ಕಾಗಿ ಶುಕ್ರವಾರ ಚುನಾವಣೆ ನಡೆಯಿತು. 12 ಜನ ಸದಸ್ಯ ಬಲದ ಪಂಚಾಯಿತಿಯಲ್ಲಿ ಅಧ್ಯಕ್ಷ ಸ್ಥಾನಕ್ಕಾಗಿ ಸ್ಪರ್ಧಿಸಿದ್ದ ಲಕ್ಷ್ಮೀಪತಿ 9, ರಾಜೇಶ್ 3 ಮತ ಪಡೆದರು.

ಉಪಾಧ್ಯಕ್ಷ ಸ್ಥಾನಕ್ಕಾಗಿ ಸ್ಪರ್ಧಿಸಿದ್ದ ಆಂಜಿನಮ್ಮ 8 ಮತ್ತು ರಾಧಮ್ಮ 4 ಮತಗಳನ್ನು ಪಡೆದರು.

ಮಾಜಿ ಶಾಸಕ ಗಂಟಿಗಾನಹಳ್ಳಿ ವಿ.ಕೃಷ್ಣಪ್ಪ, ದೊಡ್ಡಜಾಲ ಗ್ರಾಮಪಂಚಾಯಿತಿ ಅಧ್ಯಕ್ಷ ಆರ್. ಬೈರೇಗೌಡ, ಮಾಜಿ ಅಧ್ಯಕ್ಷ ಎನ್.ಕೆ.ಮಹೇಶ್ ಕುಮಾರ್, ಕಾಂಗ್ರೆಸ್ ಮುಖಂಡರಾದ ಲಾವಣ್ಯ ನರಸಿಂಹ ಮೂರ್ತಿ ಎನ್.ಎಂ.ಶ್ರೀನಿವಾಸ್, ಎನ್.ತಿಮ್ಮರಾಜು, ಚೇತನ್ ಉಪಸ್ಥಿತರಿದ್ದರು.

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123. ಇ–ಮೇಲ್: nelamangala.pa@gmail.com
Phone: 9663046622

ಸಂಖ್ಯೆ: ನೆಯೋಪ್ರಾ/CLU/12/2023–24 ದಿನಾಂಕ: 07–08–2023

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ:13–02–2007 ರನ್ವಯ **ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ, ಮಿಣ್ಣಾಪುರ** ಗ್ರಾಮವು "ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ" ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01–06–2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಪ್ರಶ್ನಿತ ಪ್ರದೇಶವನ್ನು **ವ್ಯವಸಾಯ** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ** ಈ ಕೆಳಕಂಡಂತೆ **'ಕೈಗಾರಿಕೆ'** ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **'ಕೈಗಾರಿಕೆ'** ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು ಶ್ರೀ / ಶ್ರೀಮತಿ	ತಾಲ್ಲೂಕು/ ಹೋಬಳಿ/ಗ್ರಾಮ	ಸ. ನಂ.	ವಿಸ್ತೀರ್ಣ (ಎ–ಗುಂ)	ಅನುಮೋದಿತ ಮಹಾಯೋಜನೆಯ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1) ರಾಮಣ್ಣ ಬಸಪ್ಪ, ಅರಬಣ್ಣವರ ಬಿನ್ ಬಸಪ್ಪ ಅರಬಣ್ಣವರ. 2) ದೇವಾಂಗ ಗಣೇಶ್ ಶಂಕರ್ ಬಿನ್ ದೇವಾಂಗ ಮಂಜಯ್ಯ ಗಣೇಶ. 3) ನಿರಂಜನ್. ಎನ್. ಬಿನ್ ನಟರಾಜ್.	ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ, ಮಿಣ್ಣಾಪುರ ಗ್ರಾಮ.	33/2	01-31	ವ್ಯವಸಾಯ	ಕೈಗಾರಿಕೆ
		ಒಟ್ಟು	01-31		

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ಕೈಗಾರಿಕೆಯನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಸದರಿ ಮೂಲಭೂತ ಸೌಕರ್ಯ ಚಟುವಟಿಕೆಯಿಂದಾಗಿ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರಿಗೆ ಉದ್ಯೋಗಾವಕಾಶ ಕಲ್ಪಿಸುವ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **'ವ್ಯವಸಾಯ ವಲಯ'** ದಿಂದ **'ಕೈಗಾರಿಕಾ ಉದ್ದೇಶಕ್ಕೆ'** ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/887/ಅಡ್ವಟೋರ್/2023–24

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

RENTAL PROPERTIES

Accommodation Available

Commercial

COMMERCIAL BUILDING Rent for shop 1st Floor 1000sqft With lift at peenya T Dasarahalli 1st Main Near Metro Station Oop Apollo pharmacy Contact: 9448685248

Flats

RENT 3BHK Flat 1650sqft semi Furnished, Modular Kitchen Carparks, Canopy Cologne, Haines Road, Frazer Town 9449165578 9741074072

Industrial And Factory

INDUSTRIAL BUILDING For Rent RCC 3 Floors with Vertified Tiles About 8000 Sqft Each Floor Total: 24000 Sqft Available in 3 Phase Peenya Industrial Area: 9980261002

House

TOLET RENT 2 BHK HOUSE, First Floor, Semi-Furnished, Family only, Yelenahalli Akshayanagar. Bangalore. Contact: 8754427788.

BUSINESS

Business to Business

Business

BEST INVESTMENT For_Petrol_Bunk Lease_Cum Sale or Partnership Kanakapura National Highway 209 Built`to`shuit Restaurant 35000sft Call:9035963540

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

JOB OPPORTUNITIES

Marketing & Sales

THE BANGALORE PRESS
(No. 88, Mysore Road, Chamarajapet, Bangalore-18)
REQUIRES

ROLE	REQUIREMENT
1. Marketing Manager	Graduates with experience in senior roles in consumer goodsl stationery/book marketing & fluency in Kannada & English
2. Marketing Officers	Matriculates with at least 2-3 years experience in filed sales of consumer goods / stationeries, etc.

Apply with your work experience & expected salary, to
bangalorepressjobs@gmail.com | 97422 59829

Teachers/ Professors

ST. JOSEPH'S COLLEGE OF LAW
18, Residency Road, Bengaluru-560 025.
Mobile: 94815 45478
Tel.: 080-2222 3352
Website: www.sjcl.edu.in
WANTED
Full-Time Asst. Professors in Law, Economics & Commerce
NET / KSET, Ph.D and Experienced candidates preferred
Apply @ sjcl.edu.in/career.php before 25th August 2023

Drivers

WANTED EXPERIENCED Water Tanker DRIVERS/ HELPERS in Bangalore. Contact immediately. Phone: 9448171416

Wanted

REQUIRED SITE supervisor with sigh board making team & workers.9246336383

MORE Classifieds IN SUPPLEMENT

PERSONAL

Change of Name

I, DR. SHREEJA, W/o. Sri Kishor Kayyar Lakshminarayana, R/o. #43-44, Vinayaka Layout, Opposite Sandhya Deepa Ashrama, Uttarahalli, Bangalore-61 have changed my name as Dr. SHREEJA SARAYU vide affidavit dated 10/08/2023 before Notary BKR. Krishnamurthy, Bangalore

JC681758A, SUB, G KOMBAN, R/o.8/94, KalaikovilNagar, Krishnapuram, Tirunelveli, Tamil Nadu, changed daughter's name from DAISY PRISEILLA to DAISY PRISCILLA .K, 09/08/2023, Notary K.V.Mani, Bangalore

DH Classifieds More value, more impact | ಪ್ರಜಾವಾಣಿ | JOB HUNT
Get your HIRING NEEDS answered
Get the right people for your company... Book your Ad with us now !
BOOK NOW
www.dhclassifieds.com
For more details contact:
+91 9886213331
+91 9845114560
+91 9731810277
+91 9901641752
+91 9900428036
080- 45557163/164

I, PADMASHRI R, W/o Mr.B.V.Nagendra Kumar R/a No.612,2nd Main, Kengeri Satellite Town, Bengaluru-560060 after marriage I have changed my name from PADMAVATHY to PADMASHRI R.vide affidavit dated 10-8-2023 Sworn before Notary B.K.R.Krishnamurthy,Bangalore.Henceforth,I shall be called as PADMASHRI R.only.

RAJ MUNNI, Wife/o JC681775A, SUB, SURENDRA NATH SINGH, Vill- Badauli, Bhawarkol, Mohammadabad, Ghazipur, Uttar Pradesh changed name RAJ MUNNI to RAJMUNNI DEVI, 10/08/2023, Notary P.K. Dwivedi, Prayagraj

I, MADHAVI K, have changed to New name ANANDI Residing at #211, 1st cross, Dinnur, Kadugodi post, Bangalore -560067, vide affidavit dated 10/08/2023 before notary Veena J., Bangalore.

I, SHOBHA. D.J, have changed my name to SHOBHA.T vide affidavit dated 11.08.2023 sworn before Notary Rajanna. S.M. Bengaluru

CHANGE OF NAME
I, **PAULINI,** W/o A. Gregory, R/at. # 3406, Opp Royal Meridian Layout, Devarachikkanahalli, Begur, Bengaluru-68 have changed my name to **PAULINE R** vide affidavit dated 11/08/2023 before Notary N. Narayana Swamy, Bangalore. Henceforth I shall be called **PAULINE R** only

SONUBHAI BHANUDAS CHAUHAN, Mother/o, 6493592X, HAV, TUKARAM BHANUDAS CHAVAN,Vill - Sangavi, Bhose, Koregaon, Satara, Maharashtra changed name SONUBHAI BHANUDAS CHAUHAN to SONUBHAI BHANUDAS CHAVAN, 11/08/2023, Notary K.V.Mani, Bangalore

EDUCATION SUCCESS

CONGRATULATION
Visvesvaraya Technological University (VTU), Belagavi, has awarded
Ph.D (Doctor of philosophy)
in Computer Science & Information Sciences to
"CHANDRAKANTH RATHOD KARAHARI"
Research Scientist for his thesis "An Efficient Ontology Based Machine Learning For Classifying High Definition Satellite Images (Chandrayaan-2)" submitted under the guidance of **Dr. N. Nandini Dr. AIT** Bangalore. In his career, He has played various roles in education institute as a lecturer, assistant Professor and many roles in software induistry (IT). Roles like Software Engineer, Research Author, Data Engineer, Data Scientist, Research Scientist in different organizations like Cognizant, L&T Infotech, Synechron FinLabs R&D, Hitachi Ltd R&D and ING Group R&D



ನೆಲಮಂಗಲ ತಾಲ್ಲೂಕು ಕಚೇರಿ ಬಳಿ ರಾಷ್ಟ್ರೀಯ ಕಿಸಾನ್ ಸಂಘದ ಕಾರ್ಯಕರ್ತರ ಪ್ರತಿಭಟನೆ

ದಲ್ಲಾಳಿಗಳ ಹಾವಳಿ ನಿಯಂತ್ರಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ರಾಷ್ಟ್ರೀಯ ಕಿಸಾನ್ ಸಂಘಟನೆ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಕಾರ್ಯಕರ್ತರು ಜಾಗಟೆ ಬಾರಿಸಿ ಘೋಷಣೆಗಳನ್ನು ಕೂಗಿದರು

ಮುಖ್ಯಾಂಶಗಳು

- ಸಮಸ್ಯೆ ಬಗೆಹರಿಸದಿದ್ದರೆ ಅರೆಬೆತ್ತಲೆ ಪ್ರತಿಭಟನೆ ನಡೆಸುವ ಎಚ್ಚರಿಕೆ
- ರಾಜಕಾಲುವೆಗೆ ತ್ಯಾಜ್ಯ ಹರಿವು ತಡೆಯಲು ಒತ್ತಾಯ
- ಗುಂಡುತೋಪು, ಗೋಮಾಳ ಒತ್ತುವರಿ ತಡೆಗೆ ನಿರ್ಲಕ್ಷ್ಯ ಆರೋಪ

ನೆಲಮಂಗಲ: ಕಂದಾಯ ಇಲಾಖೆಯಿಂದ ಉಂಟಾಗುತ್ತಿರುವ ಸಮಸ್ಯೆಗಳನ್ನು ಪರಿಹರಿಸಬೇಕು ಹಾಗೂ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ತಾಲ್ಲೂಕು ಕಚೇರಿ ಮುಂಭಾಗ ರಾಷ್ಟ್ರೀಯ ಕಿಸಾನ್ ಸಂಘದ ಕಾರ್ಯಕರ್ತರರು ಪ್ರತಿಭಟನೆ ನಡೆಸಿದರು.

ರಾಷ್ಟ್ರೀಯ ಕಿಸಾನ್ ಸಂಘಟನೆಯ ರಾಷ್ಟ್ರೀಯ ಉಪಾಧ್ಯಕ್ಷ ಕೆ.ಭೀಮಯ್ಯ ಅವರು, 'ತಾಲ್ಲೂಕು ಕಚೇರಿ ಸೇರಿದಂತೆ ಸರ್ಕಾರಿ ಕಚೇರಿಗಳಲ್ಲಿ ದಲ್ಲಾಳಿಗಳ ಹಾವಳಿ ಹೆಚ್ಚಾಗಿದೆ. ಯಾವ ಕೆಲಸಗಳೂ ಆಗುತ್ತಿಲ್ಲ. ರೈತರು ಕಚೇರಿಗಳಿಗೆ ಅಲೆದು ಅಲೆದು ಸುಸ್ತಾಗಿದ್ದಾರೆ' ಎಂದು ದೂರಿದರು.

'ಕಂದಾಯ ಇಲಾಖೆ ನೌಕರರು ಉದ್ದೇಶಪೂರ್ವಕವಾಗಿ ದಾಖಲೆಗಳನ್ನು ತಿರುಚಿ ರೈತರು ನ್ಯಾಯಾಲಯಗಳಿಗೆ ಅಲೆಯುವಂತೆ ಮಾಡುತ್ತಿದ್ದಾರೆ. ಸಮಸ್ಯೆಗಳನ್ನು ಸಂಬಂಧಪಟ್ಟವರು ಬಗೆಹರಿಸದಿದ್ದರೆ ಬೆತ್ತಲೆ ಪ್ರತಿಭಟನೆ ಮಾಡಲು ಸಿದ್ದ, ಸರ್ಕಾರಿ ಕಚೇರಿಗಳಲ್ಲೇ ವಿಷ ಕುಡಿಯಲು ಸಿದ್ಧ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ರಾಜಕಾಲುವೆ ಮುಖಾಂತರ ಬರುವ ಮಲಮೂತ್ರ, ತ್ಯಾಜ್ಯವನ್ನು ಹಾಗೂ ಗುಂಡಿಗಳನ್ನು ಮುಚ್ಚಿ ಪೈಪ್‌ಗಳ ಮುಖಾಂತರ ನೇರವಾಗಿ ಕೆರೆಗೆ ತ್ಯಾಜ್ಯ ಹರಿಸಲಾಗುತ್ತಿದೆ. ಪುನಶ್ಚೇತನಗೊಳಿ-ಸಬೇಕಾದ ನಗರಸಭೆಯ ಕೆರೆಗಳನ್ನು ಮಚ್ಚುತ್ತಿದೆ. ರಾಜಕಾಲುವೆ ಮೇಲೆ ಅಂಗಡಿಗಳನ್ನು ನಿರ್ಮಿಸಲಾಗಿದೆ. ಹಳ್ಳ, ಗುಂಡುತೋಪು, ಗೋಮಾಳ ಹಾಗೂ ಇತರೆ ಸರ್ಕಾರಿ ಸಂಪತ್ತುಗಳನ್ನು ಸಂರಕ್ಷಿಸದೆ ಒತ್ತುವರಿಗೆ ಅವಕಾಶ ಕಲ್ಪಿಸಿದ್ದಾರೆ' ಎಂದರು.

ರಾಜ್ಯ ಅಧ್ಯಕ್ಷ ವಿಜಯಕುಮಾರ್ ಮಾತನಾಡಿ 'ನ್ಯಾಯಾಲಯಗಳ ತೀರ್ಪುಗಳನ್ನು ಅನುಷ್ಠಾನಕ್ಕೆ ತಾರದೆ ಮನಬಂದಂತೆ ಕಡತಗಳನ್ನು ವಿಲೇವಾರಿ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

'ಕಂದಾಯ ಹಾಗೂ ಸರ್ಕಾರಿ ಜಮೀನುಗಳು ಅಕ್ರಮ ಬಡಾವಣೆಗಳಾಗಿದ್ದು, ಇದಕ್ಕೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ನಗರಸಭೆ ಅಧಿಕಾರಿಗಳು ಖಾತಾ ನಕಲು ನೀಡಿ ಭ್ರಷ್ಟಾಚಾರದಲ್ಲಿ ಮುಳುಗಿದ್ದಾರೆ. ಕಾಯ್ದೆಯಂತೆ ಅಕ್ರಮ ಬಡಾವಣೆಗಳನ್ನು ತೆರವುಗೊಳಿಸುತ್ತಿಲ್ಲ. ಬದಲಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡುತ್ತಿದ್ದಾರೆ. ಅಧಿಕೃತ ಬಡಾವಣೆಗಳಲ್ಲಿ ಸೌಲಭ್ಯಗಳನ್ನು ನೀಡುತ್ತಿಲ್ಲ' ಎಂದು ದೂರಿದರು.

ಸ್ಥಳಕ್ಕೆ ಆಗಮಿಸಿದ ಸಣ್ಣನೀರಾವರಿ ಇಲಾಖೆ ಎಇಇ ಮಂಜುನಾಥ್ ಹಾಗು ಶಿರಸ್ತೇದಾರ್ ರವೀಂದ್ರ ಅವರು ಇದೇ 16ರ ಒಳಗೆ ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ಎಲ್ಲ ಇಲಾಖೆ ಅಧಿಕಾರಿಗಳು ಹಾಗೂ ಸಂಘಟನೆಯ ಪ್ರಮುಖರ ಸಮ್ಮುಖದಲ್ಲಿ ಸಭೆ ಕರೆದು ಸಮಸ್ಯೆಗಳನ್ನು ಬಗೆಹರಿಸಲಾಗುವುದು ಎಂದು ಭರವಸೆ ನೀಡಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗಣೇಶ್ ರಾವ್, ಮಹಿಳಾ ಘಟಕದ ಅಧ್ಯಕ್ಷೆ ಭಾಗ್ಯಮ್ಮ, ಎಸ್.ಕೆ.ಆನಂದ್, ಕೇಶವಮೂರ್ತಿ, ನಾಗರಾಜು, ಮಂಜುನಾಥ್, ದಲಿತ ಕಾರ್ಮಿಕ ಸಂಘಟನೆಯ ಗಂಗಬೈಲಪ್ಪ ಇದ್ದರು.

ಸಂಜೆ ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ನಿರಾಸಕ್ತಿ

ಬೆಂಗಳೂರು: ಮೂರು ವರ್ಷಗಳ ಅವಧಿಯ ಸಂಜೆ ಎಂಜಿನಿಯರಿಂಗ್ ಕಾಲೇಜು ಆರಂಭಿಸಲು ರಾಜ್ಯದ ಯಾವುದೇ ತಾಂತ್ರಿಕ ಶಿಕ್ಷಣ ಸಂಸ್ಥೆಗಳೂ ಆಸಕ್ತಿ ತೋರಿಲ್ಲ.

ವಿವಿಧ ಕೆಲಸಗಳಲ್ಲಿ ದುಡಿಯುತ್ತಿರುವ ವೃತ್ತಿಪರರಿಗೆ 3 ವರ್ಷಗಳ ಸಂಜೆ ಎಂಜಿನಿಯರಿಂಗ್ ಕೋರ್ಸ್‌ಗಳನ್ನು ಮರು ಪ್ರಾರಂಭಿಸಲು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಅರ್ಜಿ ಆಹ್ವಾನಿಸಿತ್ತು, ಆ.15ಕ್ಕೆ ಅವಧಿ ಮುಗಿಯಲಿದ್ದು, ಈವರೆಗೆ ರಾಜ್ಯದಿಂದ ಒಂದೂ ಅರ್ಜಿ ಸಲ್ಲಿಕೆಯಾಗಿಲ್ಲ. ಇತರೆ ರಾಜ್ಯಗಳಿಂದ 170 ಅರ್ಜಿಗಳು ಸಲ್ಲಿಕೆಯಾಗಿವೆ. 3 ವರ್ಷಗಳ ಡಿಪ್ಲೊಮಾ ಪದವಿ ಮುಗಿಸಿ, ಕೆಲಸಕ್ಕೆ ಸೇರಿದ ವೃತ್ತಿಪರರ ಮನವಿಯನ್ನು ಪರಿಗಣಿಸಿ ನಾಲ್ಕು ವರ್ಷಗಳ ಹಿಂದೆ ಸ್ಥಗಿತಗೊಂಡಿದ್ದ ಸಂಜೆ ಕಾಲೇಜು ಪರಿಕಲ್ಪನೆಯನ್ನು ಮರುಪ್ರಾ-ರಂಭಿಸಲು ಎಐಸಿಟಿಇ ನಿರ್ಧರಿಸಿತ್ತು.

ಕರ್ನಾಟಕದಲ್ಲಿ ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು, ವಿಶ್ವವಿದ್ಯಾ-ಲಯ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ಸೇರಿದಂತೆ ರಾಜ್ಯದಲ್ಲಿ ಹತ್ತು ಸಂಜೆ ಕಾಲೇಜುಗಳಿದ್ದವು. 2019-20ರಿಂದ ಸಂಜೆ ಕಾಲೇಜುಗಳನ್ನು ರದ್ದು-ಗೊಳಿಸಲಾಗಿತ್ತು.

'ಡಿಪ್ಲೊಮಾ ಪೂರೈಸಿ, ಕೆಲಸಕ್ಕೆ ಸೇರಿದ ವೃತ್ತಿಪರರಿಗೆ ಎಂಜಿನಿಯರಿಂಗ್ ಕೋರ್ಸ್ ಪಡೆಯಲು ಸಂಜೆ ಕಾಲೇಜುಗಳು ವರದಾನವಾಗಿವೆ. ಈ ಕುರಿತು ಕಾಲೇಜು ಆಡಳಿತ ಮಂಡಳಿಗಳ ಜತೆ ಸಂವಾದ ನಡೆಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹೇಳಿದ್ದಾರೆ.

'ಜೀವ ಸಂಕುಲ ರಕ್ಷಣೆ': ಇಂದು ಮ್ಯಾರಥಾನ್

ಬೆಂಗಳೂರು: ನಗರದ ಸಿ.ಎಂ.ಆರ್ ನ್ಯಾಷನಲ್ ಪಬ್ಲಿಕ್ ಸ್ಕೂಲ್ ಮತ್ತು ಚಾರ್ಲಿ ಅನಿಮಲ್ ರೆಸ್ಕ್ಯೂ ಸೆಂಟರ್ (ಕೇರ್) ಸಹಯೋಗದಲ್ಲಿ ಇದೇ 12ರಂದು 'ಆಕ್ಸಿಲರೇಟ್ 2k23' ಹೆಸರಿನಲ್ಲಿ ಮ್ಯಾರಥಾನ್ ಆಯೋಜಿಸಲಾಗಿದೆ. 'ಜೀವ ಸಂಕುಲದ ಸಂರಕ್ಷಣೆ ಮತ್ತು ದೇಶದ ಏಕತೆಗಾಗಿ ನಡಿಗೆ' ಎಂಬ ಸಂದೇಶದಡಿ ಮ್ಯಾರಥಾನ್ ನಡೆಯಲಿದೆ. ಅಂದು ಎಚ್.ಆರ್.ಬಿ.ಆರ್. ಬಡಾವಣೆಯ ಸಿ.ಎಂ.ಆರ್ ನ್ಯಾಷನಲ್ ಪಬ್ಲಿಕ್ ಸ್ಕೂಲ್ ಆವರಣದಿಂದ ಆರಂಭವಾಗಲಿದೆ.

ಆಸಕ್ತರು http://www.accelerate2k23.com ಲಿಂಕ್ ಮೂಲಕ ಹೆಸರು ನೋಂದಾಯಿಸಿಕೊಳ್ಳಬೇಕೆಂದು ಪಬ್ಲಿಕ್ ಸ್ಕೂಲ್‌ನ ಪ್ರಾಂಶುಪಾಲ ಮತ್ತು ಸಿಎಂಆರ್ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಸಬಿತಾ ರಾಮಮೂರ್ತಿ ತಿಳಿಸಿದ್ದಾರೆ.

ಚಕ್ರಥಾನ್ ಸೈಕ್ಲಿಂಗ್ ಅಭಿಯಾನಕ್ಕೆ 15ರಂದು ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಆರೋಗ್ಯ, ಪರಿಸರ ಸಂರಕ್ಷಣೆ ಮತ್ತು ಸೈಕಲ್ ಸವಾರಿಯನ್ನು ಉತ್ತೇಜಿಸುವ ನಿಟ್ಟಿನಲ್ಲಿ 'ಚಕ್ರಥಾನ್' ಸೈಕ್ಲಿಂಗ್ ಅಭಿಯಾನಕ್ಕೆ ಆ.15ರಂದು ಚಾಲನೆ ನೀಡಲಾಗುವುದು ರೋಟರಿ ಕ್ಲಬ್ ಆಫ್ ಬೆಂಗಳೂರು (ಆರ್‌ಸಿಬಿ) ತಿಳಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆರ್‌ಸಿಬಿಯ ಅಧ್ಯಕ್ಷೆ ನಳಿನಿ ನಂಜುಂಡಯ್ಯ, 'ರೋಟರಿ ಕ್ಲಬ್‌ಗಳ ಮತ್ತು ಡೆಕಥ್ಲಾನ್ ಸಹಯೋಗದಲ್ಲಿ ಈ ಅಭಿಯಾನ ಆ.15ರಿಂದ 2024ರ ಜ.26ರವರೆಗೂ ದೇಶದಾದ್ಯಂತ ನಡೆಯಲಿದೆ. ಇದರಲ್ಲಿ ಸುಮಾರು 5 ಕೋಟಿಗೂ ಹೆಚ್ಚು ಜನ ಭಾಗವಹಿಸಲಿದ್ದು, ಆರೋಗ್ಯ ಮತ್ತು ಪರಿಸರದ ಬಗ್ಗೆ ಜಾಗೃತಿ ಮೂಡಿ-ಸಲಾಗುತ್ತದೆ. 165 ದಿನಗಳಲ್ಲಿ 76 ಸಾವಿರ ಕಿ.ಮೀ ದೂರವನ್ನು ಕ್ರಮಿಸುವ ಉದ್ದೇಶವಿದೆ' ಎಂದು ಮಾಹಿತಿ ನೀಡಿದರು.

'ಯಲಹಂಕದಲ್ಲಿರುವ ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಕಚೇರಿಯಲ್ಲಿ ಅಭಿಯಾನಕ್ಕೆ ಚಾಲನೆ ಸಿಗಲಿದೆ. ರೋಟರಿ ಸದಸ್ಯರು ಮತ್ತು ಬಿಎಸ್‌ಎಫ್ ಯೋಧರು 76 ಕಿ.ಮೀ ದೂರವನ್ನು ಸೈಕ್ಲಿಂಗ್ ಮಾಡುವುದರ ಮೂಲಕ ಜಾಗೃತಿ ಮೂಡಿಸಲಿದ್ದಾರೆ. ಈ ಅಭಿಯಾನದಲ್ಲಿ ವರ್ಚ್ಯುವಲ್ ಹಾಗೂ ಭೌತಿಕವಾಗಿ ಭಾಗವಹಿಸಲು ಅವಕಾಶವಿದೆ. 'ಚಕ್ರಥಾನ್' ಆ್ಯಪ್ ಡೌನಲೋಡ್ ಮಾಡಿಕೊಂಡು, 76 ಕಿ.ಮೀ ದೂರವನ್ನು ನೀವಿರುವಲ್ಲಿಯೇ ಸೈಕ್ಲಿಂಗ್ ಮಾಡಬಹುದು. ಅದು ಅಭಿಯಾನದಲ್ಲಿ ದಾಖಲಾಗುತ್ತದೆ' ಎಂದು ವಿವರಿಸಿದರು.

ಟಿಕೆಟ್ ರಹಿತ ಪ್ರಯಾಣ: 2,953 ಜನರಿಗೆ ದಂಡ

ಬೆಂಗಳೂರು: ಬಿಎಂಟಿಸಿ ಬಸ್‌ಗಳಲ್ಲಿ ಜುಲೈ ತಿಂಗಳಲ್ಲಿ ಟಿಕೆಟ್ ರಹಿತವಾಗಿ ಪ್ರಯಾಣಿಸಿದ 2,953 ಪ್ರಯಾಣಿಕರಿಗೆ ದಂಡ ವಿಧಿಸಲಾಗಿದೆ.

ಜುಲೈ ತಿಂಗಳಲ್ಲಿ 15,198 ಟ್ರಿಪ್‌ಗಳನ್ನು ತಪಾಸಣೆ ನಡೆಸಲಾಗಿತ್ತು. ಟಿಕೆಟ್ ಪಡೆಯದೇ ಪ್ರಯಾಣಿಸುತ್ತಿದ್ದ 2,953 ಪ್ರಯಾಣಿಕರು ಪತ್ತೆಯಾಗಿದ್ದರು. ಅವರಿಂದ ₹ 5,87,310 ದಂಡ ವಸೂಲಿ ಮಾಡಲಾಯಿತು. ಕರ್ತವ್ಯ ಲೋಪವೆಸಗಿದ ಕಾರಣಕ್ಕಾಗಿ ಸಂಸ್ಥೆಯ 925 ನಿರ್ವಾಹಕರ ವಿರುದ್ಧ ಪ್ರಕರಣಗಳು ದಾಖಲಾಗಿವೆ.

ಮಹಿಳಾ ಪ್ರಯಾಣಿಕರಿಗೆ ಮೀಸಲಿದ್ದ ಆಸನಗಳಲ್ಲಿ ಕುಳಿತು ಪ್ರಯಾಣಿಸಿದ 332 ಪುರುಷ ಪ್ರಯಾಣಿಕರಿಗೆ ₹ 33,200 ದಂಡ ವಿಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಜ್ಞಾನ ಪ್ರದರ್ಶನ 18ರಿಂದ

ಬೆಂಗಳೂರು: ಜವಾಹರ ಲಾಲ್ ನೆಹರೂ ತಾರಾಲಯದಲ್ಲಿ ಬೆಂಗಳೂರು ವಿಜ್ಞಾನ ಶಿಕ್ಷಣ ಸಂಘದ ಸಹಯೋಗದಲ್ಲಿ ವಿಜ್ಞಾನ ಪ್ರದರ್ಶನ-ವನ್ನು ಆ.18ರಿಂದ 20ರವರೆಗೆ ಹಮ್ಮಿ-ಕೊಳ್ಳಲಾಗಿದೆ. ಹೈಡ್ರಾಲಿಕ್ ಜಂಪ್, ಬರ್ನೂಲಿ ತತ್ವ, ಹಿಗ್ಗುವ ಮರಳು, ರೋಬರ್‌ವಾಲ್ ತಕ್ಕಡಿ, ಮೆರಾಂಗನಿ ಬಸ್ಟ್ರಿಂಗ್, ತೇಲುವ ಕಲ್ಲು ಸಹಿತ ಅನೇಕ ಮಾದರಿಗಳು ಪ್ರದರ್ಶನದಲ್ಲಿರಲಿವೆ. ಮಾಹಿತಿಗೆ 080 22379725, 22266084, www.taralaya.org ಸಂಪರ್ಕಿಸಬಹುದು.

ಗಾಯತ್ರಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ.,
"ವೇದಮಾತೆ ಭವನ", ನಂ.40, 2ನೇ ಮಹಡಿ, 5ನೇ ಅಡ್ಡ ರಸ್ತೆ,ಮಲ್ಲೇಶ್ವರ, ಬೆಂಗಳೂರು–560003

ಚುನಾವಣೆ ಪ್ರಕಟಣೆ

ಗಾಯತ್ರಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., "ವೇದಮಾತೆ ಭವನ", ನಂ.40, 2ನೇ ಮಹಡಿ, 5ನೇ ಅಡ್ಡ ರಸ್ತೆ,ಮಲ್ಲೇಶ್ವರ, ಬೆಂಗಳೂರು–560003 ಈ ಸಂಘದ ಆಡಳಿತ ಮಂಡಳಿಗೆ ಚುನಾವಣಾ ದಿನಾಂಕದಿಂದ ಮುಂದಿನ ಐದು ವರ್ಷಗಳ ಅವಧಿಗೆ ನಿರ್ದೇಶಕರನ್ನು ಚುನಾಯಿಸಲು ದಿನಾಂಕ: 27–08–2023 ರಂದು ಭಾನುವಾರ ಬೆಳಗ್ಗೆ 9:00 ಘಂಟೆಯಿಂದ ಸಂಜೆ 4:00 ಘಂಟೆಯವರೆಗೆ ಗಾಯತ್ರಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., "ವೇದಮಾತೆ ಭವನ", ನಂ. 40, 5ನೇ ಅಡ್ಡ ರಸ್ತೆ, ಮಲ್ಲೇಶ್ವರ, ಬೆಂಗಳೂರು–560003 ಇಲ್ಲಿ ಚುನಾವಣೆ ನಡೆಸಲಾಗುವುದು. ಮತದಾನ ಮಾಡಲು ಸಂಘದ ಗುರುತಿನ ಚೀಟಿ ಕಡ್ಡಾಯವಾಗಿರುತ್ತದೆ. ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆಗೆ ಸ್ಪರ್ಧಿಸಲು ಇಚ್ಛಿಸುವ ಅರ್ಹ ಮತದಾರರು ತಮ್ಮ ಉಮೇದುವಾರಿಕೆಯನ್ನು ಸಲ್ಲಿಸಲು ದಿನಾಂಕ 16–08–2023 ಪ್ರಾರಂಭದ ದಿನಾಂಕವಾಗಿದ್ದು, ದಿನಾಂಕ: 19–08–2023 ಕೊನೆಯ ದಿನಾಂಕವಾಗಿರುತ್ತದೆ. ಆದ್ದರಿಂದ ಸ್ಪರ್ಧಿಸಲು ಇಚ್ಛಿಸುವ ಅರ್ಹ ಸದಸ್ಯರು ದಿನಾಂಕ:19–08–2023ರ ಶನಿವಾರ ಮಧ್ಯಾಹ್ನ 03–00 ಘಂಟೆಯೊಳಗೆ ನಾಮಪತ್ರ ಸಲ್ಲಿಸಲು ಕೋರಿದೆ. ದಿನಾಂಕ: 20–08–2023 ರಂದು ನಾಮಪತ್ರ ಪರಿಶೀಲನಾ ಕಾರ್ಯ ನಡೆಯಲಿದೆ ಹಾಗೂ ನಾಮ ಪತ್ರ ವಾಪಸ್ ಪಡೆಯಲು ಕಡೆಯ ದಿನಾಂಕ:21–08–2023 ಸೋಮವಾರ ಮಧ್ಯಾಹ್ನ 03–00 ಘಂಟೆಯಾಗಿರುತ್ತದೆ. ಚುನಾವಣಾ ವೇಳಾಪಟ್ಟಿಯನ್ನು ಸಂಘದ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ ಹಾಗೂ ಸಂಘದ ಅರ್ಹ ಸದಸ್ಯರಿಗೆ ಅಂಚೆ ಮೂಲಕ ಈಗಾಗಲೇ ಕಳುಹಿಸಲಾಗಿದೆ. ಒಂದು ವೇಳೆ ಚುನಾವಣಾ ನೋಟೀಸ್ ತಲುಪದೇ ಇದ್ದಲ್ಲಿ ಇದನ್ನೇ ಆಹ್ವಾನ ಪತ್ರಿಕೆಯೆಂದು ಪರಿಗಣಿಸಿ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಕೋರಿದೆ.

ವಿ.ಸೂ: ಉಮೇದುವಾರಿಕೆ ಅರ್ಜಿಯನ್ನು ಸಂಘದ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ರಿಟರ್ನಿಂಗ್ ಅಧಿಕಾರಿ
ಗಾಯತ್ರಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ.,
"ವೇದಮಾತೆ ಭವನ", ನಂ. 40, 2ನೇ ಮಹಡಿ,
ದಿನಾಂಕ:12.08.2023 5ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು–560003.

ಭಾರತೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್
sidbi ರಮಣಶ್ರೀ ಆರ್ಕೇಡ್, 4ನೇ ಮಹಡಿ, ನಂ. 18, ಎಂ.ಜಿ.ರಸ್ತೆ, ಬೆಂಗಳೂರು – 560 001.
ಫೋನ್: 080–23466202 ಮತ್ತು 23466203, ವೆಬ್‌ಸೈಟ್ – www.sidbi.in

ಮಾರಾಟ ಪ್ರಕಟಣೆ

ಸ್ಥಿರಾಸ್ತಿಗಳ ಮಾರಾಟ ಕುರಿತಾದ ಮಾರಾಟ ಪ್ರಕಟಣೆ [ರೂಲ್ 6 (2)ರ ನಿಯಮ ನೋಡಿರಿ]

ಹಣಕಾಸು ಸ್ವತ್ತುಗಳ ಸಂರಕ್ಷಣೆ ಮತ್ತು ಪುನಃರಚನೆ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ, 2002 ನ್ನು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002ರ ನಿಯಮ 6[2] ರೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳ ಅಡಿಯಲ್ಲಿ ಹೊರಡಿಸಲಾದ ಸ್ಥಿರಾಸ್ತಿಗಳ ಮಾರಾಟಕ್ಕೆ ಸಂಬಂಧಿತ ಇ–ಹರಾಜು ಮಾರಾಟ ಪ್ರಕಟಣೆ.

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಸಾಲಗಾರರಿಗೆ ಹಾಗೂ ಜಾಮೀನುದಾರರಿಗೆ ತಿಳಿಸುವುದು ಏನೆಂದರೆ, ಇಲ್ಲಿ ಕೆಳಗೆ ವಿವರಿಸಲಾಗಿರುವ ಚರಾಸ್ತಿಗಳು ಸೆಕ್ಯೂರ್ಡ್ ಕ್ರೆಡಿಟರ್‌ವರ ಈಡು/ಅಡಮಾನಕ್ಕೆ ಒಳಪಟ್ಟಿದ್ದು, ಸದರಿ ಚರಾಸ್ತಿಗಳನ್ನು **ಭಾರತೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್‌ನ (ಎಸ್‌ಐಡಿಬಿಐ)** ಅಧಿಕೃತ ಅಧಿಕಾರಿ ಸೆಕ್ಯೂರ್ಡ್ ಕ್ರೆಡಿಟರ್‌ವರು ತಮ್ಮ ಭೌತಿಕ ಸ್ವಾಧೀನತೆಗೆ ಪಡೆದುಕೊಂಡಿರುತ್ತಾರೆ ಹಾಗೂ ದೃತಿ ಎಂಟರ್‌ಪ್ರೈಸಸ್ [ಸಾಲಗಾರರು/ಅಡಮಾಣದಾರರು] ಮತ್ತು ಶ್ರೀ. ಮುನಿಯಪ್ಪ ನಾಗರಾಜು ಹಾಗೂ ಶ್ರೀಮತಿ. ದೇವಿಕಾ ವಿ (ಜಾಮೀನುದಾರರು) ಇವರಿಂದ, ಭಾರತೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್‌ನ ಸೆಕ್ಯೂರ್ಡ್ ಕ್ರೆಡಿಟರ್‌ವರಿಗೆ ಸಂದಾಯ ಆಗಬೇಕಿರುವ **10/08/2023 ರಂತೆಗಿನ ರೂ. 77,17,263/– (ರೂಪಾಯಿ ಎಪ್ಪತ್ತೇಳು ಲಕ್ಷ ಹದಿನೇಳು ಸಾವಿರದ ಎರಡು ನೂರ ಅರವತ್ತೂರು ಮಾತ್ರ)** ಬಾಕಿಮೊತ್ತ ವಸೂಲಾತಿ ಮಾಡಿಕೊಳ್ಳಲೆಂದು, ಸದರಿ ಸ್ವಾಧೀನ ಸ್ವತ್ತುಗಳನ್ನು **15.09.2023** ರಂದು "ಹೇಗಿದೆಯೊ ಎಲ್ಲಿದೆಯೊ", "ಹೇಗಿದೆಯೊ ಏನಿದೆಯೊ" ಮತ್ತು "ಅಲ್ಲಿ ಏನೇನಿದೆಯೊ" ಆಧಾರದಲ್ಲಿ ಮಾರಾಟ ಮಾಡಲಾಗುತ್ತಿದೆ. ಮೀಸಲು ಬೆಲೆ ರೂ. 27,50,000/– ಮತ್ತು ಭದ್ರತಾ ಠೇವಣಿ ಮತ್ತು ರೂ. 2,75,000/– ಆಗಿರುತ್ತದೆ.

ಕ್ರ ಸಂ	ಚರಾಸ್ತಿಗಳ ವಿವರ	ಸ್ವಾಧೀನತೆ ವಿಧಾನ	ಭದ್ರತಾ ಠೇವಣಿ ಮೊತ್ತ ಇಎಂಡಿ) (ರೂ.ಗಳಲ್ಲಿ)	ಮೀಸಲು ಬೆಲೆ (ರೂ.ಗಳಲ್ಲಿ)
1	**ಚರಾಸ್ತಿಯ ವಿವರ** ಎಸ್‌ಐಡಿಬಿಐ ರೆಸಿಡೆನ್ಶಿಯಲ್ ಆವರಣ, ಅಲ್ಪೈನ್ ಪ್ಯಾಲೇಸ್, ಶೇಷಾದ್ರಿಪುರಂ, ಬೆಂಗಳೂರು ವಿಳಾಸದಲ್ಲಿ ಇರಿಸ ಲಾಗಿರುವ ಮತ್ತು ಸಂಚಲ್ ಇಮೇಜಿಂಗ್ ಸೊಲ್ಯೂಷನ್ಸ್ ಎಂಬ ಅಧಿಕೃತ ಡೀಲರ್ ಮುಖಾಂತರ ಝೆರಾಕ್ಸ್ ಕಂಪನಿ ಲಿಮಿಟೆಡ್ ಇವರಿಂದ ಉತ್ಪಾದನಾ ಪೂರೈಕೆಯ ಸ್ವರೂಪದ ಮೇರೆಗೆ ಖರೀದಿಸಲಾಗಿರುವ, 1 ಸಂಖ್ಯೆ ಝೆರಾಕ್ಸ್ ವರ್ಸಂಟ್ 3100 ಪ್ರೊಡಕ್ಷನ್ ಪ್ರಿಂಟರ್ ವಿದ್ ಡ್ಯೂಯಲ್ ಒಎಚ್‌ಸಿಎಫ್ & ಇಎಫ್‌ಐ ಪ್ರಿಂಟರ್ ಸರ್ವರ್ & 2400x2400 ಡಿಪಿಐ.	ಭೌತಿಕ	2,75,000/-	27,50,000/-

ಮಾರಾಟಕ್ಕೆ ಸಂಬಂಧಿತ ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ ದಯವಿಟ್ಟು ಭಾರತೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್, ಸೆಕ್ಯೂರ್ಡ್ ಕ್ರೆಡಿಟರ್‌ವರ www.sidbi.in ವೆಬ್‌ಸೈಟ್‌ನ್ನು ಪರಿಶೀಲಿಸಿರಿ.

ದಿನಾಂಕ: 12/08/2023
ಸ್ಥಳ: ಬೆಂಗಳೂರು
ಸಹಿ/–
ಅಧಿಕೃತ ಅಧಿಕಾರಿ
ಭಾರತೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್

AIR FORCE SCHOOL HEBBAL
HQTC(U) AF, JC Nagar Post, Bengaluru - 06
(Under the aegis of the IAF Educational & Cultural Society)

Interested & eligible candidates may apply for the following
Regular vacancy :
TGT Maths - 01
Computer Lab Attendant - 01
Atal Tinkering Lab Attendant - 01

Last date for submission of application along with all copies of testimonials (educational and experience certificates) is **28 Aug 23.**

For ***QRs, application, pay scale*** & more details please log on to **www.afshebbal.ac.in (Career)**

CHAIRMAN

ಕರ್ನಾಟಕ ಸರ್ಕಾರ
ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ
(ಪೌರಾಡಳಿತ ನಿರ್ದೇಶನಾಲಯ)
1–4, 6ನೇ ಮಹಡಿ, ಐಟಿ ಪಾರ್ಕ್, ರಾಜಾಜಿನಗರ ಕೈಗಾರಿಕಾ ಪ್ರದೇಶ, ಬೆಂಗಳೂರು–560010.
ದೂರವಾಣಿ: 080–23003100 E-mail: mckmds@mrc.gov.in Web: www.mrc.gov.in
ಸಂ: DMA/2023-24/SE0579 ದಿನಾಂಕ: 11.08.2023

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ ಕಛೇರಿಗೆ ಹೊರಗುತ್ತಿಗೆ ಮಾನವ ಸಂಪನ್ಮೂಲ ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಒದಗಿಸಲು ಅರ್ಹ ಬಿಡ್‌ದಾರರಿಂದ ಇ–ಆಡಳಿತ ಇಲಾಖೆಯ **https://kppp.karnataka.gov.in** ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ವಿವರವಾದ ಬಿಡ್ ದಿನಾಂಕಗಳು ಈ ಕೆಳಕಂಡಂತಿದೆ.

- ಟೆಂಡರ್ ಪ್ರಕಟಣೆ ದಿನಾಂಕ : **12.08.2023.**
- ಪ್ರಿ–ಬಿಡ್ ಸಭೆ : **17.08.2023ರ ಬೆಳಿಗ್ಗೆ 11.30 ಗಂಟೆಗೆ**
- ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **25.08.2023 ಸಂಜೆ 5.30 ಗಂಟೆಗೆ**
- ಬಿಡ್ ತೆರೆಯುವ ದಿನಾಂಕ : **28.08.2023**

ಬಿಡ್‌ಗಳನ್ನು ಸಲ್ಲಿಸಲು **https://kppp.karnataka.gov.in** ಗೆ ಭೇಟಿ ನೀಡಿ.

ಸಹಿ/– ಜಂಟಿ ನಿರ್ದೇಶಕರು (ಸುಧಾರಣೆ)
DIPR/CP/YC/894/2023-24 ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ, ಬೆಂಗಳೂರು

ASC CENTRE AND COLLEGE, BANGALORE
ALLOTMENT OF REGIMENTAL SHOPS
NOTICE INVITING TENDER

Sealed tenders are invited from interested War Widows/Widows of defence personnel killed while on duty/ Disabled Soldiers /Ex-servicemen & Spouses/Widows of Ex-servicemen subject to license period of one year (extendable to five years) with a three years cooling off/ break period for running Regimental Shops at ASC Centre & College (including 1 ASC Trg Centre), Agram Post, Bangalore-560007. Last date for receipt of Tender is **1200hrs on 28 Aug 2023.**
For details contact:-

Quarter Master
For Colonel Administration
Department of Administration, ASC Centre & College
Domlur, Agram Post Office, Bengaluru-560007
Mob No-9599951218, E-Mail-doa.as3c@gmail.com

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೋಲಾರ.

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:04/ 2023–24, ದಿನಾಂಕ: 01.08.2023

2022–23ನೇ ಸಾಲಿನಲ್ಲಿ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಕೋಲಾರ ಜಿಲ್ಲೆಯ ಬಂಗಾರಪೇಟೆ, ಕೆ.ಜಿ.ಎಫ್ & ಮುಳಬಾಗಿಲು, ತಾಲ್ಲೂಕಿಗೆ ಅನುಮೋದನೆಯಾಗಿರುವ ದ್ರವತ್ಯಾಜ್ಯ ನಿರ್ವಹಣೆಯಲ್ಲಿ ಮಲ ತ್ಯಾಜ್ಯ ಸಂಸ್ಕರಣ **(FSTP)** ಘಟಕಗಳ ನಿರ್ಮಾಣ ಕಾಮಗಾರಿಗಳಿಗೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ನೊಂದಾಯಿತ ಅರ್ಹ ಹಾಗೂ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಲ್ಪಟ್ಟ ಏಜೆನ್ಸಿದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸುವ ಕಡೆಯ **ದಿನಾಂಕ: 25.08.2023 ರಂದು 17.30 ಗಂಟೆಯವರೆಗೆ** ಇರುತ್ತದೆ. ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್:**http://www.kppp.karnataka.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾಕು.ನೀ. & ನೈ ವಿಭಾಗ, ಕೋಲಾರ.

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:88/ಕೆಎಸ್‌ಎಂ.ಸಿ.ಎ/2022–23

Wonderla Holidays Limited
Registered Office : 28th K.M., Mysore Road, Bengaluru 562 109; Ph: 080-22010311/322/333
Fax 080-22010324 Website: www.wonderla.com; E-mail: mail.blr@wonderla.com
CIN:L55101KA2002PLC031224

STATEMENT OF UNAUDITED FINANCIAL RESULTS FOR THE QUARTER ENDED 30th JUNE 2023 (₹in lakhs except EPS data)

SL. No.	Particulars	Quarter ended			Year ended
		30th June 2023	31st March 2023	30th June 2022	31st March 2023
		(Unaudited)	Refer Note 3	(Unaudited)	(Audited)
1	Total Income from Operations (net)	19,026.76	11,263.36	15,230.43	45,242.41
2	Net Profit for the period (before Tax, Exceptional and/or Extraordinary items)	11,221.66	4,722.50	8,508.48	19,911.42
3	Net Profit for the period before tax (after Exceptional and/or Extraordinary items)	11,221.66	4,722.50	8,508.48	19,911.42
4	Net Profit for the period after tax (after Exceptional and/or Extraordinary items)	8,447.36	3,505.06	6,437.97	14,890.37
5	Total Comprehensive Income for the period [Comprising Profit for the period (after tax) and Other Comprehensive Income / (Loss) (after tax)]	8,376.11	3,523.12	6,427.76	14,888.73
6	Equity Share Capital (Paid Up)	5,657.34	5,655.92	5,655.92	5,655.92
7	Earnings per share (face value of Rs.10/- each) (not annualised for the quarters and six months)				
	Basic:	14.93	6.20	11.38	26.33
	Diluted:	14.93	6.20	11.38	26.33

Notes:
1. The above unaudited financial results for the quarter ended 30th June 2023 have been reviewed by the Audit Committee and approved by the Board of Directors at their meeting held on 11th August 2023.
2. The Statement has been prepared in accordance with Indian Accounting Standards ('Ind AS') prescribed under section 133 of the Companies Act, 2013 read with the relevant rules thereunder and in terms of SEBI (Listing Obligations and Disclosure Requirements) Regulations, 2015 as amended.
3. The figures for the quarter ended 31st March 2023 as reported in these financial results are the balancing figures between the audited figures in respect of the the full previous financial year and the published year to date figures up to the end of the third quarter of the previous financial year.

Place: Bengaluru
Date: 11.08.2023
For Wonderla Holidays Limited
Sd/-
Managing Director

Azadi Ka Amrit Mahotsav

ಭಾರತ ಸರ್ಕಾರ
ಸಿಬ್ಬಂದಿ ನೇಮಕಾತಿ ಆಯೋಗ
(ಕರ್ನಾಟಕ ಕೇರಳ ಪ್ರದೇಶ), ಬೆಂಗಳೂರು
ಸ್ಟೆನೋಗ್ರಾಫರ್ (ಗ್ರೇಡ್ 'ಸಿ' ಮತ್ತು 'ಡಿ') ಪರೀಕ್ಷೆ, 2023

ಕೇಂದ್ರ ಸರ್ಕಾರದ ಸಿಬ್ಬಂದಿ ನೇಮಕಾತಿ ಆಯೋಗವು ಸ್ಟೆನೋಗ್ರಾಫರ್ ಗ್ರೇಡ್ 'ಸಿ' ಮತ್ತು 'ಡಿ' ಹುದ್ದೆಗಳ ನೇಮಕಾತಿಗಾಗಿ ಮುಕ್ತ ಸ್ಪರ್ಧಾತ್ಮಕ ಕಂಪ್ಯೂಟರ್ ಆಧಾರಿತ ಪರೀಕ್ಷೆಯನ್ನು ನಡೆಸುತ್ತಿದೆ. ಪರೀಕ್ಷೆಯು ಅಕ್ಟೋಬರ್ 2023 ರಲ್ಲಿ ನಡೆಯಲಿದೆ. ಪರೀಕ್ಷೆಯ ನಿಖರ ದಿನಾಂಕವನ್ನು ನಂತರ SSC ವೆಬ್‌ಸೈಟ್ ಮೂಲಕ ತಿಳಿಸಲಾಗುವುದು. ವಿವರಗಳು ವೆಬ್‌ಸೈಟ್ www.ssckkr.kar.nic.in ಮತ್ತು https://ssc.nic.in ನಲ್ಲಿ ಲಭ್ಯವಿದೆ.

1	ವೇತನ	ಸ್ಟೆನೋ ಗ್ರೇಡ್ – 'ಸಿ' – ರೂ.70,000/– ಅಂದಾಜು ಸ್ಟೆನೋ ಗ್ರೇಡ್ – 'ಡಿ' – ರೂ.43,000/– ಅಂದಾಜು
2	ವಯೋಮಿತಿ	1) ಸ್ಟೆನೋಗ್ರಾಫರ್ ಗ್ರೇಡ್ 'ಸಿ': 01.08.2023 ರಂತೆ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ 18 ರಿಂದ 30 ವರ್ಷಗಳು 2) ಸ್ಟೆನೋಗ್ರಾಫರ್ ಗ್ರೇಡ್ 'ಡಿ': 01.08.2023 ರಂತೆ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ 18 ರಿಂದ 27 ವರ್ಷಗಳು (OBC/SC/ST/ESM/ ಇತರ ನಿರ್ದಿಷ್ಟ ವರ್ಗಗಳಿಗೆ ವಯೋಮಿತಿ ಸಡಿಲಿಕೆಗಾಗಿ ಅಧಿಸೂಚನೆಯ ಪ್ಯಾರಾ – 4.1 ಅನ್ನು ನೋಡಿ)
3	ವಿದ್ಯಾರ್ಹತೆ	ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ 12ನೇ ತರಗತಿ ಅಥವಾ ತತ್ಸಮಾನ ಉತ್ತೀರ್ಣರಾಗಿರಬೇಕು. ಶೀಘ್ರಲಿಪಿ ಮತ್ತು ಬೆರಳಚ್ಚು ಕೌಶಲ್ಯ ಹೊಂದಿರುವ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರು.
4	ನೇಮಕಾತಿ ವಿಧಾನ	ಪೇಪರ್–1 ಕಂಪ್ಯೂಟರ್ ಆಧಾರಿತ ಪರೀಕ್ಷೆ. (1) ಜನರಲ್ ಇಂಟೆಲಿಜೆನ್ಸ್ ಮತ್ತು ರೀಸನಿಂಗ್ (2) ಸಾಮಾನ್ಯ ಅರಿವು (3) ಇಂಗ್ಲೀಷ್ ಭಾಷೆ ಮತ್ತು ಗ್ರಹಿಕೆ ಪೇಪರ್–2 ಕೌಶಲ್ಯ ಪರೀಕ್ಷೆ (ಸ್ಟೆನೋಗ್ರಫಿ/ಟೈಪಿಂಗ್) – ಕಂಪ್ಯೂಟರ್ ಆಧಾರಿತ ಪರೀಕ್ಷೆಯಲ್ಲಿ ಅರ್ಹತೆ ಪಡೆದವರಿಗೆ. **ಹೆಚ್ಚುವರಿ ಅಗತ್ಯತೆ :** ಗಡಿ ರಸ್ತೆ ಸಂಸ್ಥೆ BRO ಮತ್ತು GREF ನಲ್ಲಿ ಹುದ್ದೆಗಳಿಗೆ ಮಾತ್ರ ದೈಹಿಕ ಸಾಮರ್ಥ್ಯ ಪರೀಕ್ಷೆ ಇರುತ್ತದೆ.
5	ಹುದ್ದೆಗಳ ಸಂಖ್ಯೆ	ಹುದ್ದೆಗಳ ನಿರ್ದಿಷ್ಟ ಸಂಖ್ಯೆಯನ್ನು ನಂತರ ನಿಗದಿಗೊಳಿಸಲಾಗುವುದು.
6	ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಲಿಂಕ್	https://ssc.inc.in (SSC ನೇಮಕಾತಿ ಪ್ರಕಟಣೆ ದಿನಾಂಕ 02/08/2023)
7	ಶುಲ್ಕ	ರೂ. 100/– (ಮಹಿಳೆ/SC/ST/EXS ವರ್ಗಗಳಿಗೆ ಯಾವುದೇ ಶುಲ್ಕವಿಲ್ಲ)
8	ಆನ್‌ಲೈನ್ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ	23/08/2023 (23.00 ಗಂಟೆಯವರೆಗೆ) (ಆನ್‌ಲೈನ್ ಅರ್ಜಿಗಳನ್ನು ಮಾತ್ರ ಸ್ವೀಕರಿಸಲಾಗುತ್ತದೆ)
9	ಸಹಾಯಕ್ಕಾಗಿ ಸಹಾಯವಾಣಿಗಳು	080–25502520 (ಸೋಮವಾರ ದಿಂದ ಶುಕ್ರವಾರದವರೆಗೆ – 10.00 ರಿಂದ 17.00 ಗಂಟೆಗಳವರೆಗೆ)
10	ಅರ್ಜಿ ಸಲ್ಲಿಸುವುದು ಹೇಗೆ ಮತ್ತು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಲಿಂಕ್	SSC ಪ್ರಧಾನ ಕಛೇರಿಯ ಅಧಿಕೃತ ವೆಬ್‌ಸೈಟ್ ಅಂದರೆ https://ssc.nic.in ನಲ್ಲಿ ಆನ್‌ಲೈನ್ ರೀತಿಯಲ್ಲಿ ಮಾತ್ರ ಅರ್ಜಿಗಳನ್ನು ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ವಿವರವಾದ ಸೂಚನೆಗಳಿಗಾಗಿ, ಅಧಿಸೂಚನೆಯ ಅನುಬಂಧ–1 ಮತ್ತು ಅನುಬಂಧ–2 ಅನ್ನು ನೋಡಿ.
11	ಅಭ್ಯರ್ಥಿಗಳು ನಿಯಮಿತವಾಗಿ ಈ ವೆಬ್‌ಸೈಟ್‌ಗಳಿಗೆ ಭೇಟಿ ನೀಡಲು ಸೂಚಿಸಲಾಗಿದೆ: SSC ಮುಖ್ಯ ಕಛೇರಿ ನವದೆಹಲಿಯ ವೆಬ್‌ಸೈಟ್ https://ssc.nic.in ಮತ್ತು SSC ಕರ್ನಾಟಕ–ಕೇರಳ ಪ್ರದೇಶದ ವೆಬ್‌ಸೈಟ್ www.ssckkr.kar.nic.in	

ಪ್ರಾದೇಶಿಕ ನಿರ್ದೇಶಕರು
CBC - 32203/11/0006/2324 ಎಸ್ ಎಸ್ ಸಿ (ಕೆಕೆಆರ್), ಬೆಂಗಳೂರು

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು ಬೇಗೂರು ಗ್ರಾಮ, ಸೂಲಿಬೆಲೆ ಹೋಬಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ, ಈ ಕೆಳಗಿನ ಷೆಡ್ಯೂಲ್‌ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ ಮತ್ತು ಇಲ್ಲಿ ಇನ್ನುಮುಂದೆ "ಷೆಡ್ಯೂಲ್ ಪ್ರಾಪರ್ಟಿ" ಎನ್ನಲಾಗುವ 1) ಸರ್ವೆ ನಂ. 78/1 ರಲ್ಲಿರುವ ಸುಮಾರು 0.16.00 ಗುಂಟಾ 2) 78/4 ರಲ್ಲಿರುವ ಸುಮಾರು 0.16.00 ಗುಂಟಾ 3) 78/5 ರಲ್ಲಿರುವ ಸುಮಾರು 0.24.00 ಗುಂಟಾ 4) ಸರ್ವೆ ನಂ. 88/1 ರಲ್ಲಿರುವ ಸುಮಾರು 0.14.08 ಗುಂಟಾ ಮತ್ತು 5) 88/2 ರಲ್ಲಿರುವ ಸುಮಾರು 0.14.08 ಗುಂಟಾ ವಿಸ್ತೀರ್ಣವುಳ್ಳ ಕೃಷಿ ಜಮೀನುಗಳ ಎಲ್ಲಾ ಭೂಭಾಗಗಳನ್ನು, ಷೆಡ್ಯೂಲ್‌ನಲ್ಲಿ ಕ್ರಮಬದ್ಧವಾಗಿ ಉಲ್ಲೇಖಿಸಲಾಗಿರುವ ಹೆಸರುಗಳನ್ನು ಹೊಂದಿರುವ ಮಾಲೀಕರುಗಳಿಂದ ("ಮಾಲೀಕರು") ಖರೀದಿಸಲು ಉತ್ಸುಕರಾಗಿದ್ದಾರೆ.

ಸದರಿ ಷೆಡ್ಯೂಲ್ ಪ್ರಾಪರ್ಟಿ ಅಥವಾ ಪ್ರಾಪರ್ಟಿಯ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಯಾಗಲಿ ಅಥವಾ ವ್ಯಕ್ತಿಗಳಾಗಲಿ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ ಅಥವಾ ಕ್ಲೇಮ್ ಹೊಂದಿದ್ದರೆ ಅಥವಾ ಷೆಡ್ಯೂಲ್ ಪ್ರಾಪರ್ಟಿಯ ವಿರುದ್ಧವಾಗಿ ಅಥವಾ ಪ್ರಾಪರ್ಟಿಯ ಮಾಲೀಕರ ವಿರುದ್ಧವಾಗಿ ಯಾವುದೇ ಕ್ಲೇಮ್‌ಗಳನ್ನು ಹೊಂದಿದ್ದರೆ ಅಥವಾ ನಮ್ಮ ಕಕ್ಷಿದಾರರ ಈ ವ್ಯವಹಾರಕ್ಕೆ ಆಕ್ಷೇಪಣೆ ಹೊಂದಿದ್ದರೆ, ಅಂತಹವರು ಈ ನೋಟಿಸ್ ಜಾರಿಗೊಂಡ ದಿನಾಂಕದಿಂದ ಹದಿನೈದು (15) ದಿನಗಳೊಳಗೆ, ಸದರಿ ಷೆಡ್ಯೂಲ್ ಪ್ರಾಪರ್ಟಿ ಅಥವಾ ಪ್ರಾಪರ್ಟಿಯ ಭಾಗದ ಮೇಲಿರುವ ತಮ್ಮ ಹಕ್ಕುಗಳ ಹಿನ್ನಲೆ ಮತ್ತು ಆಧಾರಗಳನ್ನು ಅಗತ್ಯ ದಾಖಲಾತಿ ಪುರಾವೆಗಳ ಸಮೇತ ಇಲ್ಲಿ ಕೆಳಗೆ ಸಹಿ ಹಾಕಿರುವವರಿಗೆ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು, ನಿಗದಿತ ಅವಧಿಯ ಬಳಿಕ ನಮ್ಮ ಕಕ್ಷಿದಾರರು ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಯಾವುದೇ ಸ್ವರೂಪದ ಕ್ಲೇಮ್‌ಗಳು ಇರುವುದಿಲ್ಲ ಎಂದು ಪರಿಗಣಿಸುತ್ತ, ತಮ್ಮ ವ್ಯವಹಾರವನ್ನು ಪೂರ್ಣಗೊಳಿಸಿಕೊಳ್ಳಲು ಮುಂದಾಗುತ್ತಾರೆ.

ಷೆಡ್ಯೂಲ್

ಬೇಗೂರು ಗ್ರಾಮ, ಸೂಲಿಬೆಲೆ ಹೋಬಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಂತರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ ಐಟಂ ನಂ. 1 ರಿಂದ 5 ಕೃಷಿ ಭೂಮಿಗಳ ಎಲ್ಲಾ ಭೂಭಾಗಗಳು ಸೇರಿರುತ್ತವೆ. ಐಟಂ ನಂ. 1 ರಿಂದ 5 ಸ್ವತ್ತುಗಳೆಲ್ಲ ಸೇರಿ ಸುಮಾರು 02 ಎಕರೆ 05 ಗುಂಟಾ ವಿಸ್ತೀರ್ಣದ ಕ್ಷೇತ್ರಫಲ ಹೊಂದಿದ್ದು, ಸರ್ವೆ ನಂಬರ್ ಹಾಗೂ ಚಕ್ಕುಬಂದಿ ವಿವರಗಳು ಕೆಳಗಿನಂತಿರುತ್ತದೆ:

ಐಟಂ ನಂ.	ಸರ್ವೆ ನಂ.	ಮಾಲೀಕರ ಹೆಸರು	ವಾಸ್ತವಿಕ ಕ್ಷೇತ್ರಫಲ		ಖರಾಬು ವಿಸ್ತೀರ್ಣ		ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
			ಎಕರೆ	ಗುಂಟೆ	ಎಕರೆ	ಗುಂಟೆ				
ಬೇಗೂರು ಗ್ರಾಮ										
1.	78/1	ದೊಡ್ಡನಾಗಪ್ಪ ಬಿನ್ ಮುನಿಶಾಮಪ್ಪ ಮುನಿನಾಗಪ್ಪ ಬಿನ್ ಮುನಿಶಾಮಪ್ಪ ಅಕ್ಕಯ್ಯಮ್ಮ ಕೋಂ. ಮುನಿಶಾಮಪ್ಪ	0	16	00	00	ಸರ್ವೆ ನಂ. 78/4	ಸರ್ವೆ ನಂ. 77/5 & 77/3	ಸರ್ವೆ ನಂ. 74	ಸರ್ವೆ ನಂ. 77/7
2.	78/4	ದೊಡ್ಡಮುನಿಚಿನ್ನಪ್ಪ ಬಿನ್ ತಿಪ್ಪಯ್ಯ ಚಿಕ್ಕಮುನಿಚಿನ್ನಪ್ಪ ಬಿನ್ ತಿಪ್ಪಯ್ಯ ಮುನಿಶಾಮಪ್ಪ ಬಿನ್ ತಿಪ್ಪಯ್ಯ ನಾರಾಯಣಪ್ಪ ಬಿನ್ ತಿಪ್ಪಯ್ಯ ಮುನಿಯಪ್ಪ ಬಿನ್ ತಿಪ್ಪಯ್ಯ ಮುನಿಶಾಮಪ್ಪ ಬಿನ್ ತಿಪ್ಪಯ್ಯ ಚಿನ್ನಪ್ಪ ಬಿನ್ ಮುನಿಶಾಮಪ್ಪ ಕೃಷ್ಣಪ್ಪ ಬಿನ್ ಮುನಿಶಾಮಪ್ಪ	0	16	00	00	ಸರ್ವೆ ನಂ. 78/5	ಸರ್ವೆ ನಂ. 78/1	ಸರ್ವೆ ನಂ. 74	ಸರ್ವೆ ನಂ. 77/8 & 79/3
3.	78/5	ಸೀತಮ್ಮ ಬಿನ್ ಬಗ್ಗತಿಪ್ಪಣ್ಣ ಬಿ ಎಂ ಮುನಿಯಪ್ಪ ಬಿನ್ ಬಗ್ಗತಿಪ್ಪನ್ನ	0	24	00	00	ಸರ್ವೆ ನಂ. 78/2	ಸರ್ವೆ ನಂ. 78/4	ಸರ್ವೆ ನಂ. 73	ಸರ್ವೆ ನಂ. 79/3
4.	88/1	ಪುಟ್ಟಮ್ಮ ಕೋಂ. ಲೇಟ್ ಎಸ್. ಶಿವರುದ್ರಪ್ಪ	0	14.08	00	00	ಕಾಲುವೆ	ಸರ್ವೆ ನಂ. 88/2	ಸರ್ವೆ ನಂ. 87/9A	ಸರ್ವೆ ನಂ. 89/7B & 89/7C
5.	88/2	ಎಂ ಎಸ್ ಲಲಿತಮ್ಮ ಬಿನ್ ಲೇಟ್ ಸಿದ್ದೇಶ್ವರಪ್ಪ	0	14.08	00	00	ಸರ್ವೆ ನಂ. 88/1	ಸರ್ವೆ ನಂ. 89/5	ಸರ್ವೆ ನಂ. 87/9E	ಸರ್ವೆ ನಂ. 89/5 & 89/7A
ಒಟ್ಟು			02	05	00	0.00				

(ಗುರುನಾಥ್ ಎಂ) ವಕೀಲರು
ನಂ. 14, ಫೆದರ್‌ಲೈಟ್ ಇವೊಮಾ, ನಂ.286,
2ನೇ ಮಹಡಿ, ಹಳೆಯ ಮದ್ರಾಸ್ ರಸ್ತೆ, ಕೆ.ಆರ್. ಪುರಂ,
ಬೆಂಗಳೂರು – 560049

ದಿನಾಂಕ: 04–08–2023
ಸ್ಥಳ: ಬೆಂಗಳೂರು

ಕೆನರಾ, ಬಿಒಬಿ ಸಾಲದ ಬಡ್ಡಿ ಏರಿಕೆ

ನವದೆಹಲಿ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರವನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಂಡಿದ್ದರೂ ಸರ್ಕಾರಿ ಸ್ವಾಮ್ಯದ ಕೆಲವು ಬ್ಯಾಂಕ್‌ಗಳು ಸಾಲದ ಮೇಲಿನ ಬಡ್ಡಿ ದರ ಹೆಚ್ಚಿಸಿವೆ.

ಕೆನರಾ ಬ್ಯಾಂಕ್, ಬ್ಯಾಂಕ್ ಆಫ್ ಬರೋಡ (ಬಿಒಬಿ) ಮತ್ತು ಬ್ಯಾಂಕ್ ಆಫ್ ಮಹಾರಾಷ್ಟ್ರ ಎಂಸಿಎಲ್‌ಆರ್ ಆಧಾರಿತ ಸಾಲದ ಮೇಲಿನ ಬಡ್ಡಿದರವನ್ನು ಶೇ 0.10ರವರೆಗೂ ಏರಿಕೆ ಮಾಡಿವೆ. ಇದರಿಂದಾಗಿ ಎಂಸಿಎಲ್‌ಆರ್‌ಗೆ ಜೋಡಣೆ ಆಗಿರುವ ಸಾಲಗಳ ಮೇಲಿನ ಇಎಂಐ ಹೆಚ್ಚಾಗಲಿದೆ.

ಒಂದು ವರ್ಷಕ್ಕೆ ಪರಿಷ್ಕೃತ ಎಂಸಿಎಲ್‌ಆರ್ ಶೇ 8.65ಕ್ಕೆ ಬದಲಾಗಿ ಶೇ 8.70ಕ್ಕೆ ಏರಿಕೆ ಆಗಿದೆ ಎಂದು ಬ್ಯಾಂಕ್ ಆಫ್ ಬರೋಡ ಷೇರುಪೇಟೆಗೆ ತಿಳಿಸಿದೆ. ಪರಿಷ್ಕೃತ ದರವು ಶನಿವಾರದಿಂದ ಜಾರಿಗೆ ಬರಲಿದೆ ಎಂದು ಹೇಳಿದೆ.

ಕೆನರಾ ಬ್ಯಾಂಕ್ ಸಹ ಶನಿವಾರದಿಂದ ಜಾರಿಗೆ ಬರುವಂತೆ ಎಂಸಿಎಲ್‌ಆರ್ ಶೇ 0.5ರಷ್ಟು ಹೆಚ್ಚಿಸಿದ್ದು, ಗ್ರಾಹಕರ ನೀಡಿಕೆ ದರ ಶೇ 8.70ಕ್ಕೆ ತಲುಪಿದೆ.

ಬ್ಯಾಂಕ್ ಆಫ್ ಮಹಾರಾಷ್ಟ್ರ ಎಂಸಿಎಲ್‌ಆರ್ ಅನ್ನು ಶೇ 0.10ರಷ್ಟು ಏರಿಕೆ ಮಾಡಿದ್ದು ನೀಡಿಕೆ ದರ ಶೇ 8.60ಕ್ಕೆ ತಲುಪಿದೆ. ಪರಿಷ್ಕೃತ ದರವು ಗುರುವಾರದಿಂದಲೇ ಅನ್ವಯಿಸಲಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಕುಸಿದ ಕೈಗಾರಿಕಾ ಬೆಳವಣಿಗೆ

ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ವಲಯದ ಬೆಳವಣಿಗೆ ದರವು ಜೂನ್ ತಿಂಗಳಲ್ಲಿ ಮೂರು ತಿಂಗಳ ಕನಿಷ್ಠ ಮಟ್ಟವಾದ ಶೇಕಡ 3.7ಕ್ಕೆ ಕುಸಿದಿದೆ. ತಯಾರಿಕಾ ವಲಯದಲ್ಲಿ ಹೆಚ್ಚಿನ ಬೆಳವಣಿಗೆ ದಾಖಲಾಗದೆ ಇದ್ದುದು ಜೂನ್‌ನಲ್ಲಿ ಕೈಗಾರಿಕಾ ಬೆಳವಣಿಗೆ ದರವು ಕಡಿಮೆ ಆಗುವುದಕ್ಕೆ ಮುಖ್ಯ ಕಾರಣ.

ಕೈಗಾರಿಕಾ ಉತ್ಪಾದನೆಯ ಸೂಚ್ಯಂಕವು (ಐಐಪಿ) 2022ರ ಜೂನ್‌ನಲ್ಲಿ ಶೇಕಡ 12.6ರಷ್ಟು ಆಗಿತ್ತು. ಈ ವರ್ಷದ ಮಾರ್ಚ್‌ನಲ್ಲಿ ಇದು ಶೇ 1.9ರಷ್ಟು ಇದ್ದಿದ್ದು ಏಪ್ರಿಲ್‌ನಲ್ಲಿ ಶೇ 5.3ಕ್ಕೆ ಹೆಚ್ಚಾಗಿತ್ತು. ಮೇ ತಿಂಗಳಲ್ಲಿ ಶೇ 5.3ಕ್ಕೆ ಕಂಡಿತ್ತು. ಪ್ರಸಕ್ತ ಹಣಕಾಸು ವರ್ಷದ ಮೊದಲ ಮೂರು ತಿಂಗಳ ಅವಧಿಯಲ್ಲಿ ಐಐಪಿ ಬೆಳವಣಿಗೆಯು ಶೇ 4.5ರಷ್ಟು ಆಗಿದೆ. ಇದು ಹಿಂದಿನ ವರ್ಷದ ಇದೇ ಅವಧಿಯಲ್ಲಿ ಆಗಿದ್ದ ಶೇ 12.9ರಷ್ಟು ಬೆಳವಣಿಗೆಗೆ ಹೋಲಿಸಿದರೆ ಕಡಿಮೆ.

'ಹಿಂದಿನ ವರ್ಷದಲ್ಲಿ ಆಗಿದ್ದ ಬೆಳವಣಿಗೆಯನ್ನು ಕೋವಿಡ್–19 ಸಾಂಕ್ರಾಮಿಕದ ಕಾರಣದಿಂದಾಗಿ ಸೃಷ್ಟಿಯಾಗಿದ್ದ ಅಸಾಮಾನ್ಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಗ್ರಹಿಸಬೇಕು' ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಅಧಿಕೃತ ಪ್ರಕಟಣೆ ತಿಳಿಸಿದೆ.

ಜೂನ್ ತಿಂಗಳಲ್ಲಿ ತಯಾರಿಕಾ ವಲಯದ ಬೆಳವಣಿಗೆ ಶೇ 3.1ರಷ್ಟು ಬೆಳವಣಿಗೆ ಸಾಧ್ಯವಾಗಿದೆ. ವಿದ್ಯುತ್ ಉತ್ಪಾದನೆ (ಶೇ 4.2ರಷ್ಟು), ಗಣಿಗಾರಿಕೆ (ಶೇ 7.6ರಷ್ಟು), ಬಂಡವಾಳ ಸರಕು (ಶೇ 2.2ರಷ್ಟು) ವಲಯಗಳಲ್ಲಿ ಬೆಳವಣಿಗೆ ಕಂಡುಬಂದಿದೆ.

ಎಫ್‌ಎಂಸಿಜಿಯಲ್ಲಿ ಹೆಚ್ಚಿನ ಬೆಳವಣಿಗೆ: ಐಟಿಸಿ

ಸಂಜೀವ್ ಪುರಿ

ಕೋಲ್ಕತ್ತ (ಪಿಟಿಐ): 'ಎಫ್‌ಎಂಸಿಜಿ ವಹಿವಾಟಿನಲ್ಲಿ, ಭವಿಷ್ಯದ ಮಾರುಕಟ್ಟೆ ಅಗತ್ಯಗಳನ್ನು ಈಡೇರಿಸುವ ಉತ್ಪನ್ನಗಳ ಕಡೆಗೆ ಗಮನ ಹರಿಸಲಾಗುವುದು. ಸದ್ಯ ಕಂಪನಿಯು 25ಕ್ಕೂ ಅಧಿಕ ಬ್ರ್ಯಾಂಡ್‌ಗಳನ್ನು ಹೊಂದಿದ್ದು, ಅವುಗಳಿಂದ ವಾರ್ಷಿಕ ₹29 ಸಾವಿರ ಕೋಟಿ ಮೊತ್ತದ ವಹಿವಾಟು ನಡೆಯುತ್ತಿದೆ' ಎಂದು ಐಟಿಸಿ ಲಿಮಿಟೆಡ್‌ನ ಅಧ್ಯಕ್ಷ ಸಂಜೀವ್ ಪುರಿ ಹೇಳಿದ್ದಾರೆ.

ಕಂಪನಿಯ ವಾರ್ಷಿಕ ಮಹಾಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, 'ಎಫ್‌ಎಂಸಿಜಿ ಬ್ರ್ಯಾಂಡ್‌ಗಳು ಹಲವು ದೇಶಗಳಿಗೆ ರಫ್ತಾಗುತ್ತಿವೆ. ಜನರ ತಲಾ ಆದಾಯವು ಹೆಚ್ಚಾಗುವ ನಿರೀಕ್ಷೆಯಿಂದಾಗಿ ವಹಿವಾಟಿನಲ್ಲಿ ಉತ್ತಮ ಬೆಳವಣಿಗೆ ಕಾಣಲು ಹೆಚ್ಚಿನ ಅವಕಾಶಗಳಿವೆ' ಎಂದು ತಿಳಿಸಿದ್ದಾರೆ.

ಜಾಗತಿಕ ಅನಿಶ್ಚಿತ ಪರಿಸ್ಥಿತಿಯಲ್ಲಿ ಮುಂದಿನ ಹಂತದ ಸ್ಪರ್ಧಾತ್ಮಕತೆ, ಬೆಳವಣಿಗೆ ಮತ್ತು ಲಾಭ ಗಳಿಸುವತ್ತ ಯೋಜನೆ ರೂಪಿಸಲು ಕಂಪನಿ ಬಯಸುತ್ತದೆ ಎಂದು ಪುರಿ ಅವರು ಹೇಳಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪುಣ್ಯಸ್ಮರಣೆ

ಶ್ರೀ ಎನ್.ಸಿ. ಬಸವರಾಜು — ನಿಧನ 12-8-2021
ಶ್ರೀಮತಿ ಸುಶೀಲಮ್ಮ — ನಿಧನ 7-3-2021
ನಾಗದಾಸನಹಳ್ಳಿ, ಬೆಂಗಳೂರು-64
ನೀವುಗಳು ನಮ್ಮನ್ನಗಲಿ 2 ವರ್ಷವಾಯಿತು.
ಆದರೆ ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಅಮರ.
ನಿಮ್ಮ ಆದರ್ಶಗಳು ನಮಗೆ ದಾರಿದೀಪ.
ಕುಟುಂಬ ವರ್ಗದವರು

ಸ್ಮಾರ್ಟ್ ಬಜಾರ್: ಪೈಸಾ ವಸೂಲ್ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ಮಾರ್ಟ್ ಬಜಾರ್ – ಫುಲ್ ಪೈಸಾ ವಸೂಲ್' ಮಾರಾಟ ಮೇಳವು ಈ ಬಾರಿ ಶನಿವಾರದಿಂದ (ಆಗಸ್ಟ್ 12) ಬುಧವಾರದ ವರೆಗೆ (ಆಗಸ್ಟ್ 16) ಸ್ಮಾರ್ಟ್ ಬಜಾರ್ ಹಾಗೂ ಸ್ಮಾರ್ಟ್ ಸೂಪರ್‌ಸ್ಟೋರ್‌ಗಳಲ್ಲಿ ನಡೆಯಲಿದೆ.

ವಿವಿಧ ವರ್ಗಗಳ ಉತ್ಪನ್ನಗಳ ಮಾರಾಟ ದರದಲ್ಲಿ ಭಾರಿ ರಿಯಾಯಿತಿ ಈ ಮಾರಾಟ ಮೇಳದಲ್ಲಿ ಇರಲಿದೆ ಎಂದು ಪ್ರಕಟಣೆ ತಿಳಿಸಿದೆ. ಸ್ಮಾರ್ಟ್ ಬಜಾರ್‌ಗೆ ಮಾಧುರಿ ದೀಕ್ಷಿತ್ ಅವರು ಈಚೆಗೆ ರಾಯಭಾರಿ ಆಗಿ ನೇಮಕಗೊಂಡಿದ್ದಾರೆ.

'ಮನೆಗೆ ಅಗತ್ಯವಿರುವ ಉತ್ಪನ್ನಗಳು ಹಾಗೂ ಸಿದ್ಧ ಉಡುಪುಗಳು ಕೂಡ ಲಭ್ಯವಿರುವ ಕಾರಣ ಈಗ ಸ್ಮಾರ್ಟ್ ಬಜಾರ್ ಕುಟುಂಬದ ಜೊತೆ ಶಾಪಿಂಗ್ ಬರಲು ಸೂಕ್ತವಾದ ತಾಣ' ಎಂದು ರಿಲಯನ್ಸ್ ರಿಟೇಲ್‌ನ ವಾಲ್ಯು ಫಾರ್ಮ್ಯಾಟ್‌ನ ಸಿಇಒ ದಾಮೋದರ್ ಮಾಲ್ ಹೇಳಿದ್ದಾರೆ.



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ 19,543
ಇಂದಿನ ಅಂತ್ಯ 19,428
115
ದಿನದ ಕನಿಷ್ಠ 19,412

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹500
12 ಮೊಟ್ಟೆಗೆ ₹70
ಮೈಸೂರು
100 ಮೊಟ್ಟೆಗೆ ₹505

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹346-575
ದ್ವಿತಳಿ (ಬಿ.ವಿ) ₹330-635

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್–4 ₹146
ಆರ್‌ಎಸ್‌ಎಸ್–5 ₹140
ಗುಡ್ ಲಾಟ್ ₹123
(ಪ್ರತಿ ಕೆ.ಜಿಗೆ)

ಲಾಭದ ಆಸೆಗೆ ಟೊಮೆಟೊ ನಾಟಿ ಹೆಚ್ಚಳ

ನರ್ಸರಿಗಳಲ್ಲಿ ಸಸಿಗಳಿಗೆ ಭಾರಿ ಬೇಡಿಕೆ • ಮಾರುಕಟ್ಟೆಗೆ 15 ದಿನದಲ್ಲಿ 37 ಸಾವಿರ ಕ್ವಿಂಟಲ್ ಆವಕ

• ಕೆ.ಓಂಕಾರ ಮೂರ್ತಿ

ಕೋಲಾರ: ಟೊಮೆಟೊ ಧಾರಣೆ ಸಾರ್ವಕಾಲಿಕ ಏರಿಕೆ ಕಂಡ ಖುಷಿಯಲ್ಲಿ ಜಿಲ್ಲೆಯ ಬೆಳೆಗಾರರು 6 ಸಾವಿರ ಹೆಕ್ಟೇರ್‌ನಲ್ಲಿ ನಾಟಿ ಮಾಡಿದ್ದಾರೆ. ಇನ್ನೂ ಸಾವಿರ ಹೆಕ್ಟೇರ್‌ನಲ್ಲಿ ಸಸಿ ನೆಡಲು ಲಕ್ಷಾಂತರ ರೂಪಾಯಿ ಬಂಡವಾಳ ತೊಡಗಿಸಿ ಜಮೀನು ಸಿದ್ಧತೆ ಮಾಡಿಕೊಂಡಿದ್ದಾರೆ. ಬಹುತೇಕ ನರ್ಸರಿಗಳಲ್ಲಿ ಟೊಮೆಟೊ ಸಸಿಗೆ (ನಾರು) ಭಾರಿ ಬೇಡಿಕೆ ಇದೆ.

'ಆರು ಎಕರೆಯಲ್ಲಿ ಟೊಮೆಟೊ ನಾಟಿ ಮಾಡಲು ₹15 ಲಕ್ಷ ಬಂಡವಾಳ ಹೂಡುತ್ತಿದ್ದೇವೆ. ಉಳುಮೆ ಮಾಡಿ ಗೊಬ್ಬರ ಹಾಕಿ ಮಲ್ಚಿಂಗ್ ಪೇಪರ್ ಹಾಸಿದ್ದೇವೆ. ಈಗಲೇ ₹7ಲಕ್ಷ ಖರ್ಚಾಗಿದೆ. ಸಸಿ ನಾಟಿಗೆ ಸಿದ್ಧತೆ ನಡೆದಿದ್ದು, ಬಂಡವಾಳ ಬಂದರೆ ಸಾಕು. ನವೆಂಬರ್ ಮೊದಲ ವಾರ ಫಸಲು ಬರಲಿದ್ದು, ಆಗ ₹700ರಿಂದ ₹800 ಬೆಲೆ ಇದ್ದರೆ ಪರವಾಗಿಲ್ಲ. ಇಲ್ಲದಿದ್ದರೆ ನಷ್ಟವಾಗಲಿದೆ' ಎಂದು ಜಿಲ್ಲೆಯ ಹುತ್ತೂರು ಗ್ರಾಮದ ರೈತ ಸತೀಶ್ 'ಪ್ರಜಾವಾಣಿ'ಗೆ ತಿಳಿಸಿದರು.

ಜಿಲ್ಲೆಯಲ್ಲಿ ಏಪ್ರಿಲ್ ಹಾಗೂ ಮೇ ತಿಂಗಳಿನಲ್ಲಿ ನಾಟಿ ಮಾಡಿದ್ದ ಟೊಮೆಟೊ ಈಗ ಫಸಲು ಕೊಡುತ್ತಿದೆ. ಇದೇ ಕಾರಣಕ್ಕೆ ಮಾರುಕಟ್ಟೆಗೆ ಟೊಮೆಟೊ ಆವಕ ಹೆಚ್ಚಿದೆ. ಮಾರುಕಟ್ಟೆಗೆ ಶುಕ್ರವಾರ 88,393 ಕ್ವಿಂಟಲ್ ಟೊಮೆಟೊ ಆವಕವಾಗಿದೆ. 15 ದಿನಗಳ ಅಂತರದಲ್ಲಿ ಸುಮಾರು 37 ಸಾವಿರ ಕ್ವಿಂಟಲ್ ಆವಕ ಹೆಚ್ಚಿದೆ.

ಚಳ್ಳಕೆರೆ, ಮೈಸೂರು, ಚಾಮರಾಜನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಹಾಗೂ ಆಂಧ್ರಪ್ರದೇಶದ ಮಲಕಲಚೆರುವುನಿಂದಲೂ ಕೋಲಾರ ಮಂಡಿಗೆ ಟೊಮೆಟೊ ಆವಕವಾಗುತ್ತಿದೆ.

'ಪೂರೈಕೆಯಲ್ಲಿ ಬಹಳ ಹೆಚ್ಚಳವಾಗಿರುವುದರಿಂದ ಟೊಮೆಟೊ ಧಾರಣೆ ಇಳಿಕೆ ಮುಂದುವರಿಯಲಿದೆ. ಮಳೆ ಬಂದರೆ ಮಾತ್ರ ದರ ಹೆಚ್ಚಲಿದೆ' ಎಂದು ಎಪಿಎಂಸಿ ಕಾರ್ಯದರ್ಶಿ ವಿಜಯಲಕ್ಷ್ಮಿ ಹೇಳಿದರು.

> ಛತ್ತೀಸಗಢ, ಆಂಧ್ರಪ್ರದೇಶ ಸೇರಿದಂತೆ ಕೆಲ ರಾಜ್ಯಗಳ ವರ್ತಕರು ಇಲ್ಲಿಗೆ ಬರುತ್ತಿಲ್ಲ. ಇದು ಕೂಡ ಧಾರಣೆ ಕುಸಿಯಲು ಕಾರಣ
> **ವಿಜಯಲಕ್ಷ್ಮಿ**, ಎಂಪಿಎಂಸಿ ಕಾರ್ಯದರ್ಶಿ, ಕೋಲಾರ

> ದರ ಕುಸಿಯುತ್ತಿರುವುದನ್ನು ನೋಡಿದರೆ ಫಸಲು ಬಂದಾಗ ಕಟಾವಿಗೆ ಕೂಲಿ ಕೊಡಲೂ ಕಷ್ಟವಾಗಲಿದೆ
> **ಸಿಎಂಆರ್ ಶ್ರೀನಾಥ್**, ಮಂಡಿ ಮಾಲೀಕ, ಕೋಲಾರ

ಕೋಲಾರದ ಹುತ್ತೂರಿನ ರೈತ ಸತೀಶ್ ತಮ್ಮ ಜಮೀನಿನಲ್ಲಿ ಟೊಮೆಟೊ ನಾಟಿ ಮಾಡಲು ಮಲ್ಚಿಂಗ್ ಪೇಪರ್ ಹಾಸಿ ಸಿದ್ಧತೆ ಮಾಡಿಕೊಂಡಿರುವ ರೀತಿ

15 ಕೆ.ಜಿ ಟೊಮೆಟೊ ಬಾಕ್ಸ್‌ಗೆ ₹800

ಕೋಲಾರ ಎಪಿಎಂಸಿಯಲ್ಲಿ ಶುಕ್ರವಾರ ಕೂಡ ಹರಾಜಿನಲ್ಲಿ 15 ಕೆ.ಜಿ. ಟೊಮೆಟೊ ಬಾಕ್ಸ್ ಕೇವಲ ₹800ಕ್ಕೆ ಮಾರಾಟವಾಗಿದೆ. ರೈತರಿಗೆ ಕೆ.ಜಿಗೆ ಸರಾಸರಿ ₹53 ಸಿಕ್ಕಿದೆ. ಇದೇ ಪ್ರಮಾಣದ ಟೊಮೆಟೊ ಜುಲೈ 31ರಂದು ಗರಿಷ್ಠ ₹2,700ಕ್ಕೆ ಮಾರಾಟವಾಗಿ ಸಾರ್ವಕಾಲಿಕ ದಾಖಲೆ ನಿರ್ಮಿಸಿತ್ತು. ಆಗ ಕೆ.ಜಿಗೆ ಸರಾಸರಿ ₹180 ಲಭಿಸಿತ್ತು.

ಬೆಲೆ ನಿಯಂತ್ರಿಸುವ ಉದ್ದೇಶದಿಂದ ಕ್ರಮ • ಸರ್ಕಾರದ ಬಳಿ 3 ಲಕ್ಷ ಟನ್ ಸಂಗ್ರಹ

ಕೇಂದ್ರದ ಸಂಗ್ರಹದಿಂದ ಮಾರುಕಟ್ಟೆಗೆ ಈರುಳ್ಳಿ

ನವದೆಹಲಿ (ಪಿಟಿಐ): ಅಕ್ಟೋಬರ್‌ನಿಂದ ಈರುಳ್ಳಿಯ ಹೊಸ ಬೆಳೆಯು ಮಾರುಕಟ್ಟೆಗೆ ಬರಲಿದ್ದು, ಅಲ್ಲಿಯವರೆಗೆ ಈರುಳ್ಳಿ ಬೆಲೆಯನ್ನು ನಿಯಂತ್ರಣದಲ್ಲಿ ಇರಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ತನ್ನ ಸಂಗ್ರಹದಲ್ಲಿರುವ ಈರುಳ್ಳಿಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಿದೆ.

ಕೇಂದ್ರವು ಆಯ್ದ ಪ್ರದೇಶಗಳಲ್ಲಿ ಈರುಳ್ಳಿಯನ್ನು ತಕ್ಷಣದಿಂದಲೇ ಮಾರುಕಟ್ಟೆಗೆ ಬಿಡುಗಡೆ ಮಾಡಲಿದೆ. ಇ-ಹರಾಜು, ಇ-ವಾಣಿಜ್ಯ ವೇದಿಕೆಗಳು ಹಾಗೂ ರಾಜ್ಯ ಸರ್ಕಾರಗಳ ಗ್ರಾಹಕ ಸಹಕಾರಿ ಸಂಘಗಳು ಮತ್ತು ನಿಗಮಗಳ ಮೂಲಕ ರಿಯಾಯಿತಿ ದರದಲ್ಲಿ ಮಾರಾಟ ಮಾಡುವ ಬಗ್ಗೆ ಕೇಂದ್ರವು ಪರಿಶೀಲನೆ ನಡೆಸುತ್ತಿದೆ.

ಬೆಲೆ ಸ್ಥಿರತೆ ನಿಧಿ (ಪಿಎಸ್‌ಎಫ್) ಅಡಿಯಲ್ಲಿ ಕೇಂದ್ರದ ಬಳಿ ಈಗ ಮೂರು ಲಕ್ಷ ಟನ್ ಈರುಳ್ಳಿ ಸಂಗ್ರಹ ಇದೆ. ಸರ್ಕಾರ ನೀಡಿರುವ ಅಂಕಿ-ಅಂಶಗಳ ಪ್ರಕಾರ ಈರುಳ್ಳಿ ಬೆಲೆಯು ಏರುಮುಖವಾಗಿದೆ. 'ನಾವು ನಮ್ಮ ಸಂಗ್ರಹದಲ್ಲಿನ ಈರುಳ್ಳಿಯನ್ನು ತಕ್ಷಣವೇ ಮಾರುಕಟ್ಟೆಗೆ ಬಿಡುಗಡೆ ಮಾಡಲಿದ್ದೇವೆ' ಎಂದು ಗ್ರಾಹಕ ವ್ಯವಹಾರಗಳ ಕಾರ್ಯದರ್ಶಿ ರೋಹಿತ್ ಕುಮಾರ್ ಸಿಂಗ್ ಹೇಳಿದ್ದಾರೆ.

ಅಖಿಲ ಭಾರತ ಸರಾಸರಿ ದರಕ್ಕಿಂತ (ಆಗಸ್ಟ್ 10ಕ್ಕೆ ಇದು ₹27.90) ಹೆಚ್ಚಿನ ದರಕ್ಕೆ ಈರುಳ್ಳಿ ಮಾರಾಟ ಆಗುತ್ತಿರುವ ಪ್ರಮುಖ ಮಾರುಕಟ್ಟೆಗಳಲ್ಲಿ ಕೇಂದ್ರದ ಸಂಗ್ರಹದಲ್ಲಿನ ಈರುಳ್ಳಿ ಬಿಡುಗಡೆ ಮಾಡಲಾಗುತ್ತದೆ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯದ ಪ್ರಕಟಣೆ ತಿಳಿಸಿದೆ. ಮಾರುಕಟ್ಟೆಗೆ ಈರುಳ್ಳಿಯನ್ನು ಬಿಡುಗಡೆ ಮಾಡುವುದಷ್ಟೇ ಅಲ್ಲದೆ, ಅದನ್ನು ರಾಜ್ಯ ಸರ್ಕಾರಗಳಿಗೆ ರಿಯಾಯಿತಿ ದರದಲ್ಲಿ ಮಾರಾಟ ಮಾಡುವುದು ಹಾಗೂ ರಾಜ್ಯಗಳ ಗ್ರಾಹಕ ಸಹಕಾರ ಸಂಘಗಳು ಮತ್ತು ನಿಗಮಗಳ ಅಂಗಡಿಗಳ ಮೂಲಕ ಗ್ರಾಹಕರಿಗೆ ಮಾರಾಟ ಆಗುವಂತೆ ನೋಡಿಕೊಳ್ಳಬೇಕು ಎಂದು ಕೂಡ ತೀರ್ಮಾನಿಸಲಾಗಿದೆ.

ಆನ್‌ಲೈನ್ ಆಟಕ್ಕೆ ಶೇ 28 ಜಿಎಸ್‌ಟಿ: ಸಂಸತ್ ಒಪ್ಪಿಗೆ

ನವದೆಹಲಿ (ಪಿಟಿಐ): ಆನ್‌ಲೈನ್ ಆಟಗಳು, ಕ್ಯಾಸಿನೊ ಮತ್ತು ಕುದುರೆ ರೇಸ್‌ಗೆ ಶೇಕಡ 28ರಷ್ಟು ಜಿಎಸ್‌ಟಿ ವಿಧಿಸುವ ತಿದ್ದುಪಡಿ ಮಸೂದೆಗೆ ಸಂಸತ್ ಶುಕ್ರವಾರ ಅನುಮೋದನೆ ನೀಡಿದೆ.

ಕೇಂದ್ರ ಜಿಎಸ್‌ಟಿ (ತಿದ್ದುಪಡಿ) ಮಸೂದೆ 2023 ಮತ್ತು ಸಮಗ್ರ ಜಿಎಸ್‌ಟಿ (ತಿದ್ದುಪಡಿ) ಮಸೂದೆ 2023ನ್ನು ಮಂಡಿಸಲಾಗಿದ್ದು, ಭಾರತದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದೇಶದ ಇ-ಗೇಮಿಂಗ್ ಕಂಪನಿಗಳು ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿದೆ.

ಒಂದೊಮ್ಮೆ ವಿದೇಶಿ ಕಂಪನಿಗಳು ಜಿಎಸ್‌ಟಿ ನೋಂದಣಿ ಮಾಡಿಕೊಳ್ಳದೇ ಇದ್ದರೆ ಮತ್ತು ತೆರಿಗೆ ಪಾವತಿ ನಿಯಮಗಳನ್ನು ಅನುಸರಿಸದೇ ಇದ್ದರೆ ಆನ್‌ಲೈನ್ ಗೇಮಿಂಗ್ ಬಳಕೆಯನ್ನು ತಡೆಹಿಡಿಯುವ ಅವಕಾಶವನ್ನೂ ಕಲ್ಪಿಸುತ್ತದೆ.

ಸಿಜಿಎಸ್‌ಟಿ ಮತ್ತು ಐಜಿಎಸ್‌ಟಿ ಮಸೂದೆಗಳಿಗೆ ತಿದ್ದುಪಡಿ ತಂದಿರುವುದರಿಂದ ಇದೀಗ ರಾಜ್ಯಗಳು ರಾಜ್ಯ ಜಿಎಸ್‌ಟಿಗೆ ತಿದ್ದುಪಡಿ ತರಬೇಕಿದೆ.

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1860 (1860)
ಸೋಯಾ (ರಿಫೈನ್ಡ್)	₹945 (950)
ಸೂರ್ಯಕಾಂತಿ (ರಿಫೈನ್ಡ್)	₹960 (965)

ಮುಂಬೈ ಧಾರಣೆ

ಶೇಂಗಾ

11-8-2023

ಜಾವಾ 70/80(ಹೊಸ)	13400-13500
ಜಾವಾ 80/90(ಹೊಸ)	12000-12100
ದಪ್ಪ ಮಧ್ಯಪ್ರದೇಶ(ಹೊಸ)	13000-13100
ದಪ್ಪ ಗುಜರಾತ್(ಹೊಸ)	14300-14400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1870(1870)
ಒಂದು ವಾರದ ಡೆಲಿವರಿ	1865(1865)
ಸೋಯಾ ಕಚ್ಚಾ	895(900)
ಪಾಮ್ ವಾರದ ಡೆಲಿವರಿ	843(848)
ಸೂರ್ಯಕಾಂತಿ ಎಣ್ಣೆ ಕಚ್ಚಾ	880(900)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	58,750(58,750)
ಬೆಳ್ಳಿ ಕೆ.ಜಿ	70,150(70,150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	750-800
ನಡುಗೋಲು	900-950
ರಾಶಿ	1000-1100
ರಾಶಿ ಉತ್ತಮ	1150-1200
ಹೆರಕಿದ್ದು	1600-1700
ಹಸಿರು ಸಾಧಾರಣ	1200-1250
ಹಸಿರು ಉತ್ತಮ	1600-1700
ಹಸಿರು ಅತಿ ಉತ್ತಮ	1900-2000
ಕಾಳುಮೆಣಸು	600
ಅಡಿಕೆ	
ಹೊಸನಗರ	
ಚಾಲಿ	37599-38599
ಕೆಂಪುಗೋಟು	35899-39611
ರಾಶಿ	47609-51400
ಕುಮಟಾ	
ಚಿಪ್ಪು	32599-35299
ಕೋಕ	21169-33899
ಫ್ಯಾಕ್ಟರಿ	14509-23249
ಹಳೆಚಾಲಿ	39999-42429
ಹೊಸಚಾಲಿ	37000-41500
ಶಿವಮೊಗ್ಗ	
ಬೆಟ್ಟೆ	50200-53899
ಗೊರಬಲು	16506-41699
ರಾಶಿ	42079-52199
ಸರಕು	57119-80119
ಸಿದ್ದಾಪುರ	
ಬಿಳಿಗೋಟು	32099-35500
ಚಾಲಿ	38099-41459
ಕೋಕ	30199-35499
ಕೆಂಪುಗೋಟು	33099-36689
ರಾಶಿ	45099-50009
ತಟ್ಟಿಬೆಟ್ಟೆ	39289-49539
ಶಿರಸಿ	
ಬೆಟ್ಟೆ	39899-47810
ಬಿಳಿಗೋಟು	26596-36825
ಚಾಲಿ	37608-42800
ಕೆಂಪುಗೋಟು	28296-37899
ರಾಶಿ	45150-51099
ಯಲ್ಲಾಪುರ	
ಬಿಳಿಗೋಟು	28899-37499
ಚಾಲಿ	39069-42700
ಕೋಕ	21269-36612
ಕೆಂಪುಗೋಟು	31718-36899
ರಾಶಿ	48139-53900
ತಟ್ಟಿಬೆಟ್ಟೆ	40199-48019

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14000	14000	13850	159.90 ಸೆಂಟ್ಸ್
ಎಸಿ	7140	6800	6950	
ಆರ್‌ಪಿ	10200	10300	10250	ಲಂಡನ್
ಆರ್‌ಸಿ	6230	250	6000	2666 ಡಾಲರ್ಸ್

ಕೇಂದ್ರದಿಂದ ₹3,610 ಕೋಟಿ ಅನುದಾನ: ಸಚಿವ ಅಶ್ವಿನಿ ವೈಷ್ಣವ್

ರಾಜ್ಯದ ರೈಲು ಪ್ರಯಾಣಿಕರಿಗೆ ಸೌಲಭ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ರಾಜ್ಯದಲ್ಲಿ ಹಾದುಹೋಗಿರುವ ನಾಲ್ಕು ವಲಯಗಳಲ್ಲಿ ಪ್ರಯಾಣಿಕರಿಗೆ ಸೌಲಭ್ಯ ಕಲ್ಪಿಸಲು ಈ ವರ್ಷ ₹3,610 ಕೋಟಿ ಅನುದಾನ ಒದಗಿಸಲಾಗುತ್ತಿದೆ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

ರಾಜ್ಯಸಭೆಯಲ್ಲಿ ಬಿಜೆಪಿಯ ಸದಸ್ಯ ನಾರಾಯಣ ಕೊರಗಪ್ಪ ಶುಕ್ರವಾರ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಅಮೃತ ಭಾರತ ರೈಲು ನಿಲ್ದಾಣ ಯೋಜನೆ ಸೇರಿದಂತೆ ಪ್ರಯಾಣಿಕರಿಗೆ ಸೌಕರ್ಯಗಳನ್ನು ಒದಗಿಸಲು ಈ ಅನುದಾನ ಮೀಸಲಿಡಲಾಗಿದೆ' ಎಂದು ತಿಳಿಸಿದರು.

ಅಮೃತ ಭಾರತ ನಿಲ್ದಾಣ ಯೋಜನೆಯಡಿ ರಾಜ್ಯದ 56 ನಿಲ್ದಾಣಗಳನ್ನು ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ. ಇದು ದೀರ್ಘಾವಧಿ ಯೋಜನೆಯಾಗಿದ್ದು, ಹಂತ ಹಂತವಾಗಿ ನಿಲ್ದಾಣಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಅವರು ಹೇಳಿದರು.

ವಂದೇ ಭಾರತ್ ಎಕ್ಸ್‌ಪ್ರೆಸ್ ಅನ್ನು ಬೆಳಗಾವಿಗೆ ವಿಸ್ತರಿಸಲು ಅಡ್ಡಿಯಾಗಿರುವ ನಿರ್ದಿಷ್ಟ ತಾಂತ್ರಿಕ ತೊಂದರೆಗಳನ್ನು ಸರ್ಕಾರ ಗುರುತಿಸಿದೆಯೇ ಎಂಬ ಬಿಜೆಪಿಯ ಸದಸ್ಯ ಈರಣ್ಣ ಕಡಾಡಿ ಪ್ರಶ್ನೆಗೆ ಉತ್ತರಿಸಿರುವ ಸಚಿವರು, 'ಬೆಳಗಾವಿಯು ಮುಂಬೈ ಹಾಗೂ ಬೆಂಗಳೂರು ಪ್ರದೇಶಕ್ಕೆ ಕ್ರಮವಾಗಿ 11 ಹಾಗೂ 15 ರೈಲು ಸೇವೆಗಳ ಮೂಲಕ ಸಂಪರ್ಕ ಹೊಂದಿದೆ.

ಆದರೂ, ವಂದೇ ಭಾರತ್ ರೈಲುಗಳ ಸೇವೆ ಸೇರಿದಂತೆ ಹೊಸ ರೈಲುಗಳ ಸೇರ್ಪಡೆ ನಿರಂತರ ಪ್ರಕ್ರಿಯೆ. ಕಾರ್ಯಾಚರಣೆಯ ಕಾರ್ಯಸಾಧ್ಯತೆ, ಪ್ರಯಾಣಿಕರ ದಟ್ಟಣೆ ಗಮನದಲ್ಲಿಟ್ಟುಕೊಂಡು ಈ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ತಿಳಿಸಿದರು.

ಬೆಳಗಾವಿ-ಬೆಂಗಳೂರು ನಡುವಣ 610 ಕಿ.ಮೀ. ಉದ್ದದ ರೈಲು ಮಾರ್ಗ ಸಂಪೂರ್ಣ ವಿದ್ಯುದೀಕರಣವಾಗಿದೆ. ಮುಂಬೈ-ಬೆಳಗಾವಿ ನಡುವಣ 596 ಕಿ.ಮೀ ಪೈಕಿ 505 ಕಿ.ಮೀ. ವಿದ್ಯುದ್ದೀಕರಣ ಆಗಿದೆ ಎಂದು ಅವರು ಮಾಹಿತಿ ನೀಡಿದರು.

ರಾಜ್ಯದಲ್ಲಿ ಗ್ರಾಹಕರ ಸೌಕರ್ಯಕ್ಕೆ ರೈಲ್ವೆಗೆ ಹಂಚಿಕೆ
ಮೊತ್ತ (₹ಕೋಟಿಗಳಲ್ಲಿ)

ಕೇಂದ್ರ	937
ದಕ್ಷಿಣ	1,242
ದಕ್ಷಿಣ ಕೇಂದ್ರ	962
ನೈರುತ್ಯ	469
ಒಟ್ಟು	3,610



11 ಅಂಚೆ ಕಚೇರಿಗಳಿಗೆ ಇಂಟರ್‌ನೆಟ್ ಇಲ್ಲ

ಉತ್ತರ ಕನ್ನಡ ಜಿಲ್ಲೆಯ 11 ಶಾಖಾ ಅಂಚೆ ಕಚೇರಿಗಳು ಮೊಬೈಲ್ ನೆಟ್‌ವರ್ಕ್ ಅಥವಾ ಇಂಟರ್‌ನೆಟ್ ಸಂಪರ್ಕ ಹೊಂದಿಲ್ಲ ಎಂದು ಸಂಪರ್ಕ ಸಚಿವಾಲಯ ತಿಳಿಸಿದೆ. ರಾಜ್ಯಸಭೆಯಲ್ಲಿ ಬಿಜೆಪಿಯ ನಾರಾಯಣ ಕೊರಗಪ್ಪ ಪ್ರಶ್ನೆಗೆ ಇಲಾಖೆಯ ರಾಜ್ಯ ಸಚಿವ ದೇವುಸಿಂಗ್ ಚೌಹಾಣ್ ಉತ್ತರಿಸಿ, 'ಈ ಅಂಚೆ ಕಚೇರಿಗಳಿಗೆ ದೂರಸಂಪರ್ಕ ಇಲಾಖೆಯ ಜತೆಗೂಡಿ ಮೊಬೈಲ್ ಅಥವಾ ಇಂಟರ್‌ನೆಟ್ ಸಂಪರ್ಕ ಒದಗಿಸಲಾಗುವುದು' ಎಂದರು.

ಸಿಖ್ ಪೊಲೀಸ್ ಅಧಿಕಾರಿ ಗಡ್ಡ ಬೆಳೆಸಲು ನಿರ್ಬಂಧ: ಆಕ್ಷೇಪ

ನ್ಯೂಯಾರ್ಕ್ (ಪಿಟಿಐ): ನ್ಯೂಯಾರ್ಕ್ ರಾಜ್ಯದ ಪೊಲೀಸ್ ಇಲಾಖೆಯ ಹಿರಿಯ ಶ್ರೇಣಿಯ ಸಿಖ್ ಅಧಿಕಾರಿಗೆ ಗಡ್ಡ ಬೆಳೆಸುವುದಕ್ಕೆ ನಿರ್ಬಂಧ ಹೇರಿರುವುದಕ್ಕೆ ವಾಷಿಂಗ್ಟನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಆಕ್ಷೇಪ ವ್ಯಕ್ತಪಡಿಸಿದೆ.

ಪೊಲೀಸ್ ಅಧಿಕಾರಿ ಚರಣ್‌ಜೋತ್ ತಿವಾನ ಎಂಬವರು ತಮ್ಮ ಮದುವೆಗಾಗಿ ಗಡ್ಡ ಬೆಳೆಸಲು ಅನುಮತಿ ಕೋರಿದ್ದರು. ಅನುಮತಿ ನಿರಾಕರಿಸಿದ ಪೊಲೀಸ್ ಇಲಾಖೆಯು, ಅಗತ್ಯ ಸಂದರ್ಭಗಳಲ್ಲಿ ಗ್ಯಾಸ್ ಮಾಸ್ಕ್ ಬಳಸಬೇಕಾದರೆ ಇದರಿಂದ ಅಪಾಯವುಂಟಾಗಬಹುದು ಎಂದು ಕಾರಣ ನೀಡಿತ್ತು.

ಈ ವಿಚಾರವನ್ನು ಭಾರತ ಮೂಲದ ಅಧಿಕಾರಿಗಳು ನ್ಯೂಯಾರ್ಕ್ ಸ್ಟೇಟ್ ಗವರ್ನರ್ ಅವರ ಗಮನಕ್ಕೆ ತಂದಿದ್ದರು. ಅಮೆರಿಕದಲ್ಲಿನ ಭಾರತದ ರಾಯಭಾರಿ ತರಣ್‌ಜಿತ್ ಸಿಂಗ್ ಸಂಧು ಅವರು ಕೂಡ ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದು, ಈ ವಿಷಯವನ್ನು ಹಿರಿಯ ಅಧಿಕಾರಿಗಳಿಗೆ ತಿಳಿಸಿದ್ದರು.

ಪೊಲೀಸ್ ಇಲಾಖೆಯ ನಡೆಗೆ ವಿರೋಧ ವ್ಯಕ್ತಪಡಿಸಿರುವ ನ್ಯೂಯಾರ್ಕ್ ರಾಜ್ಯದ ಕ್ವೀನ್ಸ್ ಕ್ಷೇತ್ರದ ಪ್ರತಿನಿಧಿ ಡೇವಿಡ್ ವೆಪ್ರಿನ್, 'ಇದು ಧಾರ್ಮಿಕ ತಾರತಮ್ಯ' ಎಂದಿದ್ದಾರೆ. 'ಇಂತಹ ತಾರತಮ್ಯ ಧೋರಣೆಯು ಕಾನೂನಿನ ಉಲ್ಲಂಘನೆಯಾಗಿದ್ದು, ಚರಣ್‌ಜೋತ್ ಅವರಿಗೆ ಗಡ್ಡ ಬೆಳೆಸಲು ಅನುಮತಿ ನೀಡಬೇಕು' ಎಂದು ಸಾಮಾಜಿಕ ಮಾಧ್ಯಮ 'ಎಕ್ಸ್' (ಟ್ವಿಟರ್)ನಲ್ಲಿ ಹೇಳಿದ್ದಾರೆ.

ಬುದ್ಧಮಾರ್ಗದಲ್ಲಿ ಬೈಕ್ ಜಾಥಾ

ಕೊಲಂಬೊ (ಪಿಟಿಐ): ನೇಪಾಳದ ಲುಂಬಿನಿಯಲ್ಲಿರುವ ಬುದ್ಧನ ಜನ್ಮಸ್ಥಳದಿಂದ ಆರಂಭಿಸಿ ಭಾರತ ಮತ್ತು ಶ್ರೀಲಂಕಾದಲ್ಲಿರುವ ಬೌದ್ಧರ ಪ್ರಾರ್ಥನಾ ಸ್ಥಳಗಳ ಸರ್ಕಿಟ್‌ನಲ್ಲಿ ಬೈಕ್ ಜಾಥಾ ಕಾರ್ಯಕ್ರಮವನ್ನು ಡಿಸೆಂಬರ್ ತಿಂಗಳಲ್ಲಿ ನಡೆಸಲು ಯೋಜಿಸಲಾಗಿದೆ.

ಭಾರತ, ಶ್ರೀಲಂಕಾ, ನೇಪಾಳದ ಸೇನೆಗಳ ಯೋಧರು ಜಾಥಾದಲ್ಲಿ ಭಾಗವಹಿಸುವರು ಎಂದು ಮಾಧ್ಯಮ ವರದಿಯೊಂದು ತಿಳಿಸಿದೆ. ಭಾರತದ ಕುಶಿನಗರ, ಬೋಧಗಯಾ, ಶ್ರಾವಸ್ಥಿ, ಸಾರಾನಾಥ, ಸಂಕಸ್ಸ ಮತ್ತಿತರ ಪ್ರದೇಶಗಳ ಮೂಲಕ ಈ ಜಾಥಾವು ಹಾದುಹೋಗಲಿದೆ.

ಮಹಾರಾಷ್ಟ್ರದಲ್ಲಿರುವ ಅಜಂತಾ, ಎಲ್ಲೋರಾ ಕಣಿವೆಗೂ ಭೇಟಿ ನೀಡಲಿದ್ದು, ರಾಮೇಶ್ವರದಿಂದ ಮನ್ನಾರ್‌ವರೆಗೆ ಸಮುದ್ರ ಮಾರ್ಗದಲ್ಲಿ ಹಡಗಿನಲ್ಲಿ ತೆರಳಲಿದೆ. ಆ ನಂತರ ಕೊಲಂಬೊವರೆಗೂ ರಸ್ತೆ ಮೂಲಕ ಬೈಕ್ ಜಾಥಾ ಮುಂದುವರಿಯಲಿದೆ.

ಒನ್ ಯೂನಿವರ್ಸ್ ಸಂಘಟನೆಯು ಈ ಜಾಥಾವನ್ನು ಆಯೋಜಿಸಿದೆ. ಸಂಘಟನೆಯ ಪ್ರತಿನಿಧಿಗಳು ಶ್ರೀಲಂಕಾದ ಸ್ಪೀಕರ್ ಮಹಿಂದಾ ಯಪ ಅಬೆಯವರ್ಧನಾ, ಸಚಿವ ಬುದ್ಧಸಾಸನಾ, ಸಂಸ್ಕೃತಿ ವ್ಯವಹಾರಗಳ ಸಚಿವ ವಿದುರ ವಿಕ್ರಮನಾಯಕೆ, ಯುವಜನ ಮತ್ತು ಕ್ರೀಡಾ ಸಚಿವ ರೋಹನ ದಿಸ್ಸನಾಯಕ ಅವರೊಂದಿಗೆ ಚರ್ಚಿಸಿದ್ದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,00020,000/ ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಪ್ರಜಾವಾಣಿ ಕ್ಲಾಸಿಫೈಡ್ಸ್ ಕೆಲಸ ಹುಡುಕಾಟ
ಪ್ರತಿಯೊಬ್ಬರಿಗೂ ಉಪಯುಕ್ತ
ನಿಮ್ಮ ನೇಮಕಾತಿ ಅಗತ್ಯಗಳಿಗೆ ಪೂರಕ ವೇದಿಕೆ
ನಿಮ್ಮ ಕಂಪನಿಗೆ ಸೂಕ್ತವಾದ ಅಭ್ಯರ್ಥಿಗಳನ್ನು ಪಡೆಯಿರಿ...
ಈಗಲೇ ನಿಮ್ಮ ಜಾಹೀರಾತು ಬುಕ್ ಮಾಡಿರಿ!
ಬುಕ್ ಮಾಡಿ
www.dhclassifieds.com
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331
+91 9845114560
+91 9731810277
+91 9901641752
+91 9900428036
080- 45557163/164

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಭವಿಷ್ಯ

Astrology

ಒಂದೇಕರೆಯಲ್ಲಿ ಶಾಶ್ವತ ಪರಿಹಾರ, ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್100% ಗ್ಯಾರಂಟಿ ಪರಿಹಾರ. ಪಂಡಿತ್. ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ,ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರ ಧರ್ಮಸ್ಥಳ:9880788899

ಸ್ತ್ರೀವಶೀಕರಣ, ಪುರುಷವಶೀಕರಣ, ಪ್ರೀತಿಪ್ರೇಮ, ಇಷ್ಟಪಟ್ಟವರು ನಿಮ್ಮಂತಾಗಲು 11ಗಂಟೆಗಳಲ್ಲಿ ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9448687421

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರವಾಸ

Travel

ಸಪ್ಟೆಂಬರ್ ಅಕ್ಟೋಬರ್ ನವೆಂಬರ್ ಡಿಸೆಂಬರ್ ಕಾಶಿಯಾತ್ರೆ 6 ದಿನಗಳು. ಉತ್ತರಭಾರತ ಪ್ರವಾಸ 11 ದಿನಗಳು. ಗುಜರಾತ್ ಪ್ರವಾಸ 11 ದಿನಗಳು. ಗುಜರಾತ್/ಮಧ್ಯಪ್ರದೇಶ ಪ್ರವಾಸ 12 ದಿನಗಳು ರಾಜಸ್ಥಾನ್ ಪ್ರವಾಸ 11 ದಿನಗಳು. ಮಧ್ಯಪ್ರದೇಶ ಪ್ರವಾಸ 12 ದಿನಗಳು. ಪುರಿ,ಕಲ್ಕತ್ತಾ ಡಾರ್ಜಲಿಂಗ 11 ದಿನಗಳು. ಚಾರ್‌ಧಾಮ್ ಯಾತ್ರೆ 13 ದಿನಗಳು. ಕಾಶ್ಮೀರ್,ವೈಷ್ಣೋದೇವಿ 9 ದಿನಗಳು. ಶಿಮ್ಲಾ,ಮನಾಲಿ ಪ್ರವಾಸ 7 ದಿನಗಳು. ದಕ್ಷಿಣಕನ್ನಡ ಗೋವಾ,ಕೇರಳ ತಮಿಳುನಾಡು,ಶಿರಡಿ ಪ್ರತಿ ತಿಂಗಳು ನಿಗದಿಯಂತೆ ಪ್ರಯಾಣ ಸಂಪರ್ಕಿಸಿ: ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ ವಿಜಯನಗರ,ಬೆಂಗಳೂರು 9880847001 9342848791

10/09/2023/10/10/2023 6ದಿನಗಳು ಕಾಶಿ,ಗಯಾ ಬುದ್ಧಗಯಾ ಅಯೋಧ್ಯ ಅಲಹಾಬಾದ್24000/ಪ್ರತಿ ತಿಂಗಳು ಅಂಡಮಾನ್ ಹವಳದ್ವೀಪ 5/8ದಿನಗಳು ಹಡಗು/ವಿಮಾನದಲ್ಲಿ ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9845560219/ 9739847429

ಏಷ್ಯನ್ ಟ್ರಾವೆಲ್ ಏಜೆನ್ಸಿ ಮಿನರ್ವ ಸರ್ಕಲ್ ಬೆಂಗಳೂರು ವತಿಯಿಂದ ವಿಮಾನ/ A/C ಬಸ್ ರೂಮ್ ಸೌಲಭ್ಯದೊಂದಿಗೆ 29.09.2023 19.10.2023 ಸೋಮನಾಥ್ ದ್ವಾರಕಾ, ಮಹಾಕಾಳೇಶ್ವರ,ಓಂಕಾರೇಶ್ವರ. 23.09.2023 26.10.2023 ಕಾಶಿ,ನೈಮಿಶಾರಣ್ಯ ಕಠ್ಮಂಡು,ಪೋಖ್ರಾ,ಮುಕ್ತಿನಾಥ ಆಂಧ್ರ ಪ್ರವಾಸಗಳಿಗೆ ಸಂಪರ್ಕಿಸಿ. 26574131 7204173686, 9686708171

WEEKEND CORNER

ಟ್ರೀಲ್ಯಾಂಡ್ಸ್ ಪ್ರಾಡಕ್ಟ್ಸ್ ಅಂಡ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು
(ನಿವೃತ್ತ ಅರಣ್ಯಾಧಿಕಾರಿಗಳ ಸಂಸ್ಥೆ)
ನೀವು ಮಾರಲು ಉದ್ದೇಶಿಸಿದ ಮರಗಳ ದರವನ್ನು ತಿಳಿಯಿರಿ.
ಮಧ್ಯವರ್ತಿಗಳ ಸುಲಿಗೆಯಿಂದ ಪಾರಾಗಿರಿ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
080–23464866
082172 82396

20.09.2023 17.11.2023 02.12.2023 ಸಿಂಗಾಪುರ್ ಮಲೇಶಿಯಾ,ಥೈಲ್ಯಾಂಡ್ 7/11 ದಿನಗಳು. 04.11.2023 22.11.2023 08.12.2023 ದುಬೈ 5 ದಿನಗಳು. 21.09.2023 27.10.2023 06.12.2023 ನೇಪಾಳ 9 ದಿನಗಳು. 06.10.2023 23.12.2023 ಭೂತಾನ್ 8 ದಿನಗಳು. 09.10.2023 17.11.2023 11.12.2023 ಶ್ರೀಲಂಕಾ 6 ದಿನಗಳು. 04.10.2023 22.11.2023 06.12.2023 ರಾಜಸ್ಥಾನ್ 9 ದಿನಗಳು. 27.10.2023 25.11.2023 12.12.2023 ಗುಜರಾತ್ 8 ದಿನಗಳು. 18.09.2023 06.10.2023 02.12.2023 ಕಾಶಿ,ಗಯಾ,ಅಲಹಾಬಾದ್ 8 ದಿನಗಳು. 07.10.2023 04.11.2023 ದೆಹಲಿ,ಆಗ್ರಾ,ಜೈಪುರ್ 6 ದಿನಗಳು. 27.10.2023 27.11.2023 ಅಸ್ಸಾಂ,ಮೇಘಾಲಯ 9 ದಿನಗಳು ಸಂಪರ್ಕಿಸಿ: ಜೈನ್ ಟ್ರಾವೆಲ್ಸ್ ಬೆಂಗಳೂರು.03 9448402248 7022547922

11/09/2023ರಿಂದ 13ದಿನಗಳ ಚಾರುಧಾಮ್ ಸಮೇತ ಹರಿದ್ವಾರ ಋಷಿಕೇಶ್,ಮಸ್ಸೂರಿ, ಮಾಣ, ಗುಪ್ತಾಕಾಶಿ 04/10/2023 ರಿಂದ 9ದಿನಗಳ ಕಾಶಿ,ಬೈದ್ಯನಾಥೇಶ್ವರ,ಗಯಾ,ನೈಮಿಷಾರಣ್ಯ, ಇತ್ಯಾದಿ 2/11/2023 -9/11/2023ರಿಂದ ಪಂಚರಾಮಕ್ಷೇತ್ರ ಸಮೇತ ಅನ್ನವರಮ್,ಭದ್ರಾಚಲಂ, ದ್ವಾರಕಾ,ತಿರುಮಲ, ವಿಜಯವಾಡ.-ವಿವರಗಳಿಗೆ: ಏಷ್ಯನ್ ಟ್ರಾವೆಲ್ ಲೈನ್ಸ್. 164/3,ಆರ್.ವಿ.ರಸ್ತೆ: 8105657052/ 9480182865

ವೈಯಕ್ತಿಕ

Change of Name

I HEREBY attest through a sworn affidavit that my complete name is Chethana Belthur Shivalingaiah (Chethana B S), correcting a prior error where it was incorrectly printed as Chethana Shivalingaiah.

ಭಾರತದ ಒಗ್ಗಟ್ಟು, ಸಾರ್ವಭೌಮತೆ, ಏಕತೆಗೆ ಧಕ್ಕೆ ತರುವ ಕೃತ್ಯಗಳು ಎಂದು ಬದಲಾವಣೆ

‘ದೇಶದ್ರೋಹ’ಕ್ಕೆ ಮರುನಾಮಕರಣ

● ಜಯಸಿಂಹ ಆರ್.

ಬೆಂಗಳೂರು: ಬ್ರಿಟಿಷರ ಕಾಲದ ದೇಶದ್ರೋಹದ ಕಾನೂನನ್ನು, ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಸಂಪೂರ್ಣವಾಗಿ ತೆಗೆದುಹಾಕ ಲಾಗುತ್ತದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಲೋಕಸಭೆಯಲ್ಲಿ ಹೇಳಿದ್ದಾರೆ. ಆದರೆ, ಭಾರತೀಯ ದಂಡ ಸಂಹಿತೆಯಲ್ಲಿ ಇದ್ದ 124ಎ ಸೆಕ್ಷನ್ ಅನ್ನು, ಭಾರತೀಯ ನ್ಯಾಯ ಸಂಹಿತೆಯಲ್ಲಿ 150ನೇ ಸೆಕ್ಷನ್‌ಗೆ ಸೇರಿಸಲಾಗಿದೆ. ‘ದೇಶದ್ರೋಹ’ ಎಂಬುದನ್ನು ‘ಭಾರತದ ಒಗ್ಗಟ್ಟು, ಸಾರ್ವಭೌಮತೆ ಮತ್ತು ಏಕತೆಗೆ ಧಕ್ಕೆ ತರುವಂತಹ ಕೃತ್ಯಗಳು’ ಎಂದು ಬದಲಿಸಲಾಗಿದೆ.

ಸರ್ಕಾರದ ಕ್ರಮಗಳು, ಚಟುವಟಿಕೆ-ಗಳನ್ನು ಟೀಕಿಸುವುದನ್ನು ದೇಶದ್ರೋಹ ಎನ್ನಲಾಗದು ಎಂದು ಭಾರತೀಯ ದಂಡ ಸಂಹಿತೆಯಲ್ಲಿ ವಿವರಿಸ ಲಾಗಿತ್ತು. ಆದರೆ, ಭಾರತೀಯ ನ್ಯಾಯ ಸಂಹಿತೆಯಲ್ಲಿ ಸರ್ಕಾರದ ಕ್ರಮಗಳ ವಿರುದ್ಧದ ಟೀಕೆ ಮತ್ತು ಆಗ್ರಹಗಳನ್ನೂ ‘ಭಾರತದ ಒಗ್ಗಟ್ಟು, ಸಾರ್ವಭೌಮತೆ ಮತ್ತು ಏಕತೆಗೆ ಧಕ್ಕೆ ತರುವಂತಹ ಕೃತ್ಯಗಳು’ ಎಂದು ವಿವರಿಸಲಾಗಿದೆ. ಈ ಮೂಲಕ ಈ ಕಾನೂನನ್ನು ಮತ್ತಷ್ಟು ಕಠಿಣಗೊಳಿಸಲು ನೂತನ ನ್ಯಾಯ ಸಂಹಿತೆ ಮಸೂದೆಯು ಅವಕಾಶ ಮಾಡಿಕೊಟ್ಟಿದೆ.

ಭಾರತೀಯ ದಂಡ ಸಂಹಿತೆಯ 124ಎ ಸೆಕ್ಷನ್ ಅಡಿಯಲ್ಲಿ ವಿವರಿಸುವ ಕೃತ್ಯಗಳನ್ನು ‘ದೇಶದ್ರೋಹ’ದ ಕೃತ್ಯಗಳು ಎಂದು ಕರೆಯಲಾಗುತ್ತಿದೆ. ಈ ಸೆಕ್ಷನ್‌ನಲ್ಲಿ, ‘ಲಿಖಿತ ಅಥವಾ ಮೌಖಿಕವಾಗಿ ಅಥವಾ ಸಂಜ್ಞೆ ಅಥವಾ ಪ್ರದರ್ಶನದ ಮೂಲಕ, ಭಾರತ ಸರ್ಕಾರದ ವಿರುದ್ಧ ದ್ವೇಷ ಅಥವಾ ನಿಂದನೆ ಅಥವಾ ಅಸಮಾಧಾನ ಉಂಟುಮಾಡುವ ಹಾಗೂ ಅಂತಹ ಯತ್ನಗಳನ್ನು ಶಿಕ್ಷಾರ್ಹ ಅಪರಾಧ’ ಎಂದು ಪರಿಗಣಿಸಲಾಗುತ್ತದೆ. ಇಂತಹ ಕೃತ್ಯಗಳಿಗೆ ಜೀವಿತಾವಧಿ ಶಿಕ್ಷೆ ಮತ್ತು ದಂಡ ಅಥವಾ ಮೂರು ವರ್ಷಗಳವರೆಗೆ ಶಿಕ್ಷೆ ಮತ್ತು ದಂಡ ವಿಧಿಸಲು ಅವಕಾಶವಿದೆ. ನೂತನ ಭಾರತೀಯ ನ್ಯಾಯ ಸಂಹಿತೆ ಮಸೂದೆಯಲ್ಲಿ 124ಎ ಸೆಕ್ಷನ್ ಅನ್ನು ಕೈಬಿಡಲಾಗಿದೆ. ಈ ಸೆಕ್ಷನ್ ಅಡಿಯಲ್ಲಿದ್ದ ವಿವರಗಳನ್ನು ಹೊಸದಾಗಿ ರೂಪಿಸಲಾಗಿರುವ 150ನೇ ಸೆಕ್ಷನ್‌ಗೆ ಸೇರಿಸಲಾಗಿದೆ.

124ಎ ಸೆಕ್ಷನ್ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳು ಎಂದು ಹೆಸರಿಸಿದ್ದ ಕೃತ್ಯಗಳ ಸಂಖ್ಯೆಯನ್ನು ಭಾರತೀಯ ದಂಡ ಸಂಹಿತೆಯ 150ನೇ ಸೆಕ್ಷನ್‌ನಲ್ಲಿ ಹೆಚ್ಚಿಸಲಾಗಿದೆ. ಭಾರತೀಯ ನ್ಯಾಯ ಸಂಹಿತೆಯ 150ನೇ ಸೆಕ್ಷನ್ ಅಡಿಯಲ್ಲಿ, ಪ್ರತ್ಯೇಕತಾವಾದ ಅಥವಾ ಪ್ರತ್ಯೇಕತಾ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು ಅಥವಾ ಸಶಸ್ತ್ರ ಬಂಡಾಯ ಅಥವಾ ಸರ್ಕಾರಕ್ಕೆ ಧಕ್ಕೆ ತರುವಂತಹ ಚಟುವಟಿಕೆಗಳು ಅಥವಾ ಸಾರ್ವಭೌಮತೆಗೆ ಧಕ್ಕೆ ತರುವುದು ಅಥವಾ ಭಾರತದ ಏಕತೆಗೆ ಧಕ್ಕೆ ತರುವಂತಹ ಕೃತ್ಯಗಳು ಅಪರಾಧ ಕೃತ್ಯಗಳಾಗುತ್ತವೆ. ಅಂತಹ ಕೃತ್ಯಗಳು ಮೌಖಿಕ ಸ್ವರೂಪದ್ದು ಅಥವಾ ಬರಹದ ರೂಪದಲ್ಲಿ ಇರಬಹುದು ಅಥವಾ ಸಂಜ್ಞೆ ಅಥವಾ ಪ್ರದರ್ಶನ ಅಥವಾ ವಿದ್ಯುನ್ಮಾನ ಸಂವಹನ ಅಥವಾ ಆರ್ಥಿಕ ರೂಪದಲ್ಲಿ ಇರಬಹುದು ಎಂದು ಈ ಸೆಕ್ಷನ್ ಅಡಿಯಲ್ಲಿ ವಿವರಿಸಲಾಗಿದೆ. ಇಂತಹ ಕೃತ್ಯಗಳಿಗೆ ಜೀವಿತಾವಧಿ ಶಿಕ್ಷೆ ಅಥವಾ ಗರಿಷ್ಠ ಏಳು ವರ್ಷಗಳ ಸೆರೆವಾಸದ ಜತೆಗೆ ದಂಡ ವಿಧಿಸಲೂ ಈ ಸೆಕ್ಷನ್ ಅವಕಾಶ ಮಾಡಿಕೊಡುತ್ತದೆ.

ಪಕ್ಷದ ನಾಯಕ ಅಧೀರ್ ರಂಜನ್ ಚೌಧರಿ ಅವರನ್ನು ಅಮಾನತುಗೊಳಿಸಿರುವುದನ್ನು ಖಂಡಿಸಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಅವರೊಂದಿಗೆ ಶುಕ್ರವಾರ ವಿಪಕ್ಷ ನಾಯಕರು ಸಂಸತ್ ಆವರಣ ದಲ್ಲಿರುವ ಬಿ.ಆರ್‌.ಅಂಬೇಡ್ಕರ್ ಪ್ರತಿಮೆ ಎದುರು ಪ್ರತಿಭಟನೆ ನಡೆಸಿದರು ಚಿತ್ರ –ಪಿಟಿಐ

ಭಾರತೀಯ ದಂಡ ಸಂಹಿತೆ: 124ಎ ಸೆಕ್ಷನ್

ಸರ್ಕಾರದ ಕ್ರಮಗಳು, ಸರ್ಕಾರದ ಆಡಳಿತಾತ್ಮಕ ನಡೆ ಅಥವಾ ಕ್ರಿಯೆಗಳು ಕಾನೂನುಬದ್ಧವಾಗಿಯೇ ಬದಲಾಗಬೇಕು ಎಂದು ಬಯಸಿ ಆ ಬಗ್ಗೆ ತೀವ್ರ ಅಸಮ್ಮತಿ ವ್ಯಕ್ತಪಡಿಸುವುದು, ಆ ಕಾರಣದಿಂದ ದ್ವೇಷ ಅಥವಾ ನಿಂದನೆ ಅಥವಾ ಅತೃಪ್ತಿಯನ್ನು ಉದ್ದೀಪಿಸದೇ ಇರುವಂತಹ ಕೃತ್ಯಗಳು ಅಥವಾ ಯತ್ನಗಳು ಈ ಸೆಕ್ಷನ್ ಅಡಿಯಲ್ಲಿ ಅಪರಾಧ ಕೃತ್ಯ ಎನಿಸಿಕೊಳ್ಳುವುದಿಲ್ಲ

ಭಾರತೀಯ ನ್ಯಾಯ ಸಂಹಿತೆ: 150ನೇ ಸೆಕ್ಷನ್

ಸರ್ಕಾರದ ಆಡಳಿತಾತ್ಮಕ ಅಥವಾ ಇತರ ಕ್ರಮಗಳಲ್ಲಿ ಕಾನೂನುಬದ್ಧವಾಗಿ ಬದಲಾವಣೆ ಬಯಸಿ ನೀಡಲಾಗುವ ಅಭಿವ್ಯಕ್ತಿಗಳು ಮೇಲೆ ಹೇಳಲಾದ ಕೃತ್ಯಗಳನ್ನು ಎಸಗುವಂತೆ ಉದ್ದೀಪಿಸಿದರೆ ಅಥವಾ ಉದ್ದೀಪಿಸುವ ಯತ್ನಗಳು ಈ ಸೆಕ್ಷನ್ ಅಡಿ ಬರುತ್ತವೆ

150ನೇ ಸೆಕ್ಷನ್

- ಸೆಕ್ಷನ್ ಅಡಿ ಇನ್ನಷ್ಟು ಕೃತ್ಯಗಳಿಗೆ ಅಪರಾಧದ ಪಟ್ಟ
- ಸೆಕ್ಷನ್ ಅಡಿಯಲ್ಲಿ ಶಿಕ್ಷೆಯ ಪ್ರಮಾಣ ಹೆಚ್ಚಳ
- ಸರ್ಕಾರದ ವಿರುದ್ಧದ ಆಗ್ರಹಗಳೂ ಅಪರಾಧಗಳಾಗಲಿವೆ

ಗದ್ದಲದ ನಡುವೆಯೇ ಸಂಸತ್ತಿನ ಮುಂಗಾರು ಅಧಿವೇಶನ ಅಂತ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಣಿಪುರ ಹಿಂಸಾಚಾರಕ್ಕೆ ಸಂಬಂಧಿಸಿ ಪ್ರಧಾನಿ ಮೋದಿ ಅವರು ವಿಸ್ತೃತ ಹೇಳಿಕೆ ನೀಡಬೇಕೆಂಬ ವಿಪಕ್ಷಗಳ ಬೇಡಿಕೆಯು ಆಡಳಿತ ಪಕ್ಷಗಳು ಮತ್ತು ವಿಪಕ್ಷಗಳ ಸದಸ್ಯರ ನಡುವೆ ಭಾರಿ ಗದ್ದಲಕ್ಕೆ ಸಾಕ್ಷಿಯಾಗಿ ಸಂಸತ್ ಮುಂಗಾರು ಅಧಿವೇಶನ ಶುಕ್ರವಾರ ಕೊನೆಗೊಂಡಿತು. ಉಭಯ ಸದನಗಳ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು.

ಮಣಿಪುರ ವಿಷಯಕ್ಕೆ ಸಂಬಂಧಿಸಿದಂತೆ ಪ್ರಧಾನಿಯಿಂದ ವಿಸ್ತೃತ ಹೇಳಿಕೆ ಬಯಸಿದ್ದ ವಿರೋಧ ಪಕ್ಷಗಳು, ಪ್ರಧಾನಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದ್ದವು.ಅವಿಶ್ವಾಸ ನಿರ್ಣಯಕ್ಕೆ ಸಂಬಂಧಿಸಿದಂತೆ 60 ಸಂಸದರು ಸುಮಾರು 20 ತಾಸು ಚರ್ಚೆ ನಡೆಸಿದ್ದರು.

ರಾಜ್ಯಸಭೆಯಲ್ಲಿ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡುವ ಮೊದಲು ಮಣಿಪುರದ ಪರಿಸ್ಥಿತಿಯ ಕುರಿತು ಪ್ರಧಾನಿ ಹೇಳಿಕೆಯ ಬಗ್ಗೆ ಚರ್ಚೆಗೆ ಪ್ರತಿಪಕ್ಷಗಳು ಒತ್ತಾಯಿಸಿದವು. ಆದರೆ, ಆಡಳಿತ ಪಕ್ಷವು ಗೃಹ ಸಚಿವರ ಉತ್ತರದೊಂದಿಗೆ ಅಲ್ಪಾವಧಿ ಚರ್ಚೆಗೆ ಪಟ್ಟುಹಿಡಿಯಿತು. ಅಂತಿಮ ದಿನವೂ ರಾಜ್ಯಸಭೆಯಲ್ಲಿ ಗದ್ದಲ ಮುಂದುವರಿಯಿತು. ಉದ್ದೇಶಪೂರ್ವಕ ಮತ್ತು ಪುನರಾವರ್ತಿತ ದುರ್ವರ್ತನೆ-ಗಾಗಿ ಆಮ್ ಆದ್ಮಿ ಪಕ್ಷದ ಸಂಸದರಾದ ಸುಶೀಲ್ ಕುಮಾರ್ ರಿಂಕು, ರಾಘವ್ ಚಡ್ಡಾ ಅವರನ್ನು ಕಲಾಪದಿಂದ ಅಮಾನತು ಮಾಡಲಾಗಿದೆ.

ಸ್ಪೀಕರ್ ಓಂ ಬಿರ್ಲಾ ಅವರು ಮಾತನಾಡಿ, ಲೋಕಸಭೆಯಲ್ಲಿ 20 ಮಸೂದೆಗಳನ್ನು ಮಂಡಿಸಿದ್ದು, 22 ಮಸೂದೆಗಳನ್ನು ಅಂಗೀಕರಿಸ-ಲಾಯಿತು. ಲೋಕಸಭೆ ಕಲಾಪವು ಅಂದಾಜು ಶೇ 45ರಷ್ಟು ಫಲಪ್ರದ-ವಾಗಿದೆ ಎಂದು ಹೇಳಿದರು. ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಷಿ ಅವರು, ‘ಎರಡೂ ಸದನಗಳಲ್ಲಿ ಮಣಿಪುರದ ಚರ್ಚೆಗೆ ಸರ್ಕಾರ ಒಪ್ಪಿದರೂ ವಿಪಕ್ಷಗಳು ಒಪ್ಪಲಿಲ್ಲ. ವಿಷಯವನ್ನು ಚರ್ಚೆಗೆ ಪಟ್ಟಿಮಾಡಿದ ದಿನವೂ ವಿಪಕ್ಷಗಳು ಸದನಕ್ಕೆ ಬರಲಿಲ್ಲ. ಪ್ರತಿಪಕ್ಷಗಳು ವ್ಯತಿ-ರಿಕ್ತವಾಗಿ ನಡೆದುಕೊಂಡವು’ ಎಂದು ಆರೋಪಿಸಿದರು.

ರಾಜ್ಯಸಭೆಯಲ್ಲಿ 17 ದಿನಗಳ ಅಧಿವೇಶನದಲ್ಲಿ ಸುಮಾರು 45 ತಾಸು ಗದ್ದಲದಲ್ಲಿ ಕಲಾಪವು ಕಳೆದುಹೋಗಿದೆ. ಶೇ 63ರಷ್ಟು ಫಲಪ್ರದವಾಗಿದೆ.

ಪ್ರಮುಖ ಮಸೂದೆ ಮಂಡನೆ: ಅಧಿವೇಶನದ ಮತ್ತೊಂದು ಪ್ರಮುಖ ಅಂಶವೆಂದರೆ, ರಾಷ್ಟ್ರ ರಾಜಧಾನಿ ದೆಹಲಿ ಪ್ರದೇಶ ಸರ್ಕಾರ (ತಿದ್ದುಪಡಿ) ಮಸೂದೆ–2023 ಅಂಗೀಕಾರವಾಯಿತು. ಇದು ತೀವ್ರ ಚರ್ಚೆಯ ನಂತರ ಅಂಗೀಕರಿಸಲ್ಪಟ್ಟಿತು. ರಾಜ್ಯಸಭೆಯು ಅಂಗೀಕರಿಸಿದ ಇತರ ಪ್ರಮುಖ ಮಸೂದೆಗಳು ಡಿಜಿಟಲ್ ವೈಯಕ್ತಿಕ ಡೇಟಾ ಸಂರಕ್ಷಣಾ ಮಸೂದೆ, 2023, ಅಂತರ-ಸೇವೆಗಳ ಸಂಸ್ಥೆ (ಕಮಾಂಡ್, ನಿಯಂತ್ರಣ ಮತ್ತು ಶಿಸ್ತು) ಮಸೂದೆ ಮತ್ತು ಪತ್ರಿಕೆಗಳು ಮತ್ತು ನಿಯತಕಾಲಿಕಗಳ ನೋಂದಣಿ ಮಸೂದೆ–2023.

ಸರ್ಕಾರವು, ಮುಖ್ಯ ಚುನಾವಣಾ ಆಯುಕ್ತರು ಮತ್ತು ಚುನಾವಣಾ ಆಯುಕ್ತರು (ನೇಮಕಾತಿ, ಕರ್ತವ್ಯದ ನಿಬಂಧನೆಗಳು ಮತ್ತು ಅಧಿಕಾರಾವಧಿ) ಮಸೂದೆ–2023 ಅನ್ನು ರಾಜ್ಯಸಭೆಯಲ್ಲಿ ಮಂಡಿಸಿತು.

‘ದ್ವೇಷ ಭಾಷಣ ಒಪ್ಪಲಾಗದು’

ಒಂದನೇ ಪುಟದಿಂದ...

ವಿಡಿಯೊ ಸೇರಿದಂತೆ ದ್ವೇಷ ಭಾಷಣಕ್ಕೆ ಸಂಬಂಧಿಸಿದ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ ಡಿಜಿಪಿ ಅವರಿಗೆ ಕೊಡಬಹುದು. ಆದರೆ, ಎಫ್‌ಐಆರ್ ದಾಖಲಿಕೆ ಸಮಸ್ಯೆ ಅಲ್ಲ, ನಂತರದ ತನಿಖೆಯ ಪ್ರಗತಿಯೇ ಸಮಸ್ಯೆ ಎಂದು ಸಿಬಲ್ ಹೇಳಿದರು. ದಾಖಲೆಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ನೀಡಲು ಪೀಠವು ಸೂಚಿಸಿತು. ನಿರ್ದಿಷ್ಟ ಸಮುದಾಯವೊಂದರ ವಿರುದ್ಧ ದ್ವೇಷ ಭಾಷಣಗಳು ಎಗ್ಗಿಲ್ಲದೆ ನಡೆಯುತ್ತಿವೆ ಎಂದು ಆರೋಪಿಸಿ ಸಲ್ಲಿಸಲಾದ ಅರ್ಜಿಯ ವಿಚಾರಣೆಯನ್ನು ಪೀಠ ನಡೆಸಿತು.

‘ನ್ಯೂಸ್ ಕ್ಲಿಕ್’ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಪತ್ರ

ನವದೆಹಲಿ (ಪಿಟಿಐ): ಆನ್‌ಲೈನ್ ನ್ಯೂಸ್ ಪೋರ್ಟಲ್ ‘ನ್ಯೂಸ್ ಕ್ಲಿಕ್’ ಹಗರಣಕ್ಕೆ ಸಂಬಂಧಿಸಿದಂತೆ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ನಿವೃತ್ತ ನ್ಯಾಯಮೂರ್ತಿ-ಗಳು, ರಾಯಭಾರಿಗಳು ಸೇರಿದಂತೆ ಸುಮಾರು 250ಕ್ಕೂ ಹೆಚ್ಚಿನ ನಾಗರಿಕರು ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಸಿಜೆಐ ಡಿ.ವೈ. ಚಂದ್ರಚೂಡ್ ಅವರಿಗೆ ಪತ್ರ ಬರೆದಿದ್ದಾರೆ.

‘ಕೇಂದ್ರ ಸರ್ಕಾರವು ಈ ಕುರಿತು ಉನ್ನತ ಮಟ್ಟದ ತನಿಖೆ ನಡೆಸುವಂತೆ ರಾಷ್ಟ್ರಪತಿ ಹಾಗೂ ಸಿಜೆಐ ಅವರು ನಿರ್ದೇಶನ ನೀಡಬೇಕು’ಎಂದೂ ಪತ್ರದಲ್ಲಿ ಒತ್ತಾಯಿಸಲಾಗಿದೆ.

ತೆಲಂಗಾಣದ ನಿವೃತ್ತ ನ್ಯಾಯಮೂರ್ತಿ ಕೆ. ಶ್ರೀಧರ್ ರಾವ್ ಸೇರಿದಂತೆ 13 ನಿವೃತ್ತ ನ್ಯಾಯಮೂರ್ತಿಗಳು, ಮಾಜಿ ಗೃಹ ಕಾರ್ಯದರ್ಶಿ ಎಲ್.ಸಿ. ಗೋಯಲ್, ಮಾಜಿ ‘ರಾ’ ಮುಖ್ಯಸ್ಥ ಸಂಜೀವ್ ತ್ರಿಪಾಠಿ, ಎನ್‌ಐಎ ಮಾಜಿ ನಿರ್ದೇಶಕ ಯೋಗೇಶ್ ಚಂದೇರ್ ಮೋದಿ, 12 ಮಾಜಿ ರಾಯಭಾರಿಗಳು, 20 ಮಾಜಿ ಡಿಜಿಪಿಗಳು ಸೇರಿದಂತೆ ಇತರರು ಪತ್ರ ಬರೆದಿದ್ದಾರೆ.

ಸಹೋದರಿಯರ ಅತ್ಯಾಚಾರ, ಕೊಲೆ: ನಾಲ್ವರು ತಪ್ಪಿತಸ್ಥರು

ಲಖಿಂಪುರ ಖೀರಿ (ಪಿಟಿಐ): ವರ್ಷದ ಹಿಂದೆ ಇಲ್ಲಿ ನಡೆದ ದಲಿತ ಸಹೋದರಿಯರ ಸಾಮೂಹಿಕ ಅತ್ಯಾಚಾರ ಹಾಗೂ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರು ಆರೋಪಿಗಳ ಪೈಕಿ ನಾಲ್ವರು ದೋಷಿಗಳೆಂದು ಶುಕ್ರವಾರ ಇಲ್ಲಿನ ‘ಪೋಕ್ಸೊ’ ವಿಶೇಷ ನ್ಯಾಯಾಲಯವು ತೀರ್ಪು ಪ್ರಕಟಿಸಿದೆ ಎಂದು ಸರ್ಕಾರದ ಪರ ವಕೀಲ ತಿಳಿಸಿದ್ದಾರೆ.

ನಾಲ್ವರು ಅಪರಾಧಿಗಳ ಶಿಕ್ಷೆಯ ವಿಚಾರಣೆಯನ್ನು ಆಗಸ್ಟ್ 14ರಂದು ನಡೆಸಲಾಗುವುದು ಎಂದೂ ನ್ಯಾಯಾಲಯವು ತಿಳಿಸಿದೆ ಎಂದು ವಿಶೇಷ ಸರ್ಕಾರಿ ಅಭಿಯೋಜಕ ಬ್ರಿಜೇಶ್ ಪಾಂಡೆ ತಿಳಿಸಿದ್ದಾರೆ.

ನಿಘಾಸಾನ್ ಪ್ರದೇಶದ ಹಳ್ಳಿಯೊಂ-ದರಲ್ಲಿ 2022ರ ಸೆ. 14ರಂದು ಅಪ್ರಾಪ್ತ ವಯಸ್ಸಿನ ಇಬ್ಬರು ದಲಿತ ಸಹೋದ-ರಿಯರನ್ನು ಅಪಹರಿಸಿ, ಸಾಮೂಹಿಕ ಅತ್ಯಾಚಾರ ನಡೆಸಿ, ಬಳಿಕ ಮರಕ್ಕೆ ನೇಣುಹಾಕಿ ಹತ್ಯೆ ಮಾಡಲಾಗಿತ್ತು.

ಬಹು ಮಾಧ್ಯಮ ಪ್ರಜಾವಾಣಿ @75 LIVE
www.prajavani.net
ಇಂದು
ಯುಟ್ಯೂಬ್‌ನಲ್ಲಿ:
ನ್ಯೂಸ್ ಎಕ್ಸ್‌ಪ್ರೆಸ್: ರಾತ್ರಿ 8ಕ್ಕೆ
ಪ್ರಜಾವಾಣಿ ಕನ್ನಡ ಧ್ವನಿ ಪಾಡ್‌ಕಾಸ್ಟ್
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ನಾಳೆ
ಸೆಲೆಬ್ರಿಟಿ PREMIER
ಅತಿಥಿಗಳು
ನವೀನ್ ಶಂಕರ್, ನಟ
‘ಕ್ಷೇತ್ರಪತಿ’ ಬಸವನ ಮಾತು..
ಆ. 13, ಭಾನುವಾರ ಬೆಳಿಗ್ಗೆ 11 ಗಂಟೆಗೆ

Prajavani.net Prajavani Prajavani

‘ಕಳಪೆ ಗುಣಮಟ್ಟದ ರಸ್ತೆಗಳಿಂದ ಸಾವು: ಸರ್ಕಾರವೇ ಹೊಣೆ’

ಮುಂಬೈ (ಪಿಟಿಐ): ‘ರಸ್ತೆ ಗುಂಡಿಗಳು, ಮ್ಯಾನ್‌ಹೋಲ್‌ಗಳು ಹಾಗೂ ಕಳಪೆ ಗುಣಮಟ್ಟದ ರಸ್ತೆಗಳ ಕಾರಣದಿಂದ ಪ್ರತಿನಿತ್ಯ ಸಾವುಗಳು ಸಂಭವಿಸುತ್ತಿವೆ. ಇಂಥ ಘಟನೆಗಳು ಜರುಗುತ್ತಿರುವುದು ಸ್ವಾಭಾವಿಕವಾಗಿ ಅಲ್ಲ. ಬದಲಿಗೆ ಇದು ಮಾನವ ನಿರ್ಮಿತ ಸ್ಥಿತಿ. ನೀವು ಇದನ್ನು ನಿಲ್ಲಿಸಬೇಕು. ಇದು ನಿಮ್ಮ ಜವಾಬ್ದಾರಿ’ ಎಂದು ಮಹಾರಾಷ್ಟ್ರ ಸರ್ಕಾರ ಹಾಗೂ ಸ್ಥಳೀಯ ಸಂಸ್ಥೆಗಳನ್ನು ಬಾಂಬೆ ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿತು.

‘ಗುಣಮಟ್ಟದ ರಸ್ತೆಗಳ ನಿರ್ಮಾಣ, ಸವಾರರ ಸುರಕ್ಷತೆಯನ್ನು ಖಾತರಿ ಪಡಿಸುವುದು ನಿಮ್ಮ (ಮಹಾರಾಷ್ಟ್ರ ಸರ್ಕಾರ ಹಾಗೂ ಸ್ಥಳೀಯ ಸಂಸ್ಥೆಗಳು) ಸಂವಿಧಾನಿಕ ಬಾಧ್ಯತೆ. ಈ ಬಗ್ಗೆ ಆದೇಶ ಹೊರಡಿಸುವುದು ನ್ಯಾಯಾಲಯದ ಕಾರ್ಯವಲ್ಲ’ ಎಂದು ಹೇಳಿತು.

‘ಮುಂಬೈ ಹಾಗೂ ಸುತ್ತಮುತ್ತಲ ಪ್ರದೇಶಗಳ ರಸ್ತೆಗಳಲ್ಲಿರುವ ಗುಂಡಿಗಳನ್ನು ಮುಚ್ಚುವಂತೆ 2018ರಲ್ಲಿ ನ್ಯಾಯಾಲಯವು ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶನ ನೀಡಿತ್ತು. ಆದರೆ, ಈ ನಿರ್ದೇಶನದ ಪಾಲನೆ ಆಗಿಲ್ಲ. ಆದ್ದರಿಂದ ಇದನ್ನು ನ್ಯಾಯಾಂಗ ನಿಂದನೆ ಎಂದು ಪರಿಗಣಿಸಿ ಸ್ಥಳೀಯ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಕೋರಿ ವಕೀಲ ರಾಜು ಠಕ್ಕೇರ್ ಅವರ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಮುಖ್ಯ ನ್ಯಾಯಾಮೂರ್ತಿ ಡಿ.ಕೆ. ಉಪಾಧ್ಯಾಯ ಹಾಗೂ ನ್ಯಾ. ಆರಿಫ್ ಡಾಕ್ಟರ್ ಅವರಿದ್ದ ಪೀಠವು ಶುಕ್ರವಾರ ನಡೆಸಿತು.

ವಿವಿಧ 15 ಪ್ರಾಧಿಕಾರಗಳ ಅಡಿಯಲ್ಲಿರುವ ಮುಂಬೈನ ಎಲ್ಲ ರಸ್ತೆಗಳ ನಿರ್ವಹಣೆ ಹಾಗೂ ದುರಸ್ತಿ ಕಾರ್ಯದ ಜವಾಬ್ದಾರಿಯನ್ನು ಬೃಹನ್‌ಮುಂಬೈ ಮುನಿಸಿಪಲ್ ಕಾರ್ಪೊರೇಷನ್ (ಬಿಎಂಸಿ)ಗೆ ನೀಡಿ ಎಂದು ಕಳೆದ ವರ್ಷ ನ್ಯಾಯಾಲಯ ನೀಡಿದ್ದ ಸಲಹೆಯ ಕುರಿತು ರಾಜ್ಯ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ ಎನ್ನುವುದನ್ನು ಪೀಠ ಗಮನಿಸಿತು. ‘ಈ ಬಗ್ಗೆ ಎಂದಿಗೆ ಕ್ರಮ ಕೈಗೊಳ್ಳುತ್ತೀರಿ’ ಎಂದು ಪ್ರಶ್ನಿಸಿತು. ‘ಈ ಬಗ್ಗೆ ಇನ್ನಷ್ಟೇ ನಿರ್ಧಾರ ಕೈಗೊಳ್ಳಬೇಕು’ ಎಂದು ಸರ್ಕಾರದ ಪರ ವಕೀಲ ಪಿ.ಪಿ. ಕಾಕಡೆ ಉತ್ತರ ನೀಡಿದರು.

ನ್ಯಾಯಾಲಯ ಕಳೆದ ವರ್ಷ ನೀಡಿದ ಸಲಹೆ ಕುರಿತು ತೆಗೆದುಕೊಂಡಿರುವ ಕ್ರಮಗಳ ಕುರಿತು ವಿಸ್ತೃತ ವರದಿ ನೀಡುವಂತೆ ಎಲ್ಲ ಮುನಿಸಿಪಲ್ ಕಾರ್ಪೊರೇಷನ್‌ಗಳಿಗೆ ಪೀಠ ನಿರ್ದೇಶನ ನೀಡಿತ್ತು. ‘ನಗರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗುತ್ತಿದೆ. ಇದಕ್ಕಾಗಿ ರಸ್ತೆಗಳು ಹಾಳಾಗಿವೆ. ರಸ್ತೆಗಳಲ್ಲಿ ಗುಂಡಿ ಬಿದ್ದಿರುವ ವಿಷಯ ತಿಳಿದ ತಕ್ಷಣದಲ್ಲಿ ಡಾಂಬರು ಹಾಕುವ ಕಾರ್ಯ ನಡೆಯುತ್ತಿದೆ’ ಎಂದು ಬಿಎಂಸಿಯ ಆಯುಕ್ತ ಇಕ್ಬಾಲ್ ಛಾಚಲ್ ಪೀಠಕ್ಕೆ ತಿಳಿಸಿದರು. ಆದರೆ, ಪೀಠವು ಈ ವಾದವನ್ನು ಒಪ್ಪಲಿಲ್ಲ. ತೆರೆದ ಮ್ಯಾನ್‌ಹೋಲ್‌ಗಳ ಕುರಿತು ಪರಿಶೀಲನೆ ನಡೆಸಿ, ಮೂರು ವಾರಗಳ ಒಳಗೆ ವರದಿ ನೀಡುವಂತೆ ಮುಂಬೈನ 24 ವಾರ್ಡ್‌ಗಳ ವಾರ್ಡ್ ಅಧಿಕಾರಿಗಳಿಗೆ ನ್ಯಾಯಾಲಯ ನಿರ್ದೇ ಶನ ನೀಡಿತು. ರಾಜ್ಯ ಸರ್ಕಾರ ಹಾಗೂ ಮುನಿಸಿಪಲ್ ಕಾರ್ಪೊರೇಷನ್‌ಗಳಿಗೂ ತಮ್ಮ ವರದಿ ಸಲ್ಲಿಸುವಂತೆ ಪೀಠ ಹೇಳಿತು. ಠಾಣೆ, ಮುಂಬೈ, ನವಿ ಮುಂಬೈ ಸೇರಿದಂತೆ ಆರು ಸ್ಥಳೀಯ ಸಂಸ್ಥೆಗಳ ಆಯುಕ್ತರು ನ್ಯಾಯಾಲಯದಲ್ಲಿ ಹಾಜರಿದ್ದರು. ವಿಚಾರಣೆಯನ್ನು ನ್ಯಾಯಾಲಯವು ಸೆ. 29ಕ್ಕೆ ಮುಂದೂಡಿತು.

‘ಮಣಿಪುರ: ಆರೋಪಿಗಳ ಬಂಧನಕ್ಕೆ ವಿಳಂಬ ಸಲ್ಲ’

ನವದೆಹಲಿ (ಪಿಟಿಐ): ಮಣಿಪುರದಲ್ಲಿ ಮಹಿಳೆಯರ ಮೇಲಿನ ಗಂಭೀರ ಸ್ವರೂಪದ ದೌರ್ಜನ್ಯದ ಬಗ್ಗೆ ಕಳವಳ ವ್ಯಕ್ತಪಡಿಸಿದ ಸುಪ್ರೀಂ ಕೋರ್ಟ್, ‘ಇತರ ಸಮುದಾಯ ತಮ್ಮ ಅಧೀನದಲ್ಲಿದೆ ಎಂಬ ಸಂದೇಶ ಸಾರಲು ಗುಂಪುಗಳು ಲೈಂಗಿಕ ಹಿಂಸಾಚಾರವನ್ನು ಬಳಸುತ್ತವೆ ಮತ್ತು ಇದನ್ನು ತಡೆಯಲು ರಾಜ್ಯ ಬದ್ಧವಾಗಿರುತ್ತದೆ ಎಂದು ಹೇಳಿದೆ.

ಮಣಿಪುರದಲ್ಲಿ ಮೇ 4ರಿಂದ ಮಹಿಳೆಯರ ವಿರುದ್ಧ ನಡೆದಿರುವ ದೌರ್ಜನ್ಯದ ಸ್ವರೂಪದ ಬಗ್ಗೆ ತನಿಖೆ ನಡೆಸುವಂತೆಯೂ ನಿವೃತ್ತ ನ್ಯಾಯಮೂರ್ತಿಗಳ ತ್ರಿಸದಸ್ಯ ಸಮಿತಿಗೆ ಸೂಚಿಸಿದೆ. ಈಚೆಗಷ್ಟೆ ಸುಪ್ರೀಂಕೋರ್ಟ್ ಈ ಸಮಿತಿ ರಚಿಸಿದೆ. ಮಹಿಳೆಯರನ್ನು ಲೈಂಗಿಕ ಅಪರಾಧಗಳು ಮತ್ತು ಹಿಂಸಾಚಾರಕ್ಕೆ ಒಳಪಡಿಸುವುದು ಸ್ವೀಕಾರಾರ್ಹವಲ್ಲ. ಇದು ಘನತೆ, ವೈಯಕ್ತಿಕ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಯ ಸಾಂವಿಧಾನಿಕ ಮೌಲ್ಯಗಳ ಗಂಭೀರ ಉಲ್ಲಂಘನೆಯಾಗಿದೆ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ನ್ಯಾಯಪೀಠ ಹೇಳಿದೆ.

ಕೃತ್ಯಕ್ಕೆ ಬಲಿಯಾದವರ ಅಥವಾ ಸಂತ್ರಸ್ತರ ಸಮುದಾಯ ತಮ್ಮ ಅಧೀನದಲ್ಲಿದೆ ಎಂಬ ಸಂದೇಶ ಸಾರುವುದು ಕೃತ್ಯ ಎಸಗಿದ ಗುಂಪಿನ ಉದ್ದೇಶವಾಗಿರುತ್ತದೆ.

ದೊಡ್ಡ ಗುಂಪಿನ ಸದಸ್ಯರಾಗಿದ್ದರೆ ತಮ್ಮ ಅಪರಾಧಗಳಿಗೆ ಶಿಕ್ಷೆಯಿಂದ ತಪ್ಪಿಸಿಕೊಳ್ಳಬಹುದು ಎಂಬ ವಾಸ್ತಾವಂಶ ಸೇರಿದಂತೆ ಅನೇಕ ಕಾರಣಗಳಿಗೆ ಗುಂಪುಗಳು ಮಹಿಳೆಯರ ಮೇಲೆ ಸಾಮಾನ್ಯವಾಗಿ ದೌರ್ಜನ್ಯ ನಡೆಸುತ್ತವೆ.

ಸಂಘರ್ಷ ಸಂದರ್ಭದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ಇಂತಹ ಆಂತರಿಕ ಹಿಂಸಾಚಾರವು ದೌರ್ಜನ್ಯವಲ್ಲದೆ ಬೇರೇನೂ ಅಲ್ಲ. ಜನರು ಇಂತಹ ಹಿಂಸಾಚಾರ ಮಾಡದಂತೆ ತಡೆಯುವುದು ಹಾಗೂ ಹಿಂಸಾಚಾರಕ್ಕೆ ಗುರಿಯಾಗುವವರನ್ನು ರಕ್ಷಿಸುವುದು ರಾಜ್ಯದ ಕರ್ತವ್ಯವಾಗಿದೆ ಎಂದು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರನ್ನೂ ಒಳಗೊಂಡ ನ್ಯಾಯಪೀಠ ಆ. 7 ರಂದು ಹೊರಡಿಸಿದ ಆದೇಶದಲ್ಲಿ ತಿಳಿಸಿದೆ. ಈ ಆದೇಶವನ್ನು ವೆಬ್‌ಸೈಟ್‌ನಲ್ಲಿ ಗುರುವಾರ ರಾತ್ರಿ ಅಪ್‌ಲೋಡ್ ಮಾಡಲಾಗಿದೆ.

ತನಿಖೆ ಪೂರ್ಣಗೊಳ್ಳಲು ಅಗತ್ಯವಿರುವ ಕಾರಣ ಆರೋಪಿಗಳನ್ನು ಶೀಘ್ರ ಪತ್ತೆ ಹಚ್ಚಿ ಬಂಧಿಸುವುದು ಪೊಲೀಸರ ಕರ್ತವ್ಯ. ಅಲ್ಲದೇ ಆರೋಪಿಗಳು ಸಾಕ್ಷ್ಯಗಳನ್ನು ತಿರುಚಲು ಅಥವಾ ನಾಶಪಡಿಸಲು, ಸಾಕ್ಷಿಗಳನ್ನು ಬೆದರಿಸಲು ಮತ್ತು ಅಪರಾಧದ ಸ್ಥಳದಿಂದ ಪರಾರಿಯಾಗಲು ಪ್ರಯತ್ನಿಸಬಹುದು. ಯಾವುದೇ ಕಾರಣವಿಲ್ಲದೆ ಆರೋಪಿಗಳನ್ನು ಗುರುತಿಸುವಲ್ಲಿ ಮತ್ತು ಬಂಧಿಸುವಲ್ಲಿ ವಿಳಂಬ ಸಹಿಸುವುದಿಲ್ಲ ಎಂದು ಕೋರ್ಟ್ ಎಚ್ಚರಿಸಿದೆ.

ಸಂತ್ರಸ್ತರು ತಮ್ಮ ಸಮುದಾಯ ಲೆಕ್ಕಿಸದೆ ಪರಿಹಾರ ಕ್ರಮಗಳನ್ನು ಪಡೆಯಬೇಕು. ಸಾಂವಿಧಾನಿಕ ಮತ್ತು ಅಧಿಕೃತ ಕರ್ತವ್ಯಗಳನ್ನು ನಿರ್ಲಕ್ಷಿಸುವುದು ಮಾತ್ರವಲ್ಲದೆ ಅಪರಾಧಿಗಳೊಂದಿಗೆ ಶಾಮೀಲಾಗಿರುವ ರಾಜ್ಯದ ಪ್ರತಿಯೊಬ್ಬ ಅಧಿಕಾರಿ ಅಥವಾ ಉದ್ಯೋಗಿಯನ್ನು ತಪ್ಪದೇ ಹೊಣೆಗಾರರನ್ನಾಗಿ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

‘ಬ್ರಿಜ್ ಭೂಷಣ್ ವಿರುದ್ಧ ಸಾಕ್ಷ್ಯಗಳಿವೆ’

ನವದೆಹಲಿ (ಪಿಟಿಐ): ಭಾರತೀಯ ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿರುವ ಆಪಾದನೆಯ ಪ್ರಕರಣದಲ್ಲಿ ಭಾರತ ಕುಸ್ತಿ ಫೆಡರೇಷನ್ ನಿರ್ಗಮಿತ ಮುಖ್ಯಸ್ಥ ಮತ್ತು ಬಿಜೆಪಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ಸಾಕಷ್ಟು ಸಾಕ್ಷ್ಯಗಳಿವೆ ಎಂದು ದೆಹಲಿ ಪೊಲೀಸರು ಶುಕ್ರವಾರ ಮೆಟ್ರೊ ಪಾಲಿಟನ್ ಕೋರ್ಟ್‌ಗೆ ತಿಳಿಸಿದ್ದಾರೆ.

ಬ್ರಿಜ್ ಭೂಷಣ್ ಶರಣ್ ಸಿಂಗ್ ಮತ್ತು ಸಹ ಆರೋಪಿ, ಅಮಾನತು-ಗೊಂಡಿರುವ ಡಬ್ಲ್ಯುಎಫ್‌ಐ ಸಹಾಯಕ ಕಾರ್ಯದರ್ಶಿ ವಿನೋದ್ ತೋಮರ್ ವಿರುದ್ಧ ಮೇಲ್ನೋಟಕ್ಕೆ ಪ್ರಮುಖ ಪ್ರಕರಣ ದಾಖಲಾಗಿದೆ ಎಂದು ನಗರ ಪೊಲೀಸರು, ಹೆಚ್ಚುವರಿ ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಹರ್ಜೀತ್ ಸಿಂಗ್ ಜಸ್ಪಾಲ್ ಅವರ ಎದುರು ಹೇಳಿಕೆ ನೀಡಿದ್ದಾರೆ.

ಆರೋಪಿ ಸಿಂಗ್ ವಿರುದ್ಧ ಐಪಿಸಿಯ 354 (ಮಹಿಳೆ ಮೇಲೆ ದೌರ್ಜನ್ಯ), 354-ಎ (ಲೈಂಗಿಕ ಕಿರುಕುಳ) ಮತ್ತು 354-ಡಿ (ಹಿಂಬಾಲಿಸುವಿಕೆ) ಅಡಿ ಆರೋಪಗಳನ್ನು ಹೊರಿಸಲು ಸಾಕಷ್ಟು ಪುರಾವೆಗಳಿವೆ ಎಂದು ದೆಹಲಿ ಪೊಲೀಸರ ಪರ ಪಬ್ಲಿಕ್ ಪ್ರಾಸಿಕ್ಯೂಟರ್ ಅತುಲ್ ಶ್ರೀವಾಸ್ತವ ತಿಳಿಸಿದರು.

ಪ್ರಕರಣದ ಮುಂದಿನ ವಿಚಾರಣೆ ಆ. 19ರಂದು ನಡೆಯಲಿದ್ದು, ಅಂದು ದೂರುದಾರರ ಪರ ವಕೀಲರು ವಾದ ಮಂಡಿಸುವ ಸಾಧ್ಯತೆ ಇದೆ.

‘ಇಂಡಿಯಾ’ ಪ್ರಶ್ನಿಸಿ ಅರ್ಜಿ: ವಿಚಾರಣೆಗೆ ‘ಸುಪ್ರೀಂ’ ನಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿರೋಧ ಪಕ್ಷಗಳು ತಮ್ಮ ಮೈತ್ರಿಕೂಟಕ್ಕೆ ‘ಇಂಡಿಯಾ’ ಎಂದು ಹೆಸರಿಟ್ಟಿರುವುದನ್ನು ಪ್ರಶ್ನಿಸಿ ಸಲ್ಲಿಕೆ-ಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ವಿಚಾರಣೆಗೆ ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ.

ವಿರೋಧ ಪಕ್ಷಗಳು ಚುನಾವಣಾ ನೀತಿಯನ್ನು ಉಲ್ಲಂಘಿಸಿದ್ದರೆ ಚುನಾವಣಾ ಆಯೋಗದ ಮೊರೆ ಹೋಗಿ ಎಂದಿರುವ ನ್ಯಾಯಮೂರ್ತಿಗಳಾದ ಎಸ್.ಕೆ. ಕೌಲ್ ಮತ್ತು ಸುಧಾಂಶು ಧುಲಿಯಾ ಅವರಿದ್ದ ಪೀಠವು, ಇದು ಪ್ರಚಾರಕ್ಕಾಗಿ ಸಲ್ಲಿಸಿರುವ ಅರ್ಜಿ ಎಂದು ಅಭಿಪ್ರಾಯಪಟ್ಟಿದೆ.

ನವಾಬ್‌ಗೆ ಜಾಮೀನು

ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಎನ್‌ಸಿಪಿ ಮುಖಂಡ ನವಾಬ್ ಮಲಿಕ್‌ಗೆ ವೈದ್ಯಕೀಯ ಕಾರಣಗಳ ಆಧಾರದಲ್ಲಿ ಸುಪ್ರೀಂ ಕೋರ್ಟ್ ಗುರುವಾರ 2 ತಿಂಗಳ ಮಧ್ಯಂತರ ಜಾಮೀನು ಮಂಜೂರು ಮಾಡಿದೆ. ಕಿಡ್ನಿ ಸಮಸ್ಯೆ ಕಾರಣದಿಂದ ಮಲಿಕ್ ಚಿಕಿತ್ಸೆ ಪಡೆಯುತ್ತಿರು-ವುದನ್ನು ಪರಿಗಣಿಸಿ, ಕೇವಲ ವೈದ್ಯಕೀಯ ಕಾರಣಗಳ ಆಧಾರದಲ್ಲಿ ಮಧ್ಯಂತರ ಜಾಮೀನು ಮಂಜೂರು ಮಾಡಿರುವುದಾಗಿ ಸುಪ್ರೀಂ ಕೋರ್ಟ್‌ನ ನ್ಯಾಯಮೂ-ರ್ತಿಗಳಾದ ಅನಿರುದ್ಧ್ ಬೋಸ್ ಮತ್ತು ಬೆಲಾ ಎಂ. ತ್ರಿವೇದಿ ಅವರಿದ್ದ ಪೀಠ ತಿಳಿಸಿತು.

ವಿಚಾರಣೆಗೆ ತಡೆ ನೀಡಲು ಹೈಕೋರ್ಟ್ ನಿರಾಕರಣೆ

ಅಹಮದಾಬಾದ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಶೈಕ್ಷಣಿಕ ಪದವಿ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮತ್ತು ಆಮ್ ಆದ್ಮಿ ಪಕ್ಷದ (ಎಎಪಿ) ಮುಖಂಡ ಸಂಜಯ್ ಸಿಂಗ್ ವಿರುದ್ಧ ಗುಜರಾತ್ ವಿಶ್ವವಿದ್ಯಾಲಯ ದಾಖಲಿಸಿದ್ದ ಕ್ರಿಮಿನಲ್ ಮಾನನಷ್ಟ ಮೊಕದ್ದಮೆಗೆ ಸಂಬಂಧಿಸಿದ ವಿಚಾರಣೆಗೆ ತಡೆ ನೀಡಲು ಗುಜರಾತ್ ಹೈಕೋರ್ಟ್ ಶುಕ್ರವಾರ ನಿರಾಕರಿಸಿದೆ.

ನ್ಯೂಸ್ ಕ್ಲಿಕ್: ಅಭಿಪ್ರಾಯ ಕೇಳಿದ ದೆಹಲಿ ಹೈಕೋರ್ಟ್

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಲವಂತದ ಕ್ರಮ ಕೈಗೊಳ್ಳದಂತೆ ಈ ಹಿಂದೆ ದೆಹಲಿ ಹೈಕೋರ್ಟ್ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಜಾರಿ ನಿರ್ದೇಶನಾಲಯ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ, ‘ನ್ಯೂಸ್ ಕ್ಲಿಕ್’ ಸುದ್ದಿ ಸಂಸ್ಥೆ ಮತ್ತು ಅದರ ಪ್ರಧಾನ ಸಂಪಾದಕರ ಪ್ರತಿಕ್ರಿಯೆಯನ್ನು ಹೈಕೋರ್ಟ್ ಶುಕ್ರವಾರ ಕೇಳಿದೆ.

ಈ ಸಂಬಂಧ ಸುದ್ದಿಸಂಸ್ಥೆ ಮತ್ತು ಸಂಪಾದಕ ಪ್ರಬೀರ್ ಪುರ್ಕಾಯಸ್ಥ ಅವರಿಗೆ ನೋಟಿಸ್ ನೀಡಲಾಗಿದೆ.

ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ: ಜಪಾನ್ ಮಣಿಸಿ ಹರ್ಮನ್‌ಪ್ರೀತ್ ಬಳಗ ಫೈನಲ್‌ಗೆ

ಪ್ರಶಸ್ತಿಗೆ ಭಾರತ– ಮಲೇಷ್ಯಾ ಸೆಣಸು

ಜಪಾನ್ ವಿರುದ್ಧದ ಸೆಮಿಫೈನಲ್ ಪಂದ್ಯದಲ್ಲಿ ಗೋಲು ಗಳಿಸಿದ ಭಾರತ ತಂಡದ ಆಟಗಾರರ ಸಂಭ್ರಮ –ಪಿಟಿಐ ಚಿತ್ರ

ಚೆನ್ನೈ (ಪಿಟಿಐ): ಆಕ್ರಮಣ ಮತ್ತು ವೇಗದ ಆಟದ ಮೂಲಕ ಜಪಾನ್ ತಂಡವನ್ನು ನಿಬ್ಬೆರಗಾಗಿಸಿದ ಭಾರತ ತಂಡ, ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯ ಫೈನಲ್ ಪ್ರವೇಶಿಸಿತು.

ಮೇಯರ್ ರಾಧಾಕೃಷ್ಣನ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಹರ್ಮನ್‌ಪ್ರೀತ್ ಸಿಂಗ್ ಬಳಗ 5–0 ಗೋಲುಗಳಿಂದ ಗೆದ್ದುಕೊಂಡಿತು. ಶನಿವಾರ ನಡೆಯಲಿರುವ ಫೈನಲ್‌ನಲ್ಲಿ ಆತಿಥೇಯರು, ಮಲೇಷ್ಯಾ ತಂಡದ ಸವಾಲು ಎದುರಿಸಲಿದ್ದಾರೆ.

ಆಕಾಶ್‌ದೀಪ್ ಸಿಂಗ್ (19ನೇ ನಿ.), ಹರ್ಮನ್‌ಪ್ರೀತ್ ಸಿಂಗ್ (23ನೇ ನಿ.), ಮನ್‌ದೀಪ್ ಸಿಂಗ್ (30ನೇ ನಿ.), ಸುಮಿತ್ (39ನೇ ನಿ.) ಮತ್ತು ಕಾರ್ತಿ ಸೆಲ್ವಂ (51ನೇ ನಿ.) ಅವರು ಭಾರತದ ಪರ ಗೋಲು ಗಳಿಸಿದರು. ಲೀಗ್ ಹಂತದಲ್ಲಿ ಭಾರತ ತಂಡವನ್ನು 1–1ರಿಂದ ಕಟ್ಟಿಹಾಕಿದ್ದ ಜಪಾನ್, ಶುಕ್ರವಾರ ಯಾವುದೇ ಪೈಪೋಟಿ ನೀಡದೆಯೇ ಶರಣಾಯಿತು. ಮೂರು ಬಾರಿ ಚಾಂಪಿಯನ್ ಆಗಿರುವ ಭಾರತ, ನಾಲ್ಕನೇ ಸಲ ಫೈನಲ್ ಪ್ರವೇಶಿಸಿದೆ.

ಮೊದಲ ಕ್ವಾರ್ಟರ್‌ನಲ್ಲಿ ಜಪಾನ್ ತಂಡದ ರಕ್ಷಣಾ ಆಟಗಾರರು ಮಿಂಚಿನ ಪ್ರದರ್ಶನ ನೀಡಿದ್ದರಿಂದ ಆತಿಥೇಯರಿಗೆ ಗೋಲು ಗಳಿಸಲು ಆಗಲಿಲ್ಲ. ಗೋಲಿನ ಖಾತೆ ತೆರೆಯಲು 19ನೇ ನಿಮಿಷದವರೆಗೆ ಕಾಯಬೇಕಾಯಿತು.

ಆಕಾಶ್‌ದೀಪ್ ಸಿಂಗ್, ಫೀಲ್ಡ್ ಗೋಲು ಮೂಲಕ ಮುನ್ನಡೆ ತಂದಿತ್ತರು. ಹಾರ್ದಿಕ್ ಸಿಂಗ್ ನೀಡಿದ ಪಾಸ್‌ನಲ್ಲಿ ಅವರು ಚೆಂಡನ್ನು ಗುರಿ ಸೇರಿಸಿದರು.

ಇದಾದ ನಾಲ್ಕು ನಿಮಿಷಗಳ ಬಳಿಕ ಹರ್ಮನ್‌ಪ್ರೀತ್, ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಗೋಲು ಗಳಿಸಿ ಮುನ್ನಡೆಯನ್ನು 2–0ಗೆ ಹೆಚ್ಚಿಸಿದರು.

ಮೊದಲಾರ್ಧ ಕೊನೆಗೊಳ್ಳಲು ಕೆಲವೇ ಸೆಕೆಂಡುಗಳ ಇದ್ದಾಗ ಮನ್‌ದೀಪ್ ಸಿಂಗ್ ಅವರು ಹರ್ಮನ್‌ಪ್ರೀತ್ ನೀಡಿದ ಪಾಸ್‌ನಲ್ಲಿ ಚೆಂಡನ್ನು ಸೊಗಸಾದ ರೀತಿಯಲ್ಲಿ ಗುರಿ ಸೇರಿಸುವಲ್ಲಿ ಯಶಸ್ವಿಯಾದರು.

ದ್ವಿತೀಯಾರ್ಧದಲ್ಲೂ ಅದೇ ವೇಗ ಕಾಪಾಡಿಕೊಂಡ ಭಾರತ, ಮತ್ತೆರಡು ಗೋಲುಗಳನ್ನು ಗಳಿಸಿತು.

ಫೈನಲ್‌ಗೆ ಮಲೇಷ್ಯಾ: ದಿನದ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ಹೊಂದಾಣಿಕೆಯ ಆಟವಾಡಿದ ಮಲೇಷ್ಯಾ 6–2 ಗೋಲುಗಳಿಂದ ದಕ್ಷಿಣ ಕೊರಿಯಾ ತಂಡವನ್ನು ಮಣಿಸಿ ಇದೇ ಮೊದಲ ಬಾರಿ ಪ್ರಶಸ್ತಿ ಸುತ್ತು ತಲುಪಿತು.

ಮಲೇಷ್ಯಾ ತಂಡದ ಪರ ಶೆಲ್ಲೊ ಸಿಲ್ವೆರಿಯಸ್ (47 ಮತ್ತು 48ನೇ ನಿ.) ಹಾಗೂ ನಜ್ಮಿ ಜಜ್ಲಾನ್ (9 ಮತ್ತು 21ನೇ ನಿ.) ತಲಾ ಎರಡು ಗೋಲುಗಳನ್ನು ತಂದಿತ್ತರು. ಫೈಜಲ್ ಸಾರಿ (19) ಮತ್ತು ಅಬು ಕಮಲ್ ಅಜ್ರಾಯ್ (3) ಅವರು ತಲಾ ಒಂದು ಗೋಲು ಗಳಿಸಿದರು.

ಕೊರಿಯಾ ತಂಡದ ಪರ ವೂ ಚೆಯೊನ್ ಜಿ (2) ಮತ್ತು ಜಂಗ್‌ಹ್ಯುನ್ (14) ಅವರು ಚೆಂಡನ್ನು ಗುರಿ ಸೇರಿಸಿದರು. ಮೊದಲ ಕ್ವಾರ್ಟರ್‌ನಲ್ಲಿ ಎದುರಾಳಿಗೆ ತಕ್ಕ ಪೈಪೋಟಿ ನೀಡಿದ ಕೊರಿಯಾ, ಆ ಬಳಿಕ ಪಂದ್ಯದ ಮೇಲಿನ ಹಿಡಿತ ಕೈಬಿಟ್ಟಿತು.

ಪಾಕಿಸ್ತಾನಕ್ಕೆ ಗೆಲುವು: ಐದು ಮತ್ತು ಆರನೇ ಸ್ಥಾನಗಳನ್ನು ನಿರ್ಣಯಿಸಲು ನಡೆದ ಪಂದ್ಯದಲ್ಲಿ ಪಾಕಿಸ್ತಾನ 6–1 ಗೋಲುಗಳಿಂದ ಚೀನಾ ತಂಡವನ್ನು ಪರಾಭವಗೊಳಿಸಿತು.

ಮುಹಮ್ಮದ್ ಖಾನ್ ಮತ್ತು ಮುಹಮ್ಮದ್ ಅಮ್ಮಾದ್ ಅವರು ತಲಾ ಎರಡು ಗೋಲುಗಳನ್ನು ಗಳಿಸಿದರೆ ಇತರ ಗೋಲುಗಳನ್ನು ಅಬ್ದುಲ್ ಶಾಹಿದ್ ಹಾಗೂ ಅಬ್ದುಲ್ ರಾಣಾ ತಂದಿತ್ತರು.

ಪಾಕಿಸ್ತಾನ ತಂಡವು ಮುಂಬರುವ ಜೂನಿಯರ್ ವಿಶ್ವಕಪ್‌ನಲ್ಲಿ ಆಡಲಿರುವ ಹೆಚ್ಚಿನ ಆಟಗಾರರಿಗೆ ಈ ಟೂರ್ನಿಯಲ್ಲಿ ಅವಕಾಶ ನೀಡಿತ್ತು. ಹಾಂಗ್‌ಝೌ ಏಷ್ಯನ್ ಗೇಮ್ಸ್‌ಗೆ ಸಿದ್ದತೆ ನಡೆಸುವ ಉದ್ದೇಶದಿಂದ ಸೀನಿಯರ್ ಆಟಗಾರರು ಇಲ್ಲಿ ಪಾಲ್ಗೊಂಡಿಲ್ಲ.

ಮುಖ್ಯಾಂಶಗಳು

- ಭಾರತಕ್ಕೆ 5–0 ಗೋಲುಗಳ ಗೆಲುವು
- ಮಿಂಚಿದ ಹರ್ಮನ್‌ಪ್ರೀತ್, ಮನ್‌ದೀಪ್ ಸಿಂಗ್
- ಪಾಕಿಸ್ತಾನಕ್ಕೆ ಐದನೇ ಸ್ಥಾನ

ಇಂದಿನ ಪಂದ್ಯಗಳು

3/4ನೇ ಸ್ಥಾನ: ಜಪಾನ್– ದಕ್ಷಿಣ ಕೊರಿಯಾ (ಸಂಜೆ 6)

ಫೈನಲ್: ಭಾರತ– ಮಲೇಷ್ಯಾ (ರಾತ್ರಿ 8.30)

ಸಮಬಲದತ್ತ ಹಾರ್ದಿಕ್ ಚಿತ್ತ

7 ವರ್ಷದ ನಂತರ ಸರಣಿ ಜಯಿಸುವ ಹುಮ್ಮಸ್ಸಿನಲ್ಲಿ ವಿಂಡೀಸ್

ಭಾರತದ ಸೂರ್ಯಕುಮಾರ್ ಮತ್ತು ಹಾರ್ದಿಕ್ ಪಾಂಡ್ಯ

ಲಾಡೆರ್‌ಹಿಲ್, ಅಮೆರಿಕ (ಪಿಟಿಐ): ಭಾರತ ಮತ್ತು ವೆಸ್ಟ್ ಇಂಡೀಸ್ ತಂಡಗಳ ಟ್ವೆಂಟಿ20 ಕ್ರಿಕೆಟ್ ಸರಣಿಯು ಈಗ ಕುತೂಹಲ ಘಟ್ಟ ತಲುಪಿದೆ. ಈ ರೋಚಕತೆಯನ್ನು ಕಣ್ತುಂಬಿಕೊಳ್ಳಲು ಅಮೆರಿಕದ ಕ್ರಿಕೆಟ್‌ಪ್ರಿಯರು ಸಜ್ಜಾಗಿದ್ದಾರೆ.

ಶನಿವಾರ ಇಲ್ಲಿ ನಡೆಯಲಿರುವ ನಾಲ್ಕನೇ ಪಂದ್ಯದಲ್ಲಿ ಗೆದ್ದು ಸರಣಿಯಲ್ಲಿ ಸಮಬಲ ಸಾಧಿಸುವ ಛಲದಲ್ಲಿ ಭಾರತವಿದೆ. ಇನ್ನೊಂದೆಡೆ 2–1ರಿಂದ ಮುಂದಿರುವ ಆತಿಥೇಯ ತಂಡವು ಈ ಪಂದ್ಯದಲ್ಲಿ ಜಯಭೇರಿ ಬಾರಿಸಿ ಸರಣಿ ಜಯದ ಸಂಭ್ರಮ ಆಚರಿಸುವ ಹುಮ್ಮಸ್ಸಿನಲ್ಲಿದೆ. ಮೊದಲೆರಡು ಪಂದ್ಯಗಳಲ್ಲಿ ಸೋತಿದ್ದ ಹಾರ್ದಿಕ್ ಪಾಂಡ್ಯ ಬಳಗವು ಮೂರನೇ ಪಂದ್ಯದಲ್ಲಿ ಸೂರ್ಯ ಕುಮಾರ್ ಯಾದವ್ ಮತ್ತು ತಿಲಕ್ ವರ್ಮಾ ಅವರ ಅಮೋಘ ಬ್ಯಾಟಿಂಗ್ ಬಲದಿಂದ ಗೆದ್ದಿತ್ತು. ಆದರೆ ಈ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದ ಯಶಸ್ವಿ ಜೈಸ್ವಾಲ್ ಕೇವಲ 1 ರನ್ ಗಳಿಸಿ ಔಟಾಗಿದ್ದರು.

ಆದರೂ ಅವರಿಗೆ ಮತ್ತೊಂದು ಅವಕಾಶ ಕೊಡುವ ಸಾಧ್ಯತೆ ಇದೆ. ಅವರು ಮತ್ತು ಶುಭಮನ್ ಗಿಲ್ ಲಯಕ್ಕೆ ಮರಳಿದರೆ ಉತ್ತಮ ಆರಂಭ ಸಿಗುವುದು ಖಚಿತ. ಸೂರ್ಯ ಮತ್ತು ತಿಲಕ್ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಇದರಿಂದಾಗಿ ದೊಡ್ಡ ಮೊತ್ತ ಗಳಿಸುವುದು ಕಷ್ಟವೇನಲ್ಲ.

ಬೌಲಿಂಗ್‌ನಲ್ಲಿಯೂ ಹೆಚ್ಚಿನ ಚಿಂತೆ ಯಿಲ್ಲ. ಸ್ಪಿನ್ನರ್ ಕುಲದೀಪ್ ಯಾದವ್, ಯಜುವೇಂದ್ರ ಚಾಹಲ್, ವೇಗಿ ಅರ್ಷದೀಪ್ ಸಿಂಗ್ ಮತ್ತು ಮುಕೇಶ್ ಕುಮಾರ್ ಪಂದ್ಯಕ್ಕೆ ವಿಜಯದ ಕಾಣಿಕೆ ನೀಡುವ ಸಮರ್ಥರು. ಆದರೆ, ಅವರನ್ನು ಇನಿಂಗ್ಸ್‌ನ ಸೂಕ್ತ ಸಂದರ್ಭದಲ್ಲಿ ದಾಳಿಗಿಳಿಸುವ ಜಾಣ್ಮೆಯನ್ನು ನಾಯಕ ಹಾರ್ದಿಕ್ ತೋರಿದರೆ ಫಲ ಖಚಿತ.

ಆತಿಥೇಯ ತಂಡದ ನಾಯಕ ರೋವ್ಮನ್ ಪೊವೆಲ್ ಹಾಗೂ ನಿಕೊಲಸ್ ಪೂರನ್ ಅವರು ಅದ್ಭುತ ಲಯದಲ್ಲಿದ್ದಾರೆ. ಎದುರಾಳಿ ತಂಡದಿಂದ ಜಯದ ಅವಕಾಶವನ್ನು ಕಿತ್ತುಕೊಳ್ಳುವ ಸಮರ್ಥರೂ ಹೌದು. ಶಿಮ್ರಾನ್ ಹೆಟ್ಮೆಯರ್, ಕೈಲ್ ಮೇಯರ್ಸ್ ಮತ್ತು ಶೈ ಹೋಪ್ ಅವರು ತಮ್ಮ ಲಯಕ್ಕೆ ಮರಳಿದರೆ ಭಾರತದ ಬೌಲರ್‌ಗಳಿಗೆ ಕಠಿಣ ಸವಾಲು ಎದುರಾಗಬಹುದು.

2016ರಿಂದ ಇಲ್ಲಿಯವರೆಗೆ ವಿಂಡೀಸ್ ತಂಡವು ಭಾರತದ ಎದುರು ಟಿ20 ಕ್ರಿಕೆಟ್ ಸರಣಿಯನ್ನು ಗೆದ್ದಿಲ್ಲ. ಈಗ ಸಿಕ್ಕಿರುವ ಅವಕಾಶವನ್ನು ಫಲಪ್ರದಗೊಳಿಸುವತ್ತ ಚಿತ್ತ ನೆಟ್ಟಿದೆ.

ಮುಖ್ಯಾಂಶಗಳು

- ಭಾರತ– ವೆಸ್ಟ್ ಇಂಡೀಸ್ ಟಿ20 ಸರಣಿಯ ನಾಲ್ಕನೇ ಪಂದ್ಯ ಇಂದು
- ಸರಣಿಯಲ್ಲಿ 2–1 ಮುನ್ನಡೆ ಸಾಧಿಸಿರುವ ಆತಿಥೇಯ ತಂಡ

ಪಿಚ್ ಹೇಗಿದೆ?: ಪಂದ್ಯದ ಆರಂಭದಲ್ಲಿ ಇಲ್ಲಿಯ ಪಿಚ್ ಬ್ಯಾಟರ್‌ಗಳಿಗೆ ಹೆಚ್ಚು ನೆರವು ನೀಡುವ ಸಾಧ್ಯತೆ ಇದೆ. ಪಂದ್ಯ ಮುಂದುವರೆದಂತೆ ಬೌಲರ್‌ಗಳ ಕೌಶಲಕ್ಕೆ ಫಲ ನೀಡಬಹುದು. ಆದ್ದರಿಂದ ಬ್ಯಾಟರ್‌ಗಳು ಕೊನೆಯ ಹಂತದ ಓವರ್‌ಗಳಲ್ಲಿ ಎಚ್ಚರಿಕೆಯಿಂದ ಬ್ಯಾಟ್ ಬೀಸಬೇಕಾಗಬಹುದು.

ಪಂದ್ಯ ಆರಂಭ: ರಾತ್ರಿ 8ರಿಂದ. ನೇರಪ್ರಸಾರ: ಡಿಡಿ ಸ್ಪೋರ್ಟ್ಸ್, ಫ್ಯಾನ್‌ಕೋಡ್, ಜಿಯೊ ಸಿನಿಮಾ

ಎನ್‌ಒಸಿ ನಿರೀಕ್ಷೆಯಲ್ಲಿ ರಾಣಾ; ಹಿಮ್ಮತ್‌ಸಿಂಗ್‌ಗೆ ನಾಯಕತ್ವ

ದೆಹಲಿಯಿಂದ ವಿದರ್ಭಕ್ಕೆ ಶೋರೆ

ಧ್ರುವ ಶೋರೆ

ನಿತೀಶ್ ರಾಣಾ

ನವದೆಹಲಿ (ಪಿಟಿಐ): ಹೋದ ವರ್ಷದ ರಣಜಿ ಟ್ರೋಫಿ ಟೂರ್ನಿಯಲ್ಲಿ ರನ್ ಹೊಳೆ ಹರಿಸಿದ್ದ ಧ್ರುವ ಶೋರೆ ಅವರು ತಮ್ಮ ತವರು ದೆಹಲಿ ತಂಡವನ್ನು ತೊರೆದು ವಿದರ್ಭ ಬಳಗವನ್ನು ಸೇರಿಕೊಂಡಿದ್ದಾರೆ. ತಂಡದ ಮತ್ತೊಬ್ಬ ಅನುಭವಿ ಬ್ಯಾಟರ್ ನಿತೀಶ್ ರಾಣಾ ಅವರು ನಿರಾಕ್ಷೇಪಣಾ ಪತ್ರಕ್ಕಾಗಿ ಮನವಿ ಸಲ್ಲಿಸಿದ್ದು, ಬೇರೆಡೆಗೆ ವಲಸೆ ಹೋಗಲಿದ್ದಾರೆ.

‘ಧ್ರುವ ಮತ್ತು ನಿತೀಶ್ ಅವರೊಂದಿಗೆ ನಾವು ದೀರ್ಘ ಚರ್ಚೆ ನಡೆಸಿದ್ದೇವೆ. ಅವರಂತಹ ಅನುಭವಿ ಆಟಗಾರರನ್ನು ಬಿಟ್ಟುಕೊಡಲು ಸಂಸ್ಥೆಗೆ ಮನಸ್ಸಿಲ್ಲ. ಅವರ ಮನವೊಲಿಸಲು ಪ್ರಯತ್ನ ಮಾಡಿದ್ದೇವೆ. ನಿರ್ಧಾರ ಅವರಿಗೇ ಬಿಟ್ಟಿದ್ದು‘ ಎಂದು ಡಿಡಿಸಿಎ ಜಂಟಿ ಕಾರ್ಯದರ್ಶಿ ರಾಜನ್ ಮನಚಂದಾ ಶುಕ್ರವಾರ ತಿಳಿಸಿದ್ದಾರೆ.

ಹೋದ ಋತುವಿನವರೆಗೂ ನಿಗದಿಯ ಓವರ್‌ಗಳ ಕ್ರಿಕೆಟ್ ತಂಡಕ್ಕೆ ರಾಣಾ ನಾಯಕರಾಗಿದ್ದರು. ಆದರೆ ಕೇವಲ ಒಂದು ಋತುವಿನಲ್ಲಿ ಆಡಿರುವ ಯಶ್ ಧುಳ್ ಅವರನ್ನು ನಾಯಕನ ಸ್ಥಾನಕ್ಕೇರಿಸಿದ್ದರಿಂದ ರಾಣಾ ಅಸಮಾಧಾನಗೊಂಡಿದ್ದಾರೆನ್ನಲಾಗಿದೆ. ಅಲ್ಲದೇ ರಾಣಾ ಅವರು ತಮ್ಮ ತಂಡದ ಕೆಲವು ಆಟಗಾರರೊಂದಿಗೆ ಭಿನ್ನಾಭಿಪ್ರಾಯ ಹೊಂದಿರುವುದು ಈಚೆಗೆ ಸುದ್ದಿಯಾಗಿತ್ತು.ಅದರಲ್ಲಿಪ್ರಮುಖವಾಗಿ ಆಲ್‌ರೌಂಡರ್ ಹೃತಿಕ್ ಶೋಕೀನ್ ಕೂಡ ಒಬ್ಬರು. ಅವರು ರಣಜಿ ಟ್ರೋಫಿ ಟೂರ್ನಿಯಲ್ಲಿ ಉತ್ತಮವಾಗಿ ಆಡಿದ್ದರು.

ಹೋದ ಋತುವಿನಲ್ಲಿ ದೆಹಲಿ ತಂಡವು ನಾಕೌಟ್ ಹಂತಕ್ಕೂ ಅರ್ಹತೆ ಪಡೆದಿರಲಿಲ್ಲ. ಆದರೆ ಆ ಟೂರ್ನಿಯಲ್ಲಿ ಧ್ರುವ ಶೋರೆ 859 ರನ್ ಪೇರಿಸಿದ್ದರು. ಅತಿ ಹೆಚ್ಚು ರನ್ ಗಳಿಸಿದವರ ಪಟ್ಟಿಯಲ್ಲಿ ನಾಲ್ಕನೇ ಸ್ಥಾನ ಗಳಿಸಿದ್ದರು. ಮಯಂಕ್ ಅಗರವಾಲ್ (990), ಅರ್ಪಿತ್ ವಸಾವಡಾ (907) ಮತ್ತು ಅನುಸ್ಟುಪ್ ಮಜುಂದಾರ್ (867) ಮೊದಲ ಮೂರು ಸ್ಥಾನಗಳಲ್ಲಿದ್ದರು.

ಮುಂಬರುವ ರಣಜಿ ಟೂರ್ನಿಯಲ್ಲಿ ಹಿಮ್ಮತ್ ಸಿಂಗ್ ಅವರು ದೆಹಲಿ ತಂಡದ ನಾಯಕತ್ವ ವಹಿಸಿಕೊಳ್ಳಲಿದ್ದಾರೆ.

ವಿಶ್ವಕಪ್ ಚೆಸ್: ನಕಾಮುರಗೆ ಆಘಾತ ನೀಡಿದ ಪ್ರಜ್ಞಾನಂದ

ಆರ್‌.ಪ್ರಗ್ನಾನಂದ

ಬಾಕು (ಅಜರ್‌ಬೈಜಾನ್): ಭಾರತದ ಯುವ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಅವರು ಇಲ್ಲಿ ನಡೆಯುತ್ತಿರುವ ವಿಶ್ವಕಪ್ ಚೆಸ್ ಟೂರ್ನಿಯಲ್ಲಿ ಎರಡನೇ ಶ್ರೇಯಾಂಕದ ಆಟಗಾರ ಅಮೆರಿಕದ ಹಿಕಾರು ನಕಾಮುರ ಅವರನ್ನು ಮಣಿಸಿ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಗುರುವಾರ ನಡೆದಿದ್ದ ಎರಡು ಪಂದ್ಯಗಳನ್ನು ಡ್ರಾ ಮಾಡಿಕೊಂಡಿದ್ದ ಇಬ್ಬರೂ ಸಮಬಲ ಸಾಧಿಸಿದ್ದರು. ಆದರೆ ಶುಕ್ರವಾರ ನಡೆದ ಎರಡೂ ರ್‍ಯಾಪಿಡ್ ಟೈಬ್ರೇಕ್ ಪಂದ್ಯಗಳನ್ನು ಜಯಿಸಿದ ಪ್ರಜ್ಞಾನಂದ, ಪ್ರಶಸ್ತಿ ಗೆಲ್ಲುವ ‘ಫೇವರಿಟ್’ ಎನಿಸಿಕೊಂಡಿದ್ದ ನಕಾಮುರ ಅವರನ್ನು ಟೂರ್ನಿಯಿಂದ ಹೊರದಬ್ಬಿದರು.

18 ವರ್ಷದ ಪ್ರಜ್ಞಾನಂದ ಮುಂದಿನ ಪಂದ್ಯದಲ್ಲಿ ಹಂಗರಿಯ ಗ್ರ್ಯಾಂಡ್‌ಮಾಸ್ಟರ್ ಫೆರೆನ್ಸ್ ಬರ್ಕ್ಸ್ ಅವರ ಸವಾಲನ್ನು ಎದುರಿಸುವರು. ಡಿ.ಗುಕೇಶ್ ಅವರು ರಷ್ಯಾದ ಆಂಡ್ರೆ ಎಸಿಪೆಂಕೊ ವಿರುದ್ಧ ಗೆದ್ದು ಮುಂದಿನ ಹಂತಕ್ಕೆ ಲಗ್ಗೆಯಿಟ್ಟರು.

ಆದರೆ ಭಾರತದ ಇನ್ನೊಬ್ಬ ಸ್ಪರ್ಧಿ ನಿಹಾಲ್ ಸರೀನ್ ಅವರ ಸವಾಲಿಗೆ ತೆರೆಬಿತ್ತು. ನಾಲ್ಕನೇ ಸುತ್ತಿನಲ್ಲಿ ಅವರು ಇಯಾನ್ ನೆಪೊಮ್‌ನಿಷಿ ವಿರುದ್ಧದ ಎರಡೂ ರ್‍ಯಾಪಿಡ್ ಟೈಬ್ರೇಕ್ ಪಂದ್ಯಗಳಲ್ಲಿ ಸೋತರು. ವಿದಿತ್ ಗುಜರಾತಿ ಮತ್ತು ಅರ್ಜುನ್ ಇರಿಗೇಶಿ ಅವರು ಈಗಾಗಲೇ 16ರ ಘಟ್ಟ ಪ್ರವೇಶಿಸಿದ್ದಾರೆ.

ಮಹಿಳೆಯರ ವಿಭಾಗದಲ್ಲಿ ಎಲೈನ್ ರೋಬರ್ಸ್ ವಿರುದ್ಧದ ಎರಡೂ ರ್‍ಯಾಪಿಡ್ ಟೈಬ್ರೇಕ್ ಪಂದ್ಯಗಳನ್ನು ಗೆದ್ದುಕೊಂಡ ಡಿ.ಹಾರಿಕಾ ಅವರು ಮುಂದಿನ ಸುತ್ತು ಪ್ರವೇಶಿಸಿದರು.

ಆದರೆ ಕೋನೇರು ಹಂಪಿ ಅವರ ಸವಾಲಿಗೆ ತೆರೆಬಿತ್ತು. ಜಾರ್ಜಿಯದ ಬೆಲಾ ಕೊತೆನಶ್ವಿಲಿ ವಿರುದ್ಧದ ಎರಡೂ ರ್‍ಯಾಪಿಡ್ ಪಂದ್ಯಗಳನ್ನು ಅವರು ಸೋತರು. ಗುರುವಾರ ನಡೆದಿದ್ದ ಎರಡು ಪಂದ್ಯಗಳ ಬಳಿಕ ಇಬ್ಬರೂ ತಲಾ ಒಂದು ಗೆಲುವಿನೊಂದಿಗೆ 1–1 ರಿಂದ ಸಮಬಲ ಸಾಧಿಸಿದ್ದರು. ಇದೀಗ ಮಹಿಳೆಯರ ವಿಭಾಗದಲ್ಲಿ ಕಣದಲ್ಲಿ ಕಣದಲ್ಲಿರುವ ಭಾರತದ ಸ್ಪರ್ಧಿ ಹಾರಿಕಾ ಮಾತ್ರ.

ಕುಸ್ತಿ ಫೆಡರೇಷನ್ ಚುನಾವಣೆಗೆ ಹೈಕೋರ್ಟ್ ತಡೆಯಾಜ್ಞೆ

ಚಂಡೀಗಢ (ಪಿಟಿಐ): ಭಾರಿ ಕುತೂಹಲಕ್ಕೆ ಕಾರಣವಾಗಿದ್ದ ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಚುನಾವಣೆಗೆ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಶುಕ್ರವಾರ ತಡೆಯಾಜ್ಞೆ ನೀಡಿದೆ.

ಹಲವು ಸಲ ಮುಂದೂಡಲಾಗಿದ್ದ ಡಬ್ಲ್ಯುಎಫ್‌ಐ ಚುನಾವಣೆ ಶನಿವಾರ (ಆ.12) ನಡೆಯಬೇಕಿತ್ತು. ತಡೆಯಾಜ್ಞೆಯಿಂದಾಗಿ ಇದೀಗ ಮತ್ತೊಮ್ಮೆ ಮುಂದಕ್ಕೆ ಹೋಗಿದೆ.

ಚುನಾವಣೆಯಲ್ಲಿ ಹರಿಯಾಣ ಅಮೆಚೂರ್ ಕುಸ್ತಿ ಸಂಸ್ಥೆಗೆ ಮತದಾನದ ಅವಕಾಶ ನೀಡಿರುವುದನ್ನು ಪ್ರಶ್ನಿಸಿ ಹರಿಯಾಣ ಕುಸ್ತಿ ಸಂಸ್ಥೆ (ಎಚ್‌ಡಬ್ಲ್ಯುಎ) ಹೈಕೋರ್ಟ್ ಮೊರೆ ಹೋಗಿತ್ತು. ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿನೋದ್ ಎಸ್.ಭಾರದ್ವಾಜ್ ಅವರಿದ್ದ ಪೀಠವು ಮುಂದಿನ ಆದೇಶದವರೆಗೂ ಚುನಾವಣೆ ನಡೆಸುವಂತಿಲ್ಲ ಎಂದು ಹೇಳಿದ್ದು, ವಿಚಾರಣೆಯನ್ನು ಆ.28ಕ್ಕೆ ನಿಗದಿಪಡಿಸಿದೆ.

'ಹರಿಯಾಣ ಕುಸ್ತಿ ಸಂಸ್ಥೆಯು ರಾಜ್ಯದಲ್ಲಿ ಅಧಿಕೃತವಾಗಿ ನೋಂದಣಿಯಾಗಿರುವ ಸಂಸ್ಥೆಯಾಗಿದ್ದು, ಡಬ್ಲ್ಯುಎಫ್‌ಐ ಮಾನ್ಯತೆ ಹೊಂದಿದೆ. ಆದ್ದರಿಂದ ಚುನಾವಣೆಯಲ್ಲಿ ಮತದಾನ ಮಾಡಲು ಇಬ್ಬರು ಪ್ರತಿನಿಧಿಗಳನ್ನು ಕಳುಹಿಸುವ ಅವಕಾಶ ಸಂಸ್ಥೆಗೆ ಇದೆ’ ಎಂದು ಎಚ್‌ಡಬ್ಲ್ಯುಎಯನ್ನು ಪ್ರತಿನಿಧಿಸುತ್ತಿರುವ ವಕೀಲ ರವೀಂದರ್ ಮಲಿಕ್ ತಿಳಿಸಿದರು.

‘ಡಬ್ಲ್ಯುಎಫ್‌ಐ ಚುನಾವಣಾಧಿಕಾರಿಯು ಹರಿಯಾಣ ಅಮೆಚೂರ್ ಕುಸ್ತಿ ಸಂಸ್ಥೆಯ ಪ್ರತಿನಿಧಿಗಳಿಗೆ ಮತದಾನದ ಅವಕಾಶ ನೀಡಿರುವುದು ನಿಯಮಗಳ ಉಲ್ಲಂಘನೆಯಾಗಿದೆ. ಆ ಸಂಸ್ಥೆಯು ಡಬ್ಲ್ಯುಎಫ್‌ಐ ಮಾನ್ಯತೆ ಹೊಂದಿರಬಹುದು. ಆದರೆ ಹರಿಯಾಣ ಒಲಿಂಪಿಕ್ ಸಂಸ್ಥೆಯ ಮಾನ್ಯತೆ ಹೊಂದಿಲ್ಲ. ಆದ್ದರಿಂದ ಚುನಾವಣಾಧಿಕಾರಿಯ ನಿರ್ಧಾರವನ್ನು ಪ್ರಶ್ನಿಸಿ ಹೈಕೋರ್ಟ್ ಮೊರೆ ಹೋಗಿದ್ದೇವೆ‘ ಎಂದು ಹೇಳಿದರು.

ಭಾರತ ಕುಸ್ತಿ ಫೆಡರೇಷನ್ ಚುನಾವಣೆಗೆ ಈ ಹಿಂದೆ ಗುವಾಹಟಿ ಹೈಕೋರ್ಟ್ ಕೂಡಾ ತಡೆಯಾಜ್ಞೆ ನೀಡಿತ್ತು. ಮತದಾರರ ಪಟ್ಟಿಯಲ್ಲಿ ತಮ್ಮ ಸಂಸ್ಥೆಯ ಹೆಸರು ಇಲ್ಲದಿರುವುದನ್ನು ಪ್ರಶ್ನಿಸಿ ಅಸ್ಸಾಂ ಕುಸ್ತಿ ಸಂಸ್ಥೆಯು ಹೈಕೋರ್ಟ್ ಮೊರೆ ಹೋಗಿತ್ತು.

ಸಂಕ್ಷಿಪ್ತ ಸುದ್ದಿ

ಮಾಧ್ಯಮ ಸಂಯೋಜಕರಾಗಿ ರಾಜಾರಾಮನ್



ನವದೆಹಲಿ (ಪಿಟಿಐ): ಚೀನಾದಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸುವ ಭಾರತ ತಂಡದ ಮಾಧ್ಯಮ ಸಂಯೋಜ ಕರಾಗಿ ಕ್ರೀಡಾ ಪತ್ರಕರ್ತ ಜಿ.ರಾಜಾರಾಮನ್ ಅವರನ್ನು ಭಾರತ ಒಲಿಂಪಿಕ್ಸ್ ಸಂಸ್ಥೆ ಶುಕ್ರವಾರ ನೇಮಕ ಮಾಡಿದೆ.

ಸೆ. 23ರಿಂದ ಅಕ್ಟೋಬರ್ 8ರವರೆಗೆ ಚೀನಾದ ಹಾಂಗ್‌ಝೌನಲ್ಲಿ ಏಷ್ಯನ್ ಗೇಮ್ಸ್ ನಡೆಯಲಿದೆ. ಅಲ್ಲಿಗೆ ಭಾರತವು ಅತಿದೊಡ್ಡ ತಂಡವನ್ನು ಕಳುಹಿಸಲಿದೆ.

‘ರಾಜಾರಾಮನ್ ಅವರ ಅಗಾಧ ಅನುಭವವು ಏಷ್ಯನ್ ಗೇಮ್ಸ್ ಸಂದರ್ಭದಲ್ಲಿ ಭಾರತ ತಂಡ ಮತ್ತು ಮಾಧ್ಯಮಗಳ ನಡುವೆ ಉತ್ತಮ ಸಂವಹನ ಸಾಧ್ಯವಾಗಲಿದೆ. ಅಲ್ಲದೆ, ನಮ್ಮ ಕ್ರೀಡಾಪಟುಗಳ ಪ್ರಾತಿನಿಧ್ಯವನ್ನು ಹೆಚ್ಚಿಸುವ ವಿಶ್ವಾಸ ಹೊಂದಿದ್ದೇವೆ’ ಎಂದು ಭಾರತ ಒಲಿಂಪಿಕ್ಸ್ ಸಂಸ್ಥೆಯ ಅಧ್ಯಕ್ಷೆ ಪಿ.ಟಿ. ಉಷಾ ಪ್ರತಿಕ್ರಿಯಿಸಿದ್ದಾರೆ.

ಇನ್‌ಸ್ಟಾಗ್ರಾಮ್: ಕೊಹ್ಲಿ ಪ್ರತಿ ಪೋಸ್ಟ್ ಮೌಲ್ಯ ₹ 11.45 ಕೋಟಿ

ನವದೆಹಲಿ: ಭಾರತ ಕ್ರಿಕೆಟ್ ತಂಡದ ಬ್ಯಾಟರ್ ವಿರಾಟ್ ಕೊಹ್ಲಿ ಅವರು ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಮಾಡುವ ಪ್ರತಿಯೊಂದು ಪ್ರಾಯೋಜಿತ ಪೋಸ್ಟ್‌ಗೆ ₹ 11.45 ಕೋಟಿ ಸಂಭಾವನೆ ಪಡೆಯುತ್ತಿದ್ದಾರೆ ಎಂದು ವರದಿಯೊಂದು ತಿಳಿಸಿದೆ.

ಕೊಹ್ಲಿ ಅವರು ಸಾಮಾಜಿಕ ಜಾಲತಾಣ ಇನ್‌ಸ್ಟಾಗ್ರಾಮ್‌ನಲ್ಲಿ 25 ಕೋಟಿಗೂ ಅಧಿಕ ಫಾಲೋವರ್ಸ್‌ಗಳನ್ನು ಹೊಂದಿದ್ದಾರೆ.

ಪ್ರತಿ ಪೋಸ್ಟ್‌ಗೆ ₹ 26.75 ಕೋಟಿ ಪಡೆಯುವ ಪೋರ್ಚುಗಲ್ ಫುಟ್‌ಬಾಲ್ ತಂಡದ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಅವರು ಅತಿಹೆಚ್ಚು ಸಂಭಾವನೆ ಪಡೆಯುವವರ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ.

₹ 21.49 ಕೋಟಿ ಪಡೆಯುವ ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ ಎರಡನೇ ಸ್ಥಾನದಲ್ಲಿದ್ದಾರೆ.

ಸಿಪಿಎಲ್‌ನಲ್ಲಿ ಆಡಲಿದ್ದಾರೆ ರಾಯುಡು

ಮುಂಬೈ (ಪಿಟಿಐ): ಭಾರತ ತಂಡದ ಮಾಜಿ ಕ್ರಿಕೆಟರ್ ಅಂಬಟಿ ರಾಯುಡು ಅವರು ಕೆರಿಬಿಯನ್ ಪ್ರೀಮಿಯರ್ ಲೀಗ್‌ನಲ್ಲಿ (ಸಿಪಿಎಲ್) ಸೇಂಟ್ ಕಿಟ್ಸ್ ಮತ್ತು ನೇವಿಸ್ ಪೈರೆಟ್ಸ್ ತಂಡವನ್ನು ಸೇರಿಕೊಂಡಿದ್ದಾರೆ.

2023ರ ಇಂಡಿಯನ್ ಪ್ರೀಮಿಯರ್ ಲೀಗ್‌ನ (ಐಪಿಎಲ್) ಚಾಂಪಿಯನ್ ತಂಡ ಚೆನ್ನೈ ಸೂಪರ್ ಕಿಂಗ್ಸ್ ತಂಡದಲ್ಲಿ ಆಡಿದ್ದ 37 ವರ್ಷದ ಬ್ಯಾಟರ್ ರಾಯುಡು, ಸೇಂಟ್ ಕಿಟ್ಸ್ ತಂಡದೊಂದಿಗೆ ಸಹಿ ಮಾಡಿದ್ದಾರೆ. ಲೆಗ್ ಸ್ಪಿನ್ನರ್ ಪ್ರವೀಣ್ ತಾಂಬೆ ಬಳಿಕ ಸಿಪಿಎಲ್‌ನಲ್ಲಿ ಆಡಲಿರುವ ಭಾರತದ ಎರಡನೇ ಕ್ರಿಕೆಟಿಗ ಅವರಾಗಿದ್ದಾರೆ.

ಐಪಿಎಲ್ ಟೂರ್ನಿ ಬಳಿಕ ರಾಯುಡು ಅವರು ಅಮೆರಿಕದ ಮೇಜರ್ ಕ್ರಿಕೆಟ್ ಲೀಗ್‌ನಲ್ಲಿ (ಎಂಎಲ್‌ಸಿ) ಚೆನ್ನೈ ಸೂಪರ್ ಕಿಂಗ್ಸ್‌ನ ಸೋದರ ಫ್ರಾಂಚೈಸಿ ಟೆಕ್ಸಾ ಸೂಪರ್ ಕಿಂಗ್ಸ್ ಜತೆ ಸಹಿ ಮಾಡಿದ್ದರು.

ಭಾರತದ ಕ್ರಿಕೆಟಿಗರು ನಿವೃತ್ತಿ ಪಡೆದು ವಿದೇಶಿ ಲೀಗ್‌ಗಳಿಗೆ ಹೋಗುವ ಮುನ್ನ ನಿಗದಿಯ ಅವಧಿಯ ಕೂಲಿಂಗ್ ಆಫ್ ನಿಯಮ ಜಾರಿಗೆ ತರಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಚಿಂತಿಸುತ್ತಿದೆ ಎಂದು ಹೇಳಿತ್ತು. ಈ ಕಾರಣಕ್ಕೆ ಅವರು ಎಂಎಲ್‌ಸಿ ಟೂರ್ನಿಯಲ್ಲಿ ಭಾಗವಹಿಸಿರಲಿಲ್ಲ.

ಆದರೆ, ಬಿಸಿಸಿಐ ಅಧಿಕೃತವಾಗಿ ಇನ್ನೂ ಘೋಷಣೆ ಮಾಡಿಲ್ಲ. ಹೀಗಾಗಿ, ರಾಯುಡು ಅವರು ಸಿಪಿಎಲ್‌ನತ್ತ ಹೆಜ್ಜೆ ಹಾಕಿದ್ದಾರೆ.

ಬಾಂಗ್ಲಾ ತಂಡಕ್ಕೆ ಶಕೀಬ್ ಸಾರಥ್ಯ

ಡಾಕಾ (ಪಿಟಿಐ): ಅನುಭವಿ ಆಲ್‌ರೌಂಡರ್ ಶಕೀಬ್ ಅಲ್ ಹಸನ್ ಅವರು ಏಷ್ಯಾ ಕಪ್ ಮತ್ತು ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಬಾಂಗ್ಲಾದೇಶ ತಂಡವನ್ನು ಮುನ್ನಡೆಸಲಿದ್ದಾರೆ.

ಈ ಎರಡು ಟೂರ್ನಿಗಳ ಹೊರತಾಗಿ ಬಾಂಗ್ಲಾ ಸೆಪ್ಟೆಂಬರ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಸೀಮಿತ ಓವರ್‌ಗಳ ಸರಣಿ ಆಡಲಿದೆ.

‘ಏಷ್ಯಾ ಕಪ್ ಮತ್ತು ವಿಶ್ವಕಪ್ ಟೂರ್ನಿಗೆ ಶಕೀಬ್ ಅವರನ್ನು ನಾಯಕರನ್ನು ಆಯ್ಕೆ ಮಾಡಿದ್ದೇವೆ. ಈ ಎರಡೂ ಟೂರ್ನಿಗೆ 17 ಸದಸ್ಯರ ತಂಡವನ್ನು ನಾಳೆ ಪ್ರಕಟಿಸಲಾಗುವುದು’ ಎಂದು ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ ಅಧ್ಯಕ್ಷ ನಜ್ಮುಲ್ ಹಸನ್ ಹೇಳಿದ್ದಾರೆ.

ತಂಡವನ್ನು ಮುನ್ನಡೆಸುತ್ತಿದ್ದ ತಮೀಮ್ ಇಕ್ಬಾಲ್ ಅವರು ಬೆನ್ನುನೋವಿನ ಕಾರಣದಿಂದ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಿಂದ ದೂರ ಉಳಿದಿದ್ದಾರೆ. ಹೀಗಾಗಿ, ಜವಾಬ್ದಾರಿ 36 ವರ್ಷದ ಶಕೀಬ್ ಮೇಲೆ ಬಿದ್ದಿದೆ. ಈ ಬೆಳವಣಿಗೆಯಿಂದಾಗಿ ಶಕೀಲ್ ಮೂರು ಮಾದರಿಯ ಪಂದ್ಯಗಳಲ್ಲಿ ಬಾಂಗ್ಲಾದೇಶ ತಂಡದ ನಾಯಕರಾಗಿದ್ದಾರೆ. ಕಳೆದ ವರ್ಷದಿಂದ ಅವರು ಟೆಸ್ಟ್ ಮತ್ತು T20 ತಂಡದ ನಾಯಕರಾಗಿದ್ದಾರೆ.

ಮಹಿಳಾ ವಿಶ್ವಕಪ್ ಫುಟ್‌ಬಾಲ್: ಜಪಾನ್ ಓಟಕ್ಕೆ ತೆರೆ

ಸೆಮಿಫೈನಲ್‌ಗೆ ಸ್ವೀಡನ್, ಸ್ಪೇನ್

ಸ್ಪೇನ್ ತಂಡದ ಗೆಲುವಿನ ಗೋಲು ಗಳಿಸಿದ ಸಲ್ಮಾ ಪರಲುಯೆಲೊ ಅವರು ಸಹ ಆಟಗಾರ್ತಿಯರೊಂದಿಗೆ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಆಕ್ಲೆಂಡ್ (ಎಎಫ್‌ಪಿ): ಅಮಂಡಾ ಇಲೆಸ್ಟೆಡ್ ಮತ್ತು ಫಿಲಿಪಾ ಏಂಜೆಲ್‌ಡಾಲ್ ಅವರ ಗೋಲುಗಳ ನೆರವಿನಿಂದ ಜಪಾನ್ ತಂಡವನ್ನು 2–1 ರಿಂದ ಮಣಿಸಿದ ಸ್ವೀಡನ್, ಮಹಿಳೆಯರ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು.

ಆಕ್ಲೆಂಡ್‌ನ ಈಡನ್ ಪಾರ್ಕ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದ 32ನೇ ನಿಮಿಷದಲ್ಲಿಸೆಂಟರ್ ಬ್ಯಾಕ್ ಆಟಗಾರ್ತಿ ಅಮಂಡಾ, ಸ್ವೀಡನ್ ತಂಡಕ್ಕೆ ಮೇಲುಗೈ ತಂದಿತ್ತರು. ಈ ಟೂರ್ನಿಯಲ್ಲಿ ಅವರು ಗಳಿಸಿದ ನಾಲ್ಕನೇ ಗೋಲು ಇದು.

ಎರಡನೇ ಅವಧಿಯಲ್ಲಿ (51) ತಂಡಕ್ಕೆ ಲಭಿಸಿದ ಪೆನಾಲ್ಟಿ ಕಿಕ್ ಅವಕಾಶದಲ್ಲಿ ಚೆಂಡನ್ನು ಗುರಿ ಸೇರಿಸಿದ ಫಿಲಿಪಾ ಅವರು ಮುನ್ನಡೆಯನ್ನು 2–0ಗೆ ಹೆಚ್ಚಿಸಿದರು.

ಮರುಹೋರಾಟ ನಡೆಸಿದ ಜಪಾನ್ ತಂಡದ ಪರ ಹೊನೊಕ ಹಯಾಶಿ (87) ಗೋಲು ಗಳಿಸಿ ಸೋಲಿನ ಅಂತರ ತಗ್ಗಿಸಿದರು. ಜಪಾನ್ ತಂಡಕ್ಕೆ 76ನೇ ನಿಮಿಷದಲ್ಲಿ ಪೆನಾಲ್ಟಿ ಕಿಕ್ ಅವಕಾಶ ಲಭಿಸಿತ್ತು. ಆದರೆ ರಿಕೊ ಉಯೆಕಿ ಒದ್ದ ಚೆಂಡು ಕ್ರಾಸ್‌ಬಾರ್‌ಗೆ ಬಡಿಯಿತು. ರಿಬೌಂಡ್ ಆಗಿ ಬಂದ ಚೆಂಡನ್ನು ಹೆಡ್ ಮಾಡಿದರೂ, ಗೋಲ್‌ಪೋಸ್ಟ್ ಮೇಲಿಂದ ಹೊರಕ್ಕೆ ಹೋಯಿತು.

ನಾಲ್ಕನೇ ವಿಶ್ವಕಪ್ ಆಡುತ್ತಿರುವ ಸ್ವೀಡನ್, ಮೂರನೇ ಬಾರಿ ಸೆಮಿಫೈನಲ್ ಪ್ರವೇಶಿಸಿದ ಸಾಧನೆ ಮಾಡಿದೆ.

2011ರ ಚಾಂಪಿಯನ್ ಜಪಾನ್ ತಂಡದ ನಿರ್ಗಮನದೊಂದಿಗೆ ಈ ಬಾರಿಯ ಟೂರ್ನಿಯಲ್ಲಿ ಹೊಸ ತಂಡಕ್ಕೆ ಪ್ರಶಸ್ತಿ ಲಭಿಸುವುದು ಖಚಿತವಾಗಿದೆ. ಈ ಹಿಂದೆ ಪ್ರಶಸ್ತಿ ಜಯಿಸಿದ್ದ ಅಮೆರಿಕ, ಜರ್ಮನಿ ಮತ್ತು ನಾರ್ವೆ ತಂಡಗಳು ಈಗಾಗಲೇ ಟೂರ್ನಿಯಿಂದ ಹೊರಬಿದ್ದಿದ್ದವು.

2003ರ ‘ರನ್ನರ್ ಅಪ್’ ಸ್ವೀಡನ್ ತಂಡ ಆ.15 ರಂದು ನಡೆಯಲಿರುವ ಸೆಮಿಫೈನಲ್‌ನಲ್ಲಿ ಸ್ಪೇನ್ ತಂಡವನ್ನು ಎದುರಿಸಲಿದೆ. ವೆಲಿಂಗ್ಟನ್‌ನಲ್ಲಿ ನಡೆದ ದಿನದ ಮತ್ತೊಂದು ಎಂಟರಘಟ್ಟದ ಪಂದ್ಯದಲ್ಲಿ ಸ್ಪೇನ್ 2–1 ರಿಂದ ನೆದರ್ಲೆಂಡ್ಸ್ ತಂಡವನ್ನು ಮಣಿಸಿ ಇದೇ ಮೊದಲ ಬಾರಿ ಸೆಮಿಫೈನಲ್ ಪ್ರವೇಶಿಸಿತು.

ಹೆಚ್ಚುವರಿ ಅವಧಿಯಲ್ಲಿ (111ನೇ ನಿಮಿಷ) ಗೋಲು ಗಳಿಸಿದ ಸಲ್ಮಾ ಪರಲುಯೆಲೊ ಅವರು ಸ್ಪೇನ್ ತಂಡದ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದರು.

ಜಿದ್ದಾಜಿದ್ದಿನ ಸೆಣಸಾಟ ನಡೆದ ಪಂದ್ಯದ 81ನೇ ನಿಮಿಷದಲ್ಲಿ ಮರಿಯೋನಾ ಕಾಲ್ಡೆಂಟಿ ಅವರು ಸ್ಪೇನ್‌ಗೆ ಮುನ್ನಡೆ ತಂದಿತ್ತಿದ್ದರು. ಆದರೆ ನೆದರ್ಲೆಂಡ್ಸ್ ತಂಡದ ಸ್ಟೆಫಾನಿ ವಾನ್ ರೆಡ್ ಗ್ರಾಟ್ ಅವರು ಇಂಜುರಿ ಅವಧಿಯಲ್ಲಿ (90 + 1) ಗೋಲು ಗಳಿಸಿ ಪಂದ್ಯವನ್ನು ಸಮಸ್ಥಿತಿಗೆ ತಂದರು. ಇದರಿಂದ ಹೆಚ್ಚುವರಿ ಅವಧಿಯ ಮೊರೆ ಹೋಗಲಾಯಿತು.

19 ವರ್ಷದ ಸಲ್ಮಾ ಅವರು ಏಕಾಂಗಿಯಾಗಿ ಚೆಂಡಿನೊಂದಿಗೆ ಮುನ್ನುಗ್ಗಿ ಅಮೋಘ ರೀತಿಯಲ್ಲಿ ಗುರಿ ಸೇರಿಸಿ ಸ್ಪೇನ್ ಬಳಗದಲ್ಲಿ ಹರ್ಷಕ್ಕೆ ಕಾರಣರಾದರು. ಸಲ್ಮಾ ಅವರು ಒಂಬತ್ತು ತಿಂಗಳ ಹಿಂದೆಯಷ್ಟೇ ಸ್ಪೇನ್ ಸೀನಿಯರ್ ತಂಡಕ್ಕೆ ಪದಾರ್ಪಣೆ ಮಾಡಿದ್ದರು. ಕಳೆದ ವರ್ಷ ನಡೆದಿದ್ದ 20 ವರ್ಷದೊಳಗಿನವರ ವಿಶ್ವಕಪ್ ಫೈನಲ್‌ನಲ್ಲಿ ಅವರು ಜಪಾನ್ ವಿರುದ್ಧ ಎರಡು ಗೋಲು ಗಳಿಸಿದ್ದರು.

ಇಂದಿನ ಕ್ವಾರ್ಟರ್ ಫೈನಲ್ ಪಂದ್ಯಗಳು: ಆಸ್ಟ್ರೇಲಿಯಾ– ಫ್ರಾನ್ಸ್, ಇಂಗ್ಲೆಂಡ್– ಕೊಲಂಬಿಯ

ಮಹಾರಾಜ ಟ್ರೋಫಿಯಲ್ಲಿ ಪಾಲ್ಗೊಳ್ಳುವ ಮೈಸೂರು ವಾರಿಯರ್ಸ್ ಆಟಗಾರರನ್ನು ಶುಕ್ರವಾರ ಪರಿಚಯಿಸಲಾಯಿತು

ಮಹಾರಾಜ ಟ್ರೋಫಿ: ವಾರಿಯರ್ಸ್ ಬಳಗದಲ್ಲಿ ವೇಗಿ

ಕಣಕ್ಕೆ ಮರಳಲು ಪ್ರಸಿದ್ಧಕೃಷ್ಣ ಸಿದ್ಧ

ಬೆಂಗಳೂರು: ದೀರ್ಘ ಸಮಯದಿಂದ ಕ್ರಿಕೆಟ್‌ನಿಂದ ದೂರ ಉಳಿದಿದ್ದ ಪ್ರಸಿದ್ಧ ಕೃಷ್ಣ ಈಗ ಮತ್ತೆ ಕಣಕ್ಕಿಳಿಯಲು ಸಿದ್ಧರಾಗಿದ್ದಾರೆ.

ಹೋದ ವರ್ಷದ ಆಗಸ್ಟ್‌ನಿಂದಲೇ ಬೆನ್ನುನೋವಿನಿಂದ ಬಳಲಿದ್ದ ಅವರು ಶಸ್ತ್ರಚಿಕಿತ್ಸೆಗೂ ಒಳಗಾಗಿದ್ದರು. ನಂತರ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ಆರೈಕೆ ಪಡೆದಿದ್ದರು. ಐಪಿಎಲ್‌ನಲ್ಲಿಯೂ ಆಡಿರಲಿಲ್ಲ. ಇದೀಗ ಅವರು ಮಹಾರಾಜ ಟ್ರೋಫಿಯಲ್ಲಿ ಆಡುವ ಮೂಲಕ ಕಣಕ್ಕೆ ಮರಳಲು ಸಿದ್ಧರಾಗಿದ್ದಾರೆ. ಅಲ್ಲದೇ ಐರ್ಲೆಂಡ್ ಟಿ20 ಸರಣಿ ಆಡಲು ತೆರಳಲಿರುವ ಭಾರತ ತಂಡದೊಂದಿಗೆ ಪ್ರಯಾಣ ಬೆಳೆಸಲು ಸಜ್ಜಾಗಿದ್ದಾರೆ.

ಇದೇ 13ರಂದು ಆರಂಭವಾಗಲಿರುವ ಮಹಾರಾಜ ಟ್ರೋಫಿ ಟೂರ್ನಿಯಲ್ಲಿ ಪ್ರಸಿದ್ಧಕೃಷ್ಣ ಅವರು ಮೈಸೂರು ವಾರಿಯರ್ಸ್ ತಂಡವನ್ನು ಪ್ರತಿನಿಧಿಸುವರು. ಶುಕ್ರವಾರ ತಂಡದ ನಾಯಕ ಮತ್ತು ಮುಖ್ಯ ಕೋಚ್ ಅವರನ್ನು ಪ್ರಕಟಿಸುವ ಕಾರ್ಯಕ್ರಮದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಪ್ರಸಿದ್ಧ, ‘ಸಂಪೂರ್ಣ ಫಿಟ್ ಆಗಿದ್ದೇನೆ. ಮೈಸೂರಿನಲ್ಲಿ ಉತ್ತಮ ಅಭ್ಯಾಸ ಮಾಡಿದ್ದೇನೆ. ಐರ್ಲೆಂಡ್‌ಗೆ ಹೋಗಲು ಸಿದ್ಧವಾಗಿರುವೆ’ ಎಂದರು.

ಸೋಮವಾರ ಅವರು ಐರ್ಲೆಂಡ್‌ಗೆ ತೆರಳುವ ಸಾಧ್ಯತೆ ಇದ್ದು, ಭಾನುವಾರ ಆರಂಭವಾಗುವ ಮಹಾರಾಜ ಟ್ರೋಫಿ ಟೂರ್ನಿಯ ಪಂದ್ಯದಲ್ಲಿ ಆಡುವ ಸಾಧ್ಯತೆ ಇದೆ.

ಈ ಸಂದರ್ಭದಲ್ಲಿ ತಂಡದ ನಾಯಕನಾಗಿ ನೇಮಕವಾದ ಕರುಣ್ ನಾಯರ್, ‘ಮೈಸೂರು ವಾರಿಯರ್ಸ್‌ನಲ್ಲಿ ಉತ್ತಮ ಆಟಗಾರರಿದ್ದಾರೆ. ಇಂತಹ ಬಳಗವನ್ನು ಮುನ್ನಡೆಸಲು ಸಂತಸವಾಗುತ್ತಿದೆ. ಈ ಟೂರ್ನಿಯಲ್ಲಿ ತಂಡವು ಉನ್ನತ ಸಾಧನೆ ಮಾಡಲಿದೆ‘ ಎಂದು ವಿಶ್ವಾಸವ್ಯಕ್ತಪಡಿಸಿದರು.

‘ನಮ್ಮ ಫ್ರಾಂಚೈಸಿಯು ಕ್ರಿಕೆಟ್ ತಂಡ ಮಾತ್ರವಲ್ಲ. ಸಮಾಜಮುಖಿಯಾಗಿ ಹಲವು ಕಾರ್ಯಗಳಲ್ಲಿ ಭಾಗಿಯಾಗಿದೆ. ಕ್ರಿಕೆಟ್‌ನಲ್ಲಿ ಹೊಸ ಪ್ರತಿಭೆಗಳಿಗೆ ಅವಕಾಶ ನೀಡಲಾಗುತ್ತಿದೆ. ಪ್ರತಿಭಾಶೋಧದಲ್ಲಿ ಈ ಬಾರಿ ಲಂಕೇಶ್ ಮತ್ತು ಗೌತಮ್ ಸಾಗರ್ ಎಂಬ ಪ್ರತಿಭಾವಂತರನ್ನು ಆಯ್ಕೆ ಮಾಡಿದ್ದೇವೆ‘ ತಂಡದ ಮಾಲೀಕ ಮತ್ತು ಸೈಕಲ್ ಪ್ಯೂರ್ ಅಗರಬತ್ತಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗಾ ಹೇಳಿದರು.

ತಂಡದ ಸಹಾಯಕ ಕೋಚ್ ವಿಜಯ್ ಮದ್ಯಾಳ್ಕರ್, ಬೌಲಿಂಗ್ ಕೋಚ್ ಆದಿತ್ಯ ಸಾಗರ್, ಫಿಸಿಯೊ ಶ್ರೀರಂಗ, ಟ್ರೈನರ್ ಅರ್ಜುನ್ ಹೊಯ್ಸಳ ಹಾಗೂ ಪರ್ಫಾರ್ಮೆನ್ಸ್ ಅನಾಲಿಸ್ಟ್ ಸಚ್ಚಿದಾನಂದ ಹಾಗೂ ಷಣ್ಮುಗಂ ಮಸ್ಸಾರ್ ಮತ್ತು ಆಟಗಾರರು ಹಾಜರಿದ್ದರು.

ಮಹಮ್ಮಡನ್ ತಂಡಕ್ಕೆ ಜಯ

ಕೋಲ್ಕತ್ತ: ಡೇವಿಡ್ ಲಾಲನ್ಸಂಗ ಅವರ ಆಟದ ಬಲದಿಂದ ಮಹಮ್ಮಡನ್ ಸ್ಪೋರ್ಟಿಂಗ್ ತಂಡವು ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ 2–1ರಿಂದ ಇಂಡಿಯನ್ ನೇವಿ ತಂಡವನ್ನು ಮಣಿಸಿತು.

ಶುಕ್ರವಾರ ನಡೆದ ಪಂದ್ಯದಲ್ಲಿ ಡೇವಿಡ್ 50ನೇ ನಿಮಿಷದಲ್ಲಿ ಗೋಲು ಗಳಿಸಿ ತಂಡಕ್ಕೆ ಮುನ್ನಡೆ ಒದಗಿಸಿದರು. 69ನೇ ನಿಮಿಷದಲ್ಲಿ ಲಾಲ್ರೆಮ್‌ಸಂಗ ಫನೈ ಅವರು ಗುರಿ ಸೇರಿಸುವ ಮೂಲಕ ತಂಡದ ಗೋಲನ್ನು ದ್ವಿಗುಣಗೊಳಿಸಿದರು.

90 + 7ನೇ ನಿಮಿಷದಲ್ಲಿ ಇಂಡಿಯನ್ ನೇವಿ ತಂಡದ ಪಿ.ಎಂ. ಬಿಟ್ಟೊ ಅವರು ಗೋಲು ಗಳಿಸುವ ಮೂಲಕ ಸೋಲಿನ ಅಂತರವನ್ನು ತಗ್ಗಿಸಿದರು.

ಬೆಂಗಳೂರು ರೇಸ್

ಪಿಸ್ಸಾರೊ ಗೆಲ್ಲುವ ನಿರೀಕ್ಷೆ

ಗವರ್ನರ್ಸ್ ಕಪ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಪಿಸ್ಸಾರೊ ಈ ರೇಸ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.00ಕ್ಕೆ ಪ್ರಾರಂಭವಾಗಲಿರುವ ದಿನದ ಹತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಗುಡ್ ಟಿಪ್ 5, ಸ್ಟೆಪ್ ಟು ಡೆಸ್ಟಿನಿ 2, ಗೋಲ್ಡ್ ಫೇಮ್ 1
2ನೇ ರೇಸ್: ಏಂಜೆಲಿಸ್ 6, ಪಾಲೊಮಿನೊ 3, ಹೈ ಟ್ರಿಬ್ಯೂಟ್ 1
3ನೇ ರೇಸ್: ಗ್ರೂವಿನ್ 8, ಫಾರ್ಟಿ ನೈನರ್ 7, ಅಲ್ಸಿಡಸ್ ಸಿನರ್ಜಿ 5
4ನೇ ರೇಸ್: ಎಟೋಶಾ 2, ಅಶ್ವ ಯುದ್ವೀರ್ 1, ಆರ್ಟೆಮಿಸ್ ಇಗ್ನೇಷಿಯಾ 6
5ನೇ ರೇಸ್: ಜೂರಿ 11, ಮೇಡಮ್ ರಿಚ್ 7, ಎಬೊಟ್ಸೆ 2
6ನೇ ರೇಸ್: ಕ್ವಾರ್ 8, ಶಾಬೆಲ್ 1, ಕಾಂಟ್ರಿಬ್ಯೂಟ್ 10
7ನೇ ರೇಸ್: ಒನ್ಸ್ ಯು ಗೋ ಬ್ಲ್ಯಾಕ್ 3, ಎವಾಲ್ಡೊ 2, ಎ ಸ್ಟಾರ್ ಈಸ್ ಬಾರ್ನ್ 1
8ನೇ ರೇಸ್: ಪಿಸ್ಸಾರೊ 3, ಲಾ ರೀನ 1
9ನೇ ರೇಸ್: ಮೈಟಿ ಸ್ವಾಲೊ 11, ಡೈನಾಮಿಕ್ ಫೋರ್ಸ್ 3, ಗ್ರೀನ್‌ವಿಚ್ 2
10ನೇ ರೇಸ್: ಮಜಾಲ್ ಟೋವ್ 1, ರೈನ್‌ಬೋ ಡ್ರೀಮರ್ 2, ಸೋಫಿಯಾ 5

ಉತ್ತಮ ಬೆಟ್: ಮಜಾಲ್ ಟೋವ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
6,7,8,9,10	2,3,4	5,6,7	6,7,8

ALVA'S Education Foundation®

ALVA'S EDUCATION FOUNDATION (R.)

Moodubidire, 574 227 D.K.

CA INTERMEDIATE EXAM 2023 ALL INDIA RANK

10th Rank — DEEPAK HEGDE

50th Rank — PRAJWAL MOOLYA

OVERALL RESULT 58.25%

199 Students Cleared CA FOUNDATION EXAM IN 2023

Commendable Achievement by our PUC & Degree College Students

65 Students Cleared **CA INTERMEDIATE** Exam in **2023**

AMANRAJ R A, ROYDAN D'SILVA, SHIVANI, SUMANT MOHAN DESAI, K DISHA RAO, SRUSHTI UDAY K, CHINMAYA S ALLI, NITIN KUMAR N, RAGHAV JAIPRAKASH M, KHUSHI HARISH, ADARSH J ACHARYA

PRANAV B R, AKASH CHANDRAKANT H, CHETAN REDDY G, SHREYAS KUMAR, SUHAS S M, SUKRIT N S, VARUN JAGDISH LAHOTI, RAKSHITA J, NEELAMMA C P, THEJASHWINI I V, SWATHI SHRIRAM G

SHRIKAR PATIL, HARISH RAVINDRA H, VAISHNAVI S, THANUSHREE U, KRISHNA G KANKANI, R A TUSHAR, SHREYA APPASAB H, ABHISHEK MISHINI, RAJAT RAJASHEKHAR W, SHREYAS NAGESH S, MONISHA KUNDER

SHIKHA S, YASH INANI, ASHEL SAVER D'SOUZA, G P PRANJALI, KESHAV SHARMA, VIDISHA KAMATH, RAM KUMAR D B, SRI LAKSHMI T, ADITHYA SHARMA, BHAVANA B K, VAISHNAVI B V

KARTHIK INDRA, RANSON FERNANDES, PRUTHVI K B, RAMNATH S PRABHU, KRITHI B P, AKASH A KAMATH, SUSHANTH, SMITHA, SHIVANI KOTIAN, SOWKYA G, SUSHANTH S

RITWIK J SHETTY, SHREYA P POOJARY, PRAJWAL REDDY, SURAKSHI SHETTY, AYUSH A KAMATH, KRITHIKA, SHRAVANYA J P, NITHYASHREE R, SHRUTHIKA, AISHWARYA, KHUSHI U SALIAN

PRAKRUTHI C, PRATHIKSHA, MANJUNATHA S S, HRISHIKA SHETTY, DEEKSHA, SANIDHYA, AJAY R, KAVANA, TEJAS N M, THARUN K, DARSHAN POOJARY

KAVANA, SUCHITHA B C, DHANYA S, LIKHITH B, VAISHNAVI, SOWMYA G, PRANEETH MANNUR, SHREYA S H, KRATIKA UDAY SHET, CHARITHA, SHALINI M

PAVAN KUMAR BS, KRUTHIKA B, JYOTHI V BANGERA, KUSHI R POOJARY, ABHISHEK R DASAR, ARYA M, THARUN K, PUNEETH S, VAISHNAVI S H, HINDUSHREE J, VIJAYKUMAR M, VIKASA S GOWDA

ALVA'S Degree College

ACCREDITED WITH GRADE A NAAC

Affiliated to Mangalore University

ADMISSIONS OPEN for 2023-24

- Accredited **CA** Coaching Centre by **ICAI**
- Proposed to be **Autonomous College** from 2023-24
- Special Concession for above **95%** in **PUC**
- Highest No. of Ranks In Mangalore University **Since 12 years**

B.Com with CA / CS/ ACCA / CMA

For other Course Details

Scan here

90085 06068, 97406 68967, 72590 06116

www.alvascollege.com

SHUBHA MANGALYAM 2023
FESTIVE EDITION
ONE INDIA
ONE EMOTION
WEDDINGS
by
JOS ALUKKAS
A TRADITION OF FINE JEWELLERY
ಉಡುಗೊರೆಗಳು
ಎಲ್ಲಾ ಖರೀದಿಗಳಿಗೆ
ಮೆಗಾ ಆಫರ್
ಮೇಕಿಂಗ್ ಚಾರ್ಜಸ್
4.99%
ರಿಂದ ಪ್ರಾರಂಭ
ವಜ್ರಗಳ ಮೇಲೆ
25%
ವರೆಗೆ ರಿಯಾಯಿತಿ
ಪ್ಲಾಟಿನಂ ಆಭರಣಗಳಿಗೆ
7%
ರಿಯಾಯಿತಿ
ವಿಶೇಷ ರಿಯಾಯಿತಿ
ಮೇಕಿಂಗ್ ಚಾರ್ಜಸ್ ಮೇಲೆ
30%
ವರೆಗೆ
ಎಕ್ಸ್‌ಚೇಂಜ್
ಹಳೆಯ ಚಿನ್ನವನ್ನು
HUID
ಚಿನ್ನದ ಆಭರಣಗಳಿಗೆ
ಎಕ್ಸ್‌ಚೇಂಜ್ ಮಾಡಿಕೊಳ್ಳಿ
ಹೆಚ್ಚಿನ ಲಾಭಗಳೊಂದಿಗೆ
Push360
5% EXTRA CASHBACK
SBI card
#Min. Trxn.: ₹25,000;
Max. Cashback: Upto ₹2,500 per card account.
Validity: 11 Aug - 28 Aug 2023. T&C Apply.
ಈ ಆಫರ್‌ಗಳು ಕರ್ನಾಟಕದ ಎಲ್ಲಾ ಶೋರೂಮ್‌ಗಳಲ್ಲಿ ಮಾನ್ಯವಾಗಿರುತ್ತವೆ
ಇಂದು ಉದ್ಘಾಟನೆ
@
ಓಲ್ಡ್ ಮದ್ರಾಸ್ ರೋಡ್, ಕೆ.ಆರ್. ಪುರಂನಲ್ಲಿ ಬೆಳಗ್ಗೆ 10.30ಕ್ಕೆ | ಸರ್ವರಿಗೂ ಸುಸ್ವಾಗತ
JOS ALUKKAS
A TRADITION OF FINE JEWELLERY
ವ್ಯಾಲೆಟ್ ಕಾರ್ ಪಾರ್ಕಿಂಗ್ ಲಭ್ಯವಿದೆ
ಉದ್ಘಾಟನಾ ವಿಶೇಷ ಆಫರ್
(ಕೆ.ಆರ್. ಪುರಂ ಶೋರೂಂನಲ್ಲಿ ಮಾತ್ರ)
ರೂ.50,000 ಮೌಲ್ಯದ ಚಿನ್ನಾಭರಣಗಳನ್ನು ಖರೀದಿಸಿ ಮತ್ತು ಚಿನ್ನದ ನಾಣ್ಯವನ್ನು*
ಉಚಿತವಾಗಿ
ಪಡೆಯಿರಿ
ಆಫರ್ ಆಗಸ್ಟ್ 16 ರವರೆಗೆ ಮಾತ್ರ
ಬೆಳ್ಳಿ
ಆಭರಣಗಳು ಮತ್ತು ವಸ್ತುಗಳು
ಜೋಸ್ ಆಲುಕ್ಕಾಸ್ ಬೆಂಗಳೂರಿನಲ್ಲಿ ತನ್ನ 6ನೇ ಶೋರೂಮ್ ಅನ್ನು ಕೆ.ಆರ್. ಪುರಂನಲ್ಲಿ ಇಂದು ಪ್ರಾರಂಭಿಸಲಿದೆ. ಈ ಸೊಗಸಾದ ಶೋರೂಂನಲ್ಲಿ HUID ಹಾಲ್‌ಮಾರ್ಕ್ ಮಾಡಿದ ಚಿನ್ನ, ವಜ್ರ ಮತ್ತು ಪ್ಲಾಟಿನಂ ಆಭರಣಗಳು ವಿಶಿಷ್ಟ ಡಿಸೈನ್‌ಗಳಲ್ಲಿ ಲಭ್ಯವಿದೆ. ಬೆಳ್ಳಿಯ ಆಭರಣಗಳು ಮತ್ತು ವಸ್ತುಗಳ ದೊಡ್ಡ ಸಂಗ್ರಹವೂ ಇಲ್ಲಿ ನಿಮಗಾಗಿ ಕಾಯುತ್ತಿದೆ. ಬನ್ನಿ, ಹೊಚ್ಚ ಹೊಸ ಆಭರಣ ಶಾಪಿಂಗ್ ಅನುಭವವನ್ನು ಕಂಡುಕೊಳ್ಳಿ.
*ಷರತ್ತುಗಳು ಅನ್ವಯಿಸುತ್ತವೆ
Inauguration
BYRATI BASAVARAJ
MLA - KRISHNARAJAPURAM
Chief Guest
P.J.ANTHONY SWAMY
EX-NOMINATED CORPORATOR K.R.PURAM WARD
Celebrity Guest
DR. NIHARICA RAIZADA
BOLLYWOOD ACTRESS
Chairman
JOS ALUKKA
Managing Directors, Jos Alukkas Group
VARGHESE ALUKKA
PAUL J. ALUKKA
JOHN ALUKKA
Old Madras Road, K.R.PURAM, Ph: 080 - 22440916, 90200 11916 | Also at : 3rd Block, JAYANAGAR, Ph: 080-41539802 DICKENSON ROAD, Ph: 080-25552281
RAJAJINAGAR 1ST BLOCK, Ph: 080-23192319 | Forum Mall, KANAKAPURA ROAD, Ph: 080-6836 5475 | KAMMANAHALLI MAIN ROAD, Ph: 080-22204916.
Shop online at www.josalukkasonline.com
KARNATAKA | ANDHRA PRADESH | TELANGANA | TAMIL NADU | PUDUCHERRY | KERALA
ಜೋಸ್ ಆಲುಕ್ಕಾಸ್

ಪ್ರಜಾವಾಣಿ
ಪ್ರಜಾ ಪ್ಲಸ್+

ಆಂಬ್ರೇನ್ ಕ್ರೆಸ್ಟ್ ಪ್ರೊ

ಉತ್ತಮ ಗುಣಮಟ್ಟದ ಸ್ಮಾರ್ಟ್‌ವಾಚ್

ವಿಶ್ವನಾಥ ಎಸ್.

ತಂತ್ರಜ್ಞಾನ

ಆಂಬ್ರೇನ್ ಇಂಡಿಯಾ ಕಂಪನಿಯು ಸಾಹಸ ಮತ್ತು ಪ್ರಯಾಣದ ಆಸಕ್ತಿ ಉಳ್ಳವರಿಗಾಗಿ 'ಕ್ರೆಸ್ಟ್ ಪ್ರೊ' (Ambrane crest pro) ಸ್ಮಾರ್ಟ್‌ವಾಚ್ ಬಿಡುಗಡೆ ಮಾಡಿದೆ. ವಿನ್ಯಾಸದಲ್ಲಿ ಸಾಂಪ್ರದಾಯಿಕ ವಾಚ್ ಅನ್ನು ಹೋಲುತ್ತದೆಯಾದರೂ ಸ್ಮಾರ್ಟ್ ವೈಶಿಷ್ಟ್ಯಗಳಿಂದ ಗಮನ ಸೆಳೆಯುತ್ತದೆ.

ರೌಂಡ್ ಡಯಲ್ ಹೊಂದಿದ್ದು, 1.52 ಇಂಚು ಸ್ಕ್ರೀನ್, 360X360 ಸ್ಕ್ರೀನ್ ರೆಸಲ್ಯೂಷನ್, 600 ನೈಟ್ಸ್ ಡಿಸ್‌ಪ್ಲೇ ಒಳಗೊಂಡಿದೆ. ಬ್ಲುಟೂತ್ ಕಾಲಿಂಗ್, ಸ್ಪೋರ್ಟ್ಸ್ ಮತ್ತು ಫಿಟ್‌ನೆಸ್ ಟ್ರ್ಯಾಕ್‌ಗಳಿರುವುದು ಇದರ ಹೈಲೈಟ್ಸ್ ಆಗಿದೆ. ಪವರ್ ಆನ್/ಆಫ್ ಮಾಡಲು, ಮೆನು ಮತ್ತು ವಾಚ್ ಫೇಸ್‌ಗಳನ್ನು ನಿರ್ವಹಿಸಲು ಹಾಗೂ ಸ್ಪೋರ್ಟ್ಸ್ ಮೋಡ್... ಹೀಗೆ ಒಟ್ಟು ಮೂರು ಬಟನ್‌ಗಳು ಇದರಲ್ಲಿವೆ.

ಮೇಲ್ನೋಟಕ್ಕೆ ಇದರ ಬೆಲ್ಟ್ ವಿನ್ಯಾಸ ಆಟಿಕೆಯ ವಾಚ್‌ನಂತೆ ಕಾಣುತ್ತದೆಯಾದರೂ ಗಟ್ಟಿಮುಟ್ಟಾಗಿದೆ. ನನ್ನ ಕೈಗೆ ಕಟ್ಟಿಕೊಂಡಿದ್ದಾಗ ತುಸು ಕಿರಿಕಿರಿ ಆಯಿತು. ಬೆಲ್ಟ್ ಕೈಗೆ ಒತ್ತುವ ಅನುಭವ ಆಯಿತು. ಬಹುಶಃ ಬೆಲ್ಟ್ ತುಸು ಮೃದು ಆಗಿದ್ದಿದ್ದರೆ ಆ ರೀತಿ ಆಗುತ್ತಿರಲಿಲ್ಲ. 100 ಸ್ಪೋರ್ಟ್ಸ್ ಮೋಡ್, 24X7 ಹೆಲ್ತ್ ಮಾನಿಟರಿಂಗ್, 100ಕ್ಕೂ ಹೆಚ್ಚು ವಾಚ್ ಫೇಸ್, ವಾಯ್ಸ್ ಅಸಿಸ್ಟನ್ಸ್, ಸ್ಮಾರ್ಟ್ ನೋಟಿಫಿಕೇಷನ್ ವೈಶಿಷ್ಟ್ಯಗಳು ಇದರಲ್ಲಿವೆ.

ಬ್ಲೂಟೂತ್ 5.0 ಇದ್ದು, ವಾಚ್‌ನೊಂದಿಗೆ ಸಂಪರ್ಕಿಸುವುದು ಸುಲಭ. ಆಂಬ್ರೇನ್ ವೇರ್ (Ambrane Ware) ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡು ಮೊಬೈಲ್ ಜೊತೆ ಸಂಪರ್ಕಿಸಬೇಕು. ಬ್ಲೂಟೂತ್ ಮೂಲಕ ಕಾಲ್ ಮಾಡುವ ಮತ್ತು ಸ್ವೀಕರಿಸುವ ವ್ಯವಸ್ಥೆಯು ಸರಿಯಾಗಿ ಕೆಲಸ ಮಾಡುತ್ತದೆ. ಆಡಿಯೊ ಕ್ಲಾರಿಟಿ ಉತ್ತಮವಾಗಿದೆ. ಕಾಂಟ್ಯಾಕ್ಟ್ ಸಿಂಕ್ ಮಾಡಿಕೊಳ್ಳುವುದರ ಜೊತೆಗೆ ಫೇವರಿಟ್ ಕಾಂಟ್ಯಾಕ್ಟ್‌ಗಳನ್ನು ವಾಚ್‌ನಲ್ಲಿ ಸೇವ್ ಮಾಡಿಟ್ಟುಕೊಳ್ಳಬಹುದು. ಹೊಸ ನಂಬರ್ ಅನ್ನು ಸಹ ವಾಚ್ ಮೂಲಕವೇ ಡಯಲ್ ಮಾಡಿ ಕಾಲ್ ಮಾಡಬಹುದಾಗಿದೆ.

ವಾಚ್‌ನಲ್ಲಿ ವಾಯ್ಸ್ ಅಸಿಸ್ಟಂಟ್ ಸಕ್ರಿಯಗೊಳಿಸಿದರೆ, ಕೈಯಿಂದ ನಿರ್ವಹಣೆ ಮಾಡುವುದನ್ನು ತಪ್ಪಿಸಬಹುದು. ಫೋನ್ ನಮ್ಮಿಂದ 10 ಮೀಟರ್ ವ್ಯಾಪ್ತಿಯೊಳಗೆ ಎಲ್ಲೇ ಇಟ್ಟಿದ್ದರೂ ಕಾಲ್ ಬಂದಾಗ ವಾಚ್ ಮೂಲಕವೇ ರಿಸೀವ್ ಮಾಡಿ ಮಾತನಾಡಬಹುದು.

ನೀರಿನಿಂದ ರಕ್ಷಣೆಗೆ ಐಪಿ68 ರೇಟಿಂಗ್ಸ್ ಹೊಂದಿದ್ದು, ಔಟ್‌ಡೋರ್ ಚಟುವಟಿಕೆಗಳಿಗೆ ಸೂಕ್ತವಾಗಿದೆ. ಇನ್‌ಬಿಲ್ಟ್ ಕಂಪಾಸ್‌ನಲ್ಲಿ ಸುಧಾರಿತ ಸೆನ್ಸರ್ ಅಳವಡಿಸಿರುವುದರಿಂದ ಪ್ರಯಾಣದ ದಿಕ್ಕನ್ನು ಹೆಚ್ಚು ನಿಖರವಾಗಿ ಗುರುತಿಸಬಲ್ಲದು. ಬೇಜಾರಾದಾಗ ಸ್ಲೈಡರ್, 2048 ಮಿನಿ ಗೇಮ್‌ಗಳು ಮನಸ್ಸಿಗೆ ಒಂದಿಷ್ಟು ಮುದ ನೀಡುತ್ತವೆ. ನೀರಿನಿಂದ ರಕ್ಷಣೇ ಒದಗಿಸಲು ಐಪಿ68 ರೇಟಿಂಗ್ಸ್ ಇದೆ.

ಆ್ಯಪ್‌ನಲ್ಲಿ ಸ್ಮಾರ್ಟ್ ನೋಟಿಫಿಕೇಷನ್ ಸಕ್ರಿಯಗೊಳಿಸುವ ಆಯ್ಕೆ ಇದೆ. ನಿತ್ಯದ ಚಟುವಟಿಕೆಗಳು ಅಂದರೆ ಎಷ್ಟು ಹೆಜ್ಜೆ ನಡೆದಿದ್ದೇವೆ, ಎಷ್ಟು ಹೊತ್ತು ಓಡಿದ್ದೇವೆ. ಅನ್ನುವುದನ್ನು ದಾಖಲಿಸಬಹುದು. ಎಷ್ಟು ಹೊತ್ತು ನಿದ್ರೆ ಮಾಡಿದ್ದೇವೆ. ನಿದ್ರೆಯ ಗುಣಮಟ್ಟ ಹೇಗಿದೆ ಎನ್ನುವುದನ್ನು ಕಂಡುಕೊಳ್ಳಬಹುದು. 400 ಎಂಎಎಚ್ ಬ್ಯಾಟರಿ ಇದ್ದು, ಪೂರ್ತಿ ಚಾರ್ಜ್ ಆಗಲು 3 ಗಂಟೆಗೆ ಬೇಕು. ಒಮ್ಮೆ ಪೂರ್ತಿ ಚಾರ್ಜ್ ಮಾಡಿದರೆ 7 ದಿನ ಬಳಸಬಹುದು ಎಂದು ಕಂಪನಿ ಹೇಳಿಕೊಂಡಿದೆ. ಆದರೆ, ಬ್ಲುಟೂತ್ ಕಾಲಿಂಗ್ ಆಯ್ಕೆಯನ್ನು ಹೆಚ್ಚು ಬಳಸದೇ ಇದ್ದರೆ, ಸರಾಸರಿ 10 ರಿಂದ 15ದಿನಗಳವಗೂ ಚಾರ್ಜ್ ಮಾಡುವ ಅಗತ್ಯ ಬೀಳುವುದಿಲ್ಲ. ಜಾಲತಾಣದಲ್ಲಿ ಇದರ ಎಂಆರ್‌ಪಿ ₹6,999 ಇದ್ದು, ಕಂಪನಿಯು ₹2,499ಕ್ಕೆ ನೀಡುತ್ತಿದೆ. ಆದರೆ ಫ್ಲಿಪ್‌ಕಾರ್ಟ್‌ನಲ್ಲಿ ₹1,799ಕ್ಕೆ ಲಭ್ಯವಿದೆ.

ಗ್ರೀನ್‌ಪಾತ್– ಹಸಿರು ತೋಟದ ಅಂಗಳದಲ್ಲಿ



ಗ್ರೀನ್ ಪಾತ್ ಸಂಸ್ಥೆ ಇದೇ ಸ್ವಾತಂತ್ರ್ಯೋತ್ಸವದ ದಿನದಂದು (ಆಗಸ್ಟ್ 15) 'ಸಾವಯವ ಸಂತೆ'ಯನ್ನು ಆಯೋಜಿಸುತ್ತಿದೆ. ಮಂತ್ರಿ ಮಾಲ್ ಮೆಟ್ರೊ ಸ್ಟೇಷನ್ ಎದುರು ಇರುವ ತಮ್ಮ ಸಂಸ್ಥೆಯ 'ಆರ್ಗಾನಿಕ್ ರೆಸ್ಟೊರೆಂಟ್– ಹಸಿರು ತೋಟ'ದ ಅಂಗಳದಲ್ಲಿ ಸಾವಯವ ಸಂತೆ ನಡೆಯಲಿದೆ

ಗ್ರೀನ್‌ಪಾತ್‌ನಲ್ಲಿ ಹಿಂದೆ ನಡೆದ ಸಾವಯವ ಸಂತೆ (ಸಂಗ್ರಹ ಚಿತ್ರ)

ಸ್ವಾತಂತ್ರ್ಯೋತ್ಸವದಂದು ಸಾವಯವ ಸಂತೆ

ಆತ್ರೇಯ

'ಸಾವಯವ ಆಹಾರ ಸಾಮಾನ್ಯರಿಗೂ ತಲುಪಬೇಕು.. ಕೈಗೆಟಕುವ ಬೆಲೆಯಲ್ಲಿ ಗ್ರಾಹಕರಿಗೆ ಉತ್ಪನ್ನಗಳು ಸಿಗಬೇಕು. ಉತ್ಪಾದಕರು – ಗ್ರಾಹಕರ ನಡುವೆ ಸಂಪರ್ಕ ಕಲ್ಪಿಸಬೇಕೆಂಬ ಮಹತ್ವದ ಉದ್ದೇಶಗಳೊಂದಿಗೆ ಗ್ರೀನ್ ಪಾತ್ ಸಂಸ್ಥೆ ಇದೇ ಸ್ವಾತಂತ್ರ್ಯೋತ್ಸವದ ದಿನದಂದು (ಆಗಸ್ಟ್ 15) 'ಸಾವಯವ ಸಂತೆ'ಯನ್ನು ಆಯೋಜಿಸುತ್ತಿದೆ.

ನಗರದ ಮಂತ್ರಿ ಮಾಲ್ ಮೆಟ್ರೊ ಸ್ಟೇಷನ್ ಎದುರು ಇರುವ ತಮ್ಮ ಸಂಸ್ಥೆಯ 'ಆರ್ಗಾನಿಕ್ ರೆಸ್ಟೊರೆಂಟ್– ಹಸಿರು ತೋಟ'ದ ಅಂಗಳದಲ್ಲಿ ಸಾವಯವ ಸಂತೆ ಆಯೋಜಿಸುತ್ತಿದೆ. ಅಂದು ಬೆಳಿಗ್ಗೆ 7 ಗಂಟೆಯಿಂದ ಸಂಜೆಯವರೆಗೂ ಸಂತೆ ನಡೆಯಲಿದೆ. ಚಲನಚಿತ್ರ ನಟ ರಿಷಿ ಸಂತೆ ಉದ್ಘಾಟಿಸುತ್ತಾರೆ. ಸಂತೆಯ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆಯಲಿವೆ.

'ಮನೆ ಮನೆಗೂ ಸಾವಯವ ಮನಕ್ಕೂ ಸಾವಯವ' – ಟ್ಯಾಗ್‌ಲೈನ್‌ನೊಂದಿಗೆ ಆರಂಭವಾಗುತ್ತಿರುವ ಈ ಸಾವಯವ ಸಂತೆಯಲ್ಲಿ ಸಾವಯವ ಹಣ್ಣು, ತರಕಾರಿ, ಬೇಳೆಕಾಳುಗಳು, ಗಾಣದ ಎಣ್ಣೆ, ಕರಕುಶಲ ವಸ್ತುಗಳು, ಕೈಮಗ್ಗದ ವಸ್ತ್ರಗಳು, ಸಾವಯವ ಪ್ರಸಾಧನ ಸಾಮಗ್ರಿಗಳು ಸೇರಿದಂತೆ ಪರಿಸರ ಸ್ನೇಹಿ ವಸ್ತುಗಳು ಇರಲಿವೆ. ಸಂತೆಗೆ ಬರುವ ಗ್ರಾಹಕರಿಕೆ ಬೆಳಗಿನ ಉಪಹಾರಕ್ಕಾಗಿ ಗ್ರೀನ್‌ಪಾತ್ ಆರ್ಗಾನಿಕ್ ರೆಸ್ಟೊರೆಂಟ್ ರಿಯಾಯಿತಿ ದರದಲ್ಲಿ ಸಿರಿಧಾನ್ಯದ ವಿಶೇಷ ಖಾದ್ಯಗಳನ್ನ ನೀಡುತ್ತಿದೆ ಎನ್ನುತ್ತಾರೆ ಗ್ರೀನ್‌ಪಾತ್ ಸಂಸ್ಥೆಯ ಮುಖ್ಯಸ್ಥ ಹಾಗೂ ಸಂತೆಯ ರೂವಾರಿ ಜಯರಾಮ್.

'ಸ್ವಾತಂತ್ರ್ಯೋತ್ಸವದಿನ ಸಂತೆ ಉದ್ಘಾಟನೆಯಾಗುತ್ತದೆ. ಮುಂದೆ ಪ್ರತಿ ಶನಿವಾರ ಮತ್ತು ಭಾನುವಾರ ಬೆಳಿಗ್ಗೆ 7 ರಿಂದ 11 ಗಂಟೆಯವರೆಗೆ ಇದೇ ಜಾಗದಲ್ಲಿ ಸಾವಯವ ಸಂತೆ ನಡೆಯುತ್ತದೆ' ಎಂದು ಜಯರಾಮ್ ತಿಳಿಸಿದರು.

